ಶನಿವಾರ, ಜುಲೈ 30, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತೀಜ್ ಹಬ್ಬ

ತೀಜ್ ಹಬ್ಬದ ಅಂಗವಾಗಿ ಅಮೃತಸರದ ಶಾಲೆಯೊಂದರ ವಿದ್ಯಾರ್ಥಿನಿಯರು ಶುಕ್ರವಾರ ಸಾಂಪ್ರದಾಯಿಕ ದಿರಿಸು ತೊಟ್ಟಿದ್ದರು

ಶನಿವಾರ, ಜುಲೈ 30, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹುಲಿ ದಿನ

ಮುಂಬೈನ ಬೈಕುಲಾ ಮೃಗಾಲಯದಲ್ಲಿ ವಿಶ್ವ ಹುಲಿ ದಿನವಾದ ಶುಕ್ರವಾರ ಮಕ್ಕಳು ಗಾಜಿನ ಬೋನಿನೊಳಗಿನ ಹುಲಿಯನ್ನು ವೀಕ್ಷಿಸಿದರು

ANUGRAHA

BRIDAL JEWELLERY FOR EVERY TRADITION

ಪರಂಪರೆಯಲ್ಲಿ ನೆಲೆಯೂರಿದೆ.
ಆಚರಣೆಗೆಂದು ವಿನ್ಯಾಸಗೊಂಡಿದೆ.



25%
ರಿಯಾಯಿತಿ
ವಜ್ರದ ಮೇಲೆ

*Terms & conditions apply

ನಿಮ್ಮ ವಿಶೇಷ ದಿನವನ್ನು, ನಿಮ್ಮ ಸುಂದರ ಕ್ಷಣವನ್ನು ಆಚರಿಸಲು ನಮ್ಮ ನೆಲದ ಅಗಣಿತ ಸಂಸ್ಕೃತಿಗೆ ಒಂದು ಸೊಗಸಾದ ಗೌರವವಾದ "ಅನುಗ್ರಹ"ವನ್ನು ಪ್ರಸ್ತುತಪಡಿಸುತ್ತಿದ್ದೇವೆ. ನಮ್ಮ ನುರಿತ ಕುಶಲಕರ್ಮಿಗಳಿಂದ ರಚಿಸಲಾದ ಪ್ರತಿಯೊಂದು ತುಣುಕೂ ಇತಿಹಾಸ ಹೊಂದಿದೆ. ನಮ್ಮ ಶ್ರೀಮಂತ ಸಂಪ್ರದಾಯವನ್ನು ಆಚರಿಸುವ ಸಂಸ್ಕೃತಿಯ ವಿಕಸನದ ನೀತಿಯಲ್ಲಿ ಒಂದು ಸುಂದರವಾದ ಕಥೆಯ ಹಿನ್ನೆಲೆಯಲ್ಲಿದೆ. ಜೋಯಾಲುಕ್ಕಾಸ್‌ನ "ಅನುಗ್ರಹ"ದೊಂದಿಗೆ ಚಿನ್ನ, ವಜ್ರ, ಅಮೂಲ್ಯ ಹರಳು ಮತ್ತು ಇನ್ನೂ ಹೆಚ್ಚಿನವುಗಳಿಂದ ನಿಮ್ಮ ವಧುವಿನ ಕನಸು ನನಸಾಗಿಸಿ.

SHOP ONLINE @
joyalukkas.in

Joyalukkas
World's favourite jeweller

BENGALURU: M G ROAD • DICKENSON ROAD • JAYANAGAR • MALLESWARAM • MARATHAHALLI • PHOENIX MARKETCITY
KAMMANAHALLI | MANGALURU • MYSURU • HUBBALLI • SHIVAMOGGA • BELAGAVI • UDUPI • HASSAN • DAVANGERE

ಅಧೀರ್ ರಂಜನ್ ಚೌಧರಿ 'ರಾಷ್ಟ್ರಪತ್ನಿ' ಹೇಳಿಕೆ ವಿಚಾರ • ರಾಜ್ಯಸಭೆಯಲ್ಲೂ ಗದ್ದಲ, ಕಲಾಪ ಮುಂದೂಡಿಕೆ

ಆರದ ಪ್ರತಿಭಟನೆ ಕಾವು: ನಡೆಯದ ಕಲಾಪ

ನವದೆಹಲಿ (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ವಿರುದ್ಧ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು ನೀಡಿದ 'ರಾಷ್ಟ್ರಪತ್ನಿ' ಹೇಳಿಕೆ ಬಗ್ಗೆ ಬಿಜೆಪಿ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಸಂಸತ್‌ನ ಎರಡೂ ಸದನಗಳಲ್ಲಿ ವಾಕ್ಸಮರ, ಪ್ರತಿಭಟನೆ, ಗದ್ದಲ ಮುಂದುವರಿದು ಶುಕ್ರವಾರ ಕೂಡ ಸಂಸತ್ ಕಲಾಪ ಮುಂದೂಡಲಾಯಿತು.

ಪ್ರತಿಭಟನೆ ತಾರಕಕ್ಕೇರಿದ್ದರಿಂದ ಲೋಕಸಭೆ ಕಲಾಪವನ್ನು ಮಧ್ಯಾಹ್ನ 12 ಗಂಟೆಯವರೆಗೆ ಮುಂದೂಡಲಾಗಿತ್ತು. ಮತ್ತೆ ಕಲಾಪ ಸೇರಿದಾಗ ಎರಡೂ ಸದನಗಳಲ್ಲಿ ಅದೇ ಪರಿಸ್ಥಿತಿ ಮುಂದುವರಿಯಿತು.

ಲೋಕಸಭೆಯಲ್ಲಿ ಕಾಂಗ್ರೆಸ್ ಸಂಸದರು ಸ್ಪೀಕರ್ ಪೀಠದ ಎದುರು ಧಾವಿಸಿ, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಆಗ ಬಿಜೆಪಿ ಸಂಸದರು ಮತ್ತು ಸಚಿವ ಸರ್ವಾನಂದ ಸೋನೊವಾಲ್ ಸೇರಿ ಕೇಂದ್ರ ಸಚಿವರೂ ಎದ್ದು ನಿಂತು, ಚೌಧರಿ ಅವರ ಹೇಳಿಕೆಗೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರೇ ಕ್ಷಮೆ ಕೇಳಬೇಕೆಂದು ಆಗ್ರಹಿಸಿದರು. ಸದನದಲ್ಲಿ ಗದ್ದಲ ತಾರಕ್ಕೇರಿದಾಗ, ಸ್ಪೀಕರ್ ಸ್ಥಾನದಲ್ಲಿದ್ದ ಬಿಜೆಪಿ ಸಂಸದ ರಾಜೇಂದ್ರ ಅಗರ್‌ವಾಲ್ ಅವರು ಸೋಮವಾರಕ್ಕೆ ಕಲಾಪ ಮುಂದೂಡಿದರು.

ಮೇಲ್ಮನೆಯಲ್ಲಿ ವಿರೋಧ ಪಕ್ಷಗಳು ವಿವಿಧ ವಿಷಯಗಳ ಬಗ್ಗೆ ಪ್ರತಿಭಟನೆ ಮುಂದುವರಿಸಿ, ಕಲಾಪಕ್ಕೆ ಅಡ್ಡಿಪಡಿಸಿದ್ದರಿಂದ ಉಪಸಭಾಪತಿ ಹರಿವಂಶ್ ಅವರು ಕಲಾಪವನ್ನು ಸೋಮವಾರಕ್ಕೆ ಮುಂದೂಡಿದರು.

ಇದಕ್ಕೂ ಮೊದಲು ಮಧ್ಯಾಹ್ನ 12 ಗಂಟೆಗೆ ಸದನ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್ ಸದಸ್ಯರು, ಗುಜರಾತ್ ಕಳ್ಳಬಟ್ಟಿ ದುರಂತದ ಚರ್ಚೆಗೆ ಮತ್ತು ಸೋನಿಯಾ ಗಾಂಧಿ ವಿರುದ್ಧ ಅನುಚಿತವಾಗಿ ವರ್ತಿಸಿರುವ ಸಚಿವೆ ಸ್ಮೃತಿ ಇರಾನಿ ವಜಾಕ್ಕೆ ಒತ್ತಾಯಿಸಿ ಸಭಾಪತಿ ಪೀಠದ ಬಳಿ ಪ್ರತಿಭಟಿಸಿ ದರು. ರಾಷ್ಟ್ರಪತಿಗೆ ಅಗೌರವ ತೋರಿದ್ದಾರೆಂದು ಅಧೀರ್ ರಂಜನ್ ಚೌಧರಿ ಅವರ ವಿರುದ್ಧವೂ ಆಡಳಿತ ಪಕ್ಷದ ಸದಸ್ಯರು ಪ್ರತಿಭಟನೆ ನಡೆಸಿದರು.

ಮೇಲ್ಮನೆ ಕಲಾಪದಲ್ಲಿ ಎರಡನೇ ವಾರವೂ ಯಾವುದೇ ಮಹತ್ವದ ಚರ್ಚೆ ನಡೆಯಲಿಲ್ಲ. ಕಲಾಪಕ್ಕೆ ಅಡ್ಡಿಪಡಿಸಿದರೆಂದು ರಾಜ್ಯಸಭೆಯ ವಿರೋಧ ಪಕ್ಷಗಳ 23 ಸದಸ್ಯರನ್ನು ಈವರೆಗೆ ಅಮಾನತುಗೊಳಿಸಲಾಗಿದೆ. ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು, ರಾಷ್ಟ್ರಪತಿಗೆ ಅಧೀರ್ ರಂಜನ್ ಚೌಧರಿ ಅಗೌರವ ತೋರಿಸಿರುವುದಕ್ಕೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಕ್ಷಮೆಯಾಚಿಸಿದರಷ್ಟೇ ಲೋಕಸಭೆ ಕಾರ್ಯನಿರ್ವಹಿಸಲಿದೆ ಎಂದು ಹೇಳಿದ್ದಾರೆ.


ರಾಜ್ಯಸಭೆಯಲ್ಲಿ ಸಂಸದರು ಪ್ರತಿಭಟನೆ ನಡೆಸಿದರು.

ಆಕ್ಷೇಪಾರ್ಹ ಪದ ಬಳಕೆ: ದ್ರೌಪದಿ ಅವರ ಕ್ಷಮೆಯಾಚಿಸಿದ ಅಧೀರ್

ನವದೆಹಲಿ (ಪಿಟಿಐ): 'ರಾಷ್ಟ್ರಪತ್ನಿ' ಪದಬಳಕೆಗಾಗಿ ಕ್ಷಮೆ ಕೋರಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದಿದ್ದಾರೆ.

'ನಾನು ತಪ್ಪಾಗಿ ಆ ಪದವನ್ನು ಬಳಕೆ ಮಾಡಿದ್ದೆ. ಇದಕ್ಕಾಗಿ ವಿಷಾದ ವ್ಯಕ್ತಪಡಿಸುತ್ತೇನೆ. ಬಾಯಿ ತಪ್ಪಿ ಹಾಗೇ ಹೇಳಿದ್ದೆ. ಇದಕ್ಕಾಗಿ ನಾನು ಕ್ಷಮೆ ಕೋರುತ್ತೇನೆ' ಎಂದು ಪತ್ರದಲ್ಲಿ ಹೇಳಿದ್ದಾರೆ.

ಬುಧವಾರ ವಿಜಯ್ ಚೌಕ್ ಬಳಿ ನಡೆದಿದ್ದ ಪ್ರತಿಭಟನೆಯ ಸಂದರ್ಭದಲ್ಲಿ ಅಧೀರ್ ರಂಜನ್ ಚೌಧರಿ ಅವರು ಆಕ್ಷೇಪಾರ್ಹ ಪದ ಬಳಸಿದ್ದರು. ಇದು, ಸಂಸತ್ತಿನಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ನಡುವೆ ವಾಕ್ಸಮರಕ್ಕೆ ಕಾರಣವಾಗಿತ್ತು. ಆಡಳಿತ ಪಕ್ಷದ ಸದಸ್ಯರು ಈ ಮಾತಿಗಾಗಿ ಸೋನಿಯಾಗಾಂಧಿ ಅವರೂ ಕ್ಷಮೆ ಕೋರಬೇಕು ಎಂದು ಆಗ್ರಹಪಡಿಸಿದ್ದಾರೆ.

ಸ್ಮೃತಿ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಅಧೀರ್ ರಂಜನ್ ಚೌಧರಿ ಅವರು ರಾಷ್ಟ್ರಪತಿ ಕುರಿತು ನೀಡಿದ ಹೇಳಿಕೆ ಸಂಬಂಧ ಸೋನಿಯಾ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿ, ಅನುಚಿತವಾಗಿ ವರ್ತಿಸಿರುವ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು ಕ್ಷಮೆಯಾಚಿಸಬೇಕೆಂದು ಒತ್ತಾಯಿಸಿ ಕಾಂಗ್ರೆಸ್ ಸಂಸದರು ಸಂಸತ್ ಭವನದ ಗಾಂಧಿ ಪ್ರತಿಮೆ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು.
ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್ ಮತ್ತು ಪೀಯೂಷ್ ಗೋಯಲ್ ಅವರು ಸೋನಿಯಾ ಗಾಂಧಿಯವರ ಹೆಸರನ್ನು ರಾಜ್ಯಸಭೆಯಲ್ಲಿ ಪ್ರಸ್ತಾಪಿಸಿರುವುದಕ್ಕೆ ಕಾಂಗ್ರೆಸ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.
ಸೋನಿಯಾ ಗಾಂಧಿ ನೇತೃತ್ವದಲ್ಲಿ ನಡೆದ ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆಯಲ್ಲಿ ಭಾಗವಹಿಸಿದ್ದ ಪಕ್ಷದ ಸಂಸದರು ಸಚಿವೆ ಸ್ಥಾನದಿಂದ ಇರಾನಿಯವರನ್ನು ವಜಾಗೊಳಿಸುವಂತೆ ಒತ್ತಾಯಿಸಿದರು. ಇರಾನಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಹಕ್ಕು ಬಾಧ್ಯತಾ ಸಮಿತಿಗೆ ಶಿಫಾರಸು ಮಾಡಲು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಕಾಂಗ್ರೆಸ್ ಈಗಾಗಲೇ ದೂರು ನೀಡಿದೆ.

ಸೋನಿಯಾ ವಿರುದ್ಧ ಟೀಕೆ: ಕಡತದಿಂದ ಕೈಬಿಡಲು ಖರ್ಗೆ ಆಗ್ರಹ

ನವದೆಹಲಿ (ಪಿಟಿಐ): ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಅವರನ್ನು ಕುರಿತು ಸಚಿವರಾದ ನಿರ್ಮಲಾ ಸೀತಾರಾಮನ್ ಮತ್ತು ಪೀಯೂಷ್ ಗೋಯಲ್ ಅವರು ಆಡಿರುವ ಮಾತುಗಳನ್ನು ಕಡತದಿಂದ ತೆಗೆಯಬೇಕು ಎಂದು ಕೋರಿ ರಾಜ್ಯಸಭೆ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಸಭಾಪತಿ ಎಂ.ವೆಂಕಯ್ಯನಾಯ್ಡು ಅವರಿಗೆ ಪತ್ರ ಬರೆದಿದ್ದಾರೆ.

ಸದನದ ನಿಯಮ ಉಲ್ಲಂಘಿಸಿದ್ದಕ್ಕಾಗಿ ಇಬ್ಬರೂ ಸಚಿವರು ಕ್ಷಮೆ ಕೇಳಬೇಕು ಎಂದೂ ಖರ್ಗೆ ಒತ್ತಾಯಿಸಿದ್ದಾರೆ. ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರ 'ರಾಷ್ಟ್ರಪತ್ನಿ' ಹೇಳಿಕೆಗೆ ಸಂಬಂಧಿಸಿ ಇಬ್ಬರೂ ಸಚಿವರು ಸೋನಿಯಾ ವಿರುದ್ಧ ಹರಿಹಾಯ್ದಿದ್ದರು.

ನಿಯಮದ ಪ್ರಕಾರ, ಸದನದ ಸದಸ್ಯರಲ್ಲದ, ಅನ್ಯ ಸದನದ ಸದಸ್ಯರ ವಿರುದ್ಧ ಗಂಭೀರ ಹೇಳಿಕೆ ನೀಡುವಂತಿಲ್ಲ ಎಂದು ಹೇಳಿರುವ ಖರ್ಗೆ, ಪೂರಕವಾಗಿ ರಾಜ್ಯಸಭೆಯ ಮಾಜಿ ಸಭಾಪತಿ ಆರ್.ವೆಂಕಟರಾಮನ್ 1987ರಲ್ಲಿ ನೀಡಿದ್ದ ರೂಲಿಂಗ್ ಉಲ್ಲೇಖಿಸಿದ್ದಾರೆ. ಬೇರೊಂದು ಸದನದ ಸದಸ್ಯರ ವಿರುದ್ಧ ಹಕ್ಕುಚ್ಯುತಿ ಮಂಡಿಸುವ ಪ್ರಶ್ನೆಯೂ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಕುಂದು–ಕೊರತೆಗೆ 30 ದಿನಗಳಲ್ಲೇ ಪರಿಹಾರ: ಕೇಂದ್ರ ನಿರ್ಧಾರ

ನವದೆಹಲಿ (ಪಿಟಿಐ): ವಿವಿಧ ಇಲಾಖೆಗಳ ಜಾಲತಾಣಗಳ ಮೂಲಕ ಸಾರ್ವಜನಿಕರು ಸಲ್ಲಿಸುವ ಕುಂದು–ಕೊರತೆಗಳಿಗೆ ಗರಿಷ್ಠ 30 ದಿನಗಳ ಒಳಗಾಗಿ ಪರಿಹಾರ ನೀಡುವ ವ್ಯವಸ್ಥೆ ರೂಪಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಪ್ರಸ್ತುತ, ಜಾಲತಾಣಗಳ ಮೂಲಕ ಸಲ್ಲಿಕೆಯಾಗುವ ಕುಂದು–ಕೊರತೆಗಳಿಗೆ ಪರಿಹಾರ ಒದಗಿಸಲು ಗರಿಷ್ಠ 45 ದಿನಗಳ ಕಾಲಮಿತಿ ಇದೆ. ಅಲ್ಲದೇ, ವ್ಯಕ್ತಿಯೊಬ್ಬರು ಸಲ್ಲಿಸುವ ದೂರಿನ ವಿರುದ್ಧವಾಗಿ ಸಲ್ಲಿಕೆಯಾಗುವ ಅರ್ಜಿಯನ್ನು ವಿಲೇವಾರಿ ಮಾಡದ ಹೊರತು, ಆ ದೂರನ್ನು ಮುಕ್ತಾಯಗೊಳಿಸದಿರಲು ಸಹ ಸರ್ಕಾರ ನಿರ್ಧರಿಸಿದೆ ಎಂದು ಕೇಂದ್ರದ ಆಡಳಿತ ಸುಧಾರಣೆ ಹಾಗೂ ಸಾರ್ವಜನಿಕ ಕುಂದುಕೊರತೆ ಇಲಾಖೆಯು (ಡಿಎಆರ್‌ಪಿಜಿ) ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

'ಜನರು ಸಲ್ಲಿಸುವ ದೂರುಗಳಿಗೆ ತ್ವರಿತವಾಗಿ ಪರಿಹಾರ ಒದಗಿಸುವ ಸಲುವಾಗಿ 'ಕೇಂದ್ರೀಕೃತ ಸಾರ್ವಜನಿಕ ವ್ಯಾಜ್ಯ ಪರಿಹಾರ ಮತ್ತು ಮೇಲ್ವಿಚಾರಣಾ ವ್ಯವಸ್ಥೆ'ಯಲ್ಲಿ (ಸಿಪಿಜಿಆರ್‌ಎ-ಎಂಎಸ್) ಸಮಗ್ರ ಸುಧಾರಣೆ ತರಲಾಗಿದೆ' ಎಂದೂ ಇಲಾಖೆ ತಿಳಿಸಿದೆ.

'ಪರಿಹಾರ ಒದಗಿಸಲು ಇದ್ದ ಅವಧಿಯನ್ನು 30 ದಿನಗಳಿಗೆ ಇಳಿಕೆ ಮಾಡಿರುವುದು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಅನುಸರಿಸುತ್ತಿರುವ 'ನಂಬಿಕೆ ಆಧರಿತ ಆಡಳಿತ ಮಾದರಿ'ಯನ್ನು ಪ್ರತಿಫಲಿಸುತ್ತದೆ' ಎಂದು ಕೇಂದ್ರ ಸಿಬ್ಬಂದಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಹೇಳಿದ್ದಾರೆ.



ವಿದೇಶದಿಂದ ಬಂದ ವಿದ್ಯಾರ್ಥಿಗಳಿಗೆ ಎಫ್‌ಎಂಜಿಗೆ ಅವಕಾಶ

ನವದೆಹಲಿ: ಕೋವಿಡ್ ಹಾಗೂ ರಷ್ಯಾ–ಉಕ್ರೇನ್ ಯುದ್ಧದ ಪರಿಣಾಮ ಭಾರತಕ್ಕೆ ಮರಳಿರುವ ಅಂತಿಮ ವರ್ಷದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಮತ್ತು 2022ರ ಜೂನ್ 30ರೊಳಗೆ ಅಲ್ಲಿನ ಸಂಸ್ಥೆಗಳಿಂದ ವೈದ್ಯಕೀಯ ಪದವಿ ಪಡೆದಿರುವವರಿಗೆ ವಿದೇಶಿ ವೈದ್ಯಕೀಯ ಪದವಿ ಪರೀಕ್ಷೆಗೆ ಅನುಮತಿ ನೀಡಲಾಗುವುದು ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಶುಕ್ರವಾರ ತಿಳಿಸಿದೆ.

ವಿದೇಶಿ ವೈದ್ಯಕೀಯ ಪದವಿ (ಎಫ್‌ಎಂಜಿ) ಪರೀಕ್ಷೆಯಲ್ಲಿ ಅರ್ಹತೆ ಪಡೆದ ಬಳಿಕ ಅವರು ಈಗ ಅಸ್ತಿತ್ವದಲ್ಲಿರುವ ಒಂದು ವರ್ಷದ ಬದಲಿಗೆ ಎರಡು ವರ್ಷಗಳ ಕಾಲ ಕಡ್ಡಾಯ ವೈದ್ಯಕೀಯ ಇಂಟರ್ನ್‌ಶಿಪ್ (ಸಿಆರ್‌ಎಂಐ) ಮಾಡಬೇಕು ಎಂದು ಎನ್‌ಎಂಸಿ ಪ್ರಕಟಣೆಯಲ್ಲಿ ತಿಳಿಸಿದೆ. ವಿದೇಶಿ ವೈದ್ಯಕೀಯ ಪದವೀಧರರು ಎರಡು ವರ್ಷಗಳ ಸಿಆರ್‌ಎಂಎ ಪೂರ್ಣಗೊಳಿಸಿದ ನಂತರವೇ ನೋಂದಣಿ ಪಡೆಯಲು ಅರ್ಹರಾಗುತ್ತಾರೆ. ಈ ಸಡಿಲಿಕೆಯು 'ಒಂದು ಬಾರಿಯ ಕ್ರಮ' ಮತ್ತು ಭವಿಷ್ಯದಲ್ಲಿ ಇದನ್ನು ಆದ್ಯತೆ ಎಂದು ಪರಿಗಣಿಸುವುದಿಲ್ಲ ಎಂದಿದೆ.

ಪತ್ರಕರ್ತರ ಟ್ವೀಟ್ ತೆರವಿಗೆ ಮನವಿ: ಅಗ್ರಸ್ಥಾನದಲ್ಲಿ ಭಾರತ

ನವದೆಹಲಿ (ಪಿಟಿಐ): ಪತ್ರಕರ್ತರ ಮತ್ತು ಸುದ್ದಿ ಮಾಧ್ಯಮಗಳ ಬ್ಲೂ ಟಿಕ್ ಹೊಂದಿರುವ ಅಕೌಂಟ್‌ಗಳಲ್ಲಿ ಮಾಡಲಾದ ಟೀಕಾತ್ಮಕ ಟ್ವೀಟ್‌ಗಳ ತೆರವಿಗೆ ಕಾನೂನು ಬದ್ಧವಾಗಿ ಮನವಿ ಮಾಡಿರುವ ದೇಶಗಳ ಸಾಲಿನಲ್ಲಿ ಭಾರತ ಅಗ್ರ ಸ್ಥಾನದಲ್ಲಿದೆ ಎಂದು ಟ್ವಿಟರ್ ಹೇಳಿದೆ. 2021ರ ಜುಲೈಯಿಂದ ಡಿಸೆಂಬರ್ ಅವಧಿಯ ಅಂಕಿಅಂಶ ಉಲ್ಲೇಖಿಸಿ ಟ್ವಿಟರ್ ಈ ಮಾಹಿತಿ ನೀಡಿದೆ.

ಟ್ವಿಟರ್ ಖಾತೆಯ ಮಾಹಿತಿ ಪಡೆಯುವಲ್ಲಿ ಭಾರತವು ಅಮೆರಿಕದ ನಂತರದ ಸ್ಥಾನದಲ್ಲಿದೆ. ಜಾಗತಿಕವಾಗಿ ಟ್ವಿಟರ್ ಖಾತೆಗಳ ಮಾಹಿತಿ ಕೋರಿ ಬಂದ ಅರ್ಜಿಗಳಲ್ಲಿ ಭಾರತದ ಪಾಲು ಶೇ 19ರಷ್ಟಿದೆ ಎಂದು ಕಂಪನಿ ತಿಳಿಸಿದೆ.

ಬ್ಲೂಟಿಕ್ ಹೊರತುಪಡಿಸಿದಂತೆ ಇತರ ಬಳಕೆದಾರರ ಕಂಟೆಂಟ್‌ಗಳನ್ನು ಬ್ಲಾಕ್ ಮಾಡುವಂತೆ ಮನವಿ ಮಾಡಿದ ದೇಶಗಳ ಪೈಕಿ ಭಾರತ 5ನೇ ಸ್ಥಾನದಲ್ಲಿದೆ ಎಂದು ಟ್ವಿಟರ್ ಹೇಳಿದೆ.

ವಿಶ್ವದಾದ್ಯಂತ ಬ್ಲೂ ಟಿಕ್ ಹೊಂದಿರುವ ಪತ್ರಕರ್ತರು ಮತ್ತು ಸುದ್ದಿ ಮಾಧ್ಯಮಗಳ ಖಾತೆಗಳ ಟ್ವೀಟ್ ತೆರವಿಗೆ 326 ಮನವಿ ಸಲ್ಲಿಕೆಯಾಗಿತ್ತು. ಇದು 2020ರ ಜನವರಿ – ಜೂನ್ ಅವಧಿಗೆ ಹೋಲಿಸಿದರೆ ಶೇ 103ರಷ್ಟು ಹೆಚ್ಚು ಎಂದಿದೆ.

ಭಾರತದಿಂದ 114, ಟರ್ಕಿಯಿಂದ 78, ರಷ್ಯಾದಿಂದ 55 ಹಾಗೂ ಪಾಕಿಸ್ತಾನದಿಂದ 48 ಕಾನೂನಾತ್ಮಕ ಮನವಿ ಸಲ್ಲಿಕೆಯಾಗಿದ್ದವು ಎಂದು ಕಂಪನಿ ತಿಳಿಸಿದೆ.

'ಮಾಹಿತಿ ತಂತ್ರಜ್ಞಾನ (ಐಟಿ) ಕಾಯ್ದೆ-2000ದ ಕಲಂ 69ಎ ಗೆ ವಿರುದ್ಧವಾಗಿರುವ 1,400ಕ್ಕೂ ಹೆಚ್ಚು ಟ್ವಿಟರ್ ಖಾತೆಗಳನ್ನು ಬ್ಲಾಕ್ ಮಾಡಬೇಕು' ಎಂಬ ನೋಟಿಸ್‌ಗಳನ್ನು ಪ್ರಶ್ನಿಸಿ 'ಟ್ವಿಟರ್' ಕಂಪನಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರಕ್ಕೆ ನೋಟಿಸ್ ಜಾರಿಗೊಳಿಸಲು ಕರ್ನಾಟಕ ಹೈಕೋರ್ಟ್ ಜುಲೈ 27ರಂದು ಆದೇಶಿಸಿತ್ತು. ನಂತರ ವಿಚಾರಣೆಯನ್ನು ಆಗಸ್ಟ್ 25ಕ್ಕೆ ಮುಂದೂಡಿತ್ತು.

ಕೇಂದ್ರ ಸಚಿವೆ ಸ್ಮೃತಿ ಇರಾನಿ ಮಗಳ ವಿರುದ್ಧದ ಆರೋಪ ಪ್ರಕರಣ

ಕಾಂಗ್ರೆಸ್ ನಾಯಕರಿಗೆ ಸಮನ್ಸ್

ನವದೆಹಲಿ (ಪಿಟಿಐ): ಕೇಂದ್ರ ಸಚಿವೆ ಸ್ಮೃತಿ ಇರಾನಿ ಹಾಗೂ ಅವರ ಮಗಳ ವಿರುದ್ಧದ ಆರೋಪಗಳಿಗೆ ಸಂಬಂಧಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿರುವ ಪೋಸ್ಟ್‌ಗಳು ಹಾಗೂ ಟ್ವೀಟ್‌ಗಳನ್ನು ತೆಗೆದು ಹಾಕುವಂತೆ ಕಾಂಗ್ರೆಸ್ ಮುಖಂಡರಾದ ಜೈರಾಮ್ ರಮೇಶ್, ಪವನ್ ಖೇರಾ ಹಾಗೂ ನೆಟ್ಟಾ ಡಿಸೋಜಾ ಅವರಿಗೆ ದೆಹಲಿ ಹೈಕೋರ್ಟ್ ಶುಕ್ರವಾರ ಸಮನ್ಸ್ ಜಾರಿ ಮಾಡಿದೆ.

ಸಚಿವೆ ಇರಾನಿ ಹಾಗೂ ಅವರ ಮಗಳ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದ ಟ್ವೀಟ್‌ಗಳು, ಮರು ಟ್ವೀಟ್‌ಗಳು, ಪೋಸ್ಟ್‌ಗಳು, ವಿಡಿಯೊ ಹಾಗೂ ಚಿತ್ರಗಳನ್ನು ಪ್ರತಿವಾದಿಗಳು 24 ಗಂಟೆಗಳ ಒಳಗಾಗಿ ಸಾಮಾಜಿಕ ಮಾಧ್ಯಮಗಳಿಂದ ತೆಗೆದುಹಾಕಬೇಕು. ಪ್ರತಿವಾದಿಗಳು ತೆಗೆದುಹಾಕದಿದ್ದರೆ, ಇವುಗಳನ್ನು ತೆಗೆಯಲು ಸಾಮಾಜಿಕ ಮಾಧ್ಯಮ ವೇದಿಕೆಗಳಾದ ಟ್ವಿಟರ್, ಫೇಸ್‌ಬುಕ್ ಹಾಗೂ ಯುಟ್ಯೂಬ್ ಕ್ರಮ ಕೈಗೊಳ್ಳಬೇಕು ಎಂದು ಹೈಕೋರ್ಟ್ ಸೂಚಿಸಿದೆ.

'ವಾಸ್ತವ ಸಂಗತಿಗಳನ್ನು ಪರಿಶೀಲಿಸದೇ, ಅರ್ಜಿದಾರರ ವಿರುದ್ಧ ಮಾನಹಾನಿಕರ ಆರೋಪಗಳನ್ನು ಮಾಡಲಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಪ್ರತಿವಾದಿಗಳು ಸುದ್ದಿಗೋಷ್ಠಿ ನಡೆಸಿ, ಕೆಲ ಆರೋಪಗಳನ್ನು ಮಾಡಿದ್ದಾರೆ. ನಂತರದ ಟ್ವೀಟ್‌ಗಳು, ಮರು ಟ್ವೀಟ್‌ಗಳಿಂದಾಗಿ ಅರ್ಜಿದಾರರ ವರ್ಚಸ್ಸಿಗೆ ಧಕ್ಕೆಯಾಗಿದೆ' ಎಂದು ನ್ಯಾಯಮೂರ್ತಿ ಅಭಿಪ್ರಾಯಪಟ್ಟಿದ್ದಾರೆ.

ನಂತರ, ಅರ್ಜಿಯ ವಿಚಾರಣೆಯನ್ನು ನವೆಂಬರ್ 15ಕ್ಕೆ ಮುಂದೂಡಿದರು.

ಕಾಂಗ್ರೆಸ್‌ನ ಈ ಮೂವರು ನಾಯಕರ ವಿರುದ್ಧ ಸಚಿವೆ ಇರಾನಿ ಅವರು ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ. ತಮ್ಮ ಹಾಗೂ ಮಗಳ ವಿರುದ್ಧ ಆಧಾರರಹಿತ ಹಾಗೂ ಸುಳ್ಳು ಆರೋಪಗಳನ್ನು ಮಾಡಿರುವುದಕ್ಕಾಗಿ ಕಾಂಗ್ರೆಸ್ ಮುಖಂಡರಿಂದ ₹ 2 ಕೋಟಿಗೂ ಅಧಿಕ ಪರಿಹಾರ ಕೊಡಿಸುವಂತೆ ಕೋರಿ ಅವರು ಅರ್ಜಿ ಸಲ್ಲಿಸಿದ್ದಾರೆ. ಹಿರಿಯ ವಕೀಲ ಎನ್.ಕೆ.ಕೌಲ್ ಅವರು ಸಚಿವೆ ಸ್ಮೃತಿ ಇರಾನಿ ಪರ ವಾದ ಮಂಡಿಸಿದರು.

ಕೋರ್ಟ್‌ಗೆ ವಾಸ್ತವಾಂಶಗಳನ್ನು ತಿಳಿಸುವೆ: ಜೈರಾಮ್ ರಮೇಶ್

ನವದೆಹಲಿ: 'ಸಚಿವೆ ಸ್ಮೃತಿ ಇರಾನಿ ಅವರು ದಾಖಲಿಸಿರುವ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿ ಕೋರ್ಟ್‌ಗೆ ವಾಸ್ತವಾಂಶಗಳನ್ನು ತಿಳಿಸಲಾಗುವುದು' ಎಂದು ಹಿರಿಯ ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಶುಕ್ರವಾರ ಹೇಳಿದರು.

ಸಚಿವೆ ಇರಾನಿ ಹಾಗೂ ಅವರ ಮಗಳ ವಿರುದ್ಧದ ಆರೋಪಗಳಿಗೆ ಸಂಬಂಧಿಸಿ ಮಾಡಲಾದ ಟ್ವೀಟ್‌ಗಳು, ಪೋಸ್ಟ್‌ಗಳನ್ನು ತೆಗೆದುಹಾಕುವಂತೆ ತಮ್ಮನ್ನು ಸೇರಿ ಮೂವರು ನಾಯಕರಿಗೆ ದೆಹಲಿ ಹೈಕೋರ್ಟ್ ಸಮನ್ಸ್ ಜಾರಿಗೊಳಿಸಿದ್ದಕ್ಕೆ ಅವರು ಈ ರೀತಿ ಪ್ರತಿಕ್ರಿಯಿಸಿದ್ದಾರೆ. 'ತಮ್ಮ ಮಗಳ ವಿರುದ್ಧದ ಆರೋಪಗಳನ್ನು ಸಚಿವೆ ಇರಾನಿ ತಿರುಚಿದ್ದಾರೆ. ಆರೋಪಗಳನ್ನು ತಿರುಚಿದ್ದನ್ನು ಪ್ರಶ್ನಿಸುತ್ತೇವೆ ಹಾಗೂ ವಾಸ್ತವಾಂಶಗಳನ್ನು ತಿಳಿಸುತ್ತೇವೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಟ್ಲ ಸತೀಶ್ ಶೆಟ್ಟಿ
ಯಕ್ಷಗಾನ ಭಾಗವತರು
ಮಂಗಳೂರು
ಯಕ್ಷಧ್ರುವ
ಸೆಲೆಬ್ರಿಟಿ LIVE

ಬೆಳಿಗ್ಗೆ 11 ರಿಂದ 12
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಅಮಾನತು ಪ್ರಶ್ನಿಸಿದ್ದ ನ್ಯಾಯಾಧೀಶರ ಅರ್ಜಿ ವಿಚಾರಣೆಗೆ ಒಪ್ಪಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಪ್ರಕರಣಗಳ ವಿಚಾರಣೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ, ಕ್ಷಿಪ್ರವಾಗಿ ತೀರ್ಪು ನೀಡಿದ್ದ ಕಾರಣಕ್ಕೆ ಅಮಾನತಾಗಿದ್ದ ಬಿಹಾರದ ಅರಾರಿಯಾ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರ ಅರ್ಜಿಯನ್ನು ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿದೆ. ಜತೆಗೆ ಬಿಹಾರ ಸರ್ಕಾರಕ್ಕೆ ನೋಟಿಸ್ ನೀಡಿದೆ.

ಅರಾರಿಯಾ ಜಿಲ್ಲಾ ಸೆಷನ್ಸ್ ನ್ಯಾಯಾಧೀಶ ಶಶಿಕಾಂತ್ ರಾಯ್ ಅವರು, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ (ಪೋಕ್ಸೊ) ಪ್ರಕರಣದ ವಿಚಾರಣೆಯನ್ನು ಒಂದೇ ದಿನದಲ್ಲಿ ಪೂರ್ಣಗೊಳಿಸಿ, ಶಿಕ್ಷೆ ಪ್ರಕಟಿಸಿದ್ದರು. ಮತ್ತು ಹತ್ಯೆ ಪ್ರಕರಣವೊಂದರಲ್ಲಿ ನಾಲ್ಕೇ ದಿನದಲ್ಲಿ ಮರಣದಂಡನೆ ಪ್ರಕಟಿಸಿದ್ದರು. ಶಶಿಕಾಂತ್ ಅವರನ್ನು ಪಟ್ನಾ ಹೈಕೋರ್ಟ್ ಅಮಾನತು ಮಾಡಿತ್ತು. ಈ ಅಮಾನತು ಆದೇಶವನ್ನು ಪ್ರಶ್ನಿಸಿ, ಶಶಿಕಾಂತ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ನ್ಯಾಯಮೂರ್ತಿಗಳಾದ ಯು.ಯು.ಲಲಿತ್ ಮತ್ತು ಎಸ್.ಆರ್.ಭಟ್ ಅವರಿದ್ದ ಪೀಠವು ಅರ್ಜಿಯನ್ನು ಪರಿಶೀಲಿಸಿತು. 'ಪಟ್ನಾ ಹೈಕೋರ್ಟ್ ನೂತನವಾಗಿ ಜಾರಿಗೆ ತಂದಿರುವ ಬಡ್ತಿ ನೀತಿಯನ್ನು ಪ್ರಶ್ನಿಸಿದ್ದಕ್ಕೆ ನನ್ನನ್ನು ಅಮಾನತು ಮಾಡಲಾಗಿದೆ. ನನಗೆ ಕಾರಣ ಕೇಳಿ ನೋಟಿಸ್ ನೀಡಲಾಗಿತ್ತು ಮತ್ತು ಅದರ ಬೆನ್ನಲ್ಲೇ ಅಮಾನತು ಮಾಡಲಾಯಿತು' ಎಂದು ಶಶಿಕಾಂತ್ ಆರೋಪಿಸಿದ್ದರು.

ಈ ಬಗ್ಗೆ ಎರಡು ವಾರಗಳಲ್ಲಿ ವಿವರಣೆ ನೀಡುವಂತೆ ಬಿಹಾರ ಸರ್ಕಾರಕ್ಕೆ ನೋಟಿಸ್ ನೀಡಿದೆ. ಅಮಾನತಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಸಲ್ಲಿಸುವಂತೆ ಸೂಚಿಸಿದೆ.

ತ್ವರಿತವಾಗಿ ಪ್ರಕರಣಗಳ ವಿಚಾರಣೆ ಮುಗಿಸಿ, ತೀರ್ಪು ನೀಡಿದ್ದರ ಬಗ್ಗೆ ಪೀಠವು ಅರ್ಜಿದಾರರ ಪರ ವಕೀಲರನ್ನು ಪ್ರಶ್ನಿಸಿತು. ಒಂದೇ ದಿನದಲ್ಲಿ ವಿಚಾರಣೆ ನಡೆಸಿ, ಅಂದೇ ತೀರ್ಪು ನೀಡಬಾರದು ಎಂದು ಸುಪ್ರೀಂ ಕೋರ್ಟ್ ಈ ಹಿಂದೆ ಹಲವು ಬಾರಿ ಹೇಳಿದೆ ಎಂದು ಪೀಠವು ಹೇಳಿತು. 'ಪ್ರಕರಣವೊಂದರಲ್ಲಿ ನಾಲ್ಕೇ ದಿನದಲ್ಲಿ ಮರಣದಂಡನೆ ವಿಧಿಸಿದ್ದೀರಿ. ಆ ಶಿಕ್ಷೆಗೆ ಗುರಿಯಾಗಲಿರುವ ವ್ಯಕ್ತಿ ತನ್ನ ಪರವಾಗಿ ವಾದ ಮಂಡಿಸಲು ಅವಕಾಶವನ್ನೇ ನೀಡಿಲ್ಲ. ಇದು ನ್ಯಾಯದ ಅಣಕ. ಈ ಹಿಂದೆ ಮಧ್ಯ ಪ್ರದೇಶದಲ್ಲಿ ಒಂಬತ್ತೇ ದಿನದಲ್ಲಿ ಮರಣ ದಂಡನೆ ಶಿಕ್ಷೆ ಪ್ರಕಟಿಸಲಾಗಿತ್ತು. ಆ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿ, ಮತ್ತೆ ಹೊಸದಾಗಿ ವಿಚಾರಣೆ ನಡೆಸುವಂತೆ ಸೂಚಿಸಿತ್ತು' ಎಂದು ಪೀಠವು ಹೇಳಿತು.

'ಸೆಷನ್ಸ್ ನ್ಯಾಯಾಧೀಶರಾದ ಅರ್ಜಿದಾರರ ಗಮನದಲ್ಲಿ ಸುಪ್ರೀಂ ಕೋರ್ಟ್‌ನ ಈ ತೀರ್ಪುಗಳೆಲ್ಲವೂ ಇರಬೇಕಿತ್ತು' ಎಂದು ಪೀಠವು ಹೇಳಿತು.

ಅಣ್ಣಾ ವಿವಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದನೆ

ಎನ್‌ಇಪಿಯಿಂದ ಆಯ್ಕೆ ಸ್ವಾತಂತ್ರ್ಯ

ಪ್ರಜಾವಾಣಿ ವಾರ್ತೆ

ಚೆನ್ನೈ: ಕೇಂದ್ರ ಸರ್ಕಾರ ಜಾರಿಗೊಳಿಸಿರುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ಯುವಜನತೆಗೆ ಅಗಾಧ ಆಯ್ಕೆಯ ಸ್ವಾತಂತ್ರ್ಯ ನೀಡುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟಿದ್ದಾರೆ.

ಇಲ್ಲಿನ ಅಣ್ಣಾ ವಿಶ್ವವಿದ್ಯಾಲಯದ 42ನೇ ಘಟಿಕೋತ್ಸವದಲ್ಲಿ ಭಾಗಿಯಾಗಿ ಮಾತನಾಡಿದ ಅವರು, 'ಸರ್ಕಾರ ಜನರ ಪ್ರತಿಭೆಗೆ ಜಾಗ ನೀಡುತ್ತದೆ. ಸರ್ಕಾರವೊಂದು ಎಲ್ಲವನ್ನೂ ತಿಳಿಯಲು ಅಥವಾ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ ಎಂದು ಒಪ್ಪಿಕೊಳ್ಳುವುದರಲ್ಲಿ ಅದರ ಸಾಮರ್ಥ್ಯ ಅಡಗಿದೆ. ಇದೇ ಕಾರಣದಿಂದ ಪ್ರತಿಯೊಂದು ಕ್ಷೇತ್ರದಲ್ಲೂ ಸುಧಾರಣೆ ನೋಡುತ್ತಿದ್ದೀರಿ. ಅದೇ ರೀತಿ ನೂತನ ಶಿಕ್ಷಣ ನೀತಿಯು ಯುವಜನತೆಗೆ ಅಗಾಧ ಆಯ್ಕೆಯ ಸ್ವಾತಂತ್ರ್ಯ ನೀಡುತ್ತದೆ' ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ, ಕೋವಿಡ್–19 ಹಿಂದೆಂದೂ ಕಂಡುಕೇಳರಿಯದ, ಶತಮಾನಕ್ಕೆ ಒಮ್ಮೆ ಮಾತ್ರ ಎದುರಾಗುವ ಸಾಂಕ್ರಾಮಿಕ ರೋಗ. ಈ ಸಾಂಕ್ರಾಮಿಕ ಪ್ರತಿ ದೇಶವನ್ನೂ ಪರೀಕ್ಷಿಸಿದೆ. ಈ ಆಗಂತುಕವನ್ನು ಭಾರತ ಅತ್ಯಂತ ದಿಟ್ಟತನದಿಂದ ಎದುರಿಸಿದೆ. ಅದಕ್ಕಾಗಿ ಎಲ್ಲ ವಿಜ್ಞಾನಿಗಳಿಗೆ, ಆರೋಗ್ಯ ಸಿಬ್ಬಂದಿ ಮತ್ತು ಜನಸಾಮಾನ್ಯರಿಗೆ ಧನ್ಯವಾದ. ಇದರ ಫಲಿತಾಂಶವಾಗಿ ಕೈಗಾರಿಕೆ, ಆವಿಷ್ಕಾರ, ಬಂಡವಾಳ ಸೇರಿದಂತೆ ದೇಶದ ಪ್ರತಿ ಕ್ಷೇತ್ರವೂ ಹೊಸ ಚೈತನ್ಯ ಪಡೆದಿದೆ. ದೇಶವು ಎಲ್ಲ ಅಡೆತಡೆಗಳನ್ನು ಅವಕಾಶವಾಗಿ ಪರಿವರ್ತಿಸಿಕೊಂಡಿದೆ' ಎಂದು ಮೋದಿ ಅವರು ಹೇಳಿದರು.

ತಮಿಳುನಾಡಿನಲ್ಲಿ ಡಿಎಂಕೆ ಸರ್ಕಾರ ಎನ್‌ಇಪಿಗೆ ವಿರೋಧ ವ್ಯಕ್ತಪಡಿಸಿ, ತನ್ನದೇ ರಾಜ್ಯ ಶಿಕ್ಷಣ ನೀತಿ ಜಾರಿಗೆ ಮುಂದಾಗಿದೆ. ಈ ಮಧ್ಯೆ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಭಾಗಿಯಾದ ಸಭೆಯಲ್ಲಿಯೇ ಪ್ರಧಾನಿ ನರೇಂದ್ರ ಮೋದಿ ಅವರು ಎನ್‌ಇಪಿ ಪ್ರಶಂಸಿಸಿ ಮಾತನಾಡಿದರು.

ತಮಿಳುನಾಡಿಗೆ ಎರಡು ದಿನಗಳ ಕಾಲ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಚೆಸ್‌ಬೋರ್ಡ್ ಅನ್ನು ಉಡುಗೊರೆಯಾಗಿ ನೀಡಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	14,543	14,543
ಹಾರಂಗಿ	2,859	2,857.50	2,900	1,020
ಕಬಿನಿ	2,284	2,283.51	4,947	5,000
ಹೇಮಾವತಿ	2,922	2,922	9,243	9,185
ಲಿಂಗನಮಕ್ಕಿ	1,819	1,798	6,993	5,899
ಸೂಪಾ (ಮೀ)	564	541.78	3,668	4,591
ಮಾಣಿ	595	584	600	-
ತುಂಗಭದ್ರಾ	1,633	1,632.34	69,632	90,865
ಮಲಪ್ರಭಾ	2079.5	2,069.20	1,609	394
ಘಟಪ್ರಭಾ	2175	2,156.46	3,849	175
ಭದ್ರಾ	186	184	8,325	10,119
ಆಲಮಟ್ಟಿ (ಮೀ)	519.6	518.50	27,154	18,451
ನಾರಾಯಣಪುರ (ಮೀ)	492.25	491.85	20,000	17,480

*ನೆಲಮಟ್ಟದಿಂದ

ಉತ್ತರ ಒಳನಾಡಿನಲ್ಲಿ ಭಾರಿ ಮಳೆ?

ಬೆಂಗಳೂರು: ಕರಾವಳಿಯ ಎಲ್ಲಾ ಜಿಲ್ಲೆಗಳು ಸೇರಿದಂತೆ ಉತ್ತರ ಒಳನಾಡಿನ ಹಲವು ಕಡೆ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಬೆಳಗಾವಿ, ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ ಜಿಲ್ಲೆಗಳಲ್ಲಿ ಹಾಗೂ ದಕ್ಷಿಣ ಒಳನಾಡಿನ ಬಳ್ಳಾರಿ, ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ ಮತ್ತು ತುಮಕೂರಿನ ಒಂದೆರಡು ಕಡೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಬೆಂಗಳೂರು ನಗರದಲ್ಲಿ ಮುಂದಿನ 24 ಗಂಟೆಗಳ ಕಾಲ ಮೋಡ ಕವಿದ ವಾತಾವರಣ ಇರಲಿದೆ. ಒಂದೆರಡು ಸಲ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ತಿಳಿಸಿದೆ.

ಅಮಾನತುಗೊಂಡ ಜಡ್ಜ್ ವಿರುದ್ಧ ಸಿಬಿಐ ಮೊಕದ್ದಮೆ

ನವದೆಹಲಿ (ಪಿಟಿಐ): ಅಮಾನತುಗೊಂಡಿರುವ, ದೆಹಲಿ ಕೋರ್ಟ್‌ನ ನ್ಯಾಯಾಧೀಶರಾದ ರಚನಾ ಲಖನ್ ಪಾಲ್ ಮತ್ತು ಅವರ ಪತಿಯ ವಿರುದ್ಧ ನಿಗದಿತ ಆದಾಯ ಮೀರಿ ₹2.99 ಕೋಟಿ ಮೌಲ್ಯದ ಆಸ್ತಿ ಹೊಂದಿರುವ ಕುರಿತಂತೆ ಸಿಬಿಐ ಪ್ರಕರಣ ದಾಖಲಿಸಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರಾದ ರಚನಾ ಅವರನ್ನು ತೀಸ್ ಹಜಾರಿ ಕೋರ್ಟ್‌ಗೆ ನಿಯೋಜಿಸಲಾಗಿತ್ತು. ಅವರ ಪತಿ, ವಕೀಲ ಅಲೋಕ್ ಅವರನ್ನು ತಮ್ಮ ಪರ ತೀರ್ಪು ಬರುವಂತೆ ನೋಡಿಕೊಳ್ಳಲು ಕಕ್ಷಿದಾರರಿಂದ ₹ 4 ಲಕ್ಷ ಲಂಚ ಸ್ವೀಕರಿಸುವಾಗ 2016ರಲ್ಲಿ ಸಿಬಿಐ ಬಂಧಿಸಿತ್ತು. ಈ ಪ್ರಕರಣ ಕುರಿತು 2018ರಲ್ಲಿ ಆರೋಪಪಟ್ಟಿಯನ್ನು ದಾಖಲಿಸಿತ್ತು.

ಲಂಚ ಪ್ರಕರಣದ ತನಿಖೆ ವೇಳೆ, ದಂಪತಿಯು 2006–16ರ ಅವಧಿಯಲ್ಲಿ ಆದಾಯ ಮೀರಿ ಆಸ್ತಿ ಸಂಪಾದಿಸಿರುವುದು ಪತ್ತೆಯಾಗಿದೆ ಎಂದು ಬಳಿಕ ಸಿಬಿಐ ಪ್ರತಿಪಾದಿಸಿತ್ತು. ದಂಪತಿಯ ಬಳಿ ಜುಲೈ 27, 2006ರಲ್ಲಿ ₹1.09 ಲಕ್ಷ ಮೌಲ್ಯದ ಆಸ್ತಿ ಇತ್ತು. ಆಗಷ್ಟೇ ರಚನಾ ಸೇವೆಗೆ ಸೇರಿದ್ದರು. ಸೆಪ್ಟೆಂಬರ್ 28, 2016ರ ವೇಳೆಗೆ ಅವರ ಆಸ್ತಿ ಮೌಲ್ಯ ₹3.53 ಕೋಟಿ ಆಗಿತ್ತು ಎಂದು ತಿಳಿಸಿದೆ.

ಈ ಅವಧಿಯಲ್ಲಿ ದಂಪತಿಯ ಒಟ್ಟು ಆದಾಯ ₹ 1.05 ಕೋಟಿ ಆಗಿದ್ದರೆ, ಅವರ ವೆಚ್ಚ ₹ 51.73 ಲಕ್ಷವಾಗಿತ್ತು ಎಂದು ವಿವರಿಸಿತ್ತು.

ಸಂಕ್ಷಿಪ್ತ ಸುದ್ದಿ

ಆಜಾದಿ ಉಪಗ್ರಹ ಉಡಾವಣೆಗೆ ಸಿದ್ಧ

ನವದೆಹಲಿ (ಪಿಟಿಐ): 75ನೇ ಸ್ವಾತಂತ್ರ್ಯೋತ್ಸವದ ಸ್ಮರಣಾರ್ಥ, ದೇಶದಾದ್ಯಂತ 75 ಶಾಲೆಗಳ 750 ವಿದ್ಯಾರ್ಥಿನಿಯರು ನಿರ್ಮಿಸಿರುವ ಆಜಾದಿ ಉಪಗ್ರಹವು (AzaadiSAT) ಮುಂದಿನ ತಿಂಗಳ ಆರಂಭದಲ್ಲಿ ಇಸ್ರೋದ ಸಣ್ಣ ಉಪಗ್ರಹ ಉಡಾವಣೆ ನೌಕೆ (ಎಸ್‌ಎಸ್‌ಎಲ್‌ವಿ) ಮೂಲಕ ಉಡಾವಣೆಗೆ ಸಿದ್ಧವಾಗಿದೆ.

ಎಂಟು ಕೆ.ಜಿ ತೂಕದ ಪ್ರಾಯೋಗಿಕ ಉಪಗ್ರಹವು ತನ್ನದೇ ಸೌರ ಫಲಕಗಳ ಫೋಟೋ ತೆಗೆಯಲು ಸೆಲ್ಫಿ ಕ್ಯಾಮೆರಾ ಮತ್ತು ದೀರ್ಘ ವ್ಯಾಪ್ತಿಯ ಸಂವಹನ ಸಾಮರ್ಥ್ಯದ ಟ್ರಾನ್ಸ್‌ಪಾಂಡರ್ ಅನ್ನು ಒಳಗೊಂಡಿದೆ. ಉಪಗ್ರಹವು 6 ತಿಂಗಳು ಕಾರ್ಯನಿರ್ವಹಿಸಲಿದೆ.

ಶಿಂದೆಗೆ ಉದ್ಧವ್ ಅಣ್ಣನ ಮಗನ ಬೆಂಬಲ

ಮುಂಬೈ (ಪಿಟಿಐ): ಶಿವಸೇನಾ ಅಧ್ಯಕ್ಷ ಉದ್ಧವ್ ಠಾಕ್ರೆ ಅವರ ಅಣ್ಣನ ಮಗ ನಿಹಾರ್ ಠಾಕ್ರೆ ಅವರು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರನ್ನು ಶುಕ್ರವಾರ ಭೇಟಿ ಮಾಡಿ, ಬೆಂಬಲ ಸೂಚಿಸಿದರು.

ನಿಹಾರ್ ಠಾಕ್ರೆ, ಶಿವಸೇನಾ ಸ್ಥಾಪಕ ಬಾಳ್ ಠಾಕ್ರೆಯ ಅವರ ಹಿರಿಯ ಮಗ ಬಿಂದುಮಾಧವ್ ಠಾಕ್ರೆ ಅವರ ಮಗ. ಬಿಜೆಪಿ ನಾಯಕ ಮತ್ತು ಮಹಾರಾಷ್ಟ್ರದ ಮಾಜಿ ಸಚಿವ ಹರ್ಷವರ್ಧನ್ ಪಾಟೀಲ್ ಅವರ ಮಗಳೊಂದಿಗೆ ನಿಹಾರ್ ಅವರು ವಿವಾಹವಾಗಿದ್ದಾರೆ.

ಇಬ್ಬರ ಭೇಟಿಯ ಬಳಿಕ ಪತ್ರಿಕಾ ಹೇಳಿಕೆ ನೀಡಿರುವ ಮುಖ್ಯಮಂತ್ರಿ ಕಚೇರಿ, 'ನಿಹಾರ್ ಅವರು ಹಲವು ವರ್ಷಗಳಿಂದ ರಾಜಕೀಯದಿಂದ ದೂರ ಉಳಿದಿದ್ದರು. ಆದರೆ, ಈಗ ಅವರು ಶಿಂದೆ ಅವರ ನಾಯಕತ್ವದಲ್ಲಿ ರಾಜಕೀಯ ಜೀವನ ಪ್ರಾರಂಭಿಸಲಿದ್ದಾರೆ' ಎಂದಿದೆ.

ತಂಬಾಕು ಉತ್ಪನ್ನ: ಆರೋಗ್ಯ ಎಚ್ಚರಿಕೆಗೆ ಹೊಸ ಚಿತ್ರ

ನವದೆಹಲಿ: ಡಿಸೆಂಬರ್ 1ರ ನಂತರ ತಯಾರಿಸಿದ, ಆಮದು ಮಾಡಿದ ತಂಬಾಕು ಉತ್ಪನ್ನಗಳ ಪ್ಯಾಕ್ ಮೇಲೆ 'ತಂಬಾಕು ಸೇವನೆ ಅತ್ಯಂತ ನೋವಿನ ಸಾವಿಗೆ ಕಾರಣವಾಗುತ್ತದೆ' ಎಂಬ ಎಚ್ಚರಿಕೆಯೊಂದಿಗೆ ಹೊಸ ಚಿತ್ರವನ್ನು ಪ್ರದರ್ಶಿಸಲಾಗುತ್ತದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಈ ಚಿತ್ರವು ಈ ವರ್ಷದ ಡಿಸೆಂಬರ್ 1 ರಿಂದ ಪ್ರಾರಂಭವಾಗಿ ಒಂದು ವರ್ಷದ ಅವಧಿಗೆ ಮಾನ್ಯವಾಗಿರುತ್ತದೆ.

ಅಲ್ಲದೆ, ಸಚಿವಾಲಯವು ಸೂಚಿಸಿರುವ ಹೊಸ ಆರೋಗ್ಯ ಎಚ್ಚರಿಕೆಗಳ ಪ್ರಕಾರ, ಡಿಸೆಂಬರ್ 1, 2023 ರ ನಂತರ ತಯಾರಿಸಲಾದ, ಆಮದು ಮಾಡಿದ ಅಥವಾ ಪ್ಯಾಕ್ ಮಾಡಲಾದ ತಂಬಾಕು ಉತ್ಪನ್ನಗಳ ಪ್ಯಾಕ್ ಮೇಲೆ 'ತಂಬಾಕು ಬಳಕೆದಾರರು ಕಿರಿಯ ವಯಸ್ಸಿನಲ್ಲೇ ಸಾವಿಗೀಡಾಗುತ್ತಾರೆ' ಎಂಬ ಎಚ್ಚರಿಕೆಯೂ ಇರುತ್ತದೆ.

2022ರ ಜುಲೈ 21 ರಂದು ಸಿಗರೇಟ್ ಮತ್ತು ಇತರ ತಂಬಾಕು ಉತ್ಪನ್ನಗಳ (ಪ್ಯಾಕೇಜಿಂಗ್ ಮತ್ತು ಲೇಬಲಿಂಗ್) ನಿಯಮಗಳು, 2008ರ ಕಾಯ್ದೆಗೆ ತಿದ್ದುಪಡಿ ಮಾಡುವ ಮೂಲಕ ಸಚಿವಾಲಯವು ಹೊಸ ಆರೋಗ್ಯ ಎಚ್ಚರಿಕೆಗಳನ್ನು ಅಳವಡಿಸಿಕೊಂಡಿದೆ. **19 ಭಾಷೆಗಳಲ್ಲಿ ಅಧಿಸೂಚನೆಯು ಈ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ:** http://www.mohfw.gov.in"www.mohfw.gov.in ಮತ್ತು http://ntcp.nhp.gov.in"ntcp.nhp.gov.in ಮಾರ್ಗಸೂಚಿಗಳ ಉಲ್ಲಂಘನೆಯು ಸಿಗರೇಟ್ ಮತ್ತು ಇತರ ತಂಬಾಕು ಉತ್ಪನ್ನಗಳ ಕಾಯ್ದೆ, 2003 ರ ವಿಧಿ 20 ರಲ್ಲಿ ಸೂಚಿಸಿದಂತೆ ಜೈಲು ಶಿಕ್ಷೆ ಅಥವಾ ದಂಡದೊಂದಿಗೆ ಶಿಕ್ಷಾರ್ಹ ಅಪರಾಧವ ಎಂದು ಸರ್ಕಾರ ಹೇಳಿದೆ.

'ಸುಪ್ರೀಂ' ನ್ಯಾ. ಖಾನ್ವಿಲ್ಕರ್ ನಿವೃತ್ತಿ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನಲ್ಲಿ ಹಿರಿಯ ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ಅವರು ಶುಕ್ರವಾರ ಸೇವೆಯಿಂದ ನಿವೃತ್ತಿ ಹೊಂದಿದರು.

2016ರ ಮೇ 13ರಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಬಡ್ತಿ ಪಡೆದಿದ್ದ ಖಾನ್ವಿಲ್ಕರ್ ಅವರು ಐದು ವರ್ಷಕ್ಕೂ ಹೆಚ್ಚಿನ ಸೇವಾ ಅವಧಿಯಲ್ಲಿ ನೀಡಿರುವ ಹಲವು ಮಹತ್ವದ ತೀರ್ಪುಗಳಲ್ಲಿ ಏಕ ಸದಸ್ಯ ಪೀಠ ಮತ್ತು ಸಾಂವಿಧಾನಿಕ ಪೀಠದ ಭಾಗವಾಗಿದ್ದರು.

ಆಧಾರ್ ಪ್ರಕರಣ ತೀರ್ಪು, 2002ರ ಗುಜರಾತ್ ಗಲಭೆ ಪ್ರಕರಣದಲ್ಲಿ ನರೇಂದ್ರ ಮೋದಿ ಮತ್ತು ಇತರ 63 ಜನರಿಗೆ ಎಸ್‌ಐಟಿ ನೀಡಿದ ಕ್ಲೀನ್ ಚಿಟ್ ಎತ್ತಿಹಿಡಿದ ತೀರ್ಪು, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ಬಂಧನ, ಆಸ್ತಿ ಜಪ್ತಿ, ಶೋಧ ಮತ್ತು ಸ್ವಾಧೀನಪಡಿಸಿಕೊಳ್ಳುವ ಜಾರಿ ನಿರ್ದೇಶನಾಲಯದ ಅಧಿಕಾರ ಎತ್ತಿಹಿಡಿದ ತೀರ್ಪುಗಳೂ ಸೇರಿವೆ. ನ್ಯಾ.ಖಾನ್ವಿಲ್ಕರ್ ಅವರು ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳು ಮತ್ತು ಬಾರ್ ಅಸೋಸಿಯೇಷನ್ ಸದಸ್ಯರನ್ನು ಉದ್ದೇಶಿಸಿ 'ನೀವು ತೋರಿದ ಪ್ರೀತಿ ಮತ್ತು ವಾತ್ಸಲ್ಯಕ್ಕೆ ಆಭಾರಿಯಾಗಿದ್ದೇನೆ' ಎಂದು ಕೃತಜ್ಞತೆ ಸಲ್ಲಿಸಿದ್ದಾರೆ.

ನಿವೃತ್ತಿ ವೇಳೆ ನ್ಯಾ.ಖಾನ್ವಿಲ್ಕರ್ ಅವರು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಮತ್ತು ಇಬ್ಬರು ನ್ಯಾಯಮೂರ್ತಿಗಳೊಂದಿಗೆ ಚರ್ಚಿಸಿದರು. ನ್ಯಾ.ಖಾನ್ವಿಲ್ಕರ್ ಅವರ ಕಾರ್ಯತತ್ಪರತೆಯನ್ನು ಮುಖ್ಯ ನ್ಯಾ.ಎನ್.ವಿ. ರಮಣ ಮತ್ತಿತರರು ಶ್ಲಾಘಿಸಿದರು.

ಪಿತೂರಿಗೆ ನಾನು ಬಲಿಪಶು: ಪಾರ್ಥ

ಕೋಲ್ಕತ್ತ (ಪಿಟಿಐ): 'ನನ್ನ ವಿರುದ್ಧ ಪಿತೂರಿಯೊಂದು ನಡೆಯುತ್ತಿದ್ದು, ನನ್ನನ್ನು ಬಲಿಪಶು ಮಾಡಲಾಗಿದೆ' ಎಂದು ಶಾಲಾ ಶಿಕ್ಷಕರ ನೇಮಕಾತಿ ಹಗರಣದಲ್ಲಿ ಜಾರಿ ನಿರ್ದೇಶನಾಲಯದಿಂದ (ಇ.ಡಿ) ಬಂಧನಕ್ಕೆ ಒಳಗಾಗಿರುವ ಪಾರ್ಥ ಚಟರ್ಜಿ ಶುಕ್ರವಾರ ಹೇಳಿದ್ದಾರೆ.

ಬಂಧನದ ನಂತರ ಚಟರ್ಜಿ ಅವರನ್ನು ಟಿಎಂಸಿ ಎಲ್ಲ ಹುದ್ದೆಗಳು, ಸಚಿವ ಸ್ಥಾನದಿಂದ ತೆಗೆದು ಹಾಕಲಾಗಿದೆ. ಇಂಥ ಕ್ರಮದ ಬೆನ್ನಲ್ಲೇ, ಪಾರ್ಥ ಅವರಿಂದ ಈ ಹೇಳಿಕೆ ಹೊರಬಿದ್ದಿದೆ.

ನಗರ ಜೋಕಾ ಎಂಬಲ್ಲಿನ ಇಎಸ್‌ಐ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗಾಗಿ ಕರೆದೊಯ್ಯಲಾಗಿತ್ತು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾನು ಪಿತೂರಿಯೊಂದರ ಬಲಿಪಶು ಆಗಿದ್ದೇನೆ' ಎಂದರು.

ಶನಿವಾರ, ಜುಲೈ 30, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 210 | ಪುಟ 28

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ವಯಸ್ಸು ಒಂದು ಸಂಖ್ಯೆ ಮಾತ್ರ. ಸಾಧಿಸುವ ಛಲ ಇರಬೇಕು. ಯಾವುದೇ ವಯಸ್ಸಿನಲ್ಲಿಯೂ ಏನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಈ 94 ವರ್ಷದ 'ಸೂಪರ್ ದಾದಿ' ಉತ್ತಮ ನಿದರ್ಶನ

ಚರ್ಚೆ

ಭಾರತದ ರಾಜಕಾರಣವು ವ್ಯಕ್ತಿಕೇಂದ್ರಿತ ಪದ್ಧತಿಯಿಂದ ಬಿಡಿಸಿಕೊಳ್ಳುವುದು ಸಾಧ್ಯವಿಲ್ಲವೇ?

ಸಾಂತ್ವನ ಹೇಳುವವರಿಲ್ಲ: ಮಸೂದ್ ಕುಟುಂಬ 8

3 ತಿಂಗಳ ಗರಿಷ್ಠ ಮಟ್ಟಕ್ಕೆ ಷೇರುಪೇಟೆ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,570 ▲	17,158 ▲	₹ 53,220 (ಬೆಂಗಳೂರು) ▲	₹59,400 (ಬೆಂಗಳೂರು) ▲	79.24 ▲

ಸುದರ್ಶನ್ ಜ್ಯುವೆಲರ್ಸ್

ಚಿನ್ನ ❖ ಬೆಳ್ಳಿ ❖ ಚಿನ್ನದ ಆಭರಣಗಳು

ವರಮಹಾಲಕ್ಷ್ಮೀ ಹಬ್ಬದ ಕೊಡುಗೆ ವೇಸ್ಟೇಜ್ 4% ಮಾತ್ರ

₹4890/-gm

ಬೆಳ್ಳಿ ₹ 54,000/- *CA

ಚಿಕ್ಕಪೇಟೆ: 41300355

Gangothri

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ಪ್ರವೀಣ್ ಹತ್ಯೆ: ಎನ್‌ಐಎ ತನಿಖೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ ಬಿಜೆಪಿ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವರ್ಗಾವಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರೊಂದಿಗೆ ಶುಕ್ರವಾರ ಚರ್ಚೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, 'ವ್ಯವಸ್ಥಿತವಾಗಿ ಸಂಚು ರೂಪಿಸಿ ಪ್ರವೀಣ್ ಅವರನ್ನು ಹತ್ಯೆ ಮಾಡಲಾಗಿದೆ. ಈ ಕೃತ್ಯದ ಹಿಂದಿರುವ ಜಾಲವು ಅಂತರರಾಜ್ಯ ಮಟ್ಟದಲ್ಲಿ ವ್ಯಾಪಿಸಿಕೊಂಡಿದೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿ ಪ್ರಕರಣದ ತನಿಖೆಯನ್ನು ಎನ್‌ಐಎಗೆ ವರ್ಗಾಯಿಸಲು ತೀರ್ಮಾನಿಸಲಾಗಿದೆ' ಎಂದರು.

'ಪ್ರಕರಣದ ತನಿಖೆ ತೀವ್ರಗತಿಯಲ್ಲಿ ನಡೆಯುತ್ತಿದೆ. ಸಂಪೂರ್ಣ ಮಾಹಿತಿ ಸಂಗ್ರಹಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಸೂಚಿಸಲಾಗಿದೆ. ಮಾಹಿತಿ ಸಂಗ್ರಹವಾದ ಬಳಿಕ ಪ್ರಕರಣದ ತನಿಖೆಯನ್ನು ಎನ್‌ಐಎಗೆ ಒಪ್ಪಿಸುವ ಕುರಿತು ಗೃಹ ಇಲಾಖೆಯು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಿದೆ' ಎಂದು ಹೇಳಿದರು.

ಮಹಮ್ಮದ್ ಫಾಝಿಲ್ ಹತ್ಯೆಗೀಡಾದ ಸುರತ್ಕಲ್ ಮಾರುಕಟ್ಟೆ ಪ್ರದೇಶ ಶುಕ್ರವಾರ ಸಂಪೂರ್ಣ ಸ್ತಬ್ಧವಾಗಿತ್ತು –ಪ್ರಜಾವಾಣಿ ಚಿತ್ರ

'ಗಂಭೀರವಾಗಿ ಪರಿಗಣಿಸಿದ್ದೇವೆ'

'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರುವ ಮೂರು ಹತ್ಯೆ ಪ್ರಕರಣಗಳನ್ನೂ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಪ್ರತಿ ನಾಗರಿಕನ ಜೀವವೂ ಮುಖ್ಯ. ಈ ಹತ್ಯೆಗಳ ಹಿಂದೆ ಸಂಘಟನೆಗಳ ಕೈವಾಡವಿದೆ. ಇವುಗಳನ್ನು ಹತ್ಯೆ ಎಂದು ಪರಿಗಣಿಸುವಂತಿಲ್ಲ. ಇದೊಂದು ಯೋಜನಾಬದ್ಧ ಷಡ್ಯಂತ್ರ. ಎಲ್ಲ ಆರೋಪಿಗಳನ್ನೂ ಪತ್ತೆಹಚ್ಚಿ, ನಿಗ್ರಹಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೆ' ಎಂದು ಬೊಮ್ಮಾಯಿ ಹೇಳಿದರು.

ಗಡಿ ಭಾಗದಲ್ಲಿ ತೀವ್ರ ನಿಗಾ: 'ಕೇರಳ ಗಡಿಭಾಗದಲ್ಲಿ ಎರಡೂ ರಾಜ್ಯಗಳನ್ನು ಸಂಪರ್ಕಿಸುವ ಪ್ರಮುಖ ಮಾರ್ಗಗಳಲ್ಲಿ ತೀವ್ರ ನಿಗಾ ಇರಿಸುವಂತೆ ಸೂಚಿಸಲಾಗಿದೆ. ಅಂತರರಾಜ್ಯ ಗಡಿ ಭಾಗದ ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗುವುದು. ತನಿಖಾ ಠಾಣೆಗಳನ್ನೂ ತೆರೆಯಲಾಗುವುದು' ಎಂದರು.

8ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 8

ದಕ್ಷಿಣ ಕನ್ನಡ: ಆತಂಕ ನಿವಾರಣೆಗೆ ಬಿಗಿ ಕ್ರಮ

ಮಂಗಳೂರು: ಕೆಲವೇ ದಿನಗಳ ಅಂತರದಲ್ಲಿ ನಡೆದ ಮಸೂದ್, ಪ್ರವೀಣ್ ನೆಟ್ಟಾರು ಹಾಗೂ ಮಹಮ್ಮದ್ ಫಾಝಿಲ್ ಅವರ ಹತ್ಯೆಯಿಂದ ಉಂಟಾಗಿರುವ ಆತಂಕದ ವಾತಾವರಣ ತಿಳಿಯಾಗಿಸಲು ದಕ್ಷಿಣ ಕನ್ನಡ ಜಿಲ್ಲಾ ಆಡಳಿತ 'ರಾತ್ರಿ ಕರ್ಫ್ಯೂ' ಮಾದರಿಯ ಬಿಗಿ ಕ್ರಮ ಕೈಗೊಂಡಿದೆ. ಆಗಸ್ಟ್ 1ರ ವರೆಗೆ ಬೆಳಿಗ್ಗೆ 6ರಿಂದ ಸಂಜೆ 6ರ ವರೆಗೆ ಮಾತ್ರ ವ್ಯಾಪಾರ- ವಹಿವಾಟು ನಡೆಸಲು ಅವಕಾಶ ನೀಡಿದ್ದು, ಅತ್ಯವಶ್ಯಕ ಸೇವೆ ಹೊರತು ಪಡಿಸಿ ಉಳಿದ ವಹಿವಾಟು ಹಾಗೂ ಅನಗತ್ಯ ಓಡಾಟಕ್ಕೆ ಕಡಿವಾಣ ಹಾಕಿದೆ. ಮದ್ಯ ಮಾರಾಟ ನಿಷೇಧಿಸಿದೆ.

ಸುಳ್ಯ ಹಾಗೂ ಸುಬ್ರಹ್ಮಣ್ಯ ಪಿಎಸ್‌ಐ ಅವರನ್ನು ವರ್ಗಾವಣೆ ಮಾಡಲಾಗಿದೆ.

8ನೇ ಪುಟ ನೋಡಿ

ನಿಯಮ ಉಲ್ಲಂಘನೆ: ಸಿಂಧೂರಿಗೆ ನೋಟಿಸ್

ಬೆಂಗಳೂರು: ಮೈಸೂರು ಜಿಲ್ಲಾಧಿಕಾರಿಯಾಗಿದ್ದ ಅವಧಿಯಲ್ಲಿ ನಿಯಮ ಮೀರಿ ಕೆಲವು ಆದೇಶಗಳನ್ನು ಹೊರಡಿಸಿದ್ದ ಆರೋಪಗಳ ಕುರಿತು ವಿಚಾರಣೆಗೆ ಹಾಜರಾಗುವಂತೆ ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆ ಆಯುಕ್ತೆ ರೋಹಿಣಿ ಸಿಂಧೂರಿ ಅವರಿಗೆ ವಸತಿ ಇಲಾಖೆ ಕಾರ್ಯದರ್ಶಿ ಡಾ.ಜೆ. ರವಿಶಂಕರ್ ನೋಟಿಸ್ ನೀಡಿದ್ದಾರೆ.

9

ಚಿನಕುರಳಿ

ಪ್ರಕಾಶ್ ಶೆಟ್ಟಿ

ಇಂದು ಸಿಇಟಿ ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ್ದ 2022ನೇ ಸಾಲಿನ ವೃತ್ತಿಪರ ಕೋರ್ಸ್‌ಗಳ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಫಲಿತಾಂಶ ಇದೇ 30ರಂದು ಬೆಳಿಗ್ಗೆ 11ಕ್ಕೆ ಪ್ರಕಟಿಸಲಾಗುತ್ತಿದೆ.

ರಾಜ್ಯದ ವಿವಿಧ ಕೇಂದ್ರಗಳಲ್ಲಿ ನಡೆದಿದ್ದ ಪರೀಕ್ಷೆಗೆ 2,10,829 ಅಭ್ಯರ್ಥಿಗಳು ಹಾಜರಾಗಿದ್ದರು. ಫಲಿತಾಂಶವನ್ನು www.karresults.nic.in ವೆಬ್‌ಸೈಟ್‌ನಲ್ಲಿ ನೋಡಬಹುದು.

ಬಾಲಕಿ ಮೇಲೆ ಅತ್ಯಾಚಾರ: ಕಾನ್‌ಸ್ಟೆಬಲ್ ಸೆರೆ

ಬೆಂಗಳೂರು: ಮನೆ ಬಿಟ್ಟು ಬಂದಿದ್ದ ಬಾಲಕಿಯನ್ನು ಪುಸಲಾಯಿಸಿ ಅತ್ಯಾಚಾರ ಎಸಗಿದ್ದ ಆರೋಪದಡಿ ಕಾನ್‌ಸ್ಟೆಬಲ್ ಪವನ್ ದ್ಯಾವಣ್ಣನವರ್ ಅವರನ್ನು ಕೆ.ಪಿ.ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪವನ್ ದ್ಯಾವಣ್ಣನವರ್

'ಆರೋಪಿ ಪವನ್, ಗೋವಿಂದರಾಜನಗರ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದ. ಈತ ಎಸಗಿದ್ದ ಕೃತ್ಯದ ಬಗ್ಗೆ ಬಾಲಕಿ ಹೇಳಿಕೆ ನೀಡಿದ್ದಾಳೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಬಂಧಿಸಲಾಗಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಡ್ರಾಪ್ ನೆಪದಲ್ಲಿ ಪರಿಚಯ: 'ಕೆ.ಪಿ.ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿ ಪೋಷಕರ ಜೊತೆ ವಾಸವಿದ್ದ ಬಾಲಕಿ, ಚಾಮರಾಜನಗರದ ಯುವಕನೊಬ್ಬನನ್ನು ಪ್ರೀತಿಸುತ್ತಿದ್ದಳು. ಆತನನ್ನೇ ಮದುವೆಯಾಗಲೆಂದು ಜುಲೈ 26ರಂದು ಮನೆ ಬಿಟ್ಟು ಚಾಮರಾಜನಗರಕ್ಕೆ ಹೊರಟಿದ್ದಳು. ಮನೆಯಿಂದ ಬಾಲಕಿ ನಾಪತ್ತೆಯಾದ ಬಗ್ಗೆ ಪೋಷಕರು ಠಾಣೆಯಲ್ಲಿ ಪ್ರಕರಣ ಸಹ ದಾಖಲಿಸಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

6ನೇ ಪುಟ ನೋಡಿ

ಆಕ್ರೋಶಕ್ಕೆ ಹೆದರಿ ಜನೋತ್ಸವ ರದ್ದು?

ಸಮಾರಂಭಕ್ಕೆ ಬರಲು ನಿರಾಕರಿಸಿದ್ದರೇ ಜೆ.ಪಿ. ನಡ್ಡಾ; ಬಿಎಸ್‌ವೈ ಆಕ್ರೋಶವೂ ಕಾರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಟ್ಟಿಗೆದ್ದಿರುವ ಕಾರ್ಯಕರ್ತರ ಪಡೆ ಸರ್ಕಾರದ ಸಾಧನಾ ಸಮಾವೇಶದಲ್ಲೂ ಗದ್ದಲ ಎಬ್ಬಿಸಿ ಮುಜುಗರಕ್ಕೆ ಸಿಲುಕಿಸಬಹುದು ಎಂಬ ಮಾಹಿತಿ ತಲುಪಿದ್ದರಿಂದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ 'ಜನೋತ್ಸವ'ದಲ್ಲಿ ಪಾಲ್ಗೊಳ್ಳಲು ನಿರಾಕರಿಸಿದ್ದೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಾರ್ಯಕ್ರಮವನ್ನು ದಿಢೀರ್ ರದ್ದುಗೊಳಿಸಲು ಕಾರಣ ಎಂಬ ಚರ್ಚೆ ಪಕ್ಷದೊಳಗೆ ನಡೆದಿದೆ.

ಸುಳ್ಯ ತಾಲ್ಲೂಕಿನಲ್ಲಿ ಪ್ರವೀಣ್ ನೆಟ್ಟಾರು ಕೊಲೆ ನಡೆದ ಕೆಲವೇ ಸಮಯದಲ್ಲಿ ಬಿಜೆಪಿ ಕಾರ್ಯಕರ್ತರು ರಾಜೀನಾಮೆ ಪರ್ವ ಆರಂಭಿಸಿದ್ದರು. ಯುವ ಮೋರ್ಚಾ ಪದಾಧಿಕಾರಿಗಳು ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕುತ್ತಿದ್ದರು. 'ಜನೋತ್ಸವ' ರದ್ದುಗೊಳಿಸಬೇಕೆಂಬ ಬೇಡಿಕೆಯೂ ಬಂದಿತ್ತು. ಆದರೆ, ತಡ ರಾತ್ರಿಯವರೆಗೂ ಮುಖ್ಯಮಂತ್ರಿಯವರು ಯಾವುದೇ ನಿರ್ಧಾರ ಕೈಗೊಂಡಿರಲಿಲ್ಲ. ಸಮಾರಂಭದ ಸಿದ್ಧತೆಗಳೂ ಮುಂದುವರಿದಿದ್ದವು.

ಆದರೆ, ತಡ ರಾತ್ರಿ 12.40ಕ್ಕೆ ದಿಢೀರ್ ಸುದ್ದಿಗೋಷ್ಠಿ ನಡೆಸಿದ ಬೊಮ್ಮಾಯಿ, 'ಕಾರ್ಯಕರ್ತನ ಸಾವಿನಿಂದ ಮನನೊಂದು ಜನೋತ್ಸವವನ್ನು ರದ್ದು ಮಾಡಿದ್ದೇವೆ' ಎಂದು ಪ್ರಕಟಿಸಿದರು. ಆದರೆ, ರೊಚ್ಚಿಗೆದ್ದಿರುವ ಕಾರ್ಯಕರ್ತರು ಆ ಸಮಾರಂಭದಲ್ಲೂ ಗದ್ದಲ ನಡೆಸಬಹುದು ಎಂಬ ಮಾಹಿತಿ ಬಿಜೆಪಿ ರಾಷ್ಟ್ರೀಯ ನಾಯಕರನ್ನು ತಲುಪಿತ್ತು. ಈ ಕಾರಣದಿಂದ ಸಮಾರಂಭಕ್ಕೆ ಬರಲು ನಡ್ಡಾ ನಿರಾಕರಿಸಿದ್ದರು. ಜನೋತ್ಸವ ರದ್ದುಗೊಳಿಸುವಂತೆ ಅವರಿಂದಲೇ ಸೂಚನೆ ಬಂದಿತ್ತು. ಆ ಬಳಿಕವೇ ಮುಖ್ಯಮಂತ್ರಿ ಪ್ರಕಟಣೆ ಹೊರಡಿಸಿದರು ಎಂದು ಬಿಜೆಪಿ ಮೂಲಗಳು ತಿಳಿಸಿವೆ.

'ಜನೋತ್ಸವದ ಸ್ಥಳದಲ್ಲೇ ಕಲ್ಲು ತೂರಾಟ, ಘರ್ಷಣೆ ನಡೆಯುವ ಸಾಧ್ಯತೆ ಇದೆ ಎಂಬ ಮಾಹಿತಿಯನ್ನು ಗುಪ್ತಚರ ಇಲಾಖೆಯ ಅಧಿಕಾರಿಗಳು ಕೇಂದ್ರ ಸರ್ಕಾರಕ್ಕೆ ರವಾನಿಸಿದ್ದರು. ಆ ರೀತಿ ನಡೆದರೆ ರಾಷ್ಟ್ರಮಟ್ಟದಲ್ಲಿ ಬಿಜೆಪಿ ಮುಜುಗರ ಅನುಭವಿಸಬೇಕಾಗುತ್ತದೆ ಎಂಬ ಆತಂಕವೇ ಜನೋತ್ಸವ ರದ್ದಾಗಲು ಕಾರಣ' ಎಂದು ಹೇಳಿವೆ.

ಬಿಎಸ್‌ವೈ ಕೋಪ: ಇನ್ನೊಂದೆಡೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷ ತುಂಬಿರುವ ಸಂದರ್ಭದಲ್ಲಿ ಬೊಮ್ಮಾಯಿ ಅವರು ತಮ್ಮ ಒಂದು ವರ್ಷದ ಅವಧಿಗೆ ಸೀಮಿತವಾಗಿ ಜನೋತ್ಸವ ನಡೆಸಲು ಮುಂದಾಗಿರುವುದಕ್ಕೆ ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಸಿಟ್ಟಾಗಿದ್ದರು. ದೂರವಾಣಿ ಮೂಲಕ ಮುಖ್ಯಮಂತ್ರಿ ಜತೆ ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು. ಈ ಬೆಳವಣಿಗೆಯೂ ಜನೋತ್ಸವ ರದ್ದಾಗುವುದಕ್ಕೆ ಕಾರಣ ಎಂಬ ಮಾಹಿತಿ ಲಭ್ಯವಾಗಿದೆ.

ಹಣ ಸಂಗ್ರಹಿಸದಂತೆ ಕಾರ್ಯಕರ್ತರಿಗೆ ಸೂಚನೆ

'ಕೊಲೆಗೀಡಾಗಿರುವ ಬಿಜೆಪಿ ಮುಖಂಡ ಪ್ರವೀಣ್ ನೆಟ್ಟಾರು ಕುಟುಂಬಕ್ಕೆ ನೆರವು ನೀಡುವ ಹೆಸರಿನಲ್ಲಿ ಪಕ್ಷದ ಹೆಸರಿನಲಿ ಖಾಸಗಿಯಾಗಿ ಹಣ ಸಂಗ್ರಹಿಸಬಾರದು' ಎಂದು ಬಿಜೆಪಿ ರಾಜ್ಯ ಘಟಕ ಪಕ್ಷದ ಕಾರ್ಯಕರ್ತರಿಗೆ ಸೂಚನೆ ನೀಡಿದೆ.

'ಪ್ರವೀಣ್ ಕುಟುಂಬಕ್ಕೆ ಪಕ್ಷವು ಈಗಾಗಲೇ ಮೊದಲ ಹಂತದ ನೆರವು ನೀಡಿದೆ. ಮುಂದೆಯೂ ಸರ್ಕಾರ ಮತ್ತು ಪಕ್ಷ ಅವರ ಜೊತೆಗಿರಲಿವೆ. ನೊಂದ ಕುಟುಂಬಕ್ಕೆ ನೆರವು ನೀಡುವುದಕ್ಕೆಂದು ಅಲ್ಲಲ್ಲಿ ಪಕ್ಷದ ಹೆಸರಿನಲ್ಲಿ ಹಣ ಸಂಗ್ರಹಿಸುತ್ತಿರುವುದು ಗಮನಕ್ಕೆ ಬಂದಿದೆ. ಯಾರೂ ಖಾಸಗಿಯಾಗಿ ಪಕ್ಷದ ಹೆಸರಿನಲ್ಲಿ ಹಣ ಸಂಗ್ರಹಿಸಬಾರದು' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನ ತಿಳಿಸಿದ್ದಾರೆ.

ತೇಜಸ್ವಿ ಸೂರ್ಯ ವಿರುದ್ಧ ಅಸಮಾಧಾನ?

ಬಿಜೆಪಿ ಯುವ ಮೋರ್ಚಾ ಪದಾಧಿಕಾರಿಗಳು ಸಾಮೂಹಿಕ ರಾಜೀನಾಮೆ ನೀಡುತ್ತಿರುವ ಕುರಿತು ವರದಿ ನೀಡುವಂತೆ ಯುವ ಮೋರ್ಚಾ ಪ್ರಮುಖರಿಗೆ ಪಕ್ಷದ ವರಿಷ್ಠರು ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಪರಿಸ್ಥಿತಿ ನಿಯಂತ್ರಣಕ್ಕೆ ಮುಂದಾಗಿಲ್ಲ ಎಂದು ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷರಾಗಿರುವ ಸಂಸದ ತೇಜಸ್ವಿ ಸೂರ್ಯ ವಿರುದ್ಧ ವರಿಷ್ಠರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. 300ಕ್ಕೂ ಹೆಚ್ಚು ಪದಾಧಿಕಾರಿಗಳು ರಾಜೀನಾಮೆ ನೀಡಿರುವ ಮಾಹಿತಿ ಇದ್ದು, ಈ ಕುರಿತು ವಿಸ್ತೃತ ವರದಿ ನೀಡಬೇಕು ಎಂಬ ಸೂಚನೆ ನೀಡಲಾಗಿದೆ' ಎಂದೂ ಮೂಲಗಳು ಹೇಳಿವೆ.

ಆರೋಗ್ಯ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಆರೋಗ್ಯ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆ ತರಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಹೇಳಿದರು.

ನಗರದಲ್ಲಿ 'ನಮ್ಮ ಬೆಂಗಳೂರು ಪ್ರತಿಷ್ಠಾನ' ಆಯೋಜಿಸಿದ್ದ 'ನಮ್ಮ ಆರೋಗ್ಯ ಯೋಧರು' ಕಾರ್ಯಕ್ರಮದಲ್ಲಿ ಕೋವಿಡ್ ವೇಳೆ ಮುಂಚೂಣಿಯಲ್ಲಿ ಕೆಲಸ ಮಾಡಿದವರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

'2 ವರ್ಷದಲ್ಲಿ ಸಾಕಷ್ಟು ಕೆಲಸ ವಾಗಿದೆ. ಬೆಡ್ ಸಂಖ್ಯೆಯ ಹೆಚ್ಚಳ, ವೆಂಟಿಲೇಟರ್ ವ್ಯವಸ್ಥೆ, ಆಕ್ಸಿಜನ್ ಘಟಕ ನಿರ್ಮಾಣ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಆಧುನಿಕ ಸಲಕರಣೆ ವ್ಯವಸ್ಥೆ ಮಾಡಲಾಗಿದೆ. ಕೋವಿಡ್ ಎರಡು ಅಲೆಯ ವೇಳೆ ಆಕ್ಸಿಜನ್ ಕೊರತೆ ಆಗದಂತೆ ನಿಭಾಯಿಸಿದೆವು' ಎಂದರು.

ರಾಜ್ಯದಲ್ಲಿ 437 ನಮ್ಮ ಕ್ಲಿನಿಕ್ ಸ್ಥಾಪಿಸಲಾಗುವುದು ಎಂದರು.

ಆರೋಗ್ಯ ಸಚಿವ ಡಾ.ಕೆ. ಸುಧಾಕರ್, 'ಪ್ರಶಸ್ತಿಗೆ ಉತ್ತಮರನ್ನು ಆಯ್ಕೆ ಮಾಡಲಾಗಿದೆ. ಎರಡೂ ಅಲೆಗಳಲ್ಲಿ ವೈದ್ಯರು, ಸೇವಾ ಸಂಸ್ಥೆಗಳವರು ಉತ್ತಮ ಕೆಲಸ ಮಾಡಿದರು' ಎಂದರು.

ಮೈಕ್ರೊ ಲ್ಯಾಂಡ್ ಸಂಸ್ಥೆಯ ಮುಖ್ಯಸ್ಥ ಪ್ರದೀಪ್ ಕರ್, ಡಾ.ವಿಶಾಲ್ ರಾವ್, ಎವಿಎಎಸ್‌ನ ಸ್ಥಾಪಕಿ ಅನಿತಾ ರೆಡ್ಡಿ, ಡಾ.ವಿವೇಕ್, ಸಂಜಯ್ ಪ್ರಭು ಹಾಜರಿದ್ದರು.

ನಮ್ಮ ಬೆಂಗಳೂರು ಪ್ರತಿಷ್ಠಾನ ಶುಕ್ರವಾರ ಆಯೋಜಿಸಿದ್ದ 'ನಮ್ಮ ಆರೋಗ್ಯ ಯೋಧರು' ಕಾರ್ಯಕ್ರಮದಲ್ಲಿ ಮುಂಚೂಣಿ ಕಾರ್ಯಕರ್ತರಾದ ಅಂಥೋಣಿ ಸ್ವಾಮಿ, ಸೋನುರಾಜ್ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡಿದರು. ಪ್ರದೀಪ್ ಕರ್, ಸಚಿವ ಡಾ.ಕೆ.ಸುಧಾಕರ್ ಹಾಜರಿದ್ದರು

ಪ್ರಶಸ್ತಿ ಪುರಸ್ಕೃತರು

ವೈದ್ಯರ ವಿಭಾಗದಲ್ಲಿ ಡಾ.ಸುನಿಲ್ ಕಾರಂತ್, ಡಾ.ಭಾಸ್ಕರ್ ರಾಜಕುಮಾರ್, ಮರಣೋತ್ತರವಾಗಿ ಡಾ.ಕೆ.ವಿ.ಅಮರನಾಥ್ ಅವರ ಕುಟುಂಬದ ಸದಸ್ಯರಿಗೆ, ಸಮಾಜ ಸೇವಾ ವಿಭಾಗದಲ್ಲಿ ಮೆರ್ಸಿ ಮಿಷನ್ ಸಂಸ್ಥೆಗೆ, ವೈಯಕ್ತಿಕ ವಿಭಾಗದಲ್ಲಿ ಎಸ್.ಅರ್ಜುನ್, ಕೆ.ವೇಣುಗೋಪಾಲ್, ಮುಂಚೂಣಿ ಕಾರ್ಯಕರ್ತರ ವಿಭಾಗದಲ್ಲಿ ಅಂಥೋಣಿ, ಸೋನುರಾಜ್ ಹಾಗೂ ವರ್ಷದ ಬೆಂಗಳೂರು ಸಾಧಕರ ವಿಭಾಗದಲ್ಲಿ ಡಾ.ರವೀಂದ್ರ ಮೆಹ್ತಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

'ನಿತ್ಯ 5 ಸಾವಿರ ವಾಹನ ರಸ್ತೆಗೆ'

ನಗರದಲ್ಲಿ 130 ಕೋಟಿ ಜನಸಂಖ್ಯೆಯಿದೆ. ಜನಸಂಖ್ಯೆಗಿಂತ ಹೆಚ್ಚು ವಾಹನಗಳು ನಗರದಲ್ಲಿವೆ. ನಿತ್ಯ 5 ಸಾವಿರ ಹೊಸ ವಾಹನಗಳು ರಸ್ತೆಗೆ ಇಳಿಯುತ್ತಿವೆ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ಬೆಂಗಳೂರು ನಗರವನ್ನು ಅಂತರರಾಷ್ಟ್ರೀಯ ಮಟ್ಟದ ನಗರವಾಗಿ ಅಭಿವೃದ್ಧಿ ಪಡಿಸಲಾಗುವುದು. ಸಂಚಾರ ದಟ್ಟಣೆ ಸುಧಾರಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ. ವಿದೇಶಿ ನೇರ ಬಂಡವಾಳದ ಕುರಿತು ಕೆಲವರು ಸುಳ್ಳು ಮಾಹಿತಿ ನೀಡುತ್ತಿದ್ದಾರೆ. ಆದರೆ, ಬೆಂಗಳೂರಿಗೆ ಶೇ 40ರಷ್ಟು ಬಂಡವಾಳ ಹರಿದು ಬರುತ್ತಿದೆ. ಪ್ರತಿಷ್ಠಿತ ಸಂಸ್ಥೆಗಳೂ ನಗರದಲ್ಲೂ ಇವೆ ಎಂದು ಹೇಳಿದರು.

To locate your nearest store and know more on 6366920017. Buy online at tanishq.co.in or Download our App *Conditions apply.

Showrooms at **Mysore:** No.2927, Bangalore - Nilgiri Road, Near Suburban Bus Stand. Tel: 821 428 0074; **Tumkur:** ADR Complex, Ground Floor, General Kariyappa Road, K R Extension. Tel: 816 4041666; **Bangalore:** Dickenson Road, Koramangala, Kamanahalli, E-City, Marathahalli, HSR Layout, Phoenix Mall, Prestige Forum Shantiniketan Mall, Bannerghata, Jaynagar, Banashankari, Vijayanagar, Yelahanka, Malleshwaram, Kanakapura, Basaveshwaranagar

Scan and Discover.

ನ್ಯಾಯಬೆಲೆ ಅಂಗಡಿ ಮಾಲೀಕರ ಮಾಹಿತಿ ಸಂಗ್ರಹಕ್ಕೆ ಮುಂದಾದ ಸರ್ಕಾರ

65 ವರ್ಷ ದಾಟಿದವರ ಪರವಾನಗಿ ರದ್ದು?

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: 65 ವರ್ಷ ವಯೋಮಿತಿ ದಾಟಿರುವ ಮಾಲೀಕರ ನ್ಯಾಯಬೆಲೆ ಅಂಗಡಿಗಳ ಪರವಾನಗಿ ರದ್ದುಗೊಳಿಸಲು ಸರ್ಕಾರ ನಿರ್ಧರಿಸಿದ್ದು, ವಿವರ ಸಂಗ್ರಹಿಸುವಂತೆ ಆಹಾರ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದೆ.

ಪಡಿತರ ವಿತರಿಸುವಲ್ಲಿ ಐದು ದಶಕಗಳಿಗೂ ಹೆಚ್ಚು ಅವಧಿ ಕೆಲಸ ನಿರ್ವಹಿಸುತ್ತಿರುವ ಸರ್ಕಾರಿ ನ್ಯಾಯಬೆಲೆ ಅಂಗಡಿಗಳನ್ನು ಖಾಸಗಿ ವ್ಯಕ್ತಿಗಳು ನಿರ್ವಹಿಸುತ್ತಾ ಬಂದಿದ್ದಾರೆ. ಬಿಪಿಎಲ್, ಎಪಿಎಲ್, ಅಂತ್ಯೋದಯ ಚೀಟಿಗಳನ್ನು ಹೊಂದಿರುವ 1.26 ಕೋಟಿ ಕುಟುಂಬಗಳಿಗೆ ಪಡಿತರ ವಿತರಿಸುತ್ತಿದ್ದಾರೆ.

ಒಮ್ಮೆ ಪರವಾನಗಿ ಪಡೆದ ನ್ಯಾಯಬೆಲೆ ಅಂಗಡಿ ಮಾಲೀಕರು ಪ್ರತಿ ಮೂರು ವರ್ಷಗಳಿಗೆ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಬೇಕಿತ್ತು. ವಯೋಮಿತಿ ಇರಲಿಲ್ಲ. ಅವರ ಮರಣಾ ನಂತರ ಕುಟುಂಬದ ಅರ್ಹ ಸದಸ್ಯರ ಹೆಸರಿಗೆ ಪರವಾನಗಿ ವರ್ಗಾಯಿಸುವ ಪರಿಪಾಟ ಇದುವರೆಗೂ ಬೆಳೆದುಕೊಂಡು ಬಂದಿತ್ತು. ಆ ಮೂಲಕ ಪಡಿತರ ವಿತರಣೆಯ ಕಾಯಕವನ್ನೇ ನಂಬಿಕೊಂಡು ಜೀವನ ಸಾಗಿಸುತ್ತಿದ್ದ ಆ ಕುಟುಂಬಗಳಿಗೆ ಸರ್ಕಾರ ಜೀವನ ಭದ್ರತೆ ಒದಗಿಸಿತ್ತು.

ಪ್ರಜಾವಾಣಿ ವಿಶೇಷ

ಪಡಿತರ ವಿತರಣೆಯಲ್ಲಿ ಆನ್‌ಲೈನ್ ವ್ಯವಸ್ಥೆ, ಬಯೊಮೆಟ್ರಿಕ್ ಅಳವಡಿಕೆಯ ನಂತರ ನ್ಯಾಯಬೆಲೆ ಅಂಗಡಿ ಮಾಲೀಕರು ಲ್ಯಾಪ್‌ಟಾಪ್ ಬಳಸುವುದನ್ನು ಕಡ್ಡಾಯಗೊಳಿಸಲಾಯಿತು. ಬಹುತೇಕ ಮಾಲೀಕರು 60ರ ವಯೋಮಿತಿ ದಾಟಿದ್ದರಿಂದ ಹೊಸ ವ್ಯವಸ್ಥೆಗೆ ಹೊಂದಿಕೊಳ್ಳುವುದು ಕಷ್ಟವಾಗಲಿದೆ ಎಂದು ನಿರ್ಧರಿಸಿದ ಸರ್ಕಾರ ಅನುಕಂಪದ ಆಧಾರದಲ್ಲಿ ಪರವಾನಗಿ ವರ್ಗಾವಣೆ ಮಾಡುವ ನಿಯಮಗಳಿಗೆ ತಿದ್ದುಪಡಿ ತಂದು 2017ರಲ್ಲೇ ಹೊಸ ಆದೇಶ ಹೊರಡಿಸಿತ್ತು. ಸರ್ಕಾರ ಈ ನಿರ್ಧಾರದ ವಿರುದ್ಧ ರಾಜ್ಯ ನ್ಯಾಯ ಬೆಲೆ ಅಂಗಡಿ ಮಾಲೀಕರ ಸಂಘ ಕೋರ್ಟ್‌ನಿಂದ ತಡೆಯಾಜ್ಞೆ ತಂದಿತ್ತು. ಈಚೆಗೆ ತಡೆಯಾಜ್ಞೆ ತೆರವಾಗಿದ್ದು, ಸರ್ಕಾರದ ತಿದ್ದುಪಡಿ ಆದೇಶವನ್ನು ಎತ್ತಿಹಿಡಿದಿದೆ. ಬೆನ್ನಲ್ಲೇ ವಿವರ ಸಂಗ್ರಹಿಸಲು ಸರ್ಕಾರದ ಆದೇಶ ಹೊರಬಿದ್ದಿದೆ.

'ಪಡಿತರ ವಿತರಣೆಯ ಕಮಿಷನ್ ಹೆಚ್ಚಿಸಬೇಕು ಎಂದು ನಾವು ಹೋರಾಟ ನಡೆಸುತ್ತಿದ್ದರೆ ವಯೋಮಿತಿಯ ನೆಪ ಇಟ್ಟುಕೊಂಡು ಸಾವಿರಾರು ಪರವಾನಗಿ ರದ್ದುಪಡಿಸಲು ಸರ್ಕಾರ ಹೊರಟಿದೆ. ಶಾಸಕರ ಹಿಂಬಾಲಕರಿಗೆ, ಪಕ್ಷದ ಕಾರ್ಯಕರ್ತರಿಗೆ ಅವಕಾಶ ಕಲ್ಪಿಸುವ ಕುತಂತ್ರ ಉದ್ದೇಶದ ಹಿಂದಿದೆ' ಎಂದು ಆರೋಪಿಸುತ್ತಾರೆ ನ್ಯಾಯಬೆಲೆ ಅಂಗಡಿಯ ಮಾಲೀಕ ರೇವಣಸಿದ್ದಪ್ಪ.

2 ಸಾವಿರ ಪರವಾನಗಿ ನವೀಕರಣ ಬಾಕಿ

ರಾಜ್ಯದಲ್ಲಿ 20 ಸಾವಿರಕ್ಕೂ ಹೆಚ್ಚು ಪಡಿತರ ವಿತರಣಾ ಕೇಂದ್ರಗಳಿವೆ. 1999ರ ನಂತರ ಹೊಸ ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯಲು ಸಹಕಾರ ಸಂಘಗಳಿಗೆ, ಸ್ತ್ರೀಶಕ್ತಿ ಸಂಘಗಳಿಗೆ ಅವಕಾಶ ನೀಡಲಾಗಿದೆ. ಆದರೆ, ಹಳೆಯ ನ್ಯಾಯಬೆಲೆ ಅಂಗಡಿಗಳ ಖಾಸಗಿ ಮಾಲೀಕತ್ವ ಅವರ ಬಳಿಯೇ ಇತ್ತು. ಮಾಲೀಕರು ಮೃತಪಟ್ಟಿರುವ 2 ಸಾವಿರಕ್ಕೂ ಹೆಚ್ಚು ನ್ಯಾಯಬೆಲೆ ಅಂಗಡಿಗಳ ಪರವಾನಗಿಯನ್ನು 2017ರ ನಂತರ ಸರ್ಕಾರ ನವೀಕರಿಸಿಲ್ಲ. ಅಂತಹ ಪಡಿತರ ಚೀಟಿಗಳನ್ನು ಸಮೀಪದ ಮತ್ತೊಂದು ಅಂಗಡಿಗಳಿಗೆ ಹೆಚ್ಚುವರಿ ವಹಿಸಲಾಗಿದೆ.

ಮಾಹಿತಿ ಸಂಗ್ರಹದ ಬಳಿಕ 65 ವರ್ಷ ದಾಟಿದ ಎಷ್ಟು ಮಾಲೀಕರಿದ್ದಾರೆ ನೋಡಿಕೊಂಡು ಕಾಯ್ದೆಗೆ ಮತ್ತೆ ತಿದ್ದುಪಡಿ ತರಬೇಕೋ? 2017ರ ತಿದ್ದುಪಡಿಯನ್ನೇ ಅನುಷ್ಠಾನಗೊಳಿಸಬೇಕೋ ಎಂದು ತೀರ್ಮಾನಿಸುತ್ತೇವೆ

ಉಮೇಶ್ ಕತ್ತಿ
ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ

ಪೆಟ್ರೋಲ್ ಬಂಕ್, ಮದ್ಯ ಮಾರಾಟದ ಪರವಾನಗಿ ಪಡೆದ ಕುಟುಂಬದವರು ಹಕ್ಕು ಅನುಭವಿಸಲು, ಮಾರಾಟ ಮಾಡಲು ಅವಕಾಶವಿದೆ. ಸರ್ಕಾರದ ಈ ನಿರ್ಧಾರದ ವಿರುದ್ಧ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುತ್ತೇವೆ

ಟಿ.ಕೃಷ್ಣಪ್ಪ, ಅಧ್ಯಕ್ಷರು, ರಾಜ್ಯ ಸರ್ಕಾರಿ ನ್ಯಾಯಬೆಲೆ ಅಂಗಡಿಗಳ ಮಾಲೀಕರ ಸಂಘ

‘ಭಾರತ ಮತ್ತೊಂದು ಶ್ರೀಲಂಕಾವಾಗಲಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತ್ಯತೀತ, ಸಮಾನತೆಯ ಶಿಕ್ಷಣ ವ್ಯವಸ್ಥೆ ನಾಶ ಮಾಡುವ ಮೂಲಕ ಸಂವಿಧಾನವನ್ನೇ ಬುಡಮೇಲು ಮಾಡಲಾಗುತ್ತಿದೆ. ಇದೇ ಸ್ಥಿತಿ ಮುಂದುವರಿದರೆ ಭಾರತ ಮತ್ತೊಂದು ಶ್ರೀಲಂಕಾವಾಗಲಿದೆ ಎಂದು ಅಭಿವೃದ್ಧಿ ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಎಚ್ಚರಿಸಿದರು.

ಈಶ್ವರಚಂದ್ರ ವಿದ್ಯಾಸಾಗರ ಸ್ಮರಣಾರ್ಥ ಶುಕ್ರವಾರ ಎಐಡಿಎಸ್‌ಒ ಹಮ್ಮಿಕೊಂಡಿದ್ದ 'ಸಾರ್ವಜನಿಕ ಶಿಕ್ಷಣ ಉಳಿಸಿ' ಪ್ರತಿಭಟನಾ ಸಮಾವೇಶದಲ್ಲಿ ಅವರು ಮಾತನಾಡಿದರು.

ಬಡವರು, ಶೋಷಿತರು, ಕೂಲಿ ಕಾರ್ಮಿಕರು, ಪರಿಶಿಷ್ಟರ ಮಕ್ಕಳು ಸರ್ಕಾರಿ ಶಾಲೆ ಆಶ್ರಯಿಸಿದ್ದಾರೆ. ಸರ್ಕಾರಿ ಶಾಲೆಗಳನ್ನು ಮುಚ್ಚಿದರೆ ಸಮಾನ ಶಿಕ್ಷಣಕ್ಕೆ ಪೆಟ್ಟು ಬೀಳುತ್ತದೆ. ಸಂಸದರು, ಶಾಸಕರು, ರಾಜಕಾರಣಿಗಳ ಮಕ್ಕಳಿಗೆ ಅನುಕೂಲವಾಗುತ್ತದೆ ಎಂದು ಟೀಕಿಸಿದರು.

ಎಐಡಿಎಸ್‌ಒ ಅಖಿಲ ಭಾರತ ಅಧ್ಯಕ್ಷ ವಿ.ಎನ್. ರಾಜಶೇಖರ್, ಈಶ್ವರಚಂದ್ರ ವಿದ್ಯಾಸಾಗರ ಅವರ ಸ್ಮರಣೆ ದಿನದಂದು ವಿದ್ಯಾರ್ಥಿಗಳು ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಉಳಿಸಬೇಕು ಎಂಬ ಸಂಕಲ್ಪದೊಂದಿಗೆ ಚಳವಳಿ ಆರಂಭಿಸಿದ್ದಾರೆ. ಸಂಘ ಪರಿವಾರದ ಸಿದ್ಧಾಂತಕ್ಕೆ ಅನುಗುಣವಾಗಿ ಕೇಂದ್ರದ ಬಿಜೆಪಿ ಸರ್ಕಾರ ಶೈಕ್ಷಣಿಕ ನೀತಿಗಳನ್ನು ರಚಿಸುತ್ತಿದೆ. ಸರ್ಕಾರದ ಇಂತಹ ನಡೆ ವಿರುದ್ಧ ನಿರಂತರ ಚಳವಳಿ ಅಗತ್ಯ ಎಂದರು.

ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷೆ ಅಭಯಾ ದಿವಾಕರ್ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷರಾದ ಅಪೂರ್ವ, ಕಾರ್ಯದರ್ಶಿ ಕಲ್ಯಾಣ್ ಕುಮಾರ್, ವಿನಯ್ ಚಂದ್ರ ಉಪಸ್ಥಿತರಿದ್ದರು.


ಬೆಂಗಳೂರಿನಲ್ಲಿ ಶುಕ್ರವಾರ ಎಐಡಿಎಸ್‌ಒ ಆಯೋಜಿಸಿದ್ದ 'ಸಾರ್ವಜನಿಕ ಶಿಕ್ಷಣ ಉಳಿಸಿ ದಿನ' ಪ್ರತಿಭಟನಾ ಸಮಾವೇಶದಲ್ಲಿ ಸಂಘಟನೆಯ ಮುಖಂಡರಾದ ಕಲ್ಯಾಣ್ ಕುಮಾರ್, ಸಿ.ಎಂ.ಅಪೂರ್ವ, ಅಭಿವೃದ್ಧಿ ಶಿಕ್ಷಣ ತಜ್ಞ ನಿರಂಜನಾರಾಧ್ಯ ಮತ್ತು ವಿ.ಎನ್ ರಾಜಶೇಖರ್ ಚರ್ಚೆಯಲ್ಲಿ ತೊಡಗಿದ್ದರು

ಜಾತಿ, ಧರ್ಮದ ಕಾರಣಕ್ಕೆ ಕಿತ್ತಾಟ: ಬರಗೂರು ವಿಷಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜದಲ್ಲಿ ಜಾತಿ ಹಾಗೂ ಧರ್ಮದ ವಿಷಯದಲ್ಲಿ ಕಿತ್ತಾಟಗಳು ನಡೆಯುತ್ತಿದ್ದು, ಹತ್ಯೆಯಂತಹ ಅಮಾನುಷವಾದ ಕೃತ್ಯಗಳು ಜರುಗುತ್ತಿವೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ವಿಷಾದಿಸಿದರು.

ಎಂಎಲ್‌ಎ ಅಕಾಡೆಮಿ ಆಫ್ ಹೈಯರ್ ಲರ್ನಿಂಗ್, ಎಂಎಲ್‌ಎ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕಾಲೇಜು ಕನ್ನಡ ಅಧ್ಯಾಪಕರ ಸಂಘದ ಆಶ್ರಯದಲ್ಲಿ ಶುಕ್ರವಾರ ನಡೆದ ರಾಜ್ಯಮಟ್ಟದ ವಿಚಾರಸಂಕಿರಣದಲ್ಲಿ 'ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು' ಎಂಬ ವಿಷಯ ಕುರಿತು ಮಾತನಾಡಿದರು.

'ಮನುಷ್ಯರಾದ ನಾವೆಲ್ಲರೂ ಪ್ರಶ್ನಿಸಿಕೊಳ್ಳಬೇಕಾದ ಕಾಲ ಬಂದಿದೆ' ಎಂದು ಎಚ್ಚರಿಸಿದರು. 'ವೈದ್ಯಕೀಯ, ಎಂಜಿನಿಯರಿಂಗ್ ಹಾಗೂ ವಾಸ್ತುಶಿಲ್ಪದ ವಿದ್ಯಾರ್ಥಿಗಳಿಗೂ ಸಾಹಿತ್ಯದ ಸ್ಪರ್ಶ ಇರಬೇಕು. ಸಾಹಿತ್ಯದ ಓದಿನಿಂದ ಮೃಗೀಯತೆ ದೂರವಾಗಿ ಮನುಷ್ಯತ್ವ ಬೆಳೆಯಲಿದೆ' ಎಂದು ಪ್ರತಿಪಾದಿಸಿದರು.

'ಸಮಾಜದಲ್ಲಿನ ಬದಲಾವಣೆಗಳಿಂದ ಶಾಂತಿ ಕದಡುವಿಕೆ ಆಗಬಾರದು, ಮೌಲ್ಯಗಳೂ ದೂರವಾಗಬಾರದು. ನಟ ಪುನೀತ್‌ರಾಜಕುಮಾರ್ ಸಾವಿನ ನಂತರವೂ ಬದುಕಿದ್ದಾರೆ. ಅವರು ಮಾಡಿದ್ದ ಸಾಮಾಜಿಕ ಕೆಲಸಗಳಿಂದ ಅದು ಸಾಧ್ಯವಾಗಿದೆ. ತಂದೆ ಡಾ.ರಾಜ್‌ಕುಮಾರ್ ಅವರೇ ಪುನೀತ್‌ಗೆ ಪ್ರೇರಣೆ' ಎಂದು ವಿಶ್ಲೇಷಿಸಿದರು.

ಉಪನ್ಯಾಸಕರು ಜೀವನ ಮೌಲ್ಯದ ಪ್ರತಿನಿಧಿಗಳು ಆಗಬೇಕು. ಅವರು ಕಲಿಸುತ್ತಲೇ ಕಲಿಯಬೇಕು ಎಂದ ಅವರು, ಮನುಷ್ಯ ಸಂಬಂಧ ದೂರವಾಗಿ ವ್ಯಾಪಾರಿ ಸಂಬಂಧ ಮುನ್ನೆಲೆಗೆ ಬಂದಿದೆ ಎಂದು ವಿಷಾದಿಸಿದರು.

ಕಾಲೇಜು ಕನ್ನಡ ಅಧ್ಯಾಪಕರ ಸಂಘದ ಅಧ್ಯಕ್ಷ ಡಾ.ಬೆಳಕೆರೆ ಲಿಂಗರಾಜಯ್ಯ, 'ಹುಟ್ಟುತ್ತ ವಿಶ್ವಮಾನವರಾಗಿ, ಬೆಳೆಯುತ್ತ ಅಲ್ಪಮಾನವ ಆಗುತ್ತಿದ್ದೇವೆ. ಶಿಕ್ಷಣ ವ್ಯವಸ್ಥೆಯು ವಿಶ್ವಮಾನವ ಆಗಿಸಬೇಕು. ಅಂತಹ ಶಿಕ್ಷಣ ಬೇಕಿದೆ. ರಾಷ್ಟ್ರಕವಿ ಕುವೆಂಪು ಸಹ ಇದನ್ನೇ ಹೇಳಿದ್ದರು' ಎಂದು ಸ್ಮರಿಸಿದರು.

ಪ್ರಾಂಶುಪಾಲೆ ಡಾ.ಪಿ.ವಿ.ಪದ್ಮಜಾ, ಮಲ್ಲೇಶ್ವರ ಮಹಿಳಾ ಸಂಘದ ಗೌರವ ಕಾರ್ಯದರ್ಶಿ ಲಕ್ಷ್ಮಿ ನಾಗೇಶ್ವರ ಹಾಜರಿದ್ದರು.

ವಿಚಾರಣ ಸಂಕಿರಣದಲ್ಲಿ ಬೆಳಕೆರೆ ಲಿಂಗರಾಜಯ್ಯ ಅವರು ಬರಗೂರು ರಾಮಚಂದ್ರಪ್ಪ ಅವರೊಂದಿಗೆ ಮಾತನಾಡಿದರು. ಲಕ್ಷ್ಮಿ ನಾಗೇಶ್ವರ ಮತ್ತು ಪಿ.ವಿ. ಪದ್ಮಜಾ ಇದ್ದಾರೆ –ಪ್ರಜಾವಾಣಿ ಚಿತ್ರ

ದ್ವೇಷ ಭಾಷಣ ಹೆಚ್ಚಾಗಿದೆ. ಭಾಷೆಯನ್ನು ಭ್ರಷ್ಟಗೊಳಿಸುತ್ತಿದ್ದೇವೆ. ಮಾತಿನಲ್ಲಿ ಸ್ಪಷ್ಟತೆ ಇರಬೇಕು

ಬರಗೂರು ರಾಮಚಂದ್ರಪ್ಪ, ಸಾಹಿತಿ

ಬನ್ನೇರುಘಟ್ಟ ಉದ್ಯಾನ: ಹುಲಿ ‘ವನ್ಯ’ ಸಾವು

ಆನೇಕಲ್ : ಬನ್ನೇರುಘಟ್ಟ ಜೈವಿಕ ಉದ್ಯಾನದ ವನ್ಯ(6) ಎಂಬ ಹುಲಿಯು ಬಹು ಅಂಗಾಂಗಳ ವೈಫಲ್ಯದಿಂದ ಶುಕ್ರವಾರ ಮೃತಪಟ್ಟಿದೆ. ಹುಲಿ ದಿನದಂದೇ ವನ್ಯ ಮೃತಪಟ್ಟಿದೆ. ಈ ಘಟನೆಯು ಉದ್ಯಾನದ ಸಿಬ್ಬಂದಿಯನ್ನು ದುಃಖಿತರನ್ನಾಗಿಸಿದೆ.

ಬನ್ನೇರುಘಟ್ಟ ಉದ್ಯಾನದ ಬಿಳಿ ಹುಲಿ ವನ್ಯಾ ಕಳೆದ ಆರು ವರ್ಷಗಳ ಹಿಂದೆ ಜೈವಿಕ ಉದ್ಯಾನದ ಸುಭದ್ರಳಿಗೆ ಜನಿಸಿತ್ತು.

ಏಪ್ರಿಲ್ 22ರಿಂದ ಹುಲಿಯು ಅನಾರೋಗ್ಯದಿಂದ ಬಳಲುತ್ತಿತ್ತು. ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಐಎಎಸ್ ಅಧಿಕಾರಿ ಮಂಜುನಾಥ್ ಅರ್ಜಿ: ಆಕ್ಷೇಪಣೆಗೆ ಗಡುವು

ಬೆಂಗಳೂರು: 'ಕಂದಾಯ ವ್ಯಾಜ್ಯವೊಂದರಲ್ಲಿ ಪಕ್ಷಪಾತಿ ಆದೇಶ ನೀಡುವ ಉದ್ದೇಶದಿಂದ ₹5 ಲಕ್ಷ ಲಂಚ ಪಡೆದಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದ ಐಎಎಸ್ ಅಧಿಕಾರಿ ಜೆ. ಮಂಜುನಾಥ್ ಅವರ ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಹೈಕೋರ್ಟ್ ಆಗಸ್ಟ್ 1ರ ವರೆಗೆ ಕಾಲಾವಕಾಶ ನೀಡಿದೆ.

ಈ ಕುರಿತಂತೆ ಜೆ.ಮಂಜುನಾಥ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಎಚ್.ಎಸ್. ಚಂದ್ರಮೌಳಿ ಅವರು ಪ್ರಕರಣದ ಕುರಿತು ವಿವರಿಸಿದರು. ವಾದ ಆಲಿಸಿದ ನ್ಯಾಯಪೀಠ, ಹೆಚ್ಚಿನ ವಿಚಾರಣೆಯನ್ನು ಆಗಸ್ಟ್ 1ಕ್ಕೆ ನಿಗದಿ ಪಡಿಸಿತು. ಅಂತೆಯೇ ಆಕ್ಷೇಪಣೆ ಸಲ್ಲಿಸಲು ಎಸಿಬಿಗೆ ನಿರ್ದೇಶಿಸಿತು.

ಪ್ರಕರಣವೇನು?: ಆನೇಕಲ್ ತಾಲ್ಲೂಕಿನ ಕೂಡ್ಲು ಗ್ರಾಮದ 38 ಗುಂಟೆ ಜಮೀನು ಒಡೆತನಕ್ಕೆ ಸಂಬಂಧಿಸಿದ ವ್ಯಾಜ್ಯದಲ್ಲಿ ಅನುಕೂಲಕರ ಆದೇಶ ನೀಡಲು ಬೇಗೂರು ನಿವಾಸಿ ಅಜಂ ಪಾಷಾ ಎಂಬುವವರಿಂದ ಮಂಜುನಾಥ್ ₹ 5 ಲಕ್ಷ ಲಂಚ ಪಡೆದಿದ್ದಾರೆ ಎಂಬ ಆರೋಪದಡಿ ಎಸಿಬಿ ದೂರು ದಾಖಲಿಸಿಕೊಂಡಿದೆ. ಪ್ರಕರಣದಲ್ಲಿ ಮಂಜುನಾಥ್ ಅವರನ್ನು ಮೂರನೇ ಆರೋಪಿಯಾಗಿದ್ದು, ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಡಿಪಿಆರ್ ಸಲ್ಲಿಸಲು ಕೇಂದ್ರ ಸರ್ಕಾರದ ನಿರ್ದೇಶನ – ಸೋಮಣ್ಣ

ಮೈಸೂರು–ಚೆನ್ನೈ 'ಬುಲೆಟ್ ರೈಲು'

ಪ್ರಜಾವಾಣಿ ವಾರ್ತೆ

ಸಾಂದರ್ಭಿಕ ಚಿತ್ರ

ಬೆಂಗಳೂರು: 'ಮೈಸೂರು– ಚೆನ್ನೈ ನಡುವೆ ಸಂಚರಿಸಲಿರುವ ರಾಜ್ಯದ ಮೊಟ್ಟಮೊದಲ ಬುಲೆಟ್ ರೈಲು ಯೋಜನೆ ಕುರಿತು ವಿಸ್ತೃತ ಯೋಜನಾ ವರದಿ ಸಲ್ಲಿಸುವಂತೆ ನ್ಯಾಷನಲ್ ಹೈಸ್ಪೀಡ್ ರೈಲ್ವೆ ನಿಗಮಕ್ಕೆ ಕೇಂದ್ರ ಸರ್ಕಾರ ನಿರ್ದೇಶನ ನೀಡಿದೆ' ಎಂದು ಮೂಲಸೌಲಭ್ಯ ಅಭಿವೃದ್ಧಿ ಸಚಿವ ವಿ. ಸೋಮಣ್ಣ ತಿಳಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಮೈಸೂರು–ಬೆಂಗಳೂರು– ಚೆನ್ನೈ ಮಧ್ಯದ ಮಾರ್ಗವನ್ನು ಮೂರು ಗಂಟೆಗಳಲ್ಲಿ ಕ್ರಮಿಸಲು ಅನುಕೂಲವಾಗುವಂತೆ ಬುಲೆಟ್ ರೈಲು ಯೋಜನೆ ಸಿದ್ಧವಾಗುತ್ತಿದೆ. ₹ 1.15 ಲಕ್ಷ ಕೋಟಿ ವೆಚ್ಚದ ಈ ಯೋಜನೆಗೆ ಸಂಪೂರ್ಣ ಅನುದಾನವನ್ನು ಕೇಂದ್ರ ಸರ್ಕಾರ ಒದಗಿಸಲಿದೆ. ರಾಜ್ಯ ಸರ್ಕಾರ ಅಗತ್ಯ ಜಮೀನು ಒದಗಿಸಲಿದೆ' ಎಂದರು.

ಬುಲೆಟ್ ರೈಲು ಸಂಚಾರ ಆರಂಭವಾದರೆ ಮೈಸೂರಿನಿಂದ ಬೆಂಗಳೂರಿಗೆ 45 ನಿಮಿಷಗಳಲ್ಲಿ ತಲುಪಬಹುದು. ಬೆಂಗಳೂರು– ಮೈಸೂರು ಮಾರ್ಗದಲ್ಲಿ ಹತ್ತು ಪಥಗಳ ರಸ್ತೆಯ ಪಕ್ಕದಲ್ಲೇ ಬುಲೆಟ್ ರೈಲು ಮಾರ್ಗಕ್ಕೆ ಜಮೀನು ಒದಗಿಸುವ ಚಿಂತನೆ ನಡೆದಿದೆ. ಶೀಘ್ರದಲ್ಲಿ ಈ ಸಂಬಂಧ ಉನ್ನತಮಟ್ಟದ ಸಭೆ ನಡೆಸಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ ಒಂಬತ್ತು ರೈಲ್ವೆ ಮಾರ್ಗಗಳ ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಯೋಜನೆಗಳಿಗೆ ಅಗತ್ಯವಿರುವ ಜಮೀನುಗಳನ್ನು ರಾಜ್ಯ ಸರ್ಕಾರವೇ ಸ್ವಾಧೀನಪಡಿಸಿಕೊಂಡು, ಒದಗಿಸುತ್ತಿದೆ. ಇದಕ್ಕಾಗಿ ₹ 1,666 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಮಾರ್ಗಗಳಲ್ಲಿ ರೈಲ್ವೆ ಮೇಲು ಸೇತುವೆ ಹಾಗೂ ಕೆಳ ಸೇತುವೆಗಳ ನಿರ್ಮಾಣಕ್ಕೆ ₹ 191.98 ಕೋಟಿ ಒದಗಿಸಲಾಗಿದೆ ಎಂದರು.

ಬೆಂಗಳೂರಿನ ಯಶವಂತಪುರ–ಚನ್ನಸಂದ್ರ ಮತ್ತು ಬೈಯಪ್ಪನಹಳ್ಳಿ– ಹೊಸೂರು ರೈಲ್ವೆ ಮಾರ್ಗಗಳನ್ನು ಜೋಡಿ ಮಾರ್ಗಗಳಾಗಿ ವಿಸ್ತರಿಸಲಾಗುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಲಾ ಶೇಕಡ 50ರಷ್ಟು ವೆಚ್ಚ ಭರಿಸುತ್ತಿವೆ. ಯಶವಂತಪುರ–ಚನ್ನಸಂದ್ರ ನಡುವೆ ಜೋಡಿ ಮಾರ್ಗ ನಿರ್ಮಾಣಕ್ಕೆ ₹ 315 ಕೋಟಿ ವೆಚ್ಚವಾಗಲಿದ್ದು, ರಾಜ್ಯ ಸರ್ಕಾರ ₹ 165 ಕೋಟಿ ಭರಿಸಲಿದೆ. ಬೈಯಪ್ಪನಹಳ್ಳಿ-ಹೊಸೂರು ಜೋಡಿಮಾರ್ಗ ನಿರ್ಮಾಣಕ್ಕೆ ₹ 499 ಕೋಟಿ ವೆಚ್ಚವಾಗಲಿದೆ. ರಾಜ್ಯ ಸರ್ಕಾರ ₹ 250 ಕೋಟಿ ಒದಗಿಸಬೇಕಿದ್ದು, ₹ 65 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಜಿಎಸ್‌ಟಿ ರದ್ದುಗೊಳಿಸಲು ಆಗ್ರಹ: ಎಐಟಿಯುಸಿ ಪ್ರತಿಭಟನೆ

ಬೆಂಗಳೂರು: 'ಅಗತ್ಯ ವಸ್ತುಗಳ ಮೇಲೆ ವಿಧಿಸುತ್ತಿರುವ ಸರಕು ಸೇವಾ ತೆರಿಗೆಯನ್ನು (ಜಿಎಸ್‌ಟಿ) ರದ್ದುಗೊಳಿಸಬೇಕು' ಎಂದು ಆಗ್ರಹಿಸಿ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ) ಪದಾಧಿಕಾರಿಗಳು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪ್ರತಿಭಟನಕಾರರು, ಕೇಂದ್ರ ಸರ್ಕಾರದ ವಿರುದ್ಧ ಘೋಷಣಾ ಫಲಕ ಪ್ರದರ್ಶಿಸಿದರು.

'ಜನರಿಗೆ ನಿತ್ಯವೂ ಅಗತ್ಯವಿರುವ ಬೇಳೆ, ಕಾಳು, ಮೊಸರು ಹಾಗೂ ಇತರೆ ವಸ್ತುಗಳ ಮೇಲೆ ಶೇ 5ರಷ್ಟು ಜಿಎಸ್‌ಟಿ ವಿಧಿಸಲಾಗಿದೆ. ಇದು ಕೇಂದ್ರ ಸರ್ಕಾರದ ಜನವಿರೋಧಿ ನೀತಿಯನ್ನು ತೋರಿಸುತ್ತದೆ. ಇಂಥ ಸರ್ಕಾರದ ವಿರುದ್ಧ ನಾವೆಲ್ಲರೂ ಒಗ್ಗಟ್ಟಿನಿಂದ ಹೋರಾಟ ನಡೆಸಬೇಕಿದೆ' ಎಂದು ಪ್ರತಿಭಟನಕಾರರು ಹೇಳಿದರು.

'ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಅಬಕಾರಿ ಸುಂಕ ಇಳಿಸಬೇಕು. ಕಾರ್ಪೊರೇಟ್ ಕಂಪನಿಗಳ ತೆರಿಗೆಯನ್ನು ಶೇ 25ರಷ್ಟು ಹೆಚ್ಚಿಸಬೇಕು' ಎಂದು ಆಗ್ರಹಿಸಿದರು.

'ಪಿತೂರಿಗಾರರ ವಿರುದ್ಧ ಕ್ರಮಕೈಗೊಳ್ಳಿ'

ಬಿಬಿಎಂಪಿ ಚುನಾವಣೆಗೆ ಪಕ್ಷ ಸಿದ್ಧತೆ ನಡೆಸಿದೆ. ವಾರ್ಡ್ ಮರುವಿಂಗಡಣೆ ಮಾಡಿದ ಬಿಜೆಪಿಯೇ ಈಗ ಮೀಸಲಾತಿ ಪಟ್ಟಿಯನ್ನೂ ಸಿದ್ಧಪಡಿಸುತ್ತಿದೆ. ಅಧಿಕಾರಿಗಳು ಸುಮ್ಮನೆ ಇದ್ದಾರೆ. ಕಾಂಗ್ರೆಸ್ ಸೋಲಿಸಲು ಎಲ್ಲ ಪಿತೂರಿ ನಡೆದಿದೆ

ರಾಮಲಿಂಗಾ ರೆಡ್ಡಿ
ಕೆಪಿಸಿಸಿ ಕಾರ್ಯಾಧ್ಯಕ್ಷ

ಬೆಂಗಳೂರು: ಕೊಲೆ ಪ್ರಕರಣದ ಆರೋಪಿಗಳನ್ನು ಬಂಧಿಸಿದರೆ ಸಾಲದು, ಅವರ ಹಿಂದಿನ ಪಿತೂರಿಗಾರರ ವಿರುದ್ಧ ಕ್ರಮ ಕೈಗೊಂಡರೆ ಪ್ರಕರಣಗಳು ಮರುಕಳಿಸುವುದಿಲ್ಲ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು 'ನಾನು ಗೃಹ ಸಚಿವನಾಗಿದ್ದಾಗ ವರದಿ ತರಿಸಿಕೊಂಡೆ. ಆಗ ನಾಲ್ಕೈದು ಜನರು ರಾಜಕೀಯ ಕಾರಣಕ್ಕೆ ಹತ್ಯೆಯಾದರೆ ಉಳಿದ ಹತ್ಯೆಗಳು ಹಳೇ ದ್ವೇಷ, ಆಸ್ತಿ ಜಗಳ, ಅಪಘಾತದಿಂದ ಸತ್ತಿದ್ದಾರೆ. ಆ ಬಗ್ಗೆ 'ನಗ್ನ ಸತ್ಯ' ಎಂಬ ಪುಸ್ತಕ ಬಿಡುಗಡೆ ಮಾಡಿದ್ದೆ. ಅದರಲ್ಲಿ ಸತ್ತವರು ಆರ್‌ಎಸ್‌ಎಸ್, ವಿಶ್ವ ಹಿಂದೂ ಪರಿಷತ್ ಹಾಗೂ ಬಿಜೆಪಿ ಕಾರ್ಯಕರ್ತರಷ್ಟೇ ಅಲ್ಲ, ಎಸ್‌ಡಿಪಿಐ, ಪಿಎಫ್‌ಐ ಸದಸ್ಯರೂ ಇದ್ದರು. ಅದಕ್ಕೆ ಕಾರಣ ಯಾರು? ಮೊದಲು ಕೊಲೆ ಮಾಡಿದವರ ವಿರುದ್ಧ ದೋಷಾರೋಪ ಸಲ್ಲಿಸಲಾಗುತ್ತಿತ್ತು. ಪಿತೂರಿ ಮಾಡಿದವರ ಹೆಸರು ಸೇರುತ್ತಿರಲಿಲ್ಲ. ನಂತರ 2017-18ರಲ್ಲಿ ಪ್ರಕರಣದಲ್ಲಿ ಸೇರಿಸಲು ಆರಂಭಿಸಿದ ನಂತರ ಕೊಲೆಗಳ ಸರಣಿ ನಿಂತಿತು' ಎಂದು ವಿವರ ನೀಡಿದರು.

'2013ರಿಂದ 2018ರವರೆಗೂ ಕಾಂಗ್ರೆಸ್ ಅಧಿಕಾರದಲ್ಲಿತ್ತು. 23 ಹಿಂದೂ ಯುವಕರ ಕೊಲೆ ಆಗಿದೆ ಎಂದು ರಾಜ್ಯದ ಮೂಲೆ ಮೂಲೆಯಲ್ಲಿ ಅಪಪ್ರಚಾರ ಮಾಡಿಕೊಂಡು ಓಡಾಡಿದರು. ಈಗ ಮತ್ತೆ ಕೊಲೆಗಳು ಆರಂಭವಾಗಿವೆ. ಕಳೆದ ಮೂರು ವರ್ಷಗಳಿಂದ ಇವರೇ ಆಡಳಿತ ಮಾಡುತ್ತಿದ್ದು, ಕೊಲೆಗಳು ಏಕೆ ನಡೆಯುತ್ತಿವೆ' ಎಂದು ಪ್ರಶ್ನಿಸಿದರು.

ಆ್ಯಸಿಡ್ ಎರಚಿ ಪತ್ನಿ ಕೊಂದಿದ್ದವನಿಗೆ ಜೀವಾವಧಿ ಶಿಕ್ಷೆ

ಬೆಂಗಳೂರು: ಪತ್ನಿ ಸುಂದರವಾಗಿದ್ದಾಳೆಂದು ಮೈ ಮೇಲೆ ಆ್ಯಸಿಡ್ ಎರಚಿ ಕೊಲೆ ಮಾಡಿದ್ದ ಅಪರಾಧಿ ಚನ್ನೇಗೌಡ ಎಂಬಾತನಿಗೆ ಜೀವಾವಧಿ ಶಿಕ್ಷೆ ವಿಧಿಸಿ ನಗರದ 46ನೇ ಸಿಸಿಎಚ್ ನ್ಯಾಯಾಲಯ ಆದೇಶ ಹೊರಡಿಸಿದೆ.

2017ರಲ್ಲಿ ನಡೆದಿದ್ದ ಮಂಜುಳಾ ಎಂಬುವರ ಕೊಲೆ ಸಂಬಂಧ ಕೆಂಪೇಗೌಡ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನ್ಯಾಯಾಧೀಶರಾದ ಮಂಜುನಾಥ್ ಅವರು ಪ್ರಕರಣದ ವಿಚಾರಣೆ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಕೆ.ಎಸ್. ಲತಾ ವಾದಿಸಿದ್ದರು.

'ಅಪರಾಧಿ ಚನ್ನೇಗೌಡ ಹಾಗೂ ಮಂಜುಳಾ 1996ರಲ್ಲಿ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದರು. ಸನ್ಯಾಸಿ ಕ್ವಾರ್ಟರ್ಸ್‌ನಲ್ಲಿ ಕುಟುಂಬ ವಾಸವಿತ್ತು. ಪತ್ನಿ ಜೊತೆ ನಿತ್ಯವೂ ಜಗಳ ಮಾಡಲಾರಂಭಿಸಿದ್ದ ಚನ್ನೇಗೌಡ, 'ನೀನು ಸುಂದರವಾಗಿದ್ದೀಯ, ಪರಪುರುಷನ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದೀಯ' ಎಂದು ಅನುಮಾನಿಸುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಿನ್ನ ಸೌಂದರ್ಯವನ್ನೇ ಹಾಳು ಮಾಡುತ್ತೇನೆ. ಆಗ ನಿನ್ನನ್ನು ಯಾವ ಪುರುಷನೂ ನೋಡುವುದಿಲ್ಲ' ಎಂದು ಚನ್ನೇಗೌಡ ಬೆದರಿಕೆ ಹಾಕಿದ್ದ. ಅದರಂತೆ ಪರಿಚಯಸ್ಥ ಕುಮಾರೇಶ್ ಮೂಲಕ ಆ್ಯಸಿಡ್ ಖರೀದಿಸಿದ್ದ ಆರೋಪಿ, 2017ರ ಜುಲೈ 14ರಂದು ಪತ್ನಿ ಮಂಜುಳಾ ಮೈ ಮೇಲೆ ಎರಚಿದ್ದ. ತೀವ್ರ ಗಾಯಗೊಂಡಿದ್ದ ಮಂಜುಳಾ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸ್ಪಂದಿಸದೇ ಅಸುನೀಗಿದ್ದರು. ಪತಿಯನ್ನು ಬಂಧಿಸಿದ್ದ ಪೊಲೀಸರು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು' ಎಂದು ತಿಳಿಸಿವೆ.

ನಾನು ಹುಲಿ...!

ನಗರದ ಪೈ ಲೇಔಟ್ ನ್ಯೂ ಪ್ರಥಮ್ ಶಾಲೆಯಲ್ಲಿ ಶುಕ್ರವಾರ 'ಅಂತರರಾಷ್ಟ್ರೀಯ ಹುಲಿ ಸಂರಕ್ಷಣಾ ದಿನಾಚರಣೆ'ಯ ಅಂಗವಾಗಿ ಮಕ್ಕಳು ಹುಲಿ ವೇಷ ಧರಿಸಿ ಸಂಭ್ರಮಿಸಿದರು.

– ಪ್ರಜಾವಾಣಿ ಚಿತ್ರ/ಕೃಷ್ಣ ಕುಮಾರ್ ಪಿ.ಎಸ್.

ಎಂಎಸ್‌ಪಿ ಕಾಯ್ದೆ ಜಾರಿಗೆ ಆಗ್ರಹಿಸಿ ನಾಳೆ ಪ್ರತಿಭಟನೆ

ಬೆಂಗಳೂರು: ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಕಾಯ್ದೆ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಜುಲೈ 31ರಂದು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದು ಸಂಯುಕ್ತ ಹೋರಾಟ ಕರ್ನಾಟಕ ಸಮಿತಿ ತಿಳಿಸಿದೆ.

'ಕೃಷಿ ಕಾಯ್ದೆಗಳನ್ನು ವಿರೋಧಿಸಿ ದೆಹಲಿಯಲ್ಲಿ ನಡೆದ ಹೋರಾಟದಲ್ಲಿ ರೈತರ ಮೇಲೆ ದಾಖಲಿಸಿದ ಪ್ರಕರಣಗಳನ್ನು ಹಿಂಪಡೆಯಬೇಕು. ಲಖೀಂಪುರ ಖೇರಿ ರೈತರ ಹತ್ಯಾಕಾಂಡದ ಪ್ರಮುಖ ಆರೋಪಿ ಅಜಯ್ ಮಿಶ್ರಾ ಅವರನ್ನು ಸಚಿವ ಸಂಪುಟದಿಂದ ಕೈಬಿಡಬೇಕು ಎಂದು ಒತ್ತಾಯಿಸಿ, ದೇಶದಾದ್ಯಂತ 31ರಂದು ಪ್ರತಿಭಟನೆ ನಡೆಸುವಂತೆ ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿದೆ. ಇದನ್ನು ಬೆಂಬಲಿಸಿ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಾಗುವುದು' ಎಂದು ಸಮಿತಿ ಸಂಯೋಜಕ ವಿ.ಕೆ. ಭಟ್ ಶುಕ್ರವಾರ ತಿಳಿಸಿದರು.

ಸಾಹಿತಿಗಳಿಗೆ ಬೆದರಿಕೆ: ಕ್ರಮಕ್ಕೆ ಸಮಿತಿ ಆಗ್ರಹ

'ಆರ್.ಎಸ್.ಎಸ್ ಆಳ ಮತ್ತು ಅಗಲ' ಪುಸ್ತಕ ಬರೆದಿರುವ ಸಾಹಿತಿ ದೇವನೂರು ಮಹಾದೇವ ಸೇರಿದಂತೆ ನಾಡಿನ ವಿವಿಧ ಕ್ಷೇತ್ರಗಳ ಗಣ್ಯರಿಗೆ ಕೊಲೆ, ಬೆದರಿಕೆ ಬಗ್ಗೆ ವರದಿಯಾದರೂ ಸರ್ಕಾರ ಮೌನವಾಗಿರುವುದು ಖಂಡನೀಯ ಎಂದು ಸಂಯುಕ್ತ ಹೋರಾಟ ಕರ್ನಾಟಕ ಸಮಿತಿ ಆಗ್ರಹಿಸಿದೆ.

ಸಂಸದ ಸುರೇಶ್ ಪಿಎ ವಿಚಾರಣೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೋಟು ಅಮಾನ್ಯೀಕರಣದ ಸಂದರ್ಭದಲ್ಲಿ ಸಂಸದ ಡಿ.ಕೆ.ಸುರೇಶ್ ಅವರ ಆಪ್ತ ಪದ್ಮನಾಭಯ್ಯ ₹ 10 ಲಕ್ಷ ಮೊತ್ತದ ಹಳೆಯ ನೋಟುಗಳನ್ನು ರಾಮನಗರದ ಬ್ಯಾಂಕಿನಲ್ಲಿ ಕಾನೂನು ಬಾಹಿರವಾಗಿ ವಿನಿಮಯ ಮಾಡಿಸಿಕೊಂಡಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿ ಸಿಬಿಐ ವಿಶೇಷ ನ್ಯಾಯಾಲಯ ನಡೆಸುತ್ತಿರುವ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಸಿಬಿಐ ವಿಶೇಷ ನ್ಯಾಯಾಲಯದಲ್ಲಿ ನಡೆಯುತ್ತಿರುವ ಪ್ರಕರಣ ಸಂಬಂಧಿತ ಆದೇಶವನ್ನು ಪ್ರಶ್ನಿಸಿ ಪ್ರಕರಣದ ಎರಡನೇ ಆರೋಪಿಯಾಗಿದ್ದ ಪದ್ಮನಾಭಯ್ಯ ಬಿನ್ ಬಿಳ್ಳಪ್ಪ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಎ.ಎಸ್.ಪೊನ್ನಣ್ಣ, 'ಅರ್ಜಿದಾರರು ಮುಗ್ಧರಿದ್ದು, ಅವರನ್ನು ತಪ್ಪಾಗಿ ಸಿಲುಕಿಸಲಾಗಿದೆ. ಎಫ್ಐಆರ್‌ನಲ್ಲಿ ಇವರ ಪಾತ್ರದ ಬಗ್ಗೆ ವಿವರಣೆ ನೀಡಿಲ್ಲ. ಅಪರಾಧ ಘಟಿಸಿದೆ ಎನ್ನಲಾದ ದಿನದಿಂದ ನಾಲ್ಕು ತಿಂಗಳ ನಂತರ ಎಫ್‌ಐಆರ್ ದಾಖಲು ಮಾಡಲಾಗಿದೆ. ವಿಳಂಬಕ್ಕೆ ಕಾರಣವನ್ನೇ ತೋರಿಸಿಲ್ಲ' ಎಂದರು.

'ಆರೋಪಕ್ಕೆ ಸಂಬಂಧಿಸಿ ಪ್ರಧಾನ ಮಂತ್ರಿಗಳ ಕಾರ್ಯಾಲಯ ಸ್ವೀಕರಿಸಿದ ದೂರಿನ ಅನುಸಾರ ಕಾರ್ಪೊರೇಷನ್ ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕ ಬಿ.ಪ್ರಕಾಶ್ ಸೇರಿ ಎಂಟು ಜನರನ್ನು ಆರೋಪಿಗಳಾಗಿಸಲಾಗಿದೆ. ಅರ್ಜಿದಾರರ ವಿರುದ್ಧದ ಆರೋಪಕ್ಕೆ ಯಾವುದೇ ಸಾಕ್ಷ್ಯ ಇಲ್ಲ' ಎಂದು ವಿವರಿಸಿದರು.

'ತಮ್ಮನ್ನು ಪ್ರಕರಣದಿಂದ ಕೈಬಿಡಲು ಕೋರಿ ಅರ್ಜಿದಾರರು ವಿಚಾರಣಾ ನ್ಯಾಯಾಲಯದಲ್ಲಿ ಮಾಡಿದ್ದ ಮನವಿಯನ್ನು ನ್ಯಾಯಾಧೀಶರು ಕಳೆದ ತಿಂಗಳ 21ರಂದು ತಿರಸ್ಕರಿಸಿದ್ದಾರೆ. ಆಗಸ್ಟ್ 1ರಿಂದ ಮೂರು ದಿನ ನಿರಂತರ ವಿಚಾರಣೆ ನಡೆಸುವುದಾಗಿ ಮುದ್ದತು ನಿಗದಿಪಡಿಸಿದ್ದಾರೆ. ಆದ್ದರಿಂದ, ವಿಚಾರಣಾ ನ್ಯಾಯಾಲಯದ ಆದೇಶ ರದ್ದುಗೊಳಿಸಬೇಕು' ಎಂದು ಕೋರಿದರು.

ಇದಕ್ಕೆ ಸಿಬಿಐ ಪರ ವಕೀಲ ಪಿ.ಪ್ರಸನ್ನಕುಮಾರ್ ಆಕ್ಷೇಪಿಸಿದರೂ ನ್ಯಾಯಪೀಠ ಪರಿಗಣಿಸದೆ, ಅರ್ಜಿ ಇತ್ಯರ್ಥವಾಗುವತನಕ ಸಿಬಿಐ ನ್ಯಾಯಾಲಯವು ವಿಚಾರಣೆಯನ್ನು ಆಗಸ್ಟ್ 10ರವರೆಗೆ ಮುಂದೂಡುವಂತೆ ನಿರ್ದೇಶಿಸಿದೆ.

ಆರೋಪಿಗಳ ವಿರುದ್ಧ ಐಪಿಸಿ ಕಲಂ 120–ಬಿ, 420, 409, 468, 471 ಮತ್ತು ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಿದ್ದ ಸಿಬಿಐ ದೋಷಾರೋಪ ಪಟ್ಟಿ ಸಲ್ಲಿಸಿತ್ತು. ಪ್ರಕರಣದಲ್ಲಿ ಸಂಸದ ಡಿ.ಕೆ.ಸುರೇಶ್ ಅವರನ್ನು 41ನೇ ಸಾಕ್ಷಿದಾರನನ್ನಾಗಿ ಕಾಣಿಸಲಾಗಿದೆ. ಅರ್ಜಿದಾರರ ಪರ ವಕೀಲ ಎಸ್.ಸುನಿಲ್ ಕುಮಾರ್ ವಕಾಲತ್ತು ವಹಿಸಿದ್ದಾರೆ.

ಆಫ್ರಿಕಾ ವಿದ್ಯಾರ್ಥಿಗಳ ಒಕ್ಕೂಟದ ಕಾನೂನು ಸಲಹೆಗಾರ ಗಡಿಪಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನವ ಕಳ್ಳ ಸಾಗಣೆ, ನಕಲಿ ದಾಖಲೆ ಸೃಷ್ಟಿ ಹಾಗೂ ಅಕ್ರಮ ವಾಸ ಆರೋಪದಡಿ ನಗರದಲ್ಲಿರುವ ಆಫ್ರಿಕಾ ವಿದ್ಯಾರ್ಥಿಗಳ ಒಕ್ಕೂಟದ ಕಾನೂನು ಸಲಹೆಗಾರ ಬಾಸ್ಕೊ ಕಾವೀಸ್ಸಿ ಅವರನ್ನು ಬಂಧಿಸಿ ದೇಶದಿಂದ ಗಡಿಪಾರು ಮಾಡಲಾಗಿದೆ.

'ಉಗಾಂಡ ಪ್ರಜೆ ಬಾಸ್ಕೊ, 16 ವರ್ಷ 11 ತಿಂಗಳಿನಿಂದ ಭಾರತದಲ್ಲಿ ಅಕ್ರಮವಾಗಿ ವಾಸವಿದ್ದ. ವಿದೇಶಿ ಕಾಯ್ದೆಯಡಿ ಈತನನ್ನು ಬಂಧಿಸಲಾಗಿತ್ತು. ಜೈಲು ಶಿಕ್ಷೆಯೂ ಆಗಿತ್ತು. ದೇಶದಲ್ಲೇ ಅಕ್ರಮವಾಗಿ ನೆಲೆಸಿ, ಪದೇ ಪದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದರಿಂದ ಗಡಿಪಾರು ಮಾಡಲಾಗಿದೆ. ಈತ ವಾಪಸು ದೇಶಕ್ಕೆ ಬಾರದಂತೆ ನಿಷೇಧ ಹೇರಲು ಕ್ರಮ ಕೈಗೊಳ್ಳಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಹೇಳಿದರು.

'ವಿದ್ಯಾರ್ಥಿ ವೀಸಾದಡಿ ನಗರಕ್ಕೆ ಬಂದಿದ್ದ ಬಾಸ್ಕೊ, ಕಾಲೇಜೊಂದರಲ್ಲಿ ವ್ಯಾಸಂಗ ಮಾಡಿದ್ದ. 2005ರಲ್ಲಿ ವೀಸಾ ಅವಧಿ ಮುಗಿದರೂ ತನ್ನ ದೇಶಕ್ಕೆ ವಾಪಸು ಹೋಗಿರಲಿಲ್ಲ' ಎಂದೂ ತಿಳಿಸಿದರು.

ನೋಟಿಸ್ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ದಾವೆ: '2005ರಲ್ಲಿ ವಿದೇಶಿ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಬಾಸ್ಕೊನನ್ನು ಬಂಧಿಸಲಾಗಿತ್ತು. ಈತನಿಗೆ ಆರು ತಿಂಗಳು ಜೈಲು ಶಿಕ್ಷೆಯೂ ಆಗಿತ್ತು. ಜೈಲಿನಿಂದ ಹೊರಬಂದ ನಂತರ ದೇಶ ತೊರೆಯುವಂತೆ ನೋಟಿಸ್ ನೀಡಲಾಗಿತ್ತು. ಇದನ್ನು ಪ್ರಶ್ನಿಸಿದ್ದ ಬಾಸ್ಕೊ, ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದ' ಎಂದೂ ಹೇಳಿದರು.

'ಭಾರತೀಯ ಯುವತಿಯನ್ನು ಮದುವೆಯಾಗಿದ್ದು, ಇಲ್ಲಿಯೇ ನೆಲೆಸಲು ಅನುಮತಿ ಕೊಡಿ' ಎಂದು ಬಾಸ್ಕೊ ಕೋರಿದ್ದ. ಈತನ ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿತ್ತು. ಇದಾದ ನಂತರ, ಆರೋಪಿಯನ್ನು ಬಂಧಿಸಿ ತಾತ್ಕಾಲಿಕ ಬಂಧನ ಕೇಂದ್ರದಲ್ಲಿ ಇರಿಸಲಾಗಿತ್ತು' ಎಂದೂ ತಿಳಿಸಿದರು.

ಒಕ್ಕೂಟದ ಮೂಲಕ ವಂಚನೆ: 'ಭಾರತದ ಕಾನೂನು ತಿಳಿದುಕೊಂಡಿದ್ದ ಆರೋಪಿ, ಆಫ್ರಿಕಾ ವಿದ್ಯಾರ್ಥಿಗಳ ಒಕ್ಕೂಟದ ಕಾನೂನು ಸಲಹೆಗಾರನಾಗಿದ್ದ. ಆಫ್ರಿಕಾದಿಂದ ಭಾರತಕ್ಕೆ ಬರುವವರಿಗೆ ಎಲ್ಲ ರೀತಿಯ ಅನುಕೂಲ ಕಲ್ಪಿಸುತ್ತಿದ್ದ. ಡ್ರಗ್ಸ್ ಹಾಗೂ ಇತರೆ ಪ್ರಕರಣದಲ್ಲಿ ಸಿಕ್ಕಿಬೀಳುವವರಿಗೆ ಜಾಮೀನು ಕೊಡಿಸುತ್ತಿದ್ದ. ಈ ಮೂಲಕ ಕಾನೂನುಬಾಹಿರ ಚಟುವಟಿಕೆಯಲ್ಲೂ ತೊಡಗಿದ್ದ' ಎಂದು ಪೊಲೀಸರು ಹೇಳಿದರು.

'ಬಾಸ್ಕೊ ಬಳಿ ವಾಹನ ಚಾಲನಾ ಪರವಾನಗಿ ಪತ್ರ (ಡಿಎಲ್), ಲ್ಯಾಪ್‌ಟಾಪ್, ಬ್ಯಾಂಕ್ ಪಾಸ್‌ಪುಸ್ತಕ, ಕಂಪ್ಯೂಟರ್ ಜಪ್ತಿ ಮಾಡಲಾಗಿದೆ.

ನಗರದಲ್ಲಿ ಇಂದು

ಮನೆ–ಮನಗಳಲ್ಲಿ ಶಿವಪೂಜೆ ಶಿವಾನುಭವ ಹಾಗೂ ಸಿದ್ಧಾಂತ ಶಿಖಾಮಣಿ ವಚನ ಪ್ರವಚನ ಕಾರ್ಯಕ್ರಮ: ಬೆಳಿಗ್ಗೆ– ಎಂ.ಎಸ್. ಹಿರೇಮಠ, ನಂ.48 ಕೆ.ಎಚ್.ಬಿ. ಕಾಲೊನಿ 8ನೇ ಹಂತ, ಕೋರಮಂಗಲ, ಸಂಜೆ– ನಂದಿನಿ ಮತ್ತು ಲಿಂಗರಾಜು ವಿರಕ್ತಮಠ, ನಂ.41 ಸರ್ವಶ್ರೀ ನಿಲಯ, ಬಸವ ಸಮಿತಿ ಬಡಾವಣೆ, ತಿಂಡ್ಲು ರಸ್ತೆ, ವಿದ್ಯಾರಣ್ಯಪುರ

34ನೇ ವಾರ್ಷಿಕೋತ್ಸವದ ಸಮಾರಂಭ: ಸಾನ್ನಿಧ್ಯ: ಸೌಮ್ಯನಾಥ ಸ್ವಾಮೀಜಿ, ಅಧ್ಯಕ್ಷತೆ: ವಿ.ಗೋಪಾಲಗೌಡ, ಅತಿಥಿಗಳು: ಸಿ.ಎನ್. ಬಾಲಕೃಷ್ಣ, ಶೀನಪ್ಪ ಗೌಡ, ಆಯೋಜನೆ: ಮೈಕೊ ಒಕ್ಕಲಿಗರ ಕ್ರಿಯಾ ಸಮಿತಿ, ಸ್ಥಳ: ಕುವೆಂಪು ಕಲಾಕ್ಷೇತ್ರ ವಿ.ವಿ. ಪುರಂ, ಬೆಳಿಗ್ಗೆ 9

ಜೋಗಿಲ 50 ಸಾಂಸ್ಕೃತಿಕ ಸಂಭ್ರಮ: ಉದ್ಘಾಟನೆ: ಸಿ. ಸೋಮಶೇಖರ್, ಅಧ್ಯಕ್ಷತೆ: ಬಾನಂದೂರು ಕೆಂಪಯ್ಯ, ಅತಿಥಿಗಳು: ಶ್ರೀನಿವಾಸ್.ಜಿ.ಕಪ್ಪಣ್ಣ, ವಸುಂಧರಾ ಭೂಪತಿ, ಅಪ್ಪಗೆರೆ ತಿಮ್ಮರಾಜು, ಉಪಸ್ಥಿತಿ: ಜೋಗಿಲ ಸಿದ್ಧರಾಜು, ಆಯೋಜನೆ: ಜೋಗಿಲ ಸಿದ್ದರಾಜು ಅಭಿನಂದನಾ ಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10

ಪದವಿ ಪ್ರದಾನ ಸಮಾರಂಭ: ಅತಿಥಿಗಳು: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಎನ್. ಕುಮಾರ್, ಅಶೋಕ್ ರಾಮಕೃಷ್ಣನ್. ಜೆ.ಶ್ರೀನಿವಾಸಮೂರ್ತಿ, ಆಯೋಜನೆ: ಶ್ರೀವಿದ್ಯಾ ಇಂಟರ್‌ನ್ಯಾಷನಲ್ ಯುನಿವರ್ಸಿಟಿ ಫಾರ್ ವೇದಿಕ್ ಸೈನ್ಸ್, ಸ್ಥಳ: ಪ್ರೊ.ಜಿ. ವೆಂಕಟಸುಬ್ಬಯ್ಯ ಶತಾಬ್ದಿ ಕಲಾಭವನ, ಜಯನಗರ, ಬೆಳಿಗ್ಗೆ 10.30

'ಸುಯೋಧನ' ನಾಟಕ ಪ್ರದರ್ಶನ: ರಚನೆ: ಎಸ್.ವಿ. ಕೃಷ್ಣಶರ್ಮಾ, ಬೆಳಕಿನ ವಿನ್ಯಾಸ: ಶ್ರೀಕಾಂತ್. ಎಸ್, ನಿರ್ವಹಣೆ: ಮಧುಸೂದನ್.ಜಿ., ಆಯೋಜನೆ: ಸಂಕಲ್ಪ ಫೌಂಡೇಷನ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6.30

ಕಲೆ ಮತ್ತು ಸಾಂಸ್ಕೃತಿಕ ವೇದಿಕೆ ಉದ್ಘಾಟನೆ: ಉದ್ಘಾಟನೆ: ಪ್ರವೀಣ್ ಗೋಡ್ಖಿಂಡಿ, ಅತಿಥಿಗಳು: ಕೆ.ಜಿ. ರಾಘವನ್, ಎಚ್.ಎನ್. ಸುರೇಶ್, ಅಧ್ಯಕ್ಷತೆ: ಅಶೋಕ್ ಹಾರನಹಳ್ಳಿ, ಆಯೋಜನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಸ್ಥಳ: ಖಿಂಚ ಸಭಾಂಗಣ, ಭಾರತೀಯ ವಿದ್ಯಾಭವನ, ಸಂಜೆ 5

ಕೃತಿಗಳ ಲೋಕಾರ್ಪಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ, ಪ್ರಶಸ್ತಿ ಪ್ರದಾನ: ಮಲ್ಲೇಪುರಂ.ಜಿ. ವೆಂಕಟೇಶ್, ಕೃತಿಗಳ ಬಿಡುಗಡೆ: ರವೀಂದ್ರ ಭಟ್ಟ, ಅತಿಥಿಗಳು: ವೂಡೇ.ಪಿ. ಕೃಷ್ಣ, ಅಧ್ಯಕ್ಷತೆ:ನಿಡಸಾಲೆ ಪುಟ್ಟಸ್ವಾಮಿ, ಉಪಸ್ಥಿತಿಳ ಜೀರಿಗೆ ಲೋಕೇಶ್, ಆಯೋಜನೆ: ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ, ಸ್ಥಳ: ಬಾಪೂ ಸಭಾಂಗಣ, ಗಾಂಧಿಭವನ, ಬೆಳಿಗ್ಗೆ 11

'ಎಂತ ಕೋರೀನಾ ವರಮು ನೀವು ರಾಮಾ' ತೆಲುಗು ಭಕ್ತಿಗೀತೆ ಬಿಡುಗಡೆ: ಬಿಡುಗಡೆ: ಆರ್.ಕೆ. ಪದ್ಮನಾಭ, ಸಾಹಿತ್ಯ: ಬೆಳೆಗೆರೆ ಮಹಾಲಕ್ಷ್ಮಮ್ಮ, ಸಂಗೀತ ನಿರ್ದೇಶನ ಮತ್ತು ಗಾಯನ: ಜಗದೀಶ್ ಆಚಾರ್ಯ ಪುತ್ತೂರು, ಆಯೋಜನೆ: ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ, ಸ್ಥಳ: ಶಾರದಾ ಕಲಾಕೇಂದ್ರ, ಜೆ.ಪಿ. ನಗರ, ಬೆಳಿಗ್ಗೆ 11.30

ದೊಡ್ಡಣ್ಣ ಶೆಟ್ಟಿ ಅವರ 101ನೇ ವಾರ್ಷಿಕ ಆರಾಧನಾ ಮಹೋತ್ಸವ: ಸಾನ್ನಿಧ್ಯ: ಪೂರ್ಣಾನಂದ ಪುರಿ ಸ್ವಾಮೀಜಿ, ಅತಿಥಿಗಳು: ತೇಜಸ್ವಿ ಸೂರ್ಯ, ಉದಯ್ ಗುರುಡಾಚಾರ್, ರಾಮಲಿಂಗಾರೆಡ್ಡಿ, ಕುಪೇಂದ್ರ ರೆಡ್ಡಿ, ಅಧ್ಯಕ್ಷತೆ: ಎ.ಕೆಂಪಣ್ಣ ಶೆಟ್ಟಿ, ಆಯೋಜನೆ: ಲಕ್ಷ್ಮೀ ನರಸಿಂಹಸ್ವಾಮಿ ಧರ್ಮಸಂಸ್ಥೆ, ಸ್ಥಳ: ಕೋಟೆ, ಬೆಳಿಗ್ಗೆ 6 ಸಂಜೆ 7ರ ವರೆಗೆ

73ನೇ ಸಂಸ್ಥಾಪನಾ ದಿನಾಚರಣೆ: ಅತಿಥಿಗಳು: ಡಾ.ವಿ. ನಾರಾಯಣಸ್ವಾಮಿ, ವೆಂಕಟೇಶ್ ಶೇಷಾದ್ರಿ, ಅಧ್ಯಕ್ಷತೆ: ಡಾ.ಪದ್ಮಿನಿ ಪ್ರಸಾದ್, ಆಯೋಜನೆ: ಫ್ಯಾಮಿಲಿ ಪ್ಲ್ಯಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ, ಸ್ಥಳ: ಎಫ್.ಪಿ.ಎ ಇಂಡಿಯಾ, ರಾಜಮಹಲ್ ಗುಟ್ಟಹಳ್ಳಿ, ಸಂಜೆ 4

ನಾಡಪ್ರಭು ಕೆಂಪೇಗೌಡರ ಜಯಂತಿ: ಉದ್ಘಾಟನೆ: ವಿ. ಗೋಪಾಲಗೌಡ, ಅಧ್ಯಕ್ಷತೆ: ಎಂ.ಕೃಷ್ಣಪ್ಪ, ಅತಿಥಿಗಳು: ಸಿ.ಎಚ್. ಹನುಮಂತರಾಯ, ಕೆ. ನಾರಾಯಣಗೌಡ, ಆಯೋಜನೆ: ನಾಡಪ್ರಭು ಕೆಂಪೇಗೌಡ ವಿಚಾರ ವೇದಿಕೆ ಟ್ರಸ್ಟ್, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ, ವಿಜಯನಗರ, ಸಂಜೆ 4

ಡಾ. ರಾಜೇಗೌಡ ಹೊಸಹಳ್ಳಿ ಅವರ ಪುಸ್ತಕಗಳ ಬಿಡುಗಡೆ: ಅಧ್ಯಕ್ಷತೆ: ಜಿ.ಬಿ. ರಾಜು, ಪುಸ್ತಕಗಳ ಬಿಡುಗಡೆ: ಬಿ.ಆರ್. ರವಿಕಾಂತೇಗೌಡ, ಅತಿಥಿಗಳು: ಡಿ.ಉಮಾಪತಿ, ಆಯೋಜನೆ: ಸಂಕಥನ ಮಂಡ್ಯ, ಗೀತಾಂಜಲಿ ಪುಸ್ತಕ ಶಿವಮೊಗ್ಗ, ಸ್ಥಳ: ಯಶೋಧರ ಕಾಂಪ್ಲೆಕ್ಸ್, ಮೋದಿ ಆಸ್ಪತ್ರೆ, ಶಂಕರಮಠ, ಬಸವೇಶ್ವರನಗರ, ಸಂಜೆ 5

ಎಸ್.ಆರ್. ನರಸಿಂಹಮೂರ್ತಿ ಅವರ 'ಏಕೋತ್ತರಶತ' ಗ್ರಂಥ ಬಿಡುಗಡೆ: ಸಾನ್ನಿಧ್ಯ: ಜಯೇಂದ್ರಪುರಿ ಸ್ವಾಮೀಜಿ, ಅತಿಥಿಗಳು: ಪಾವಗಡ ಪ್ರಕಾಶ್ ರಾವ್, ಎಂ.ಎಲ್. ವಿಶ್ವೇಶ್ವರ ಭಟ್ಟ, ಆಯೋಜನೆ: ಶಿಬಿರಂಗ ಪ್ರಕಾಶನ, ಅಭಿನಂದಾನ ಸಮಿತಿ, ಸ್ಥಳ: ಪ್ರೊ.ಜಿ. ವೆಂಕಟಸುಬ್ಬಯ್ಯ ಶತಾಬ್ದಿ ಕಲಾಭವನ, ಜಯನಗರ, ಸಂಜೆ 6

ಊಂಜಲ್ ಸಂಗೀತೋತ್ಸವ: ಪ್ರಸ್ತುತಿ: ಅಪೇಕ್ಷಾ ಅಪ್ಪಾಲ ಮತ್ತು ಸಂಗಡಿಗರು, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರಸ್ವಾಮಿ ದೇವಸ್ಥಾನ(ಟಿಟಿಡಿ) ವಯ್ಯಾಲಿ ಕಾವಲ್, ಸಂಜೆ 6

ಪ್ರಶಾಂತ್.ಜಿ.ಎನ್. ಅವರ 'ದಿ ಲೈಫ್ ಆ್ಯಂಡ್ ಟೈಮ್ಸ್ ಆಫ್ ಯು. ಆರ್. ರಾವ್' ಪುಸ್ತಕ ಬಿಡುಗಡೆ: ಅತಿಥಿಗಳು: ಕೆ. ಕಸ್ತೂರಿ ರಂಗನ್, ಎಂ. ಅಣ್ಣದೊರೈ, ಎಂ. ಗೋವಿಂದ್ ರಾವ್, ಬಿ. ಸುರೇಶ್, ಆಯೋಜನೆ: ನಾಕುತಂತಿ, ಸ್ಥಳ: ಕೆಜಿಆರ್ ಸಭಾಂಗಣ, ಭಾರತೀಯ ವಿದ್ಯಾಭವನ, ಸಂಜೆ 7

WEEKEND CORNER ಕ್ಲಾಸಿಫೈಡ್ಸ್

ಮೊದಲ ಬಾರಿಗೆ ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮ ಆಯೋಜನೆ

ಭರವಸೆ ಮೂಡಿಸಿದ ಹೂಡಿಕೆದಾರರ ಸಮಾವೇಶ

ಪ್ರಜಾವಾಣಿ ವಾರ್ತೆ

ರಾಮನಗರ: ಕನಕಪುರ ತಾಲ್ಲೂಕಿನ ಗಾಳಿಬೋರೆ ಫಿಶಿಂಗ್ ಕ್ಯಾಂಪ್ ಆವರಣದಲ್ಲಿ ಶುಕ್ರವಾರ ನಡೆದ ಜಿಲ್ಲೆಯ ಮೊಟ್ಟಮೊದಲ ಹೂಡಿಕೆದಾರರ ಸಮಾವೇಶವು ಪ್ರವಾಸೋದ್ಯಮ ಕುರಿತು ಭರವಸೆಗಳನ್ನು ಮೂಡಿಸುವಲ್ಲಿ ಯಶಸ್ವಿ ಆಯಿತು.

ಪ್ರವಾಸೋದ್ಯಮ ಇಲಾಖೆ, ಜಿಲ್ಲಾಡಳಿತ ಸಹಯೋಗದಲ್ಲಿ ಇದೇ ಮೊದಲ ಬಾರಿಗೆ ಜಿಲ್ಲೆಯಲ್ಲಿ ಹೂಡಿಕೆದಾರರೊಂದಿಗಿನ ಸಮಾವೇಶ ನಡೆದಿದ್ದು, ರಾಜ್ಯದ ವಿವಿಧ ಭಾಗಗಳಿಂದ ಉದ್ಯಮಿಗಳು ಪಾಲ್ಗೊಂಡಿದ್ದರು. ಈ ಪೈಕಿ ಕೆಲವರು ರಾಮನಗರದಲ್ಲಿ ಸ್ಥಳ ನೀಡಿದ್ದೇ ಆದಲ್ಲಿ ಉತ್ತಮ ಆತಿಥ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಭರವಸೆಯನ್ನೂ ನೀಡಿದರು.

ಸಮಾವೇಶಕ್ಕೆ ಚಾಲನೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, 'ಪ್ರವಾಸೋದ್ಯಮವು ಮನೋರಂಜನೆಯ ಜೊತೆಗೆ ಅತಿಹೆಚ್ಚು ಉದ್ಯೋಗ ಸೃಷ್ಟಿಗೆ ಅವಕಾಶ ಇರುವ ಕ್ಷೇತ್ರ. ಜಿಲ್ಲೆಯು ರಾಜಧಾನಿಗೆ ಹತ್ತಿರವೇ ಇದ್ದು, ಹೇರಳವಾದ ಪ್ರಾಕೃತಿಕ ಸಂಪತ್ತನ್ನು ಹೊಂದಿದೆ. ಇದರ ಸೌಂದರ್ಯಕ್ಕೆ ಧಕ್ಕೆ ಆಗದಂತೆ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ಅವಕಾಶ ಇದೆ. ಉದ್ಯಮಿಗಳು ಆಸಕ್ತಿ ತೋರಿದಲ್ಲಿ ಏಕಗವಾಕ್ಷಿ ಪದ್ಧತಿಯ ಅನುಮೋದನೆ ಜೊತೆಗೆ ಕಾರ್ಮಿಕರಿಗೆ ಕೌಶಲ ತರಬೇತಿ ಸೇರಿದಂತೆ ಅಗತ್ಯ ಸವಲತ್ತುಗಳನ್ನು ತ್ವರಿತವಾಗಿ ಒದಗಿಸಿಕೊಡಲಾಗುವುದು' ಎಂದು ಭರವಸೆ ನೀಡಿದರು.

ಪ್ರಾಸ್ತಾವಿಕ ಮಾತನಾಡಿದ ಜಿಲ್ಲಾಧಿಕಾರಿ ಅವಿನಾಶ್ ಮೆನನ್ ರಾಜೇಂದ್ರನ್, 'ಜಿಲ್ಲೆಯಲ್ಲಿ ಬೆಟ್ಟ-ಗುಡ್ಡಗಳು, ಹಸಿರು ಹೊದ್ದ ಅರಣ್ಯ, ಜಲಾಶಯಗಳು, ದೇವಾಲಯಗಳು, ನಾನಾ ಬಗೆಯ ತಾಣಗಳು ಇವೆ. ಇವೆಲ್ಲವನ್ನೂ ಬಳಸಿಕೊಂಡು ಇಲ್ಲಿ ಮನೋರಂಜನಾ ಚಟುವಟಿಕೆ, ಸಾಹಸ ಕ್ರೀಡೆ, ಸ್ಕೈಯಿಂಗ್, ಟ್ರೆಕ್ಕಿಂಗ್, ಮೌಂಟೇನ್ ಕ್ಲೈಂಬಿಂಗ್, ರೇಷ್ಮೆ ಪ್ರವಾಸ, ವೈನ್ ಪ್ರವಾಸ ಮೊದಲಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅವಕಾಶ ಇದೆ' ಎಂದರು.

ಗಾಳಿಬೋರೆ ಫಿಶಿಂಗ್ ಕ್ಯಾಂಪ್ ಆವರಣದಲ್ಲಿ ಶುಕ್ರವಾರ ನಡೆದ ರಾಮನಗರ ಜಿಲ್ಲಾಮಟ್ಟದ ಹೂಡಿಕೆದಾರರ ಸಮಾವೇಶವನ್ನು ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಉದ್ಘಾಟಿಸಿದರು. ಆರ್ಥಿಕ ಇಲಾಖೆಯ ಉಪ ಕಾರ್ಯದರ್ಶಿ ಇಕ್ರಂ, ಉದ್ಯಮಿ ಚಾಮರಾಜು, ರಾಮನಗರ ಎಸ್‌ಪಿ ಸಂತೋಷ್ ಬಾಬು ಇದ್ದರು

ಹೋಟೆಲ್ ಉದ್ಯಮಕ್ಕೆ ರಾಮನಗರದಲ್ಲಿ ಹೆಚ್ಚಿನ ಅವಕಾಶ ಇದೆ. ಜಿಲ್ಲಾಡಳಿತ ಸ್ಥಳ ನೀಡಿದರೆ ಉದ್ಯಮಿಗಳು ಮುಂದೆ ಬರುತ್ತಾರೆ
ಚಾಮರಾಜು, ಅಧ್ಯಕ್ಷ, ದಕ್ಷಿಣ ಭಾರತ ಹೋಟೆಲ್ ಮಾಲೀಕರ ಸಂಘ

'ಆರ್‌ಟಿಐ ಮೊಘಲ್ ದರ್ಬಾರಲ್ಲ'

ಶಿಕ್ಷಣ ಇಲಾಖೆ ಅಧಿಕಾರಿಗೆ ₹35 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಹಿತಿ ಹಕ್ಕು ಆಯೋಗವು ಅರೆನ್ಯಾಯಿಕ ಪ್ರಾಧಿಕಾರವಾಗಿದ್ದು ಸಾರ್ವಜನಿಕ ನಿಯಮಗಳಡಿ ಕಾರ್ಯ ನಿರ್ವಹಿಸಬೇಕೇ ಹೊರತು ಮನಸ್ಸಿಗೆ ಬಂದಂತೆ ಮಹಾರಾಜರು ಅಥವಾ ಮೊಘಲ್ ಮಾದರಿಯ ದರ್ಬಾರು ನಡೆಸಲು ಸಾಧ್ಯವಿಲ್ಲ' ಎಂದು ಕಟು ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಒದಗಿಸಲು ಎರಡು ವರ್ಷ ವಿಳಂಬ ತೋರಿದ ಕೆ.ಆರ್.ಪುರ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ₹ 35 ಸಾವಿರ ದಂಡ ವಿಧಿಸಿದೆ.

ಈ ಸಂಬಂಧ ವೈಟ್‌ಫೀಲ್ಡ್ ನಿವಾಸಿ ಸಿಜೊ ಸೆಬಾಸ್ಟಿನ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ತೀರ್ಪು ನೀಡಿರುವ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಮಾಹಿತಿ ನೀಡಲು ವಿಳಂಬ ಮಾಡಿ ತಪ್ಪು ಎಸಗಿದ ಅಧಿಕಾರಿಗೆ ಆಯೋಗವು ದಂಡ ವಿಧಿಸಬೇಕಿತ್ತು. ಆದರೆ, ಈ ಪ್ರಕರಣದಲ್ಲಿ ವಿಧಿಸದೇ ಇರುವುದು ಸಮ್ಮತವಲ್ಲ ಎಂಬ ಅರ್ಜಿದಾರರ ವಾದ ನ್ಯಾಯೋಚಿತವಾಗಿದೆ' ಎಂದು ಹೇಳಿದೆ.

'ಈ ಪ್ರಕರಣದಲ್ಲಿ ಮಾಹಿತಿ ನೀಡಲು ಎರಡು ವರ್ಷ ವಿಳಂಬ ಆಗಿದ್ದರೂ, ಆಯೋಗವು ತಪ್ಪಿತಸ್ಥ ಅಧಿಕಾರಿಗೆ ದಂಡ ವಿಧಿಸಿಲ್ಲ. ಹಾಗಾಗಿ, ಇದಕ್ಕೆ ಕಾರಣರಾದ ಕೆ.ಆರ್.ಪುರ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಶಂಕರ್ ಅವರಿಗೆ ₹ 25 ಸಾವಿರ ದಂಡ ವಿಧಿಸಲಾಗುವುದು. ಅಂತೆಯೇ ₹ 10 ಸಾವಿರ ಮೊತ್ತವನ್ನು ಅರ್ಜಿದಾರರಿಗೆ ಪರಿಹಾರ ರೂಪದಲ್ಲಿ ನೀಡಬೇಕು' ಎಂದು ನ್ಯಾಯಪೀಠ ಘೋಷಿಸಿದೆ.

'ದಂಡ ಮತ್ತು ಪರಿಹಾರದ ಮೊತ್ತವನ್ನು 30 ದಿನಗಳಲ್ಲಿ ಅರ್ಜಿದಾರರಿಗೆ ಪಾವತಿ ಮಾಡಬೇಕು. ವಿಳಂಬ ಮಾಡಿದರೆ ಮೊದಲ 30 ದಿನಗಳಿಗೆ ಶೇ.2ರಷ್ಟು ಹಾಗೂ ನಂತರದ ದಿನಗಳಿಗೆ ಶೇ.3ರಷ್ಟು ಬಡ್ಡಿ ನೀಡಬೇಕು' ಎಂದು ಆದೇಶಿಸಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯವು ಇಂಟಿಗ್ರೇಟೆಡ್ ಎಂ.ಎಸ್ಸಿ. ವೈದಿಕ ವಿಜ್ಞಾನ ಸ್ನಾತಕೋತ್ತರ ಕೋರ್ಸ್‌ಗೆ (ಎನ್‌ಇಪಿ ಯೋಜನೆ) ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಆ.16 ಕಡೆ ದಿನ. ಯುಯುಸಿಎಂಎಸ್ ಪೋರ್ಟಲ್‌ನಲ್ಲಿ (https://uucms.karnataka.gov.in/) ಅರ್ಜಿ ಲಭ್ಯವಿದೆ. ವಿವರಗಳಿಗೆ 8722048456 ಸಂಪರ್ಕಿಸಿ.

ಕೋವಿಡ್: ದೃಢ ಪ್ರಮಾಣ ಶೇ 6.51ಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರ 2,130 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣ ಶೇ 6.51ಕ್ಕೆ ಏರಿಕೆಯಾಗಿದೆ.

ಬೆಂಗಳೂರಿನಲ್ಲಿ 1,615 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಧಾರವಾಡದಲ್ಲಿ 70, ಮೈಸೂರಿನಲ್ಲಿ 51, ಕೊಡಗಿನಲ್ಲಿ 47, ತುಮಕೂರಿನಲ್ಲಿ 41, ಹಾಸನದಲ್ಲಿ 40 ಪ್ರಕರಣಗಳು ಪತ್ತೆಯಾಗಿವೆ. ಕೋವಿಡ್ ಪೀಡಿತರಲ್ಲಿ ಬೆಂಗಳೂರು, ಕಲಬುರಗಿ, ಕೊಪ್ಪಳ ಮತ್ತು ರಾಯಚೂರಿನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. [illegible]/54/2022
ದಿನಾಂಕ : 25-07-2022

[illegible]

ಕೆಲಸದ ಹೆಸರು	ಅಂದಾಜು ಮೌಲ್ಯ
[illegible]	ರೂ. 51,61,165/-

[illegible] ಒದಗಿಸುವುದಕ್ಕಾಗಿ ಮತ್ತು ಹೊಸ ನಿಲ್ದಾಣ ಕಟ್ಟಡ, ಪಾದಚಾರಿ ಮೇಲ್ಸೇತುವೆ, ಪ್ಲ್ಯಾಟ್‌ಫಾರಂ, ಪಿಎಫ್ ಶೆಲ್ಟರ್ ಮತ್ತು ಎಸ್&ಟಿ ಗೂಮ್ಟಿಗಳಿಗೆ ವಿದ್ಯುತ್ ವ್ಯವಸ್ಥೆಗಳು.
(ಟೆಂಡರ್ ಉಲ್ಲೇಖ ಸಂ. ಇಸಿಎನ್-16-2022)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ :
17-08-2022 ರಂದು 11:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ನಿರ್ಮಾಣ
ಬೆಂಗಳೂರು ದಂಡು

ಪಿಯುಬಿ/266/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/53/2022
ದಿನಾಂಕ : 20-07-2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಬಂಗಾರಪೇಟೆ – ಕೋಲಾರ ಸೆಕ್ಷನ್ : ಕಿ.ಮೀ.147/400-500 ನಲ್ಲಿನ ಎಲ್‌ಸಿ ಸಂ.166 ಬದಲಿಗೆ ಕಿ.ಮೀ.147/700-800ನಲ್ಲಿ 1X48 ಮೀ ಬೋಸ್ಟ್ರಿಂಗ್ ಗರ್ಡರ್ +9X20ಮೀ ಪಿಎಸ್‌ಸಿ ಸ್ಲ್ಯಾಬ್ / ಗರ್ಡರ್‌ನೊಂದಿಗೆ ರೈಲ್ವೆ ಮೇಲ್ಸೇತುವೆಯ ನಿರ್ಮಾಣ ಮತ್ತು ಬಂಗಾರಪೇಟೆ ನಿಲ್ದಾಣದಲ್ಲಿ ಸಾಮಾನ್ಯ ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡಂತೆ 04 ಸಂಖ್ಯೆಗಳ ವಸತಿಗೃಹಗಳ ಮರುನಿರ್ಮಾಣ. (ಟೆಂಡರ್ ಉಲ್ಲೇಖ ಸಂ. ಬಿಡಬ್ಲ್ಯುಟಿ-ಕೆಕ್ಯುಜೆಡ್-ಆರ್‌ಒಬಿಎಲ್‌ಸಿ-166)	ರೂ. 25,67,09,379/-
2	ಗದಗ – ಹೊಟಗಿ ಡಬ್ಲಿಂಗ್ ಯೋಜನೆ – ಗದಗ – ಬಾಗಲಕೋಟೆ ನಿಲ್ದಾಣಗಳ ನಡುವೆ 52/60ಕೆಜಿ ಇನ್ ಸಿಟು ಗ್ಲೂಡ್ ಜಾಯಿಂಟ್‌ಗಳ ಫ್ಯಾಬ್ರಿಕೇಶನ್. (ಟೆಂಡರ್ ಉಲ್ಲೇಖ ಸಂ. ಹೆಚ್‌ಜಿಎ/83)	ರೂ. 1,21,47,500/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ :
10-08-2022 ರಂದು 15:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು
ಬೆಂಗಳೂರು ದಂಡು

ಪಿಯುಬಿ/269/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways SWRRLY SWRRLY

ಚಿತ್ರಾವಳಿ

ಜನನ ಮತ್ತು ಮರಣ ನೋಂದಣಿ ಪ್ರಕರಣಗಳನ್ನು ನ್ಯಾಯಾಲಯಗಳಿಂದ ಉಪವಿಭಾಗಾಧಿಕಾರಿಗಳ ವ್ಯಾಪ್ತಿಗೆ ವರ್ಗಾಯಿಸುವ ಸರ್ಕಾರದ ಕ್ರಮವನ್ನು ವಿರೋಧಿಸಿ ಬೆಂಗಳೂರು ವಕೀಲರ ಸಂಘ ಶುಕ್ರವಾರ ಮ್ಯಾಜಿಸ್ಟ್ರೇಟ್ ಕೋರ್ಟ್‌ನಿಂದ ಸಿಟಿ ಸಿವಿಲ್ ಕೋರ್ಟ್‌ವರೆಗೆ ಕಾಲ್ನಡಿಗೆ ಜಾಥಾ ನಡೆಸಿತು. ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ ಮತ್ತು ಖಜಾಂಚಿ ಎಂ.ಟಿ.ಹರೀಶ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು —ಪ್ರಜಾವಾಣಿ ಚಿತ್ರ

ಐಎಸ್‌ಎಸಿಎ ಬೆಂಗಳೂರು ಘಟಕವು ಆಯೋಜಿಸಿದ್ದ 25ನೇ ವಾರ್ಷಿಕ ಸಮ್ಮೇಳನದಲ್ಲಿ ಬೆಂಗಳೂರು ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ, ಸ್ಯಾಮ್ಸಂಗ್ ಇಂಡಿಯಾದ ಕನ್ಸಲ್ಟಿಂಗ್ ನಿರ್ದೇಶಕ ಡಾ. ಆಲೋಕನಾಥ್, ಐಎಸ್‌ಎಸಿಎ ಅಧ್ಯಕ್ಷ ವೇಲ್ಮುರುಗ ವೆಂಕಟೇಶ್, ಉಪಾಧ್ಯಕ್ಷ ರಾಜಶೇಖರನ್ ಪಾಲ್ಗೊಂಡಿದ್ದರು

ಶಾಸಕರಿಗೆ ಬೆದರಿ ಗಣಿ ಲಾರಿ ಬಿಟ್ಟ ಭೂವಿಜ್ಞಾನಿ

ಮಂಡ್ಯ: ಶಾಸಕ ಸಿ.ಎಸ್.ಪುಟ್ಟರಾಜು ಅವರ ಬೆದರಿಕೆಗೆ ಹೆದರಿದ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು 30ಕ್ಕೂ ಹೆಚ್ಚು ಅಕ್ರಮ ಗಣಿ ಲಾರಿಗಳನ್ನು ಪ್ರಕರಣ ದಾಖಲಿಸದೆ ಬಿಟ್ಟು ಕಳುಹಿಸಿದ ಘಟನೆ ಶುಕ್ರವಾರ ಶ್ರೀರಂಗಪಟ್ಟಣ ತಾಲ್ಲೂಕು ಕೆಆರ್‌ಎಸ್ ಬಳಿಯ ಚೆಕ್‌ಪೋಸ್ಟ್ ಬಳಿ ನಡೆದಿದೆ.

ಬೇಬಿಬೆಟ್ಟ ಕಾವಲು ಪ್ರದೇಶದಲ್ಲಿ ಗಣಿ ಚಟುವಟಿಕೆ ನಿಷೇಧಿಸಿದ್ದರೂ, ನೂರಾರು ಲಾರಿಗಳು ಸಂಚರಿಸುತ್ತಿರುವುದರ ಮಾಹಿತಿ ಮೇರೆಗೆ ಅಧಿಕಾರಿಗಳು ಚೆಕ್‌ಪೋಸ್ಟ್ ಬಳಿ 30ಕ್ಕೂ ಹೆಚ್ಚು ಲಾರಿಗಳನ್ನು ತಡೆದರು. ಬಹುತೇಕ ಲಾರಿಗಳಿಗೆ ಕಲ್ಲು ಸಾಗಣೆಗೆ ಅನುಮತಿ ಇರಲಿಲ್ಲ.

ವಿಚಾರ ತಿಳಿದ ಶಾಸಕ ಸಿ.ಎಸ್. ಪುಟ್ಟರಾಜು ಸ್ಥಳಕ್ಕೆ ಬಂದು ಅಧಿಕಾರಿಗಳ ವಿರುದ್ಧ ಕಿಡಿಕಾರಿದರು. 'ಜಿಲ್ಲಾ ಸಮಿತಿ ತೀರ್ಮಾನದಂತೆ ಗಣಿ ಚಟುವಟಿಕೆಗೆ ಅವಕಾಶವಿದೆ. ರಾಜ್ಯಮಟ್ಟದ ಕಮಿಟಿಯಲ್ಲೂ ಅನುಮತಿ ಸಿಕ್ಕಿದೆ. ಗಾಡಿಗಳನ್ನು ಹಿಡಿದರೆ ಸುಮ್ಮನಿರುವುದಿಲ್ಲ' ಎಂದರು. ನಂತರ ಅಧಿಕಾರಿಗಳು ಪ್ರಕರಣ ದಾಖಲಿಸದೆ ಲಾರಿಗಳನ್ನು ಬಿಟ್ಟು ಕಳುಹಿಸಿದರು.

ಅದೇ ಸಂದರ್ಭದಲ್ಲಿ ಶಾಸಕರು, 'ಕೊಲೆ ಕೇಸ್‌ನಲ್ಲಿ ಫಿಟ್ ಮಾಡಿಸುವೆ' ಎಂದು ಅಧಿಕಾರಿಗಳಿಗೆ ಬೆದರಿಕೆ ಹಾಕಿರುವುದು ವಿವಾದಕ್ಕೆ ಕಾರಣವಾಗಿದೆ. ವಿಡಿಯೊ ಜಾಲತಾಣದಲ್ಲಿ ಹರಿದಾಡುತ್ತಿದ್ದು ಚರ್ಚೆಗೆ ಗ್ರಾಸವಾಗಿದೆ.

ಶಾಸಕರು ಕೊಲೆ ಬೆದರಿಕೆ ಹಾಕಿರುವುದರಿಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು
ಬಡಗಲಪುರ ನಾಗೇಂದ್ರ, ರೈತಸಂಘ ರಾಜ್ಯ ಘಟಕದ ಅಧ್ಯಕ್ಷ

ಕೆಲಸವಿಲ್ಲದೆ ಆತ್ಮಹತ್ಯೆ ಮಾಡಿಕೊಂಡ ಗಣಿ ಕಾರ್ಮಿಕನ ಸಾವಿಗೆ ಕಾರಣ ಯಾರು? ಆ ಅರ್ಥದಲ್ಲಿ ಕೊಲೆ ಕೇಸ್‌ನಲ್ಲಿ ಫಿಟ್ ಮಾಡುವುದಾಗಿ ಹೇಳಿದ್ದೇನೆ
ಸಿ.ಎಸ್.ಪುಟ್ಟರಾಜು
ಶಾಸಕ

ಕಲ್ಲು ಸಾಗಿಸುತ್ತಿದ್ದ ಲಾರಿಗಳ ಮಾಲೀಕರು ಮತ್ತು ಗಣಿ ಮಾಲೀಕರಿಗೆ ನೋಟಿಸ್ ನೀಡಲಾಗಿದೆ. ಅಕ್ರಮವಾಗಿ ಕಲ್ಲು ಸಾಗಿಸುತ್ತಿದ್ದರೆ ದಂಡ ವಿಧಿಸಲಾಗುವುದು
ಪದ್ಮಜಾ, ಹಿರಿಯ ಭೂವಿಜ್ಞಾನಿ

ಶಿವರಾಜಕುಮಾರ್ ಮತ್ತು ಗೀತಾ ದಂಪತಿ ಶುಕ್ರವಾರ ಲಾಲ್‌ಬಾಗ್‌ಗೆ ಭೇಟಿ ನೀಡಿ ಫಲಪುಷ್ಪ ಪ್ರದರ್ಶನ ಕಾರ್ಯಕ್ರಮದ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು

ಶಿವರಾಜ್ ಕುಮಾರ್–ಗೀತಾ ದಂಪತಿ ಲಾಲ್‌ಬಾಗ್‌ಗೆ ಭೇಟಿ

ಬೆಂಗಳೂರು: ಶಿವರಾಜಕುಮಾರ್ ಮತ್ತು ಗೀತಾ ದಂಪತಿ ಶಕ್ತಿಧಾಮದ 200ಕ್ಕೂ ಹೆಚ್ಚು ಮಕ್ಕಳೊಂದಿಗೆ ಶುಕ್ರವಾರ ಲಾಲ್‌ಬಾಗ್‌ಗೆ ಭೇಟಿ ನೀಡಿ ಫಲಪುಷ್ಪ ಪ್ರದರ್ಶನ ಕಾರ್ಯಕ್ರಮದ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಸ್ವಾತಂತ್ರ್ಯೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆ ಮತ್ತು ಮೈಸೂರು ಉದ್ಯಾನ ಕಲಾಸಂಘದ ವತಿಯಿಂದ ಆಗಸ್ಟ್ 5ರಿಂದ 15ರ ವರೆಗೆ ನಡೆಯುವ ಫಲಪುಷ್ಪ ಪ್ರದರ್ಶನದಲ್ಲಿ ನಟರಾದ ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಅವರ ವಿಷಯ ಆಧಾರಿತ ವಿಶೇಷ ಫಲಪುಷ್ಪ ಪ್ರದರ್ಶನವನ್ನು ಆಯೋಜಿಸಲಾಗಿದೆ.

ಲಾಲ್‌ಬಾಗ್ ಉದ್ಯಾನದ ಗ್ಲಾಸ್ ಹೌಸ್ ವೀಕ್ಷಣೆ ಮಾಡುವುದರೊಂದಿಗೆ ವಿಶೇಷ ಫಲಪುಷ್ಪ ಪ್ರದರ್ಶನದ ಸಿದ್ಧತೆಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

'ಲಾಲ್‌ಬಾಗ್‌ನಾದ್ಯಂತ ಗಾಜನೂರಿನಲ್ಲಿರುವ ರಾಜ್‌ಕುಮಾರ್ ಅವರ ಪೂರ್ವಜರ ಮನೆ ಮತ್ತು ಅವರ ಕುಟುಂಬ ಸ್ಥಾಪಿಸಿದ ಮಹಿಳಾ ಪುನರ್ವಸತಿ ಮತ್ತು ಅಭಿವೃದ್ಧಿ ಕೇಂದ್ರ ಶಕ್ತಿ ಧಾಮದ ಪ್ರತಿಕೃತಿ ದೃಶ್ಯಗಳನ್ನು ಸ್ಥಾಪಿಸುವ ಯೋಜನೆ ರೂಪಿಸಲಾಗಿದೆ' ಎಂದು ಲಾಲ್‌ಬಾಗ್ ಉದ್ಯಾನದ ಉಪನಿರ್ದೇಶಕಿ ಕುಸುಮಾ ಮಾಹಿತಿ ನೀಡಿದರು.

ಕೆ.ಎಚ್‌.ಬಿ ಬಡಾವಣೆ ಬಿಬಿಎಂಪಿಗೆ: ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಬಂಡೆಮಠ ಬಳಿಯ ಕೆ.ಎಚ್‌.ಬಿ. ಬಡಾವಣೆಯನ್ನು ಹಸ್ತಾಂ ತರ ಮಾಡಿಕೊಳ್ಳಲು ಬಿಬಿಎಂಪಿ ತಾತ್ವಿಕವಾಗಿ ಶುಕ್ರವಾರ ಒಪ್ಪಿಗೆ ನೀಡಿದೆ.

ವಸತಿ ಸಚಿವ ವಿ. ಸೋಮಣ್ಣ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವಲಯ ಆಯುಕ್ತ ರಾಮಪ್ರಸಾದ್ ಮನೋಹರ್, ರಾಜರಾಜೇಶ್ವರಿ ನಗರ ವಲಯದ ಜಂಟಿ ಆಯುಕ್ತ ನಾಗರಾಜ್, ಮುಖ್ಯ ಎಂಜಿನಿಯರ್ ವಿಜಯಕುಮಾರ್ ಅವರು ಕೆ.ಎಚ್‌.ಬಿ. ಬಡಾವಣೆಯನ್ನು ಹಸ್ತಾಂತರ ಮಾಡಿಕೊಳ್ಳಲು ಸಮ್ಮತಿಸಿದರು.

ಕೆ.ಎಚ್‌.ಬಿ. ಬಡಾವಣೆಯಲ್ಲಿ ರಸ್ತೆ, ಉದ್ಯಾನ ಅಭಿವೃದ್ಧಿಗಾಗಿ ₹2 ಕೋಟಿ ಮತ್ತು ಬಡಾವಣೆಯಲ್ಲಿ ವಾರ್ಡ್ ಕಚೇರಿ ನಿರ್ಮಿಸಲು ಸಾರ್ವಜನಿಕ ಉದ್ದೇಶದ ನಿವೇಶನವೊಂದನ್ನು ಬಿಬಿಎಂಪಿಗೆ ನೀಡಲು ಕರ್ನಾಟಕ ಗೃಹ ಮಂಡಳಿ ಸಮ್ಮತಿಸಿತು.

ಬಡಾವಣೆ ಬಿಬಿಎಂಪಿಗೆ ಹಸ್ತಾಂತರ ಆಗದೇ ಇದ್ದರೂ, ಮನೆ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿಯನ್ನು ಬಿಬಿಎಂಪಿ ನೀಡುತ್ತಿದೆ. ರಸ್ತೆ ಅಗೆಯುವ ಶುಲ್ಕ, ಅಭಿವೃದ್ಧಿ ಶುಲ್ಕ, ನಕ್ಷೆ ಮಂಜೂರಾತಿ ಶುಲ್ಕ, ಕೆರೆ ಅಭಿವೃದ್ಧಿ ಶುಲ್ಕವನ್ನು ಪಡೆಯುತ್ತಿದೆ. ಆದರೆ ಬಡಾವಣೆಯ ಯಾವುದೇ ಅಭಿವೃದ್ಧಿ ಕಾರ್ಯದಲ್ಲಿ ಕೈಜೋಡಿಸಿಲ್ಲ. ಹೀಗಾಗಿ ಬಡಾವಣೆಯನ್ನು ಹಸ್ತಾಂತರ ಮಾಡಿಕೊಂಡು, ಮೂಲಸೌಕರ್ಯ ಒದಗಿಸುವಂತೆ ಸಚಿವ ವಿ. ಸೋಮಣ್ಣ ಸೂಚಿಸಿದರು.

'ಇದು ಸರ್ಕಾರದ ಎರಡು ಸಂಸ್ಥೆಗಳ ನಡುವಿನ ಪ್ರಕ್ರಿಯೆ. ಇದರಿಂದ ಸಾರ್ವಜನಿಕರಿಗೆ ತೊಂದರೆ ಆಗಬಾರದು. ಕೆ.ಎಚ್‌.ಬಿ.ಗೆ ತೆರಿಗೆ ಹಾಕುವ ಮತ್ತು ಖಾತಾ ನೀಡುವ ಅಧಿಕಾರ ಇಲ್ಲ. ಆ ಕಾರ್ಯವನ್ನು ನಿರ್ವಹಿಸಬೇಕಿರುವ ಬಿಬಿಎಂಪಿ ಕೂಡಲೇ ಬಡಾವಣೆಯನ್ನು ಹಸ್ತಾಂತರ ಮಾಡಿಕೊಳ್ಳಬೇಕು' ಎಂದು ತಿಳಿಸಿದರು.

कार्यालय प्रधान मुख्य वन संरक्षक (उत्पादन)
मध्य प्रदेश, सतपुड़ा भवन, भोपाल
मप्र वन विभाग
दूरभाष एवं फैक्स नं. 0755–2674354 E-mail: pccfprod@mp.gov.in

क्रमांक / उत्पा0 / निर्वर्तन / विज्ञापन / 124 / 2161 भोपाल, दिनांक 27 / 07 / 2022

वनोपज के घोष विक्रय की सूचना

मध्यप्रदेश शासन, वन विभाग के विभागीय काष्ठागारों / बॉसागारों में माह अगस्त, 2022 में विभिन्न स्थलों पर विभिन्न तिथियों में ईमारती काष्ठ, जलाऊ चट्टें, बॉस एवं अन्य सामाग्री के नीलाम की तिथियॉं पूर्व से अधिसूचित है। Covid-19 संक्रमण के दृष्टिगत भविष्य में शासन स्तर से जारी हाने वाले निर्देशों के अनुरुप नीलामों की कार्यवाही की जाऐगी। नीलाम की तदर्थ तिथियॉं, नीलाम का प्रकार तथा काष्ठागारों में विक्रय हेतु उपलब्ध वनोपज व अन्य सामग्री की जानकारी मध्यप्रदेश शासन, वन विभाग की वैब साईट mpforest.gov.in पर देखी जा सकती है।

अपर प्रधान मुख्य वन संरक्षक (उत्पादन)
म0प्र0 भोपाल

G-14837/22

वन प्राकृतिक धरोहर है। इनका संरक्षण कीजिये।

CSIR- CENTRAL INSTITUTE OF MEDICINAL AND AROMATIC PLANTS
(Council of Scientific & Industrial Research)
P.O. CIMAP, Kukrail Picnic Spot Road, Lucknow-226015

E- Tender Notice

Item rate tenders are hereby invited Online in two Bid System (Technical and Price Bid) for the work "Upgradation and SITC of 125 KVA/100 KW DG set at CSIR-CIMAP, R.C. Bangalore" as detailed below :

Tender No.	Estimated Cost (Rs.)	EMD (Rs.)	Bid Submission end date	Bid Opening Date
68_47/838/2022-MP (Works)	13,37,772.00	26756.00	13.08.2022	16.08.2022

Tender documents & other details are available on http://etenders.gov.in/eprocure/app
(Administrative Officer)

ಸಂಕ್ಷಿಪ್ತ ಸುದ್ದಿ

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಇದೇ 30ರಂದು ಬೆಳಿಗ್ಗೆ 10ರಿಂದ ಸಂಜೆ 5ರ ವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಸಲಾರಪುರಿ, ಎಚ್‌ಪಿ ಕಾರ್ ಪಾರ್ಕಿಂಗ್, ಜಿ.ಬಿ. ಪಾಳ್ಯ, ಲಕ್ಷ್ಮೀ ಲೇಔಟ್, ಹೊಸ ಮೈಕೋ ಲೇಔಟ್, ವಾಜಪೇಯಿ ನಗರ, ಹೊಸೂರು ಮುಖ್ಯರಸ್ತೆ, ಬೇಗೂರು ಮುಖ್ಯರಸ್ತೆ, ಶ್ರೀರಾಮನಗರ, ಅರವಿಂದ ಮಿಲ್ಸ್, ಸೆಲೆಬ್ರಿಟಿ ಹೌಸಿಂಗ್ ಲೇಔಟ್, ಕೋನಪ್ಪನ ಅಗ್ರಹಾರ ಗ್ರಾಮ, ಗುಲ್ಬರ್ಗಾ ಕಾಲೋನಿ, ಸಿಲ್ಕ್ ಬೋರ್ಡ್ ಜಂಕ್ಷನ್, ವೆಲ್ಲಿಂಗರ್ ಕಾಲೇಜು ಸುತ್ತಮುತ್ತಲಿನ ಪ್ರದೇಶಗಳು.

ನಾಳೆ ವಿಶ್ವಕರ್ಮ ಮೀಸಲಾತಿ ವಿಚಾರಸಂಕಿರಣ

ಬೆಂಗಳೂರು: ಸಾಮಾಜಿಕ ನ್ಯಾಯದಿಂದ ವಂಚಿತವಾಗಿರುವ ವಿಶ್ವಕರ್ಮ ಸಮಾಜಕ್ಕೆ ಪರಿಶಿಷ್ಟ ಪಂಗಡ ಮೀಸಲಾತಿ ಕಲ್ಪಿಸುವ ಕುರಿತು ಇದೇ 31ರಂದು ಶಾಸಕರ ಭವನದಲ್ಲಿ ವಿಚಾರಸಂಕಿರಣ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ತಿಳಿಸಿದೆ.

ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್ ಅವರು ಮೀಸಲಾತಿ ವರ್ಗೀಕರಣಗಳ ಬಗ್ಗೆ ಕಾರ್ಯಾಗಾರದಲ್ಲಿ ಮಾತನಾಡಲಿದ್ದಾರೆ. ವಿಶ್ವಕರ್ಮ ಸಮಾಜ ದೇಶದ ಬೇರೆ ರಾಜ್ಯಗಳಲ್ಲಿ ಯಾವ ಮೀಸಲಾತಿ ವರ್ಗದಲ್ಲಿದೆ, ಮೀಸಲಾತಿ ಬದಲಾದರೆ ಸಿಗುವ ಸೌಲಭ್ಯಗಳೇನು ಎಂಬ ಕುರಿತು ಅವರು ಮಾಹಿತಿ ನೀಡಲಿದ್ದಾರೆ ಎಂದು ಮಹಾಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಲೋಹಿತ್ ವೈ. ಕಲ್ಲೂರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಕಟಣೆ

ಟಿಮ್‌ಕೆನ್ ಇಂಡಿಯಾ ನಿಯಮಿತ
CIN - L29130KA1996PLC048230
ನೋಂದಣಿ ಕಛೇರಿ: ಸಂಖ್ಯೆ. 39-42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು-560 100 ದೂರವಾಣಿ : 080 41362000 ಫ್ಯಾಕ್ಸ್ : 080 41362010
ಇ-ಮೇಲ್: tilinvestor@timken.com ವೆಬ್‌ಸೈಟ್ : www.timken.com/en-in

ಸೂಚನೆ

ಕಂಪನಿಯ 35ನೇ ವಾರ್ಷಿಕ ಸಾರ್ವತ್ರಿಕ ಸಭೆಯನ್ನು ('ಎಜಿಎಂ') 23 ನೇ ಆಗಸ್ಟ್, 2022 ಮಂಗಳವಾರ ಮಧ್ಯಾಹ್ನ 3.00 ಗಂಟೆಗೆ (ಐಎಸ್‌ಟಿ) ವಿಡಿಯೋಕಾನ್ಫರೆನ್ಸಿಂಗ್ ('ವಿಸಿ') / ಇತರೆ ಆಡಿಯೋ ವಿಷುಯಲ್ ಮೀನ್ಸ್ ಮೂಲಕ ('ಒಎವಿಎಂ') ಏರ್ಪಡಿಸಲಾಗಿದೆ ಎಂದು 2013 (ಸದರಿ ಕಾಯ್ದೆ) ರ ಕಂಪನಿ ಕಾಯ್ದೆಯಲ್ಲಿ ಅನ್ವಯಿಸುವ ಎಲ್ಲಾ ನಿಬಂಧನೆಗಳ ಪ್ರಕಾರ ಹಾಗೂ ಇದರ ನಿಯಮಾನುಸಾರ ಮತ್ತು ಸೆಕ್ಯೂರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ನಿಬಂಧನೆ 2015 (ಲಿಸ್ಟಿಂಗ್ ನಿಬಂಧನೆ) ಅನ್ನು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದ ('ಎಂಸಿಎ') ಹಾಗೂ ಸೆಕ್ಯೊರಿಟಿಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ('ಸೆಬಿ') ಸುತ್ತೋಲೆಗಳಿಗೆ ಅನುಗುಣವಾಗಿ ಸೂಚನೆಯಲ್ಲಿ ತಿಳಿಸಿರುವಂತೆ ವ್ಯವಹಾರಗಳ ಬಗ್ಗೆ ಕಾರ್ಯ ಕಲಾಪಗಳನ್ನು ನಡೆಸುವುದು ಇದರ ಉದ್ದೇಶ. 35ನೇ ವಾರ್ಷಿಕ ಸಾರ್ವತ್ರಿಕ ಸಭೆಯ ಸೂಚನೆ ಹಾಗೂ 2021-22ರ ವಾರ್ಷಿಕ ವರದಿಯನ್ನು ಎಲ್ಲಾ ಸದಸ್ಯರಿಗೆ, ಕಂಪನಿ/ಭಾಗವಹಿಸುವ (ವವರ) ಡಿಪಾಸಿಟರ್‌ಗಳಲ್ಲಿ ನೋಂದಾಯಿಸಿರುವ ಇ-ಮೇಲ್ ಐಡಿಗಳಿಗೆ ಕಳುಹಿಸಲಾಗಿದೆ. 35ನೇ ಎಜಿಎಂ ಸೂಚನೆಯು ಹಾಗೂ 2021-22 ರ ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ www.timken.com/en-in ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ ಅಂದರೆ ಕಂಪನಿಯ ಷೇರುಗಳ ಪಟ್ಟಿ ಇರುವಲ್ಲಿ ಲಭ್ಯವಿದೆ. 35ನೇ ಎಜಿಎಂ ಸೂಚನೆಯು ನ್ಯಾಷನಲ್ ಸೆಕ್ಯೂರಿಟೀಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ವೆಬ್‌ಸೈಟ್ www.evoting.nsdl.com ನಲ್ಲಿಯು ಸಹ ಲಭ್ಯವಿದೆ.

ಸಮಯಕ್ಕೆ ಅನುಗುಣವಾಗಿ ಬದಲಾಯಿಸುವ ನಿಯಮಗಳು, 2014 ಮತ್ತು ನಿಬಂಧನೆ 44 ರ ಅನುಸಾರ ಸಂಸ್ಥೆಗಳ ನಿಯಮ 20 (ಆಡಳಿತ ವರ್ಗ ಹಾಗೂ ಆಡಳಿತ) ಸೆಕ್ಷನ್ 108 ರ ನಿಬಂಧನೆಗಳಿಗೆ ಅನ್ವಯ ಕಂಪನಿಯು ಎನ್‌ಎಸ್‌ಡಿಎಲ್‌ನೊಂದಿಗೆ 35ನೇ ವಾರ್ಷಿಕ ಸಾರ್ವತ್ರಿಕ ಸಭೆಯ ನಿರ್ಣಯಗಳಿಗಾಗಿ ಇ-ಮತ ಚಲಾಯಿಸಲು ವ್ಯವಸ್ಥೆ ಮಾಡಿದೆ. ಇ-ಮತ ಚಲಾವಣೆಯಲ್ಲಿ ಭಾಗವಹಿಸುವ ಸಂಪೂರ್ಣ ವಿಧಾನದ ಬಗ್ಗೆ ಎಜಿಎಂ ಸೂಚನೆಯಲ್ಲಿ ಲಭ್ಯವಿದೆ. ಭೌತಿಕ ಅಥವಾ ಡಿ ಮೆಟೀರಿಯಲೈಸ್ಡ್ ರೂಪದಲ್ಲಿ ಕಟ್ಟ ಕಡೆಯ ದಿನವಾದ 16 ಆಗಸ್ಟ್, 2022 ರಂದು ಕಂಪನಿಯ ಷೇರುಗಳನ್ನು ಹೊಂದಿರುವ ಕಂಪನಿಯ ಸದಸ್ಯರು ತಮ್ಮ ಮತವನ್ನು ಎಲೆಕ್ಟ್ರಾನಿಕ್ ಯಂತ್ರದ ಮೂಲಕ ಚಲಾಯಿಸಬಹುದು. ಯಾವುದೇ ವ್ಯಕ್ತಿಯು ವಾರ್ಷಿಕ ಸಾರ್ವತ್ರಿಕ ಸಭೆಯ (ಎಜಿಎಂ) ಸೂಚನೆಯನ್ನು ರವಾನಿಸಿದ ನಂತರ ಕಂಪನಿಯ ಷೇರುಗಳನ್ನು ಹೊಂದಿರುತ್ತಾರೆ. ಕಟ್ಟ ಕಡೆಯ ದಿನಾಂಕದಂದು ಅಂದರೆ 16ನೇ ಆಗಸ್ಟ್ 2022 ರಂದು ಸದಸ್ಯರಾದಲ್ಲಿ evoting.nsdl.co.in ಗೆ ತಮ್ಮ ಮನವಿಯನ್ನು ಕಳುಹಿಸಿ ಲಾಗಿನ್ ಐಡಿ ಹಾಗೂ ಪಾಸ್‌ವರ್ಡ್‌ಗಳನ್ನು ಪಡೆಯಬಹುದು.

ರಿಮೋಟ್ ಇ-ಮತ ಚಲಾವಣೆಯು 2022, 20 ನೇ ಆಗಸ್ಟ್ ಬೆಳಿಗ್ಗೆ 9.00 ಗಂಟೆಗೆ (ಐಎಸ್‌ಟಿ) ಪ್ರಾರಂಭವಾಗುವುದು ಹಾಗೂ 2022, 22ನೇ ಆಗಸ್ಟ್, ಸಂಜೆ 5.00 ಗಂಟೆಗೆ (ಐಎಸ್‌ಟಿ) ಮುಕ್ತಾಯಗೊಳ್ಳುವುದು. ನಂತರ ರಿಮೋಟ್ ಇ-ಮತ ವಿಧಾನವನ್ನು ನಿಷ್ಕ್ರಿಯಗೊಳಿಸಲಾಗುವುದು. ಮತ ಚಲಾವಣೆಯ ಫಲಿತಾಂಶವನ್ನು ಅನ್ವಯಿಸುವ ನಿಯಮದ ಪ್ರಕಾರವಾಗಿ ಘೋಷಿಸಲಾಗುವುದು ಹಾಗೂ ಇದನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ ಸಹ ಪ್ರಕಟಿಸಲಾಗುವುದು.

ರಿಮೋಟ್ ಇ-ಮತ ಚಲಾವಣೆ ಮೂಲಕ ಮತ ಚಲಾಯಿಸಿರುವ ಸದಸ್ಯರು 35ನೇ ವಾರ್ಷಿಕ ಸಾರ್ವತ್ರಿಕ ಸಭೆ (ಎಜಿಎಂ) ಯಲ್ಲಿ ಭಾಗವಹಿಸಬಹುದು ಆದರೆ ಪುನಃ ಮತ ಚಲಾಯಿಸಲು ಅವಕಾಶವಿರುವುದಿಲ್ಲ.

ಯಾವುದೇ ವಿಚಾರಣೆಗೆ ಅಥವಾ ಇ-ಮತ ಚಲಾವಣೆಯ ಬಗ್ಗೆ ಸಮಸ್ಯೆಗಳಿಗೆ ಆಗಿಂದಾಗೆ ಕೇಳಲ್ಪಡುವ ಪ್ರಶ್ನೆ ("ಎಫ್‌ಎಕ್ಯೂ") ಗಳನ್ನು ಗಮನಿಸಿ ಮತ್ತು www.evoting.nsdl.com ನ ಡೌನ್‌ಲೋಡಿಂಗ್ ಸೆಕ್ಷೆನಿನಲ್ಲಿ ಲಭ್ಯವಿರುವ ಇ-ಮತ ಮ್ಯಾನ್ಯುಯಲ್ ಅನ್ನು ಉಲ್ಲೇಖಿಸಬಹುದು. ಯಾವುದೇ ತೊಂದರೆ/ಕುಂದು ಕೊರತೆ ಇದ್ದಲ್ಲಿ, ಸದಸ್ಯರು ಕೆಳಸಹಿದಾರರನ್ನು tilinvestor@timken.com (ದೂರವಾಣಿ ಸಂಖ್ಯೆ.: 080-41362000) ಅಥವಾ ಆರ್‌ಟಿಎಯವರನ್ನು rta@cbmsl.com (ದೂರವಾಣಿ ಸಂಖ್ಯೆ.: 033-40116700 / 033-40116715) ಮೂಲಕ ಸಂಪರ್ಕಿಸಬಹುದು.

ಟಿಮ್‌ಕೆನ್ ಇಂಡಿಯ ನಿಯಮಿತ ಪರವಾಗಿ
ಸಹಿ/- ಮಂದಾರ್ ವಸಮತ್‌ಕರ್
ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ-ಕಾಂಪ್ಲಯನ್ಸ್

ಬೆಂಗಳೂರು
29 ಜುಲೈ, 2022

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು (ಆಡಿಟ್-ಪೂರ್ವ) ರವರ ಕಛೇರಿ,
ಯೋಜನೆ – ಕೇಂದ್ರ ವಿಭಾಗ, ಅನೆಕ್ಸ್-2 ಕಟ್ಟಡ, ಎನ್.ಆರ್.ಸ್ಕ್ವೇರ್, ಬೆಂಗಳೂರು-560002

ಸಂ. ಕಾಅ/ಯೋಕೇಂ/ಟೆಂಡರ್/01/2022-23 ದಿನಾಂಕ : 29-07-2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಇವರ ಪರವಾಗಿ, ಕಾರ್ಯಪಾಲಕ ಅಭಿಯಂತರರು (ಆಡಿಟ್-ಪೂರ್ವ) ಯೋಜನೆ ಕೇಂದ್ರ ಇವರು ಕೆಳಕಂಡ ಕೆಲಸಗಳಿಗಾಗಿ ಸಮಾಲೋಚಕರ ನೇಮಕಾತಿಗಾಗಿ ಪ್ರಸ್ತಾವನೆಗಳನ್ನು (ತಾಂತ್ರಿಕ ಮತ್ತು ಆರ್ಥಿಕ) ಆಹ್ವಾನಿಸಿದ್ದಾರೆ.

ಕ್ರ. ಸಂ.	ಯೋಜನೆಯ ಹೆಸರು	ಇಎಂಡಿ ಮೊತ್ತ (ರೂ.ಗಳಲ್ಲಿ)
1	"ಟೆಂಡರ್ ಶೂರ್ ಮಾರ್ಗಸೂಚಿಗಳ ಅಡಿಯಲ್ಲಿ ವೈಟ್ ಟಾಪಿಂಗ್‌ನೊಂದಿಗೆ ತರಳಬಾಳು ರಸ್ತೆ (ಮುಖ್ಯಮಂತ್ರಿಗಳ ನಿವಾಸದ ಮೂಲಕ ಬಳ್ಳಾರಿ ರಸ್ತೆಯಿಂದ ರವೀಂದ್ರನಾಥ ಟ್ಯಾಗೋರ್ ವೃತ್ತದವರೆಗೆ) ಮತ್ತು ತರಳಬಾಳು ರಸ್ತೆ (ವಾರ್ಡ್ ಸಂ.46ರ ಜೆಸಿ ನಗರ (ಬಿಎಂಟಿಸಿ ಡಿಪೋ) ದಲ್ಲಿನ ಆರ್‌ಟಿ ನಗರ ಮುಖ್ಯ ರಸ್ತೆಯಿಂದ ಸಿಟಿಜನ್ ಪಾರ್ಕ್‌ವರೆಗೆ) ರಸ್ತೆಯ ಸಮಗ್ರ ಅಭಿವೃದ್ಧಿ" ಕೆಲಸಕ್ಕಾಗಿ ನಿರ್ಮಾಣ ಮೇಲ್ವಿಚಾರಣೆ, ಯೋಜನಾ ನಿರ್ವಹಣೆ ಮತ್ತು ಗುಣಮಟ್ಟ ನಿಯಂತ್ರಣಗಳಿಗಾಗಿ ಸಮಾಲೋಚನಾ ಸೇವೆಗಳು	51,000/–
2	ಟೆಂಡರ್ ಶೂರ್ ಮಾರ್ಗಸೂಚಿಗಳ ಅಡಿಯಲ್ಲಿ ವೈಟ್ ಟಾಪಿಂಗ್‌ನೊಂದಿಗೆ ನಾಗರಭಾವಿ 80 ಅಡಿ ರಸ್ತೆಯ ಹೊರವರ್ತುಲ ರಸ್ತೆಯಿಂದ ಕೆಂಗುಂಟೆ ವೃತ್ತದವರೆಗೆ ರಸ್ತೆಯ ಸಮಗ್ರ ಅಭಿವೃದ್ಧಿ	35,000/–
3	ಥಣಿಸಂದ್ರ ಮುಖ್ಯ ರಸ್ತೆಯಲ್ಲಿ ನಾಗಾವಾರ ವೃತ್ತದಿಂದ ಬಾಗಲೂರು ಕ್ರಾಸ್‌ವರೆಗೆ ಪಾದಚಾರಿಮಾರ್ಗದ ಕಾಮಗಾರಿಗಳಿಗೆ ಅಭಿವೃದ್ಧಿಗಳು (ಬಾಕಿ ಉಳಿದ ಕೆಲಸಗಳು)	44,000/–
4	ಟೆಂಡರ್ ಶೂರ್ ಮಾರ್ಗಸೂಚಿಗಳ ಅಡಿಯಲ್ಲಿ ಗುಬ್ಬಿ ತೋಟದಪ್ಪ ರಸ್ತೆಯ ಶಾಂತಲಾ ವೃತ್ತದಿಂದ ಖೋಡೇಸ್ ವೃತ್ತದವರೆಗೆ ಸಮಗ್ರ ಅಭಿವೃದ್ಧಿ (ಬಾಕಿ ಉಳಿದ ಕೆಲಸಗಳು)	20,000/–
5	ಹಂತ-2, ಪ್ಯಾಕೇಜ್-3ರ ಅಡಿಯಲ್ಲಿ ಕೈಗೊಂಡ ರಸ್ತೆಗಳ ವೈಟ್ ಟಾಪಿಂಗ್‌ಗಾಗಿ ಉಳಿದ ಕೆಲಸಗಳಿಗೆ ಹೆಚ್ಚುವರಿ ಅನುದಾನ	43,000/–
6	100 ಅಡಿ ರಸ್ತೆ ಇಂದಿರಾನಗರ (ಹಂತ-2, ಪ್ಯಾಕೇಜ್-7), ಸಿಎಂಹೆಚ್ ರಸ್ತೆ (ಹಂತ-2, ಪ್ಯಾಕೇಜ್-6) ಮತ್ತು ಒಳವರ್ತುಲ ರಸ್ತೆ (ಹಂತ-2, ಪ್ಯಾಕೇಜ್-8) ರಸ್ತೆಗಳ ವೈಟ್ ಟಾಪಿಂಗ್‌ನ ಬಾಕಿ ಉಳಿದ ಭಾಗ	20,000/–

ವೇಳಾಪಟ್ಟಿ : (1) ಆರ್‌ಎಫ್‌ಪಿ ದಾಖಲೆಗಳ ಲಭ್ಯತೆ : 01-08-2022 ರಿಂದ (2) ವಿಚಾರಣೆಗಳನ್ನು ಇ-ಪೋರ್ಟಲ್‌ನಲ್ಲಿ ಸ್ವೀಕರಿಸಲು ಕೊನೆಯ ದಿನಾಂಕ : 08-08-2022 ರಂದು 17.30 ಗಂಟೆಗಳವರೆಗೆ. (3) ಮುಖ್ಯ ಇಂಜಿನಿಯರ್ (ಯೋಜನೆ ಕೇಂದ್ರ) ಇವರ ಕಛೇರಿಯಲ್ಲಿ ಬಿಡ್-ಪೂರ್ವ ಸಭೆಯ ದಿನಾಂಕ : 10-08-2022 ರಂದು 15:30 ಗಂಟೆ. (4) ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 16-08-2022 ರಂದು 17.30 ಗಂಟೆಗಳವರೆಗೆ. (5) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ : 18-08-2022, 11.30 ಗಂಟೆ.

ಆಸಕ್ತ ಅರ್ಹ ಸಮಾಲೋಚಕರು ಹೆಚ್ಚಿನ ಮಾಹಿತಿಗಳನ್ನು, ಕಾರ್ಯಪಾಲಕ ಅಭಿಯಂತರವರು (ಆಡಿಟ್-ಪೂರ್ವ) ಇವರ ಕಛೇರಿ, ಯೋಜನೆ ಕೇಂದ್ರ ವಿಭಾಗ, ಅನೆಕ್ಸ್-2 ಕಟ್ಟಡ, ಎನ್.ಆರ್.ಸ್ಕ್ವೇರ್, ಬೆಂಗಳೂರು-560002, ದೂರವಾಣಿ : 9480683985 ಇಲ್ಲಿಂದ ಕಛೇರಿಯ ಸಮಯದಲ್ಲಿ ಯಾವುದೇ ಕೆಲಸದ ದಿನಗಳಂದು ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು (ಆಡಿಟ್-ಪೂರ್ವ)
ಯೋಜನೆ – ಕೇಂದ್ರ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕೋವಿಡ್-19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080-27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/09/2021-22
ಹೊಯೋಪ್ರಾ/ಭೂಉಬ/07/2022-23
ದಿನಾಂಕ: 26-07-2022

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30-01-2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ದೇವನಗೊಂದಿ ಗ್ರಾಮದ

ಕ್ರ. ಸಂ.	ಭೂ ಮಾಲೀಕರು / ಜಿ.ಪಿ.ಎ. ದಾರರ ಹೆಸರು	ಸ.ನಂ.	ವಿಸ್ತೀರ್ಣ ಎ-ಗುಂ
1	ಶ್ರೀ ಡಿ.ಸಿ. ರಾಘವೇಂದ್ರ ಮತ್ತು ಡಿ.ಸಿ. ರಾಹುಲ್ ಗೌಡ	94/2	00-38
2		94/5	00-05
3		89/1	00-11
4		89/2	01-06
5	ಶ್ರೀ ಸಂಪಂಗಿರಾಮಯ್ಯ	88/9	00-01
6	ಶ್ರೀ ವಿ. ರಾಜೇಶ್	93/2 ರ ಪೈಕಿ	00-10½
7	ಶ್ರೀ ಡಿ.ಆರ್. ನಾರಾಯಣಪ್ಪ	93/5	00-20

ಷರಾ:– ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದೆಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ ಎಂದು ಅರ್ಜಿದಾರರು ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/1568/ಅಡ್ವಟೋರ್/2022-23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

❦ ಸುಭಾಷಿತ ❦
ನಿಮ್ಮನ್ನು ನೀವು ಜಯಿಸಿ, ಆಗ ಇಡೀ ಜಗತ್ತೇ ನಿಮ್ಮದಾಗುತ್ತದೆ.
–ಸ್ವಾಮಿ ವಿವೇಕಾನಂದ

ಸುದ್ದಿಮಾಧ್ಯಮಗಳ ಸ್ವೇಚ್ಛಾಚಾರ ಸಿಜೆಐ ಟೀಕೆ ಎಚ್ಚರಿಕೆಯ ಗಂಟೆ

ಸುದ್ದಿವಾಹಿನಿಗಳು ಮತ್ತು ಸಾಮಾಜಿಕ ಜಾಲತಾಣಗಳು 'ಕಾಂಗರೂ ನ್ಯಾಯಾಲಯ'ಗಳನ್ನು (ವ್ಯಕ್ತಿಯೊಬ್ಬರಿಗೆ ತಪ್ಪಿತಸ್ಥ ಎಂಬ ಹಣೆಪಟ್ಟಿ ಕಟ್ಟುವುದಕ್ಕಾಗಿ ಅನಧಿಕೃತವಾಗಿ ರೂಪಿಸಿದ ನ್ಯಾಯಾಲಯ) ನಡೆಸುತ್ತಿವೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಎನ್.ವಿ. ರಮಣ ಟೀಕಿಸಿದ್ದಾರೆ. ಮಾಧ್ಯಮದ ನಡತೆಯನ್ನು ಕುರಿತಂತೆ ನ್ಯಾಯಾಂಗದಿಂದ ಟೀಕೆ ಬಂದಿರುವುದು ಇದು ಮೊದಲೇನಲ್ಲ. ರಮಣ ಅವರು ಭಾಷಣವೊಂದರಲ್ಲಿ ಈ ಟೀಕೆ ಮಾಡಿದ್ದಾರೆ. ವಿಚಾರಣೆಯ ಸಂದರ್ಭದಲ್ಲಿಯೂ ಕೆಲವು ನ್ಯಾಯಮೂರ್ತಿಗಳು ಈ ಹಿಂದೆ ಇಂತಹ ವಿಮರ್ಶೆಗಳನ್ನು ಮಾಡಿದ್ದರು. ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿರುವ ಅಪರಾಧ ಪ್ರಕರಣಗಳ ಕುರಿತು ಸುದ್ದಿವಾಹಿನಿಗಳಲ್ಲಿ ಚರ್ಚೆಗಳನ್ನು ನಡೆಸುವುದು ಅಪರಾಧ ನ್ಯಾಯ ವ್ಯವಸ್ಥೆಯಲ್ಲಿ ನೇರವಾಗಿ ಹಸ್ತಕ್ಷೇಪ ಮಾಡಿದಂತೆ ಆಗುತ್ತದೆ ಎಂದು ನ್ಯಾಯಮೂರ್ತಿ ಯು.ಯು. ಲಲಿತ್ ಅವರು ಕೆಲ ವಾರಗಳ ಹಿಂದೆ ಹೇಳಿದ್ದರು. ಸಾಕ್ಷಿ ಮತ್ತು ಸಾಕ್ಷ್ಯಗಳಿಗೆ ಸಂಬಂಧಿಸಿ ಚರ್ಚಿಸಲು ಸಾರ್ವಜನಿಕ ವೇದಿಕೆಯು ಸರಿಯಾದ ಸ್ಥಳ ಅಲ್ಲ ಎಂದೂ ಹೇಳಲಾಗಿತ್ತು. ರಮಣ ಅವರು ಕೂಡ ಇದೇ ಧಾಟಿಯಲ್ಲಿ ಹೇಳಿಕೆ ನೀಡಿದ್ದಾರೆ. ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇರುವ ಪ್ರಕರಣಗಳ ಬಗ್ಗೆ 'ಸರಿಯಾದ ಮಾಹಿತಿ ಇಲ್ಲದ, ಪೂರ್ವಗ್ರಹಪೀಡಿತವಾದ, ಕಾರ್ಯಸೂಚಿ ಆಧರಿಸಿ ಮಾಧ್ಯಮಗಳಲ್ಲಿ ಚರ್ಚೆ ನಡೆಸುವುದು' ನ್ಯಾಯದಾನ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಅವರು ಹೇಳಿದ್ದಾರೆ. ಮಾಧ್ಯಮವು ತನ್ನ ಹೊಣೆಗಾರಿಕೆಯಿಂದ ನುಣುಚಿಕೊಂಡಿದೆ ಮತ್ತು ಪ್ರಜಾಪ್ರಭುತ್ವವನ್ನು ಎರಡು ಹೆಜ್ಜೆ ಹಿಂದೆ ಸರಿಯುವಂತೆ ಮಾಡಿದೆ. 'ಇದು ಜನರು ಮತ್ತು ವ್ಯವಸ್ಥೆಯನ್ನು ಬಾಧಿಸಿದೆ' ಎಂಬುದು ಅವರ ಅಭಿಪ್ರಾಯವಾಗಿದೆ.

ಸಿಜೆಐ ರಮಣ ಅವರು ಗಂಭೀರ ಸಮಸ್ಯೆಯೊಂದರತ್ತ ಬೊಟ್ಟು ಮಾಡಿದ್ದಾರೆ. ಅದರ ಬಗ್ಗೆ ಗಮನ ಹರಿಸಬೇಕಾದುದು ಅಗತ್ಯ

ಏನನ್ನು ವರದಿ ಮಾಡಬೇಕು ಮತ್ತು ಪ್ರೇಕ್ಷಕರಿಗೆ ತಿಳಿಸಬೇಕು ಎಂಬುದರ ಕುರಿತು ಯಾವುದೇ ರೀತಿಯ ಉತ್ತರದಾಯಿತ್ವ ಇಲ್ಲದ ಸುದ್ದಿವಾಹಿನಿಗಳು ಮತ್ತು ಸಾಮಾಜಿಕ ಮಾಧ್ಯಮಕ್ಕೆ ಸಂಬಂಧಿಸಿ ಮುಖ್ಯ ನ್ಯಾಯಮೂರ್ತಿಯವರು ಈ ಹೇಳಿಕೆ ನೀಡಿದ್ದಾರೆ. ಸುದ್ದಿವಾಹಿನಿಗಳಲ್ಲಿ ಪ್ರಸಾರವಾಗುವ ಚರ್ಚೆಗಳಲ್ಲಿ ಪಕ್ಷಪಾತದಿಂದ ಕೂಡಿದ ಅಭಿಮತ ಇರುತ್ತದೆ, ಅಪಾಯದ ಹೇಳಿಕೆಗಳಿರುತ್ತವೆ, ಸಂಘರ್ಷಕ್ಕೆ ಕುಮ್ಮಕ್ಕು ನೀಡುವಂತಹ, ಉದ್ರಿಕ್ತಗೊಳಿಸುವಂತಹ ಧಾಟಿಯು ಇರುತ್ತದೆ. ಇವು ಯಾವುದೇ ಜ್ಞಾನವನ್ನು ನೀಡುವುದಿಲ್ಲ ಮತ್ತು ಯಾರನ್ನೂ ಸುಧಾರಿಸುವುದು ಕೂಡ ಇಲ್ಲ. ಸಾಮಾನ್ಯವಾಗಿ ರಾಜಕೀಯಕ್ಕೆ ಸಂಬಂಧಿಸಿದ ಪಕ್ಷಪಾತ ನಿಲುವು ಇರುತ್ತದೆ ಮತ್ತು ಯಾವ ಕಡೆಗೆ ವಾಲಿಕೊಂಡಿದೆ ಎಂಬುದೇ ಸುದ್ದಿವಾಹಿನಿ ಚರ್ಚೆಯ ಕಡೆ ನಡೆಯಬೇಕು ಎಂಬುದನ್ನು ನಿರ್ಧರಿಸುತ್ತದೆ. ಬಾಲಿವುಡ್ ನಟ ಸುಶಾಂತ್ ಸಿಂಗ್ ರಜಪೂತ್ ಅವರ ಸಾವು, ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧದ ಪ್ರತಿಭಟನೆ, ದೆಹಲಿಯಲ್ಲಿ 2020ರ ಫೆಬ್ರುವರಿಯಲ್ಲಿ ನಡೆದ ಗಲಭೆಯ ಕುರಿತಾಗಿ ನಡೆದ ಕೆಲವು ಚರ್ಚೆಗಳು ಸುದ್ದಿವಾಹಿನಿಗಳ ಇಂತಹ ಚರ್ಚೆಯ ಇತ್ತೀಚಿನ ಕೆಲವು ಉದಾಹರಣೆಗಳು. ಸುದ್ದಿವಾಹಿನಿಗಳ ನಿರೂಪಕರು ಮತ್ತು ಚರ್ಚೆಯಲ್ಲಿ ಭಾಗವಹಿಸುವವರು ನ್ಯಾಯಾಧೀಶರ ಪಾತ್ರ ವಹಿಸುತ್ತಾರೆ ಮತ್ತು ಘಟನೆಗಳು, ವಿಚಾರಗಳು, ವ್ಯಕ್ತಿಗಳು ಹಾಗೂ ಸಮುದಾಯಗಳ ಬಗ್ಗೆ ಜನರನ್ನು ದಾರಿ ತಪ್ಪಿಸುತ್ತಾರೆ ಹಾಗೂ ಪೂರ್ವಗ್ರಹ ತುಂಬುತ್ತಾರೆ. ಮಾಧ್ಯಮಗಳು ಇಂತಹ ವರ್ತನೆಯನ್ನು ಬಿಡಬೇಕು. ಇದು, ಮಾಧ್ಯಮದ ವಿಶ್ವಾಸಾರ್ಹತೆಗೆ ಒಳಿತನ್ನು ಮಾಡುತ್ತದೆ.

ಸಾಮಾಜಿಕ ಮಾಧ್ಯಮವು ಇನ್ನೂ ಹೆಚ್ಚು ಕೆಟ್ಟ ಹೊಣೆಗೇಡಿ. ಇದು ಸಂಘಟಿತವಲ್ಲದ ವೇದಿಕೆ. ಅಲ್ಲಿ ಇರುವವರಿಗೆ ಒಂದು ರೀತಿಯ ಅನಾಮಧೇಯತೆ ಇರುತ್ತದೆ. ಹಾಗಾಗಿ, ಹೊಣೆಗೇಡಿತನ ಹಾಗೂ ಪ್ರಚೋದನಕಾರಿ ವರ್ತನೆ ಇನ್ನೂ ಹೆಚ್ಚೇ ಇದೆ. ರಾಜಕೀಯ ಪಕ್ಷಗಳು ಪ್ರಾಯೋಜಿಸಿದ ದೊಡ್ಡ ಸಂಘಟನೆಗಳು ಸಾಮಾಜಿಕ ಮಾಧ್ಯಮದ ಹಿಂದೆ ಕೆಲಸ ಮಾಡುತ್ತವೆ. ಈ ಮಾಧ್ಯಮಗಳನ್ನು ತಮ್ಮ ಕುರಿತ ಪ್ರಚಾರ, ಇತರರನ್ನು ಕುರಿತ ಅಪಪ್ರಚಾರ ಮತ್ತು ತಮಗೆ ಆಗದವರಿಗೆ ಅಗೌರವ ತರುವುದಕ್ಕಾಗಿ ಒಂದು ಆಯುಧವಾಗಿ ಬಳಸಲಾಗುತ್ತಿದೆ. ಸುದ್ದಿವಾಹಿನಿಗಳಿಗಿಂತಲೂ ಸಾಮಾಜಿಕ ಮಾಧ್ಯಮ ಹೆಚ್ಚು ಕಡಿವಾಣ ಇಲ್ಲದ್ದಾಗಿದೆ ಹಾಗೂ ಸ್ವಯಂ ನಿಯಂತ್ರಣವಂತೂ ಇಲ್ಲವೇ ಇಲ್ಲ. ಅಲ್ಲದೆ, ಈ ಎರಡರ ಮಧ್ಯೆ ಪರಸ್ಪರ ನಂಟೂ ಇದೆ. ಮುದ್ರಣ ಮಾಧ್ಯಮದಲ್ಲಿಯೂ ಎಲ್ಲವೂ ಸರಿ ಇದೆ ಎಂದು ಹೇಳಲಾಗದು. ಆದರೆ, ಇಲ್ಲಿ ಕಾನೂನಿಗೆ ಸ್ವಲ್ಪಮಟ್ಟಿನ ಉತ್ತರದಾಯಿತ್ವ ಇದೆ. ಮುಖ್ಯ ನ್ಯಾಯಮೂರ್ತಿಯವರೇ ಹೇಳಿದಂತೆ, ನ್ಯಾಯಾಂಗದ ವ್ಯಾಪ್ತಿಯಲ್ಲಿರುವ ವಿಚಾರಗಳು ಅಥವಾ ಮಾನಹಾನಿಕಾರಕ ವಿಚಾರಗಳಿಗೆ ಸಂಬಂಧಿಸಿ ಇಲ್ಲಿ ಹೆಚ್ಚು ಎಚ್ಚರಿಕೆ ಇದೆ. ಮುಖ್ಯ ನ್ಯಾಯಮೂರ್ತಿಯವರು ಗಂಭೀರ ಸಮಸ್ಯೆಯೊಂದರತ್ತ ಬೊಟ್ಟು ಮಾಡಿದ್ದಾರೆ. ಆದರೆ, ಅದಕ್ಕೆ ಪರಿಹಾರ ಕಂಡುಕೊಳ್ಳುವುದು ಅಷ್ಟು ಸುಲಭವಲ್ಲ. ಸರ್ಕಾರದ ದುರ್ಬಳಕೆಗೆ ನಿಲುಕದ ರೀತಿಯ ಪರಿಣಾಮಕಾರಿ ನಿಯಂತ್ರಣ ವ್ಯವಸ್ಥೆ ರೂಪಿಸುವುದು ಕೂಡ ಕಷ್ಟವೇ ಇದೆ.

ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯು ನಮ್ಮ ವರ್ತನೆಯಲ್ಲಿ ಸಕಾರಾತ್ಮಕ ಪರಿವರ್ತನೆ ತರಬೇಕು

ಅಮೃತ ಮಹೋತ್ಸವ: ತಲುಪಬೇಕಾದ್ದೇನು?

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಇದು, ಸ್ವಾತಂತ್ರ್ಯದ ಅಮೃತ ಮಹೋತ್ಸವ ವರ್ಷ. ಸದ್ಯಕ್ಕೆ ಇದು ಬ್ರಿಟಿಷರ ವಿರುದ್ಧ ಹೋರಾಡಿದವರನ್ನು ಹೊಗಳುವ ಕಾರ್ಯಕ್ರಮದಂತೆ ಬಹುಮಟ್ಟಿಗೆ ಭಾಸವಾಗುತ್ತಿದೆ. ಅವರು ಹೊಗಳಿಕೆಗೆ ಅರ್ಹರೆಂಬುದು ನಿಜ. ಹೊಗಳಿಕೆಗೂ ಮೀರಿದ್ದಕ್ಕೆ ಅರ್ಹರು. ದೇಶದ ಸ್ವಾತಂತ್ರ್ಯ ಹೋರಾಟವು ಖಂಡಿತವಾಗಿಯೂ ಸ್ಫೂರ್ತಿಯ ಪ್ರಮುಖ ಸೆಲೆಗಳಲ್ಲೊಂದು. ಆದರೆ ಇದನ್ನು ಸಮಾಜಕ್ಕೆ ಹೇಗೆ ತಲುಪಿಸಬೇಕು ಎನ್ನುವುದಕ್ಕೆ ಸ್ಪಷ್ಟ ಚಿಂತನಾ ಕ್ರಮ ಬೇಕು.

ಸ್ವಾತಂತ್ರ್ಯಕ್ಕಾಗಿ ಹೋರಾಟ ಎಂದರೆ 'ದಾಸ್ಯಕ್ಕೆ ಒಳಗಾದವರು' ಸಾಮ್ರಾಜ್ಯಶಾಹಿ ಪ್ರಭುತ್ವದ ವಿರುದ್ಧ ಮಾಡಿದ ಹೋರಾಟ. ದಾಸ್ಯಕ್ಕೆ ಒಳಗಾದವರಿಗೆ ಯಜಮಾನನ ವಿರುದ್ಧ ಹೋರಾಡಲು ಕಾನೂನಿನ ಶಕ್ತಿ ಇರುವುದಿಲ್ಲ. ಆದರೆ ಸ್ವತಂತ್ರ ರಾಜರು, ಬ್ರಿಟಿಷರ ವಿರುದ್ಧ ಹೋರಾಟ ಮಾಡಿದಾಗ ಅವರ ಸೈನಿಕರಿಗೆ ರಾಜನ ಕಾನೂನಿನ ಶಕ್ತಿ ಇರುತ್ತದೆ. ಒಬ್ಬ ರಾಜ ಇನ್ನೊಬ್ಬ ರಾಜನ ವಿರುದ್ಧ ಯುದ್ಧ ಮಾಡುವುದು ಅಪರಾಧ ಅಲ್ಲ. ಆದರೆ ದಾಸ್ಯಕ್ಕೆ ಒಳಗಾದವನು ಯಜಮಾನನ ವಿರುದ್ಧ ಹೋರಾಡುವುದು ಅಪರಾಧ. ಆದ್ದರಿಂದ ರಾಜರು ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕುವ ಮೊದಲು ಬ್ರಿಟಿಷರೊಂದಿಗೆ ನಡೆಸಿದ ಹೋರಾಟವು ಯುದ್ಧವೇ ವಿನಾ ಸ್ವಾತಂತ್ರ್ಯ ಹೋರಾಟ ಅಲ್ಲ. ಸಹಾಯಕ ಸೈನ್ಯ ಪದ್ಧತಿಯು ಬ್ರಿಟಿಷ್ ಪರಮಾಧಿಕಾರವನ್ನು ಸ್ವೀಕರಿಸುವ ನಿಬಂಧನೆಯನ್ನು ಹೊಂದಿದ್ದುದರಿಂದ ದಾಸ್ಯಕ್ಕೆ ಸಂಬಂಧಿಸಿದ ಒಡಂಬಡಿಕೆಯನ್ನು ಸ್ವೀಕರಿಸಿದ ರಾಜರು ನಂತರ ನಡೆಸಿದ್ದು ಸ್ವಾತಂತ್ರ್ಯ ಹೋರಾಟ. ಇದು ರಾಜಕೇಂದ್ರಿತ, ಸೈನಿಕ ಕೇಂದ್ರಿತ, ಜನಕೇಂದ್ರಿತವಾದ ಮೂರು ಹಂತಗಳಲ್ಲಿ ನಡೆಯಿತು. ಮೊದಲ ಹಂತದಲ್ಲಿ ರಾಜಕೇಂದ್ರಿತ, ಎರಡನೆಯ ಹಂತದಲ್ಲಿ 1857ರ ಸೈನಿಕ ಕ್ರಾಂತಿಯಂತಹ ಹೋರಾಟಗಳು ಸೈನಿಕ ಕೇಂದ್ರಿತ, ಮೂರನೇ ಹಂತದಲ್ಲಿ ಬಾಲಗಂಗಾಧರ ತಿಲಕರು ಬೀರಿದ ಪ್ರಭಾವದ ಪರಿಣಾಮವಾಗಿ ಜನಕೇಂದ್ರಿತ ಹೋರಾಟವಾಯಿತು.

ಜನಕೇಂದ್ರಿತ ಹೋರಾಟದ ಪ್ರಾರಂಭದ ಹಂತ 'ಸ್ವಯಮಾಡಳಿತ' ಅಥವಾ 'ಹೋಂ ರೂಲ್'ಗಾಗಿನ ಬೇಡಿಕೆಯಾಗಿತ್ತು. ಬ್ರಿಟಿಷರು 'ಡೊಮಿನಿಯನ್ ಸ್ಥಾನಮಾನ' ಕೊಟ್ಟರೆ ಸಾಕಿತ್ತು. ಅಂದರೆ ಸಾಂಕೇತಿಕವಾಗಿ ಭಾರತವು ಬ್ರಿಟಿಷ್ ಚಕ್ರಾಧಿಪತ್ಯದ ಒಳಗೆಯೇ ಇದ್ದು ಆಡಳಿತಾಧಿಕಾರವು ಭಾರತೀಯರಿಗೆ ಸಿಕ್ಕರೆ ಅದು ಭಾರತೀಯರ ದೃಷ್ಟಿಯಲ್ಲಿ 'ಸ್ವಯಮಾಡಳಿತ'. ಆಗ ಭಾರತವು ಬ್ರಿಟಿಷರಿಗೆ 'ಡೊಮಿನಿಯನ್'. ಲಾಹೋರ್ ಕಾಂಗ್ರೆಸ್ ಅಧಿವೇಶನದಲ್ಲಿ ಜವಾಹರಲಾಲ್ ನೆಹರೂ, 'ಪೂರ್ಣ ಸ್ವರಾಜ್ಯ'ದ ಘೋಷಣೆ ಮಾಡಿದ ನಂತರದ ಹೋರಾಟಗಳು ಬ್ರಿಟಿಷ್ ಪರಮಾಧಿಕಾರದ ಅಸ್ತಿತ್ವವನ್ನೆ ತಿರಸ್ಕರಿಸಿದ ಪೂರ್ಣ ಸ್ವಾತಂತ್ರ್ಯಕ್ಕಾಗಿನ ಹೋರಾಟ. ತಾತ್ವಿಕವಾಗಿ ಅದು ಉಪ್ಪಿನ ಸತ್ಯಾಗ್ರಹದಲ್ಲೇ ಈಡೇರಿದೆ. ಯಜಮಾನನ ಆದೇಶವನ್ನು ಉಲ್ಲಂಘಿಸಿ ಉಪ್ಪು ತಯಾರಿಸಲು ತಾನು ಸಮರ್ಥನಿದ್ದೇನೆ ಎಂದು ಇಡೀ ವಿಶ್ವಕ್ಕೆ ಗಾಂಧೀಜಿ ತೋರಿಸಿದಾಗಲೂ ಬ್ರಿಟಿಷರಿಗೆ ಅವರನ್ನು ಅಪರಾಧಿಯಾಗಿ ಮಾಡಲು ಆಗದೆ ಇರ್ವಿನ್‌ರೊಂದಿಗೆ ಒಪ್ಪಂದಕ್ಕೆ ಕರೆದ ಮೇಲೆ ತಾತ್ವಿಕವಾಗಿ ದಾಸ್ಯ ಉಳಿಯದು.

ಸ್ವಾತಂತ್ರ್ಯ ಹೋರಾಟವು ಜನಕೇಂದ್ರಿತವಾದಾಗ ಹೋರಾಟಕ್ಕಾಗಿ ರೂಪುಗೊಂಡ 'ನಾವೆಲ್ಲರೂ ಒಂದೇ' ಎಂಬ ಭಾವದಿಂದ ಹುಟ್ಟಿದ ರಾಷ್ಟ್ರೀಯತೆ ಇಂದಿಗೂ ಪ್ರಸ್ತುತ. ಭಾರತದಂತಹ ಬಹುರೂಪದ ಭೂಭಾಗದಲ್ಲಿ ಅಂತಿಮ ಹಂತದಲ್ಲಿ ನಡೆದ ದೇಶೀಯ ಸಂಸ್ಥಾನಗಳ ವಿಲೀನವು ಮಹಾನ್ ಸಾಧನೆ. ಭಾರತದ ಸಂವಿಧಾನ ಸಭೆಯನ್ನು ರೂಪಿಸಿದ ಎ.ವಿ. ಅಲೆಕ್ಸಾಂಡರ್, ಪೆಥಿಕ್ ಲಾರೆನ್ಸ್, ಕ್ರಿಪ್ಸ್‌ರನ್ನೊಳಗೊಂಡ ಕ್ಯಾಬಿನೆಟ್ ನಿಯೋಗದ ಯೋಜನೆಯ ಮೇರೆಗೆ ವಿಲೀನಗೊಂಡ ರಾಜರು, ಒಳಾಡಳಿತಕ್ಕಾಗಿ ಕಾಶ್ಮೀರದ ಮಾದರಿಯಲ್ಲಿ ತಮ್ಮದೇ ಪ್ರತ್ಯೇಕ ಸಂವಿಧಾನ ಸಭೆಯನ್ನು ರೂಪಿಸಲು ಅವಕಾಶವಿತ್ತು. ಆದರೆ ಮೈಸೂರು, ತಿರುವಾಂಕೂರು, ಸೌರಾಷ್ಟ್ರವನ್ನು ಹೊರತುಪಡಿಸಿ ಯಾವ ರಾಜರೂ ತಮ್ಮದೇ ಸಂವಿಧಾನ ಸಭೆಯನ್ನು ರಚಿಸಲಿಲ್ಲ. ನಂತರ ಇವರ ಮನವೊಲಿಸಿ ಒಂದೇ ಸಂವಿಧಾನದ ಅಡಿ ಎಲ್ಲ ಸಂಸ್ಥಾನಗಳನ್ನೂ (ಕಾಶ್ಮೀರದ ಹೊರತಾಗಿ) ಒಳಗೊಳಿಸಲಾಯಿತು. ಬಹುಶಃ 1798ರಲ್ಲಿ ಸಹಾಯಕ ಸೈನ್ಯ ಪದ್ಧತಿಯು ಜಾರಿಗೆ ಬಂದು ದೇಶೀಯ ರಾಜರ ಸೈನಿಕ ಶಕ್ತಿ ದುರ್ಬಲವಾಗದೆ ಇದ್ದರೆ ಈ ವಿಲೀನ ಕೂಡ ಸಾಧ್ಯವಿರಲಿಲ್ಲ.

ಹೀಗೆ ವಿಲೀನಗೊಂಡು, ಎಲ್ಲ ಬಹುತ್ವಗಳನ್ನೂ ಉಳಿಸಿಕೊಂಡು, ಒಂದು ರಾಷ್ಟ್ರೀಯತೆಯ ಆಶ್ರಯದಲ್ಲಿ ಭಾರತೀಯ ಒಕ್ಕೂಟ ರಚನೆಯಾದದ್ದು ಸ್ವಾತಂತ್ರ್ಯ ಹೋರಾಟದ ಮಹತ್ತರ ಸಾಧನೆ. ಇದರ ಅರಿವನ್ನು ಇಂದಿನ ತಲೆಮಾರಿನಲ್ಲಿ ಬೆಳೆಸಲು ಅಮೃತ ಮಹೋತ್ಸವ ಕಾರಣವಾಗಬೇಕು.

ಸ್ವಾತಂತ್ರ್ಯ ಹೋರಾಟಗಾರರಿಗೆಲ್ಲ ನೋವುಂಟುಮಾಡಬಹುದಾದ ಕಾರ್ಯವಿಧಾನವು ಅಮೃತ ಮಹೋತ್ಸವದ ಸಂದರ್ಭದಲ್ಲಿ ನಡೆಯುತ್ತಿದೆ. ಅದೇನೆಂದರೆ ಸ್ವಾತಂತ್ರ್ಯ ಹೋರಾಟಗಾರರನ್ನು ವಿಭಿನ್ನ ಆಲೋಚನಾ ಕ್ರಮದ ತಂಡಗಳು ಹಂಚಿಕೆ ಮಾಡಿಕೊಂಡು ತಮ್ಮ ಸ್ವಾತಂತ್ರ್ಯ ಹೋರಾಟಗಾರರು, ಎದುರಾಳಿ ಕಡೆಯ ಸ್ವಾತಂತ್ರ್ಯ ಹೋರಾಟಗಾರರು ಎಂದು ಕೆಸರೆರಚುವುದು ನಡೆದಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ವಿಭಿನ್ನ ಆಲೋಚನಾ ಕ್ರಮದವರು ಇದ್ದರು. ಚಂದ್ರಶೇಖರ ಆಜಾದ್‌ರಂತಹ ಕ್ರಾಂತಿಕಾರಿಗಳು, ಬೋಸ್‌ರಂಥ ಸೈನಿಕ ಸಾಹಸಿಗಳು, ಗೋಖಲೆಯವರಂಥ ಸೌಮ್ಯವಾದಿಗಳು, ಗಾಂಧಿಯಂಥ ಅಹಿಂಸಾತ್ಮಕ ಬಂಡಾಯಗಾರರೆಲ್ಲ ಇದ್ದರು. ಆದರೆ ತಮ್ಮ ಭಿನ್ನತೆಗಳೊಂದಿಗೇ ಅವರೆಲ್ಲ ಪರಸ್ಪರ ಪೂರಕವಾಗಿ ಭಾರತೀಯ ಸಮಗ್ರತೆಯನ್ನು ರೂಪಿಸಲು ಕೆಲಸ ಮಾಡಿದ್ದರು. ಉದಾಹರಣೆಗೆ, ಕಾಂಗ್ರೆಸ್, ಮುಸ್ಲಿಂ ಲೀಗ್, ಹಿಂದೂ ಮಹಾಸಭಾದ ಆಲೋಚನಾ ಕ್ರಮಗಳು ಭಿನ್ನವೇ ಇದ್ದರೂ ಅವರ ಅಧಿವೇಶನಕ್ಕೆ ಇವರು, ಇವರ ಅಧಿವೇಶನಕ್ಕೆ ಅವರು ಹಾಜರಾಗಿ ಚರ್ಚಿಸುತ್ತಿದ್ದರು. ಏಕೆಂದರೆ, ಅಂತಿಮವಾಗಿ ಎಲ್ಲರ ಉದ್ದೇಶವೂ ಭಾರತೀಯ ಸಮಗ್ರತೆಯನ್ನು ರೂಪಿಸುವುದೇ ಆಗಿತ್ತು. ನಮ್ಮ ಎಲ್ಲ ಭಿನ್ನತೆಗಳನ್ನೂ ಉಳಿಸಿಕೊಂಡು ಪರಸ್ಪರ ಸದ್ಭಾವನೆಯಿಂದ ಸಮಗ್ರವಾಗಿಯೇ ಇರುವುದು ಹೇಗೆ ಎಂಬ ಸಂದೇಶವನ್ನು ತಲುಪಿಸಲು ಅಮೃತ ಮಹೋತ್ಸವವು ಒಂದು ಸಂಕೇತವಾಗಿ ಬಳಕೆಯಾಗಬೇಕಿದೆ.

ಬಹು ಮುಖ್ಯವಾಗಿ ಅಂಬೇಡ್ಕರ್ ಅವರು ಪ್ರಸ್ತಾಪಿಸಿದ್ದ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯದ ವಿಚಾರಗಳ ಅಳವಡಿಸುವಿಕೆ ನಡೆಯಬೇಕು. ರಾಜಕೀಯ ಸ್ವಾತಂತ್ರ್ಯದ ಹೋರಾಟದಲ್ಲೇ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯದ ಸಸಿಯನ್ನು ಕಾಣಬಹುದು. ಸ್ತ್ರೀವಿಮೋಚನೆ, ಹಿಂದುಳಿದ ವರ್ಗಗಳ ಕಲ್ಯಾಣಗಳೆಲ್ಲ ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ಸ್ವರೂಪಗಳೇ ಆಗಿದ್ದವು. ಇವೆಲ್ಲವುಗಳಿಗೂ ಆಧಾರ ಆರ್ಥಿಕ ಸ್ವಾತಂತ್ರ್ಯ.

ಇಂದಿನ ಜಾಗತಿಕ ಸನ್ನಿವೇಶ ಹೇಗಿದೆ ಎಂದರೆ ಕಂಪನಿಗಳು ಯಾವ ರಾಷ್ಟ್ರವನ್ನಾದರೂ ತಮ್ಮ ಹಿಡಿತದಲ್ಲಿರಿಸಿಕೊಳ್ಳಬಲ್ಲವು. ಖಾಸಗೀಕರಣ ಮತ್ತು ಕಂಪನೀಕರಣಗಳೆರಡೂ ಒಂದೇ ಅಲ್ಲ. ಖಾಸಗೀಕರಣ ಆಗಬೇಕು. ಜನರು ಎಲ್ಲದಕ್ಕೂ ಸರ್ಕಾರವನ್ನೇ ಅವಲಂಬಿಸುವಂತಾಗಬಾರದು. ತಮ್ಮನ್ನು ತಾವೇ ನಿಭಾಯಿಸಿಕೊಳ್ಳುವಷ್ಟು ಚೈತನ್ಯಶೀಲರಾಗಬೇಕು. ಆದರೆ ಖಾಸಗೀಕರಣವನ್ನು ಕೆಲವೇ ಕಂಪನಿಗಳ ಕೈಗೆ ಒಪ್ಪಿಸಿದರೆ ಜನ ಪರಾವಲಂಬಿಗಳಾಗುತ್ತಾ ಹೋಗುತ್ತಾರೆ. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ಹಣಕಾಸು ದಾಂದಲೆ ಹೇಗಿತ್ತೆಂದರೆ ಅದರ ನೌಕರರು ನಿವೃತ್ತರಾಗಿ ಬ್ರಿಟನ್ನಿಗೆ ಹಿಂದಿರುಗಿದಾಗ, ಅವರು ತಮ್ಮಲ್ಲಿನ ಹಣದಿಂದ ಎಲ್ಲಿ ಬ್ರಿಟಿಷ್ ಸರ್ಕಾರವನ್ನೇ ಬುಡಮೇಲು ಮಾಡುವರೋ ಎಂದು ಬ್ರಿಟನ್ನಿನ ಜನ ಭಯಪಡುತ್ತಿದ್ದರು! ಆ್ಯಡಂ ಸ್ಮಿತ್ ಎಂಬ ಸ್ಕಾಟಿಶ್ ಅರ್ಥಶಾಸ್ತ್ರಜ್ಞ ಈಸ್ಟ್ ಇಂಡಿಯಾ ಕಂಪನಿಯನ್ನು 'ಭಾರತದ ವಿಧ್ವಂಸಕರು' ಎಂದು ಕರೆದರು.

ಇಂದು ಭಾರತವನ್ನು ಆವರಿಸಿಕೊಳ್ಳುತ್ತಿರುವ ಬಹುರಾಷ್ಟ್ರೀಯ ಕಂಪನಿಗಳನ್ನು ನಿಯಂತ್ರಣದಲ್ಲಿಡುವ ಕೆಲವು ಕಾಯ್ದೆಗಳಾದರೂ ಅಮೃತ ಮಹೋತ್ಸವದ ಸವಿನೆನಪಿಗಾಗಿ ಅವಶ್ಯಕವಿದೆ. ಅದೇ ಸಮಯಕ್ಕೆ ಜನರು ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣವನ್ನು ಸಾಧಿಸುವ ಹೊಸ ಯೋಜನೆಗಳೂ ಬೇಕು. ಉತ್ಪಾದನಾ ವಲಯದಲ್ಲಿ, ಮಾರುಕಟ್ಟೆಯಲ್ಲಿ ಜನರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಕಾರ್ಯಕ್ರಮಗಳು ಬೇಕು.



ಸ್ವಾತಂತ್ರ್ಯ ಹೋರಾಟದಲ್ಲಿದ್ದ ನೈತಿಕತೆಯನ್ನು ಬೆಳೆಸಿಕೊಳ್ಳುವುದು ಅಮೃತ ಮಹೋತ್ಸವದ ನಿಜವಾದ ಆಚರಣೆ. ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯು ನಮ್ಮ ವರ್ತನೆಯನ್ನು ಸಕಾರಾತ್ಮಕವಾಗಿ ಪರಿವರ್ತಿಸಿದಾಗ ಸ್ವಾತಂತ್ರ್ಯ ಹೋರಾಟಗಾರರಿಗೆ ನಿಜವಾದ ಗೌರವ ಸಲ್ಲಿಸಿದಂತೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಚುರುಮುರಿ

ಅಕ್ರಮ- ಸಕ್ರಮ!

• ತುರುವೇಕೆರೆ ಪ್ರಸಾದ್

'ಅಲ್ಲ ಕಣ್ರೋ, ಸರ್ಕಾರವೇ ಅಕ್ರಮನ ಸಕ್ರಮ ಮಾಡಕ್ ಹೊರ್ಟಿದೆಯಲ್ಲ, ಇದು ಸರೀನಾ?' ಕಲ್ಲೇಶಿ ಮಾತು ತೆಗೆದ.

'ಸರ್ಕಾರ ಹೇಳಿದ್ದೇ ಸತ್ಯ, ಮಾಡಿದ್ದೇ ಸರಿ ಅಂತ ಬೋ ಇಂದೇನೆ ಬೇಂದ್ರೆ ಅಜ್ಜ ಹೇಳವ್ರಲ್ಲಪ್ಪ' ಎಂದ ಈರಭದ್ರ.

'ನೀನ್ ಏನೇ ಯೋಳು, ಇದ್ಯಾಕೋ ಸರಿ ಅನ್ನಕಿಲ್ಲ, ಕಾನೂನು ಮಾಡೋದು, ಅದನ್ನ ಭಂಗ ಮಾಡಿದೋರನ್ನ ಕ್ಷಮ್ಸಿ ಸಕ್ರಮ ಮಾಡೋದು. ಇದೆಂತ ರಾಜ್ಯಭಾರ ಅಂತೀನಿ'.

'ಎಲ್ಲಾ ದುಡ್ಡಿಗೋಸ್ಕರ! ಖಜಾನೆ ಬರಿದಾಗಲೆಲ್ಲಾ ಸರ್ಕಾರಗಳು ಇರೋ ಆಸ್ತಿ ಮಾರೋದು, ಅಕ್ರಮ- ಸಕ್ರಮ ಮಾಡೋದು, ಇಂತ ಸ್ಟಾಕ್‌ಕ್ಲಿಯರ್ ಸೇಲ್ ಹಮ್ಮಿಕೊಳ್ಳುತ್ವೆ' ಅಂದ ಪರ್ಮೇಶಿ.

'ದುಡ್ಡಿಗೋಸ್ಕರ ತಪ್ಪನ್ನ ಸರಿ ಮಾಡೋದು ಮತ್ತೂ ದೊಡ್ಡ ತಪ್ಪಲ್ವಾ?'

'ತಪ್ ಎಂಗಾಯ್ತದೆ? ಜಾತ್ಕ ಸರಿ ಇಲ್ಲ, ಶನಿ, ಕುಜ ದೋಷ ಅಂದ್ರೆ ಜ್ಯೋತಿಷಿಗಳಿಗೆ ದುಡ್ ಕೊಟ್ಟು ಎಂಗ್ ಬೇಕೋ ಅಂಗೆ ಉಚ್ಚ ನಕ್ಷತ್ರ, ಗ್ರಹನೆಲ್ಲಾ ತಲೆ ಮೇಲೆ ಕೂರಿಸ್ಕೊಂಡು ಬೇರೆ ಜಾತಕ ಬರ್ಸಿ ಸಕ್ರಮ ಮಾಡ್ಕಳಕಿಲ್ವಾ? ಗ್ರಹಗತಿನೇ ಅಕ್ರಮ-ಸಕ್ರಮ ಮಾಡ್ಕಬಹುದು ಅಂದ್ಮ್ಯಾಕೆ ಇದ್ಯಾವ ಲೆಕ್ಕ ಬಿಡು'.

'ಇಂಗೇ ಮಾಡ್ತಿದ್ರೆ ಇದಕ್ಕೆ ಕೊನೆ ಮೊದ್ಲೇ ಇರಾಕಿಲ್ಲ ಬಿಡು. ಕೆರೆ ನುಂಗಿ ಮಾಡಿದ ನಿವೇಶನ, ಬಿಲ್ಡಿಂಗು ಎಲ್ಲಾ ಸಕ್ರಮ ಮಾಡುದ್ರೆ ಜನ ಮತ್ ಮತ್ ತಪ್ ಮಾಡಕಿಲ್ವಾ?'

'ಮಾಡ್ತಾರೆ. ಯಥಾ ರಾಜಾ ತಥಾ ಪ್ರಜಾ! ಸರ್ಕಾರಗಳ ಲಂಚದ ಪರ್ಸಂಟೇಜ್ ಏರ್ದಂಗೆ ಜನಗಳ ಅಕ್ರಮ ಪರ್ಸೆಂಟೇಜೂ ಜಾಸ್ತಿಯಾಗ್ತಾನೇ ಇರುತ್ತೆ'.

'ಅಂಗ್ ಆಗ್ಬಾರ್ದು ಅಂದ್ರೆ ಆಡಳಿತ ಯಂತ್ರದ ಅಕ್ರಮನೇ ಸಕ್ರಮ ಮಾಡ್ಬೇಕಾಯ್ತದೆ. ಕಟ್ ಮನಿ, ಲಂಚ ಘೋಷಣೆ ಮಾಡ್ಕಂಡು ಇಷ್ಟು ಲಕ್ಷ ಅಂತ ದಂಡ ಕಟ್ಟುಸ್ಕೊಂಡ್ ಮುಂದೆ ಅದನ್ನೂ ಸಕ್ರಮ ಮಾಡ್ಬಹುದಲ್ಲ'.

'ಅಂಗೇನಾದ್ರೂ ಮಾಡ್‌ಬುಟ್ರೆ 40 ಪರ್ಸೆಂಟ್, 60 ಪರ್ಸೆಂಟ್ ಕಮಿಷನ್ ಅಂತ ಯಾರೂ ದೂರೋ ಅಂಗೇ ಇಲ್ಲ'.

'ಮತ್ತೆ ಎಸಿಬಿ, ಲೋಕಾಯುಕ್ತಗಳ ಗತಿ?'

'ಎರಡನ್ನೂ ಸೇರಿಸಿ ಮದ್ಯಪಾನ ಸಂಯಮ ಮಂಡಳಿ ತರ 'ಲಂಚ ಸಂಯಮ ಮಂಡಳಿ' ಅಂತ ಮಾಡಿ ಕೈ ತೊಳ್ಕೊಳೋದು' ಹುಬ್ಬು ಹಾರಿಸಿ ನಕ್ಕ ಪರ್ಮೇಶಿ...

ದಿನದ ಟ್ವೀಟ್

ಎಲ್ಲರೂ ಯೋಚಿಸಬೇಕಿದೆ

ನಾವು ಚಿಕ್ಕವರಿದ್ದಾಗ ದಕ್ಷಿಣ ಕನ್ನಡ, ಉಡುಪಿ ಅಂದರೆ ಬುದ್ಧಿವಂತರ ಜಿಲ್ಲೆ, ಉದ್ಯಮಶೀಲರ ಜಿಲ್ಲೆ ಅನ್ನುವ ಹೆಸರಿತ್ತು. ಆದರೆ ಕಳೆದ ಇಪ್ಪತ್ತು ವರ್ಷಗಳಲ್ಲಿ ಈ ಜಿಲ್ಲೆಗಳು ಹೆಚ್ಚಾಗಿ ಧರ್ಮದ ಹೆಸರಿನ ಗಲಾಟೆಗಳಿಂದಲೇ ಸುದ್ದಿಯಾಗುತ್ತಿವೆ. ಇದು ಹೀಗೆಯೇ ಇರಬೇಕಾ ಅನ್ನುವ ಬಗ್ಗೆ ಅಲ್ಲಿನ ಎಲ್ಲ ಧರ್ಮೀಯರು ಕೂತು ಒಮ್ಮೆ ಯೋಚಿಸಬೇಕಿದೆ.

ವಸಂತ ಶೆಟ್ಟಿ, ಲೇಖಕ

ಕಿಡಿನುಡಿ

ಬಸವರಾಜ ಬೊಮ್ಮಾಯಿ ಅವರು ಬಿಜೆಪಿ ಕಾರ್ಯಕರ್ತರಿಗಷ್ಟೇ ಮುಖ್ಯಮಂತ್ರಿಗಳೋ ಇಲ್ಲವೇ ರಾಜ್ಯದ ಸಮಸ್ತ ಆರೂವರೆ ಕೋಟಿ ಜನತೆಗೋ ಎನ್ನುವುದನ್ನು ಮೊದಲು ಸ್ಪಷ್ಟಪಡಿಸಬೇಕು. ಪ್ರವೀಣ್ ನೆಟ್ಟಾರು ಮನೆಗೆ ಭೇಟಿ ನೀಡಿದ್ದ ಮುಖ್ಯಮಂತ್ರಿಯವರು, ದುಷ್ಕರ್ಮಿಗಳಿಂದ ಹತ್ಯೆಯಾದ ಮಸೂದ್ ಮನೆಗೆ ಹೋಗದಿರಲು ಕಾರಣ ಏನೆಂಬುದನ್ನು ಸ್ಪಷ್ಟಪಡಿಸಬೇಕು.

ಸಿದ್ದರಾಮಯ್ಯ, ವಿಧಾನಸಭೆಯ ವಿರೋಧಪಕ್ಷದ ನಾಯಕ

25 ವರ್ಷಗಳ ಹಿಂದೆ

ಬುಧವಾರ, 30-7-1997

● **ನ್ಯಾಯಾಲಯಕ್ಕೆ ಇಂದು ಲಾಲೂ ಶರಣು**

ನವದೆಹಲಿ, ಜುಲೈ 29 (ಪಿಟಿಐ)– ಬಿಹಾರದ ಮಾಜಿ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಅವರಿಗೆ ನಿರೀಕ್ಷಣಾ ಜಾಮೀನು ನೀಡಲು ಸುಪ್ರೀಂ ಕೋರ್ಟ್ ಇಂದು ನಿರಾಕರಿಸಿದ ಬೆನ್ನಲ್ಲೇ ಅವರ ಬಂಧನಕ್ಕೆ ಸಿಬಿಐ ಆದೇಶ ಹೊರಡಿಸಿದೆ. ಆದರೆ, ನಾಳೆ ಸ್ವತಃ ಸಿಬಿಐ ನ್ಯಾಯಾಲಯದಲ್ಲಿ ಶರಣಾಗುವುದಾಗಿ ಲಾಲೂ ಇಂದು ರಾತ್ರಿ ಹೇಳಿದ್ದಾರೆ.

ಮೇವು ಹಗರಣದಲ್ಲಿ ಆರೋಪಿಗಳಾಗಿರುವ ಲಾಲೂ ಪ್ರಸಾದ್ ಯಾದವ್ ಹಾಗೂ ಅವರ ಇಬ್ಬರು ಮಾಜಿ ಸಹೋದ್ಯೋಗಿಗಳಾದ ಬೋಲಾರಾಂ ತೂಫಾನಿ ಹಾಗೂ ವಿದ್ಯಾಸಾಗರ ನಿಶಾದ್ ಅವರು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಇಂದು ವಜಾ ಮಾಡಿತು.

● **ವೀರಪ್ಪನ್ ಜತೆ ಮತ್ತೆ ಗೋಪಾಲ್ ಮಾತುಕತೆ**

ಚೆನ್ನೈ, ಜುಲೈ 29 (ಯುಎನ್‌ಐ)– ಕರ್ನಾಟಕದ 9 ಮಂದಿ ಅರಣ್ಯ ಸಿಬ್ಬಂದಿಯನ್ನು ಹಿಡಿದಿಟ್ಟಿರುವ ಕುಖ್ಯಾತ ದಂತಚೋರ ವೀರಪ್ಪನ್ ಜತೆ ಎರಡನೇ ಸುತ್ತಿನ ಸಂಧಾನ ಮಾತುಕತೆಗಳಿಗಾಗಿ 'ನಕ್ಕೀರನ್' ಸಂಪಾದಕ ಆರ್.ಆರ್. ಗೋಪಾಲ್ ನಾಳೆ ಮತ್ತೆ ಹೋಗಲಿದ್ದಾರೆ. ನಾಳೆ ಅವರು ವೀರಪ್ಪನ್ ಅಡಗುದಾಣ ಸೇಲಂ ಬಳಿಯ ಬರಗೂರು ಅರಣ್ಯ ಪ್ರವೇಶಿಸುವರು. ಇದಕ್ಕೆ ಮೊದಲು ಅವರು ತಮಿಳುನಾಡು ಮುಖ್ಯಮಂತ್ರಿ ಕರುಣಾನಿಧಿ ಅವರನ್ನು ಭೇಟಿ ಮಾಡುವರು.

50 ವರ್ಷಗಳ ಹಿಂದೆ

ಭಾನುವಾರ, 30-7-1972

● **ಹೋಟೇಲುಗಳ ನಾಮಫಲಕಗಳು ಜಾತಿಗಳ ಸೂಚಕವಾಗಿರದಂತೆ ಕ್ರಮ: ಸಚಿವರ ಭರವಸೆ**

ಬೆಂಗಳೂರು, ಜುಲೈ 29– ಹೋಟೇಲ್‌ಗಳಿಗೆ ಪುರಸಭೆಗಳು ಲೈಸೆನ್ಸ್ ನೀಡುವಾಗ ಅವುಗಳ ಜಾತಿಸೂಚಕ ನಾಮಫಲಕಗಳನ್ನು ಬಳಸದಂತೆ ಷರತ್ತು ಹಾಕುವುದನ್ನು ಪರಿಶೀಲಿಸುವುದಾಗಿ ಪೌರಾಡಳಿತ ಸಚಿವ ಶ್ರೀ ಬಿ. ಬಸವಲಿಂಗಪ್ಪ ಅವರು ಇಂದು ವಿಧಾನಸಭೆಯಲ್ಲಿ ಭರವಸೆ ನೀಡಿದರು.

ಯಾರೇ ಆಗಲಿ ಜಾತಿಸೂಚಕ ನಾಮಫಲಕಗಳನ್ನು ಫಲಾಹಾರ ಗೃಹಗಳಂತಹ ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸುವುದಕ್ಕೆ ಸರ್ಕಾರ ಅನುಮತಿ ನೀಡಬಾರದೆಂದು ಶ್ರೀ ಶೀರನಾಳಿ ಚಂದ್ರಶೇಖರ್ ಅವರು ತಂದಿದ್ದ ಖಾಸಗಿ ನಿರ್ಣಯದ ಮೇರೆಗೆ ನಡೆದ ಚರ್ಚೆಗೆ ಸಚಿವರು ಉತ್ತರ ನೀಡಿ 'ಜಾತಿ ಹಾವಳಿ'ಯನ್ನು ವಿವರಿಸಿದರು.

● **ಭಾರತ– ಪಾಕ್ ಸೇನೆ ವಾಪಸಾತಿ ಆ. 9ರಿಂದ ಆರಂಭ**

ನವದೆಹಲಿ, ಜುಲೈ 29– ಕಳೆದ ಡಿಸೆಂಬರ್ ಯುದ್ಧದಲ್ಲಿ ಆಕ್ರಮಿಸಿಕೊಂಡಿದ್ದ ಪರಸ್ಪರರ ಪ್ರದೇಶಗಳಿಂದ ಭಾರತೀಯ ಹಾಗೂ ಪಾಕಿಸ್ತಾನಿ ಪಡೆಗಳ ವಾಪಸಾತಿಯು ಆಗಸ್ಟ್ ತಿಂಗಳ 9ರಿಂದ ಆರಂಭವಾಗುವುದೆಂದು ಇಲ್ಲಿ ತಿಳಿದು ಬಂದಿದೆ.

ಪಶ್ಚಿಮ ಕ್ಷೇತ್ರದಲ್ಲಿಯೇ ಈ ಸೇನಾ ವಾಪಸಾತಿ ಕಾರ್ಯ ನಡೆಯುವುದು. ಸೇನಾ ವಾಪಸಾತಿಯನ್ನು ಸಿಮ್ಲಾ ಒಪ್ಪಂದದಲ್ಲಿ ಉಭಯ ರಾಷ್ಟ್ರಗಳೂ ಒಪ್ಪಿಕೊಂಡಿವೆ.

ಸಂಗತ

ಮಾನವ ಕಳ್ಳಸಾಗಣೆ: ಜಾಗೃತಿ ಅಗತ್ಯ

ಮಾನವ ಕಳ್ಳಸಾಗಣೆ ಜಾಲದಲ್ಲಿ ಸಿಲುಕುವವರ ಕನಸಿನ ಬದುಕು ಛಿದ್ರವಾಗುತ್ತದೆ. ಇದರ ಜತೆಗೆ ತೀವ್ರ ಮಾನಸಿಕ ಮತ್ತು ದೈಹಿಕ ಹಿಂಸೆಗೂ ಅವರು ಒಳಗಾಗುತ್ತಾರೆ.

• ಡಾ. ಜ್ಯೋತಿ

ಪ್ರತಿವರ್ಷ ಜುಲೈ 30ರಂದು 'ಮಾನವ ಕಳ್ಳಸಾಗಣೆ ತಡೆ ದಿನ' ಆಚರಿಸಲಾಗುತ್ತಿದೆ. 2013ರಲ್ಲಿ ವಿಶ್ವ ಸಂಸ್ಥೆಯು ಮಾನವ ಕಳ್ಳಸಾಗಣೆ ಎನ್ನುವ ಮನುಷ್ಯ ಲೋಕದ ಅಮಾನುಷ ಆರ್ಥಿಕ ದಂಧೆ ವಿರುದ್ಧ ಜನ ಜಾಗೃತಿ ಮೂಡಿಸಲು ಹಾಗೂ ಇದರಲ್ಲಿ ಸಿಲುಕುವ ಸಂತ್ರಸ್ತರ ಮಾನವ ಹಕ್ಕು ರಕ್ಷಣೆಯ ಕುರಿತು ಅರಿವು ಮೂಡಿಸಲು ಈ ದಿನವನ್ನು ಅಧಿಕೃತವಾಗಿ ಘೋಷಿಸಿತು. ಇದಕ್ಕೆ ಪೂರ್ವಭಾವಿಯಾಗಿ 2010ರಲ್ಲಿ, ಮಾನವ ಕಳ್ಳಸಾಗಣೆಯನ್ನು ಕೊನೆಗಾಣಿಸಲು ಜಾಗತಿಕ ಕ್ರಿಯಾಯೋಜನೆಯನ್ನು ಅಳವಡಿಸಿಕೊಂಡು, ವಿಶ್ವದಾದ್ಯಂತ ಸರ್ಕಾರಗಳು ಸಂಘಟಿತವಾಗಿ ಪ್ರಯತ್ನ ಮಾಡಬೇಕೆಂದೂ ವಿಶ್ವಸಂಸ್ಥೆ ಆಗ್ರಹಿಸಿತ್ತು. ಸಂತ್ರಸ್ತರ ಕ್ಷೇಮಾಭಿವೃದ್ಧಿಗಾಗಿ ವಿಶ್ವಮಟ್ಟದ ಸಹಾಯನಿಧಿಯನ್ನು ಸ್ಥಾಪಿಸುವುದು, ಈ ಯೋಜನೆಯ ಪ್ರಮುಖ ನಿಬಂಧನೆಗಳಲ್ಲಿ ಒಂದಾಗಿತ್ತು.

ಈ ಹಿನ್ನೆಲೆಯಲ್ಲಿ ನಮಗೆ ಎದುರಾಗುವ ಪ್ರಮುಖ ಪ್ರಶ್ನೆಗಳು: ಮಾನವ ಕಳ್ಳಸಾಗಣೆಯ ವ್ಯಾಪ್ತಿಯಲ್ಲಿ ನಡೆಯುವ ದೌರ್ಜನ್ಯಗಳ ವಿವಿಧ ಆಯಾಮಗಳೇನು? ಇದನ್ನು ನಿಗ್ರಹಿಸಲು ಇರುವ ಮಾರ್ಗೋಪಾಯಗಳೇನು? ಅದರಲ್ಲಿ ಜವಾಬ್ದಾರಿಯುತ ಸಮಾಜದ ಪಾತ್ರವೇನು?

ಮೊದಲನೆಯದಾಗಿ, ಮಾನವ ಕಳ್ಳಸಾಗಣೆ ಎಂದರೆ ಮಕ್ಕಳು, ಮಹಿಳೆ ಮತ್ತು ಪುರುಷರನ್ನು ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಕಳ್ಳಸಾಗಣೆ ಮಾಡುವುದು. ಸಾಮಾನ್ಯವಾಗಿ, ಉದ್ಯೋಗ ಗಿಟ್ಟಿಸುವ ಅಥವಾ ಹೇಗಾದರೂ ಬದುಕು ಕಂಡುಕೊಳ್ಳುವ ಭರವಸೆಯಲ್ಲಿ ಜನರು ಸುಲಭವಾಗಿ ಈ ಜಾಲಕ್ಕೆ ಸಿಲುಕುತ್ತಾರೆ.

ಮಾನವ ಕಳ್ಳಸಾಗಣೆ ಜಾಲಗಳು ಪ್ರತಿಯೊಂದು ದೇಶದಲ್ಲಿಯೂ ಸಕ್ರಿಯವಾಗಿ, ಗುಪ್ತವಾಗಿ ಕೆಲಸ ಮಾಡುತ್ತಿವೆ ಎಂಬ ವರದಿಗಳಿವೆ. ಈ ದಿಸೆಯಲ್ಲಿ, ಮಾನವ ಕಳ್ಳಸಾಗಣೆಗೆ ಸಂಬಂಧಿಸಿದ ಕೆಲವು ಅಂಕಿ-ಅಂಶಗಳ ವಿಶ್ಲೇಷಣೆ ಗಮನಾರ್ಹವೆನಿಸುತ್ತದೆ. ಸಾಮಾನ್ಯವಾಗಿ ಹೆಣ್ಣುಮಕ್ಕಳು ಲೈಂಗಿಕ ಶೋಷಣೆಗೆ ಸಂಬಂಧಿಸಿದ ಕಳ್ಳಸಾಗಣೆ ಜಾಲಕ್ಕೆ ಬಲಿಯಾಗುತ್ತಾರೆ. ಬಲವಂತದ ಗುಲಾಮಗಿರಿಗೆ ಅನಾಥ ಮತ್ತು ಬಡ ಕುಟುಂಬದ ಮಕ್ಕಳು, ಅಂಗಾಂಗ ದಂಧೆಗೆ ಅಸಹಾಯಕ ವೃದ್ಧರು ಗುರಿಯಾಗುತ್ತಿದ್ದಾರೆ.

ಲೈಂಗಿಕ ಶೋಷಣೆಗಾಗಿ ಹೆಣ್ಣುಮಕ್ಕಳನ್ನು ಹಾಗೂ ಬಲವಂತದ ದುಡಿಮೆಗೆ ಗಂಡುಮಕ್ಕಳನ್ನು ಅಕ್ರಮವಾಗಿ ದೇಶದೊಳಗೆ ಮತ್ತು ಹೊರ ದೇಶಗಳಿಗೆ ಸಾಗಣೆ ಮಾಡುವ ಜಾಲಗಳು ನಮ್ಮ ದೇಶದಲ್ಲೂ ಸಕ್ರಿಯವಾಗಿವೆ. ವಿಶೇಷವಾಗಿ ಮಕ್ಕಳನ್ನು ಕೈಗಾರಿಕೆ, ಮನೆಕೆಲಸ, ಭಿಕ್ಷಾಟನೆ, ಭಯೋತ್ಪಾದನೆ ಹಾಗೂ ಶಸ್ತ್ರಾಸ್ತ್ರ ತರಬೇತಿಗಾಗಿ ಬಳಸಿಕೊಳ್ಳಲು ಕಳ್ಳಸಾಗಣೆ ಮಾಡಲಾಗುತ್ತಿದೆ ಎಂದು ಗುರುತಿಸಲಾಗಿದೆ. ಹೊರದೇಶಗಳಿಗೆ ಉದ್ಯೋಗ ಅರಸಿ ವಲಸೆ ಹೋಗಬಯಸುವ ಕಡಿಮೆ ವಿದ್ಯಾರ್ಹತೆ ಅಥವಾ ಕೌಶಲ ಹೊಂದಿದ ಜನರು ಕಳ್ಳಸಾಗಣೆ ಜಾಲದಲ್ಲಿ ಸಿಲುಕಿಕೊಳ್ಳುವ ಅಪಾಯ ಜಾಸ್ತಿ. ಇವರನ್ನು ಹೆಚ್ಚಿನ ಸಂದರ್ಭಗಳಲ್ಲಿ ಕಡಿಮೆ ಸಂಬಳ ಅಥವಾ ಸಂಬಳವಿಲ್ಲದೆ ದುಡಿಸಿಕೊಳ್ಳುತ್ತಾರೆ. ಇವರ ಚಲನವಲನದ ಮೇಲೆ ಸಂಪೂರ್ಣ ನಿರ್ಬಂಧ ಇರುತ್ತದೆ. ದೈಹಿಕ ಅಥವಾ ಲೈಂಗಿಕ ದೌರ್ಜನ್ಯ ಹಾಗೂ ಗುಲಾಮಗಿರಿಗೆ ಒಳಗಾಗುವ ಸಾಧ್ಯತೆಯೇ ಹೆಚ್ಚು.

ಈ ರೀತಿ ಕಳ್ಳಸಾಗಣೆ ಜಾಲಕ್ಕೆ ಸಿಲುಕುವ ಜನರ ಕನಸಿನ ಬದುಕು ಬಹುಬೇಗ ಛಿದ್ರವಾಗುತ್ತದೆ. ಅವರು ತೀವ್ರ ಮಾನಸಿಕ ಮತ್ತು ದೈಹಿಕ ಹಿಂಸೆಗೆ ಒಳಗಾಗುತ್ತಾರೆ. ಹಾಗಾದರೆ, ಈ ಅಮಾನವೀಯ ದೇಹದಂಧೆಯನ್ನು ನಿಗ್ರಹಿಸುವುದು ಹೇಗೆ? ಮಾನವ ಕಳ್ಳಸಾಗಣೆ ಮಾಡುವವರಿಗೆ 7 ವರ್ಷಗಳವರೆಗಿನ ಕಠಿಣ ಜೈಲು ಶಿಕ್ಷೆ ವಿಧಿಸಲು ಭಾರತದ ಕಾನೂನಿನಲ್ಲಿ ಅವಕಾಶ ಇದೆ. ಆದರೆ, ಕಾನೂನು ಒಂದರ ಮೂಲಕವೇ ಇದನ್ನು ಪೂರ್ತಿ ನಿಗ್ರಹಿಸಲು ಸಾಧ್ಯವಾಗುವುದಿಲ್ಲ. ಸರ್ಕಾರೇತರ ಸಂಘ– ಸಂಸ್ಥೆಗಳು ಮತ್ತು ಸೇವಾ ಮನೋಭಾವದ ಜನರ ಬೆಂಬಲದ ಅಗತ್ಯವಿದೆ. ಹಾಗೆಯೇ, ಈ ಜಾಲಕ್ಕೆ ಸಿಲುಕಿದವರನ್ನು ರಕ್ಷಿಸುವುದರೊಂದಿಗೆ, ಸಂತ್ರಸ್ತರಿಗೆ ಸಮರ್ಪಕ ಪುನರ್ವಸತಿ ಕಲ್ಪಿಸಬೇಕಾದ ಅಗತ್ಯವಿದೆ.

ಎಲ್ಲಕ್ಕಿಂತ ಮುಖ್ಯವಾಗಿ, ಮಾನವ ಕಳ್ಳಸಾಗಣೆ ದಂಧೆಯ ಹಿಂದಿರುವ ವಿಕೃತ ಮನಃಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ. ಇಂತಹ ಹೀನ ವರ್ತನೆಗೆ ಹಣ ಗಳಿಸುವುದೊಂದೇ ಕಾರಣ ಆಗಿರಲಾರದು. ವ್ಯಕ್ತಿತ್ವ ದೋಷ ಮತ್ತು ಅದಕ್ಕೆ ಕಾರಣವಾದ ಅಂಶಗಳ ಬಗೆಗೂ ಅಧ್ಯಯನ ಆಗಬೇಕು. ಮಕ್ಕಳ ಭವಿಷ್ಯದ ಬಗ್ಗೆ ಅತ್ಯಂತ ಕಾಳಜಿ ವಹಿಸುವ ನಾವು, ಇನ್ನೊಂದು ಮಗುವನ್ನು ಭಿಕ್ಷಾಟನೆಗೋ, ವೇಶ್ಯಾವೃತ್ತಿಗೋ, ಅಂಗ ಕೀಳುವುದಕ್ಕೋ ಅಥವಾ ಬಲವಂತದ ದುಡಿಮೆಗೋ ತಳ್ಳಿ, ಅವರ ಜೀವನದ ಕನಸುಗಳನ್ನು ಹೊಸಕಿ ಹಾಕಲು ಮುಂದಾಗುವ ಮನೋಧೋರಣೆ ಅತ್ಯಂತ ಭಯಾನಕವಾದುದು.

ಮಾನವ ಕಳ್ಳಸಾಗಣೆಯನ್ನು ಈ ಕಾಲದ ಸಮಸ್ಯೆ ಮಾತ್ರ ಎಂದು ಭಾವಿಸಬೇಕಾಗಿಲ್ಲ. ಈ ರೀತಿ ಮನುಷ್ಯನ ಸಾಗಾಟವಾಗಿ ತಲುಪುವ ಗುಲಾಮಗಿರಿ ಅಥವಾ ವೇಶ್ಯಾವಾಟಿಕೆಯ ಕೇಂದ್ರಗಳು ತಲೆತಲಾಂತರಗಳಿಂದ ನಮ್ಮ ನೆಲದಲ್ಲಿ ಅಸ್ತಿತ್ವದಲ್ಲಿವೆ. ಪ್ರಸಕ್ತ, ಇದರ ಪ್ರಮಾಣ ಹೆಚ್ಚಾಗಿರಬಹುದಷ್ಟೆ. ನಾವಿಂದು ಮಾನವ ಹಕ್ಕುಗಳ ಬಗ್ಗೆ ಮಾತನಾಡಬಹುದಾದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದೇವೆ. ಎಷ್ಟೆಲ್ಲಾ ಪ್ರಗತಿ ಸಾಧಿಸಿದ್ದೇವೆ ಎಂದು ನಾವು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಅಂತೆಯೇ ಈ ಪ್ರಗತಿಯ ಫಲವನ್ನು ಸ್ವತಂತ್ರವಾಗಿ, ನಿರ್ಭಯವಾಗಿ ಅನುಭವಿಸುವ ಹಕ್ಕು ಎಲ್ಲಾ ಮನುಷ್ಯರಿಗೂ ಇದೆ ಎನ್ನುವ ಜನಜಾಗೃತಿ ಮೂಡಿಸುವುದು ಹಿಂದೆಂದಿಗಿಂತ ಈಗ ಹೆಚ್ಚಿದೆ.

ವಾಚಕರ ವಾಣಿ

ಮಾತಿನಲ್ಲಿ 'ಕಿಡಿ' ಹಚ್ಚುವವರನ್ನು ನಿರ್ಬಂಧಿಸಿ

ಕರಾವಳಿ ಕರ್ನಾಟಕದಲ್ಲಿ ಕೊಲೆಗಳು ಸರಣಿಯೋಪಾದಿಯಲ್ಲಿ ಆಗುತ್ತಿರುವುದು ರಾಜ್ಯದ ಜನರಲ್ಲಿ ಆತಂಕ ಸೃಷ್ಟಿಸಿದೆ. ಇದನ್ನು ಎಷ್ಟು ಸಾಧ್ಯವೋ ಅಷ್ಟು ಬೇಗ ನಿಯಂತ್ರಣಕ್ಕೆ ತರಬೇಕಾಗಿದೆ. ಇದಕ್ಕಾಗಿ ಬಿಗಿಯಾದ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕೆಂದು ಎಲ್ಲರೂ ಒತ್ತಾಯಿಸುತ್ತಿದ್ದಾರೆ. ಇದು ಆಗಬೇಕಿರುವ ಕೆಲಸವೂ ಹೌದು.

ಈ ನಡುವೆ ಮತ್ತೊಂದು ದೊಡ್ಡ ಸಮಸ್ಯೆ ಇದೆ. ಅದರ ಕಡೆಗೆ ಗಮನಹರಿಸುವ ಅಗತ್ಯವಿದೆ. ಅದೇನೆಂದರೆ, ಜನಪ್ರತಿನಿಧಿಗಳಾದ ನಳಿನ್ ಕುಮಾರ್ ಕಟೀಲ್, ಆರ್. ಅಶೋಕ, ಡಾ. ಅಶ್ವತ್ಥನಾರಾಯಣ, ಸಿ.ಟಿ. ರವಿ, ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಅವರು ಆಡುತ್ತಿರುವ ಮಾತುಗಳು ಸಮಾಜದಲ್ಲಿ ಬೆಂಕಿ ಹಚ್ಚುವ ಕೆಲಸ ಮಾಡುತ್ತಿವೆ. ಮೊದಲು ಇವರ ವಿರುದ್ಧ ಕ್ರಮ ಕೈಗೊಳ್ಳಬೇಕು.

ಈ. ಬಸವರಾಜು, ಬೆಂಗಳೂರು

ನಾಡಿನ ಹಿರಿಮೆ ಕಾಪಾಡೋಣ

ನಮ್ಮ ನಾಡಿನಲ್ಲಿ ಹಿಂಸೆಯ ವಾತಾವರಣ ಸೃಷ್ಟಿಯಾಗುತ್ತಿರುವುದು ಆತಂಕ ತಂದಿದೆ. ಈ ಹಿಂದೆ ವಚನಕಾರ ಬಸವಣ್ಣ 'ದಯವೇ ಧರ್ಮದ ಮೂಲವಯ್ಯಾ' ಎಂಬ ಸಂದೇಶ ಸಾರಿದ್ದರು. ವರಕವಿ ದ.ರಾ.ಬೇಂದ್ರೆ 'ಜಗದೇಳಿಗೆಯಾಗುವುದಿದೆ ಕರ್ನಾಟಕದಿಂದೆ...' ಎಂದು ಜಗತ್ತಿನ ಏಳ್ಗೆಗೆ ಕನ್ನಡನಾಡು ಮುನ್ನುಡಿ ಬರೆಯುತ್ತದೆ ಎಂದಿದ್ದರು.

ಇದೀಗ ನಾಡಿನಲ್ಲಿ ಆಗುತ್ತಿರುವ ಬೆಳವಣಿಗೆಗಳನ್ನು ಗಮನಿಸಿದರೆ ಈ ಮಹನೀಯರ ಸಂದೇಶಗಳಿಗೆ ಧಕ್ಕೆ ತರುವಂಥ ಸ್ಥಿತಿ ನಿರ್ಮಾಣವಾಗಿದೆ ಎಂಬುದು ಮನದಟ್ಟಾಗುತ್ತದೆ. ಇದು ನಿಜಕ್ಕೂ ಕನ್ನಡಿಗರು ತಲೆತಗ್ಗಿಸುವಂತಹ ಸಂಗತಿ. ಇಂತಹ ಕೃತ್ಯಗಳಿಗೆ ಎಲ್ಲರೂ ಸೇರಿ ಕಡಿವಾಣ ಹಾಕಿ, ನಮ್ಮ ನಾಡಿನ ಹಿರಿಮೆಯನ್ನು ಕಾಪಾಡಬೇಕಿದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

ಬಿಬಿಎಂಪಿಗೆ ಬೇಗ ಚುನಾವಣೆ ನಡೆಸಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಾರ್ಡ್‌ಗಳ ಮೀಸಲಾತಿ ಅಧಿಸೂಚನೆಯನ್ನು ವಾರದೊಳಗೆ ಪ್ರಕಟಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿರುವುದು ಸರಿಯಾಗಿದೆ. ಚುನಾವಣೆಯನ್ನು ಮುಂದೂಡಲು ಸರ್ಕಾರ ನಾನಾ ಬಗೆಯ ಹುನ್ನಾರ ನಡೆಸಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ.

ಸ್ಥಳೀಯ ಸಂಸ್ಥೆಗಳಿಗೆ ಕಾಲಕಾಲಕ್ಕೆ ಚುನಾವಣೆಯನ್ನು ನಡೆಸಬೇಕು ಎಂದು ನ್ಯಾಯಾಲಯಗಳು ಪದೇ ಪದೇ ಹೇಳಿವೆ. ಆದರೆ ಅದು ಪಾಲನೆಯಾಗುತ್ತಿಲ್ಲ. ವಾರ್ಡ್‌ಗಳ ಪರಿಷ್ಕರಣೆ, ಮೀಸಲಾತಿಯಂತಹ ನೆವಗಳನ್ನು ಮುಂದಿಟ್ಟು ಚುನಾವಣೆ ಮುಂದೂಡುವುದು ಅಧಿಕಾರಸ್ಥರ ಚಾಳಿ. ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವುದು ಶಾಸಕರಿಗೆ ಬೇಕಾಗಿಲ್ಲ. ಅವರ ತಾಳಕ್ಕೆ ತಕ್ಕಂತೆ ಸರ್ಕಾರ ಕುಣಿಯುತ್ತದೆ. ರಾಜಕಾರಣದಲ್ಲಿ ಸೋಲು–ಗೆಲುವು ಇದ್ದೇ ಇದೆ. ಅದನ್ನು ಬಂದಂತೆ ಸ್ವೀಕರಿಸುವ ಪ್ರಬುದ್ಧತೆಯನ್ನು ರಾಜಕೀಯ ಪಕ್ಷಗಳು ಬೆಳೆಸಿಕೊಳ್ಳಬೇಕು. ಬಿಬಿಎಂಪಿಗೆ ತ್ವರಿತವಾಗಿ ಚುನಾವಣೆ ನಡೆಸಲು ಸರ್ಕಾರ ಬದ್ಧತೆ ತೋರಲಿ.

ನವೀನ್‌ಕುಮಾರ್ ಕೆ.ಟಿ., ಬೆಂಗಳೂರು

ಶಿಕ್ಷೆಯ ಭಯದ ಕೊರತೆ

ಯಾವುದೇ ಬಗೆಯ ಅಭಿಪ್ರಾಯಭೇದ ಇದ್ದಮಾತ್ರಕ್ಕೆ ಇಷ್ಟೊಂದು ನಿರ್ಭೀತವಾಗಿ ಜನರು ಹಿಂಸಾಚಾರದಲ್ಲಿ ತೊಡಗಿರುವುದನ್ನು ನೋಡಿದರೆ ಅವರಿಗೆ ಕಾನೂನಿನ ಭಯ ಇಲ್ಲದಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಈಗಿನ ಎಲ್ಲ ರಾಜಕಾರಣಿಗಳಲ್ಲಿ ಬರೀ ಮತ ಗಳಿಕೆ, ಅಧಿಕಾರದ ಗದ್ದುಗೆ ಏರುವ ಉದ್ದೇಶ ಮಾತ್ರ ಕಾಣುತ್ತಿದೆಯೇ ವಿನಾ ಅಭಿವೃದ್ಧಿ ಬಗ್ಗೆ ಕಾಳಜಿ ಇಲ್ಲ. ಕಾನೂನು–ಸುವ್ಯವಸ್ಥೆ ಕಾಪಾಡುವ ದಿಸೆಯಲ್ಲಿ ಬದ್ಧತೆ ಇಲ್ಲ. ಅಪರಾಧ ಕೃತ್ಯಗಳಲ್ಲಿ ತೊಡಗಿದವರನ್ನು ಎಗ್ಗಿಲ್ಲದೆ ಸಮರ್ಥಿಸಿಕೊಳ್ಳಬಲ್ಲರು. ಸಾವಿನ ಮನೆಯಲ್ಲೂ ರಾಜಕೀಯ ಲಾಭ ಪಡೆಯುವ ಲೆಕ್ಕಾಚಾರದಲ್ಲೇ ಮುಳುಗಬಲ್ಲರು. ಶಾಂತಿಯು ಎಲ್ಲ ಧರ್ಮಗಳ ತಿರುಳಾಗಿದೆ. ಇದನ್ನು ಎಲ್ಲರೂ ಮನಗಾಣಬೇಕು. ಮೊದಲು, ಅಪರಾಧಿಗಳಿಗೆ ಶಿಕ್ಷೆಯ ಭಯ ಹುಟ್ಟಿಸಬೇಕಿದೆ. ಇಲ್ಲದಿದ್ದರೆ ಹಿಂಸಾತ್ಮಕ ಕೃತ್ಯಗಳು ಮರುಕಳಿಸುವ ಅಪಾಯ ಇದೆ.

ಶರಣಬಸವ ಆರ್. ಪತ್ತಾರ, ಕಲಬುರಗಿ

ಎರವಲು ಮಾದರಿ ಏಕೆ?

ಮಾತೆತ್ತಿದ್ದರೆ, ಉತ್ತರಪ್ರದೇಶದ 'ಯೋಗಿ ಮಾದರಿ' ಆಡಳಿತದ ಬಗೆಗೆ ಪ್ರಸ್ತಾಪಿಸುತ್ತಾರೆ ನಮ್ಮ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ. ಅಪರಾಧ ಕೃತ್ಯಗಳನ್ನು ನಿಗ್ರಹಿಸಲು ಅವರ ಮಾದರಿಯೇ ಬೇಕೆ? ಅದಕ್ಕೆ ತಮ್ಮದೇ ಸ್ವಂತ ಮಾಡೆಲ್ ಯಾವುದೂ ಇಲ್ಲವೇ? ಹತ್ತು ದಿನಗಳಲ್ಲಿ ರಾಜ್ಯದಲ್ಲಿ ಮೂರು ಹತ್ಯೆಗಳಾಗಿರುವುದು ಸರ್ಕಾರದ ವೈಫಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಬರೀ ಹೇಳಿಕೆ ನೀಡಿ ಸುಮ್ಮನಾಗದೆ, ಕಠಿಣ ಕ್ರಮ ಕೈಗೊಳ್ಳುವುದು ಅಗತ್ಯ. ಅದಕ್ಕಾಗಿ ಎರವಲು ಮಾದರಿ ಅನುಸರಿಸುವುದೇನೂ ಬೇಕಾಗಿಲ್ಲ. ಕರ್ನಾಟಕದ ಕಾನೂನು–ಕಟ್ಟಲೆಗಳೇ ಸಾಕು.

ಬಸನಗೌಡ ಪಾಟೀಲ, ಯರಗುಪ್ಪಿ, ಧಾರವಾಡ

ಆಹಾರ ತ್ಯಾಜ್ಯದ ಸಮಸ್ಯೆಗೆ ಬೇಕಿದೆ ಪರಿಹಾರ

ಬ್ರಿಟನ್‌ನಲ್ಲಿ ಆಹಾರ ತ್ಯಾಜ್ಯವು ದೊಡ್ಡ ಸಮಸ್ಯೆಯಾಗಿ ಮಾರ್ಪಟ್ಟಿದೆ. ಆ ದೇಶದಲ್ಲಿ ಪ್ರತಿವರ್ಷ 94 ಲಕ್ಷ ಟನ್ ಆಹಾರ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ ಎಂದು ಇತ್ತೀಚೆಗೆ ವರದಿಯಾಗಿದೆ. ಈ ತ್ಯಾಜ್ಯವನ್ನು ಖಾಲಿ ಜಾಗಗಳಲ್ಲಿ ಸುರಿಯಲಾಗುತ್ತದೆ. ಆಹಾರ ತ್ಯಾಜ್ಯವು ಮೀಥೇನ್ ಅನಿಲವನ್ನು ಬಿಡುಗಡೆ ಮಾಡಿ, ಜಾಗತಿಕ ತಾಪಮಾನ ಏರಿಕೆ ಮತ್ತಷ್ಟು ಹೆಚ್ಚಲು ಕಾರಣವಾಗುತ್ತಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ. ಇನ್ನೊಂದೆಡೆ ಆಫ್ರಿಕಾ ಖಂಡದ ಬಹುತೇಕ ದೇಶಗಳಲ್ಲಿ ಆಹಾರ ಸಿಗದೆ ಮಕ್ಕಳು ಹಸಿವಿನಿಂದ ಸಾಯುತ್ತಿದ್ದಾರೆ. ಒಂದು ವೇಳೆ ಆಹಾರ ಸಿಕ್ಕರೂ ಪೌಷ್ಟಿಕಾಂಶದ ಕೊರತೆಯಿಂದ ಅಪೌಷ್ಟಿಕತೆಗೆ ಒಳಗಾಗಿ, ಕೆಲವೊಂದು ರೋಗಗಳಿಗೆ ತುತ್ತಾಗುತ್ತಿದ್ದಾರೆ. ಇಂತಹ ವೈರುಧ್ಯಮಯ ಸ್ಥಿತಿಯನ್ನು ಭಾರತ ಸೇರಿದಂತೆ ಅನೇಕ ದೇಶಗಳಲ್ಲಿಯೂ ಕಾಣುತ್ತಿದ್ದೇವೆ. ಇದಕ್ಕೆ ಜಾಗತಿಕವಾಗಿ ಪರಿಹಾರವನ್ನು ಕಂಡುಕೊಳ್ಳಬೇಕಿದೆ.

ಬಸವರಾಜ ನರಗಟ್ಟಿ, ಬೆಳಗಾವಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತದ ರಾಜಕಾರಣವು ವ್ಯಕ್ತಿಕೇಂದ್ರಿತ ಪದ್ಧತಿಯಿಂದ ಬಿಡಿಸಿಕೊಳ್ಳುವುದು ಸಾಧ್ಯವಿಲ್ಲವೇ?

ರಾಜಕೀಯ ಪಕ್ಷಗಳ ಆಂತರಿಕ ಪ್ರಜಾಸತ್ತೆ ಬೆಳೆಯಬೇಕು



• ಡಾ. ಸಿದ್ದನಗೌಡ ಪಾಟೀಲ

> ಎರಡನೇ ಜಾಗತಿಕ ಮಹಾಯುದ್ಧದ ನಂತರ ಸ್ವಾತಂತ್ರ್ಯ ಪಡೆದ ಹಲವಾರು ದೇಶಗಳು ಪ್ರಜಾಪ್ರಭುತ್ವವನ್ನು ಆಯ್ಕೆ ಮಾಡಿಕೊಂಡರೂ ಈ ವ್ಯಕ್ತಿ ಪ್ರಧಾನ ರಾಜಕಾರಣದ ಸಂಸ್ಕೃತಿಯನ್ನು ಸಂಪೂರ್ಣವಾಗಿ ನಾಶಮಾಡಲಾಗಿಲ್ಲ

ಪ್ರಜಾವಾಣಿ ಚರ್ಚೆ

ವ್ಯಕ್ತಿ ವೈಭವೀಕರಣ ಅಥವಾ ವ್ಯಕ್ತಿ ಕೇಂದ್ರಿತ ರಾಜಕಾರಣ ಭಾರತದ ಪ್ರಜಾಸತ್ತೆಗೆ ಅಂಟಿಕೊಂಡ ಮಹಾರೋಗ. ವಿಶ್ವದ ಊಳಿಗಮಾನ್ಯ ವ್ಯವಸ್ಥೆಯಲ್ಲಿ ರೂಪುಗೊಂಡ 'ಪ್ರಭು ಪ್ರಭುತ್ವ'ದ ಚಹರೆಗಳು, ಲಕ್ಷಣಗಳು ಪ್ರಜಾಪ್ರಭುತ್ವದಲ್ಲೂ ಮುಂದುವರಿದದ್ದು ಜನರ ಸ್ವಾತಂತ್ರ್ಯಕ್ಕೆ ದೊಡ್ಡ ಸವಾಲಾಗಿದೆ. ಭಾರತದಲ್ಲಿ ಬುದ್ಧನ ಕಾಲದಲ್ಲಿಯೇ ಬುಡಕಟ್ಟು ಪ್ರಜಾಸತ್ತೆ ನಾಶವಾಗಿ ಸಾಮ್ರಾಜ್ಯಗಳು ಉದಯಿಸಿವೆ. ಸಾಮ್ರಾಟರು, ರಾಜರು ತಮ್ಮ ಆಡಳಿತವನ್ನು ನಿರಾತಂಕವಾಗಿ ನಡೆಸಲು 'ರಾಜ ಪ್ರತ್ಯಕ್ಷ ದೇವರು' ಎಂಬ ನಂಬಿಕೆಯನ್ನು ಜನರ ಮೇಲೆ ಹೇರಿದ್ದಾರೆ. ಇಂಥ ಹೇರಿಕೆಗೆ ಪುರೋಹಿತಶಾಹಿ ವ್ಯವಸ್ಥೆಯೂ ತನ್ನ ಕೆಲಸ ಮಾಡಿ, ಜನತೆಯು ಪ್ರಭು ಪ್ರಭುತ್ವದ ಗುಲಾಮಗಿರಿಗೆ ಒಳಗಾಗುವಂತೆ ಮಾಡಿದೆ. ಶತಮಾನಗಳಿಂದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಾಧ್ಯಮಗಳನ್ನು ಊಳಿಗಮಾನ್ಯ ವ್ಯವಸ್ಥೆಯ ಆಡಳಿತ ವರ್ಗ, ಪುರೋಹಿತವರ್ಗ ಇಂಥ ಕೆಲಸಕ್ಕಾಗಿ ಬಳಸಿಕೊಂಡಿವೆ. ಏಳು ಸಮುದ್ರದಾಚೆ ರಾಕ್ಷಸ ಬಂಧಿಸಿಟ್ಟ ರಾಜಕುಮಾರಿಯ ಬಿಡುಗಡೆಗೆ ರಾಜಕುಮಾರನೇ ಹೋದಂತೆ, ಇಂದು ನಮ್ಮ ಚಲನಚಿತ್ರಗಳಲ್ಲಿ ಗೂಂಡಾಗಳನ್ನು, ಸಮಾಜವಿರೋಧಿಗಳನ್ನು ಮಟ್ಟಹಾಕಲು ಒಬ್ಬ 'ಹೀರೊ' ಪ್ರವೇಶಮಾಡಿ ಹೊಡೆದಾಡಬೇಕು. ನೊಂದ ಜನ ಈ ಘಟನೆಯನ್ನು ನಿಂತು ನೋಡಿ ಚಪ್ಪಾಳೆ ತಟ್ಟುತ್ತಾರೆ. ಇದು ಇಂದಿನ ಸಾಮಾಜಿಕ-ರಾಜಕೀಯ ಕ್ಷೇತ್ರಕ್ಕೂ ಅನ್ವಯವಾಗುತ್ತಿದೆ.

ಅಮೆರಿಕದ ಸ್ವಾತಂತ್ರ್ಯ ಹೋರಾಟ (1775–83) ಮತ್ತು ಫ್ರಾನ್ಸ್ ಕ್ರಾಂತಿ (1789–99), ಮೊಟ್ಟಮೊದಲು ಈ ಪ್ರಭು ಪ್ರಭುತ್ವ ವಸಾಹತು ಪ್ರಭುತ್ವಗಳನ್ನು ಕೆಳಗಿಳಿಸಿ ಪ್ರಜಾಸತ್ತೆ ಸ್ಥಾಪನೆಗಾಗಿ ನಡೆದ ಐತಿಹಾಸಿಕ ಘಟನೆಗಳು. ಆದರೆ ಫ್ರಾನ್ಸ್ ಕ್ರಾಂತಿಯ ನಂತರದಲ್ಲಿ ನೆಪೋಲಿಯನ್ ಎಂಬ ಸರ್ವಾಧಿಕಾರಿ ಬೆಳೆಯುತ್ತಾನೆ. ಜಾಗತಿಕ ಯುದ್ಧದ ಸಂದರ್ಭದಲ್ಲಿ ಹಿಟ್ಲರ್‌ನಂಥ ವ್ಯಕ್ತಿಕೇಂದ್ರಿತ ಆಡಳಿತಗಾರರು ಬೆಳೆಯುತ್ತಾರೆ. ಇವರು ವ್ಯಕ್ತಿಕೇಂದ್ರಿತ ರಾಜಕಾರಣಕ್ಕೆ ಆಧುನಿಕ ಕಾಲದಲ್ಲಿಯೂ ಕೆಟ್ಟ ಮಾದರಿಗಳನ್ನು ಕೊಟ್ಟುಹೋಗಿದ್ದಾರೆ. ಎರಡನೇ ಜಾಗತಿಕ ಮಹಾಯುದ್ಧದ ನಂತರ ಸ್ವಾತಂತ್ರ್ಯ ಪಡೆದ ಹಲವಾರು ದೇಶಗಳು ಪ್ರಜಾಪ್ರಭುತ್ವವನ್ನು ಆಯ್ಕೆ ಮಾಡಿಕೊಂಡರೂ ಈ ವ್ಯಕ್ತಿ ಪ್ರಧಾನ ರಾಜಕಾರಣದ ಸಂಸ್ಕೃತಿಯನ್ನು ನಾಶಮಾಡಲಾಗಿಲ್ಲ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಈ ವ್ಯಕ್ತಿ ಪ್ರಾಧಾನ್ಯದ ಜೊತೆಗೆ ಕುಟುಂಬ ಪ್ರಧಾನ ರಾಜಕಾರಣವು ವ್ಯಾಪಕವಾಗಿ ಬೆಳೆದಿದೆ. ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಆದಿಯಾಗಿ ಬಹುತೇಕ ಪ್ರಾದೇಶಿಕ ಪಕ್ಷಗಳು ಕುಟುಂಬ ರಾಜಕಾರಣವನ್ನು, ರಾಜಕುಮಾರರನ್ನು ರಾಜಕಾರಣದಲ್ಲಿ ಬೆಳೆಸಲು ಶ್ರಮಿಸುತ್ತಿವೆ.

ಸ್ವತಂತ್ರ ಭಾರತದ ಪ್ರಜಾಸತ್ತೆಯು ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯವನ್ನು ಪರಿಣಾಮಕಾರಿಯಾಗಿ ಜಾರಿ ಮಾಡದೇ ಇರುವುದರಿಂದ, ಅಸ್ಪೃಶ್ಯತೆ, ಹಸಿವು, ಬಡತನ, ನೋವು ಸಂಕಟಗಳನ್ನು ಎದುರಿಸುತ್ತಿರುವ ಜನರು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಮಾರ್ಗಗಳನ್ನು ಹುಡುಕುತ್ತಾರೆ. ರೈತ, ಕಾರ್ಮಿಕ, ದಲಿತ ಚಳವಳಿಗಳು ಹಿನ್ನಡೆ ಅನುಭವಿಸುತ್ತಿರುವ ಈ ಸಂದರ್ಭದಲ್ಲಿ ಶೋಷಿತ ಜನತೆ 'ಅವತಾರ ಪುರುಷ'ನ ನಿರೀಕ್ಷೆ ಮಾಡುತ್ತಾರೆ. ಜಾತಿ ವ್ಯವಸ್ಥೆ ಪ್ರಬಲವಾಗಿರುವ ನಮ್ಮ ಸಮಾಜದಲ್ಲಿ ಜಾತಿ ಸಂಘಟನೆಗಳ ನಾಯಕರು, ಜಾತಿಕೇಂದ್ರಿತ ರಾಜಕೀಯ ಪಕ್ಷಗಳು ಅವರಿಗೆ ಅನಿವಾರ್ಯ ಆಶ್ರಯಗಳಾಗುತ್ತವೆ. ಈ ಭಾವನೆ, ಸಂದರ್ಭಗಳೇ ವ್ಯಕ್ತಿಕೇಂದ್ರಿತ ರಾಜಕಾರಣಕ್ಕೆ ಮತ್ತು ಕುಟುಂಬಕೇಂದ್ರಿತ ರಾಜಕಾರಣಕ್ಕೆ ಕಾರಣಗಳಾಗುತ್ತವೆ. ಕಳೆದೆರಡು ದಶಕದಿಂದ ಇದು ಕೋಮು ರಾಜಕಾರಣಕ್ಕೂ ತಿರುಗಿದೆ.

ಬಲವಾಗಿ ಬೆಳೆದು ನಿಂತ ವ್ಯಕ್ತಿ ಪ್ರಧಾನ, ಕುಟುಂಬ ಪ್ರಧಾನ ರಾಜಕಾರಣವನ್ನು ತಡೆಯುವುದು, ಪ್ರಜಾಸತ್ತೆಯನ್ನು ಉಳಿಸಿಕೊಳ್ಳುವುದು ಸುಲಭದ ಕೆಲಸವಲ್ಲ. ಮೊದಲನೆಯದಾಗಿ ಸಂವಿಧಾನ ಕೊಟ್ಟ ಹಕ್ಕುಗಳ ತಿಳಿವಳಿಕೆಯನ್ನು ಜನಸಾಮಾನ್ಯರಿಗೆ ತಲುಪಿಸಬೇಕು. ಅವರು ಅನುಭವಿಸುತ್ತಿರುವ ನೋವು, ಸಂಕಟ, ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟಗಳನ್ನು ಪರಿಣಾಮಕಾರಿಯಾಗಿ ರೂಪಿಸಬೇಕು. ಇದು ಜನಪರ ಚಳವಳಿಗಳ ಜವಾಬ್ದಾರಿ. ಜಾತಿ, ಧರ್ಮ, ಭಾಷೆ, ಪ್ರಾಂತ, ವ್ಯಕ್ತಿಗಳ ಪ್ರಭಾವಕ್ಕೆ ಒಳಗಾದ ಜನತೆ ಒಕ್ಕೂಟ ವ್ಯವಸ್ಥೆಯ ಪ್ರಜೆಗಳು ಎಂಬ ಅಸ್ಮಿತೆಗೆ ಒಳಗಾಗಬೇಕು. ಜನವಿರೋಧಿ ನೀತಿಗಳನ್ನು ಅನುಸರಿಸುತ್ತಿರುವ ಪ್ರಭುತ್ವಗಳನ್ನು ಎದುರಿಸುವ ಮನೋಭಾವ ಬೆಳೆಯಬೇಕು. 12ನೇ ಶತಮಾನದಲ್ಲಿ ಬಸವಣ್ಣನವರು 'ಆನೀ ಬಿಜ್ಜಳಂಗೆ ಅಂಜುವೆನೆ ಅಯ್ಯಾ' ಎಂದಿದ್ದಾರೆ. ಬಸವಣ್ಣ ಮತ್ತು ವಚನಕಾರರು ನಮ್ಮ ನಾಡಿನಲ್ಲಿಯೇ ಒಂದು ಜನಪರ ಸಂಸ್ಕೃತಿಯನ್ನು ಹುಟ್ಟುಹಾಕಿದ್ದಾರೆ. ಇಂಥ ಸಂಸ್ಕೃತಿಯ ಚಿಂತನೆಗಳ ವ್ಯಾಪಕ ಪ್ರಚಾರ ನಡೆಯಬೇಕು.

ರಾಜಕೀಯ ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ ಜಾರಿಯಾಗಬೇಕು. ಪಕ್ಷದ ಸಾಮಾನ್ಯ ಕಾರ್ಯಕರ್ತರೂ ಪಕ್ಷದ ನೀತಿ ರೂಪಣೆಗಳಲ್ಲಿ, ನಾಯಕತ್ವದ ಆಯ್ಕೆಯ ಪ್ರಕ್ರಿಯೆಯಲ್ಲಿ ಭಾಗಿಯಾಗಬೇಕು. ಇಂದು ಎಡಪಕ್ಷಗಳು ಹೊರತುಪಡಿಸಿ ಬೇರೆ ಯಾವ ಪಕ್ಷವೂ ಆಂತರಿಕ ಪ್ರಜಾಸತ್ತೆಯನ್ನು ಪಾಲಿಸುತ್ತಿಲ್ಲ. ಸಿಪಿಐ, ಸಿಪಿಎಂ, ಇತರೆ ಎಡಪಕ್ಷಗಳಲ್ಲಿ ಶಾಖೆಯಿಂದ ಅಖಿಲ ಭಾರತ ಮಟ್ಟದ ಎಲ್ಲ ಹಂತಗಳಲ್ಲಿ ಪಕ್ಷದ ರಾಜಕೀಯ ಹಾಗೂ ಸಂಘಟನಾ ವರದಿಗಳ ಕರಡುಗಳನ್ನು ವಿಮರ್ಶಿಸುತ್ತಾರೆ.



ವಿವಿಧ ಹಂತಗಳ ನಾಯಕರ ಆಯ್ಕೆಯನ್ನು ಸಮ್ಮೇಳನ, ಮಹಾ ಅಧಿವೇಶನಗಳಲ್ಲಿ ಮಾತ್ರ ಮಾಡಲಾಗುತ್ತದೆ. ಇತ್ತೀಚೆಗೆ ಎಡಪಕ್ಷಗಳು ಆಂತರಿಕ ಚುನಾವಣೆಯಲ್ಲಿ ಆಯ್ಕೆಯಾದ ನಾಯಕರಿಗೆ ಅವಧಿಯ ಮಿತಿಯನ್ನು, ವಯಸ್ಸಿನ ಮಿತಿಯನ್ನು ಅಳವಡಿಸಿಕೊಂಡಿವೆ. ಅದೇ ರೀತಿ ಚುನಾಯಿತ ಪ್ರತಿನಿಧಿಗಳಿಗೂ ಮರುಸ್ಪರ್ಧೆಗೆ ಅವಧಿಯ ಮಿತಿಯನ್ನು ಹಾಕಿವೆ. ಇದು ಒಂದು ಪಕ್ಷದಲ್ಲಿ ಹೊಸ ನಾಯಕತ್ವವನ್ನು ಬೆಳೆಸುತ್ತಾ, ಏಕವ್ಯಕ್ತಿ ಅಧಿಕಾರವನ್ನು ತಡೆಯಲು ಅನುಕೂಲವಾಗುತ್ತದೆ. ಕಮ್ಯುನಿಸ್ಟ್ ಪಕ್ಷಗಳಲ್ಲೂ ದಶಕಗಳವರೆಗೆ ನಾಯಕರಾಗಿ, ಮುಖ್ಯಮಂತ್ರಿ, ಮಂತ್ರಿ, ಶಾಸಕರಾದವರಿದ್ದಾರೆ. ಆದರೆ ಈಗ ಪಕ್ಷದ ಸಂವಿಧಾನದಲ್ಲಿಯೇ ತಿದ್ದುಪಡಿ ತಂದು, ಹೊಸ ನೀತಿಗಳನ್ನು ಅಳವಡಿಸಲಾಗಿದೆ. ಬಹುತೇಕ ವ್ಯಕ್ತಿ ಪ್ರಧಾನ ಮತ್ತು ಕುಟುಂಬಾಧಾರಿತ ಪಕ್ಷಗಳು 'ನೇಮಕಾತಿ' ನೀತಿಯನ್ನು ಇಟ್ಟುಕೊಂಡಿವೆ. ಇದು ಪ್ರಜಾಸತ್ತಾತ್ಮಕ ನೀತಿಗೆ ವಿರುದ್ಧವಾದುದು. ಈ ನೀತಿಗಳು ಚುನಾವಣಾ ನೀತಿ ಸಂಹಿತೆ, ರಾಜಕೀಯ ಪಕ್ಷಗಳ ಸಂವಿಧಾನಗಳಲ್ಲಿ ಇರುತ್ತವೆಯಾದರೂ ಬಹುತೇಕ ಪಕ್ಷಗಳು ಅದನ್ನು ಜಾರಿಮಾಡುವುದಿಲ್ಲ. ಪಕ್ಷದ ಕಾರ್ಯಕರ್ತರು ಇದನ್ನು ಪ್ರಶ್ನೆ ಮಾಡುವ, ಪ್ರತಿಭಟಿಸುವ ಶಕ್ತಿಯನ್ನು ಹೊಂದಿರುವುದಿಲ್ಲ.

ಚುನಾವಣೆ ಸುಧಾರಣೆ ಕುರಿತು ಹಲವಾರು ಸಮಿತಿಗಳು ಮಾಡಿದ ಕೆಲವಾರು ಶಿಫಾರಸುಗಳನ್ನು ಅಳವಡಿಸಲಾಗಿದೆ. ಆದರೂ ಇಂದು ಚುನಾವಣಾ ವ್ಯವಸ್ಥೆ ಪ್ರಜಾಸತ್ತಾತ್ಮಕವಾಗಿ ಉಳಿದಿಲ್ಲ. ಡಾ. ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನವನ್ನು ದೇಶಕ್ಕೆ ಅರ್ಪಿಸಿದ ಸಂದರ್ಭದಲ್ಲಿ ಸಂವಿಧಾನವು ಜಾತಿ, ಧರ್ಮಗಳನ್ನು ಮೀರಿ ಜಾರಿಯಾಗಲಿ ಎಂದು ಆಶಿಸಿದ್ದರು. ಆದರೆ ಇಂದು ಕೋಮು, ಜಾತಿಗಳು ಸಂವಿಧಾನವನ್ನು ಮೀರಿ ಬೆಳೆದಿವೆ.

1998ರಲ್ಲಿ ಚುನಾವಣೆಗಾಗಿ 'ಪ್ರಭುತ್ವ ಹಣಕಾಸಿನ ನೀತಿ'ಗೆ ಸಂಬಂಧಪಟ್ಟಂತೆ ಒಂದು ಸಮಿತಿ ರಚಿಸಲಾಯಿತು. ಆ ಸಮಿತಿಯ ಅಧ್ಯಕ್ಷರಾಗಿದ್ದ ಇಂದ್ರಜಿತ್ ಗುಪ್ತಾ ಅವರು ಚುನಾವಣೆಗಳನ್ನು ನಡೆಸಲು ರಾಷ್ಟ್ರೀಯ ಮತ್ತು ರಾಜ್ಯ ನೋಂದಾಯಿತ ಪಕ್ಷಗಳಿಗೆ ವಸ್ತು, ಸೇವೆಯ ರೂಪದಲ್ಲಿ ಹಣಕಾಸಿನ ನೆರವು ಕೊಡಬೇಕೆಂದು, ಕಾರ್ಪೊರೇಟ್ ಕಂಪನಿಗಳು ರಾಜಕೀಯ ಪಕ್ಷಗಳಿಗೆ ಕೊಡುವ ದೇಣಿಗೆಯನ್ನು ನಿಷೇಧಿಸಬೇಕು ಎಂದು ಹೇಳಿದ್ದರು. ಇದು ರಾಷ್ಟ್ರೀಯ, ರಾಜ್ಯ ಮತ್ತು ವ್ಯಕ್ತಿ ಪ್ರಧಾನ, ಕುಟುಂಬಾಧಾರಿತ ಪಕ್ಷಗಳಿಗೆ ಮೊದಲು ಅನ್ವಯವಾಗಬೇಕು. ವ್ಯಕ್ತಿ ಪ್ರಧಾನ ಪಕ್ಷಗಳು ಜಾತಿ ಅಸ್ಮಿತೆ, ಹಣಕಾಸು ವ್ಯವಹಾರದಿಂದ ತಮ್ಮ ಪಕ್ಷಗಳ ಮೇಲೆ ನಿಯಂತ್ರಣ ಹೊಂದಿರುತ್ತವೆ. ಆ ಪಕ್ಷಗಳ ಸಾಮಾನ್ಯ ಕಾರ್ಯಕರ್ತರು ಅದೇ ಕಾರಣಕ್ಕೇ 'ವ್ಯಕ್ತಿ' ನಿಯಂತ್ರಣದಲ್ಲಿರುತ್ತಾರೆ.

ಪ್ರಸ್ತುತ ಸಂದರ್ಭದಲ್ಲಿ ರಾಷ್ಟ್ರೀಯ ಪಕ್ಷಗಳಿಗೂ, ಪ್ರಾದೇಶಿಕ ಪಕ್ಷಗಳಿಗೂ ನಾಯಕತ್ವ ಬೆಳೆಸುವ ವಿಧಾನ ಬದಲಾಗಬೇಕಿದೆ. ನಾಯಕರಿಗೆ ಕಾರ್ಯಕರ್ತರಿರಬೇಕೇ ಹೊರತು ಭಕ್ತರಿರಬಾರದು. ಪ್ರಜ್ಞಾವಂತ ಕಾರ್ಯಕರ್ತರು ಮಾತ್ರ ವ್ಯಕ್ತಿ ಪ್ರಧಾನ, ಕುಟುಂಬಾಧಾರಿತ ಪಕ್ಷಗಳನ್ನು ಬದಲಿಸಿ ಪ್ರಜಾಸತ್ತಾತ್ಮಕ ನೀತಿಗೊಳಪಡಿಸಬಲ್ಲರು. ಅಂಥ ಕಾರ್ಯಕರ್ತರ ಸಂಖ್ಯೆ ಬೆಳೆಯಲಿ. ನಾಯಕರ ಮಕ್ಕಳೇ, ಕುಟುಂಬದವರೇ ನಾಯಕರಾಗುವ ದುಃಸ್ಥಿತಿ ಕೊನೆಯಾಗಲಿ. 'ನಿರಂಕುಶ' ಮನೋಭಾವ ತೊಲಗಲಿ.

ಲೇಖಕ: ಸಿಪಿಐ ಮುಖಂಡ

ಒಪ್ಪಿತ ವ್ಯಕ್ತಿಕೇಂದ್ರಿತ ರಾಜಕಾರಣಕ್ಕೆ ವಿರೋಧವೇ ಇಲ್ಲ

> ಇಂದು ಭಾರತದಾದ್ಯಂತ ಎಲ್ಲ ರಾಷ್ಟ್ರೀಯ ಪಕ್ಷಗಳು ಮತ್ತು ಪ್ರಾದೇಶಿಕ ಪಕ್ಷಗಳು ವ್ಯಕ್ತಿಕೇಂದ್ರಿತ ರಾಜಕಾರಣವನ್ನೇ ನೆಚ್ಚಿಕೊಂಡಿವೆ. ಮಾರ್ಕ್ಸ್ ಮತ್ತು ಅಂಬೇಡ್ಕರ್ ಸಿದ್ಧಾಂತಗಳ ಮೇಲೆ ಅಧಿಕಾರಕ್ಕೆ ಬಂದ ಕಮ್ಯುನಿಸ್ಟ್ ಮತ್ತು ಬಿಎಸ್‌ಪಿಯಂತಹ ಪಕ್ಷಗಳೂ ಇದಕ್ಕೆ ಹೊರತಾಗಿಲ್ಲ. ಭ್ರಷ್ಟಾಚಾರವನ್ನು ಚುನಾವಣೆಯ ಅಸ್ತ್ರವನ್ನಾಗಿಸಿಕೊಂಡು ಅಧಿಕಾರಕ್ಕೆ ಬಂದ ಆಮ್ ಆದ್ಮಿ ಪಕ್ಷ ಕೂಡ ಈಗ ಕೇಜ್ರಿವಾಲ್ ಎಂಬ ವ್ಯಕ್ತಿಯ ಸುತ್ತಲೇ ಸುತ್ತುತ್ತಿದೆ

• ಡಾ. ರವಿಕುಮಾರ್ ಬಾಗಿ



ಭಾರತ ಒಂದು ಪ್ರಜಾಪ್ರಭುತ್ವ ರಾಷ್ಟ್ರವಾಗಿ ಕಣ್ಣು ಬಿಡುವ ಸಮಯದಲ್ಲಿ ಸಂವಿಧಾನ ರಚನಾ ಸಮಿತಿಯ ಕೊನೆಯ ಸಭೆಯಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು 'ಭವಿಷ್ಯದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಉಳಿಯಬೇಕಾದರೆ ವ್ಯಕ್ತಿ ಆರಾಧನೆ ಬೆಳೆಯಕೂಡದು' ಎಂದು ಎಚ್ಚರಿಸಿದ್ದರು. ಆದರೆ, ಭಾರತದ ರಾಜಕಾರಣಿಗಳಲ್ಲಿ ಈ ಎಚ್ಚರ ಮೂಡಲೇ ಇಲ್ಲ. ಸ್ವಾತಂತ್ರ್ಯದ ಆರಂಭದ ದಿನಗಳಿಂದಲೇ ಭಾರತದ ರಾಜಕಾರಣವು ವ್ಯಕ್ತಿಕೇಂದ್ರಿತವಾಗಿಯೇ ಇತ್ತು ಮತ್ತು ಅದು ಇಂದಿನ ವರೆಗೂ ಹಾಗೆಯೇ ಮುಂದುವರಿದಿದೆ.

1915ರಿಂದ 1947ರವರೆಗೂ ಇಡೀ ಜಾಗತಿಕ ವ್ಯವಸ್ಥೆ ವ್ಯಕ್ತಿಕೇಂದ್ರಿತವಾಗಿತ್ತು. ಆ ಕಾಲಘಟ್ಟದಲ್ಲಿ ಜಗತ್ತಿನ ಹಲವಾರು ದೇಶಗಳು ವಸಾಹತುಶಾಹಿಯಿಂದ ಬಿಡುಗಡೆಗೊಂಡು ವಿಭಜನೆಗೆ ಒಳಗಾಗಿದ್ದವು. ಈ ಸಂದರ್ಭದಲ್ಲಿ ಹೆಚ್ಚಾಗಿ ವ್ಯಕ್ತಿಕೇಂದ್ರಿತ ರಾಜಕಾರಣ ಮುನ್ನೆಲೆಗೆ ಬಂತು. ಕಳೆದ ಹತ್ತು ಹದಿನೈದು ವರ್ಷಗಳಲ್ಲಿ ವ್ಯಕ್ತಿಕೇಂದ್ರಿತ ರಾಜಕಾರಣ ವಿಶ್ವದ ತುಂಬ ಅಬ್ಬರಿಸುತ್ತಿದೆ.

ಇಂದು ಭಾರತದಾದ್ಯಂತ ಎಲ್ಲ ರಾಷ್ಟ್ರೀಯ ಪಕ್ಷಗಳು ಮತ್ತು ಪ್ರಾದೇಶಿಕ ಪಕ್ಷಗಳು ವ್ಯಕ್ತಿಕೇಂದ್ರಿತ ರಾಜಕಾರಣವನ್ನೇ ನೆಚ್ಚಿಕೊಂಡಿವೆ. ಮಾರ್ಕ್ಸ್ ಮತ್ತು ಅಂಬೇಡ್ಕರ್ ಸಿದ್ಧಾಂತಗಳ ಮೇಲೆ ಅಧಿಕಾರಕ್ಕೆ ಬಂದ ಕಮ್ಯುನಿಸ್ಟ್ ಮತ್ತು ಬಿಎಸ್‌ಪಿಯಂತಹ ಪಕ್ಷಗಳೂ ಇದಕ್ಕೆ ಹೊರತಾಗಿಲ್ಲ. ಭ್ರಷ್ಟಾಚಾರ ನಿರ್ಮೂಲನೆಯನ್ನು ಚುನಾವಣೆಯ ಅಸ್ತ್ರವನ್ನಾಗಿಸಿಕೊಂಡು ಅಧಿಕಾರಕ್ಕೆ ಬಂದ ಎಎಪಿ ಕೂಡ ಈಗ ಕೇಜ್ರಿವಾಲ್ ಎಂಬ ವ್ಯಕ್ತಿಯ ಸುತ್ತಲೇ ಸುತ್ತುತ್ತಿದೆ.

ಭಾರತದ ರಾಜಕಾರಣದಲ್ಲಿ ಯಾವ-ಯಾವ ಸಮುದಾಯಗಳ ನಾಯಕರು ರಾಜಕಾರಣದ ಮುನ್ನೆಲೆಯಲ್ಲಿದ್ದು ಅಧಿಕಾರದ ಗದ್ದುಗೆಯ ಸುತ್ತ ಗಿರಕಿ ಹೊಡೆಯುತ್ತಿದ್ದಾರೆ ಎನ್ನುವುದನ್ನು ಮೇಲ್ನೋಟಕ್ಕೆ ಗಮನಿಸಿದರೆ ಸಾಕು. ಇಲ್ಲಿನ ಊಳಿಗಮಾನ್ಯ ವ್ಯವಸ್ಥೆ ತನ್ನ ಕಬಂಧ ಬಾಹುಗಳನ್ನು ಸಡಿಲಿಸಿಲ್ಲದಿರುವುದು ಗೊತ್ತಾಗುತ್ತದೆ. ಹಿಂದಿನಿಂದಲೂ ಹಳ್ಳಿಗಳಲ್ಲಿ ಪಟೇಲ, ಶ್ಯಾನುಭೋಗ, ಕರಣಿಕ ಮುಂತಾದವರ ಮೂಲಕ ಇದು ಚಲಾವಣೆಯಲ್ಲಿತ್ತು. ಅದು ಈಗ ರಾಜಕೀಯ ಪಕ್ಷಗಳಲ್ಲಿ ದೊಡ್ಡಮಟ್ಟದಲ್ಲಿ ಬಿಂಬಿತವಾಗುತ್ತಿದೆ.

ಈಗ ಅದು ಒಪ್ಪಿತವಾಗಿರುವುದರಿಂದ ಯಾರೂ ಅದನ್ನು ವಿರೋಧಿಸಲೊಲ್ಲರು. ಯಾರು ನಾಯಕರಾಗಿ ಬಿಂಬಿತವಾಗುತ್ತಾರೋ ಅವರ ಹಿಂಬಾಲಕರು ಜೋರಾಗಿರುತ್ತಾರೆ. ಈ ಜನಪ್ರತಿನಿಧಿಗಳು ಕೂಡ ತಮ್ಮನ್ನು ಬಲಪಡಿಸಿಕೊಳ್ಳಲು ಬೇಕಾಗಿರುವ ಅಧಿಕಾರ ಸೂತ್ರಗಳನ್ನು ರಾಜಕೀಯ ತಂತ್ರಗಳನ್ನು ಇನ್ನಿಲ್ಲದಂತೆ ಬಳಸುತ್ತಾರೆ. ಅದು ಕೆಲವು ಕಡೆ ಜಾತಿಯಿಂದ ಕೆಲವು ಕಡೆ ಹಣದಿಂದ ಮತ್ತೆ ಕೆಲವು ಕಡೆ ಪ್ರಚಾರದಿಂದ ಬರುತ್ತದೆ. ಆ ಕಾರಣದಿಂದಲೇ ಇಲ್ಲಿ ಜನನಾಯಕರೆನಿಸಿಕೊಂಡವರು ಬಹುಬೇಗನೆ ಆರಾಧನೆಗೆ ಒಳಗಾಗುತ್ತಾರೆ.

ಸ್ವಾತಂತ್ರ್ಯ ಬಂದಾಗಿನಿಂದ ಹಿಡಿದು ಇಲ್ಲಿಯವರೆಗೂ ಬಲಿಷ್ಠ ಜಾತಿಗಳೇ ಅಧಿಕಾರ ಹಿಡಿಯುವ ಕಸರತ್ತಿನಲ್ಲಿ ಮುನ್ನೆಲೆಯಲ್ಲಿರುವುದನ್ನು ತಳ್ಳಿ ಹಾಕಲಾಗದು. ಇಲ್ಲಿಯವರೆಗೂ ಆಳ್ವಿಕೆ ನಡೆಸಿದ ಮುಖ್ಯಮಂತ್ರಿಗಳನ್ನು, ಪ್ರಧಾನಿಗಳನ್ನು ನೋಡಿದರೆ ಇದು ಗೊತ್ತಾಗುತ್ತದೆ. ಈ ರೀತಿಯ ರಾಜಕಾರಣಿಗಳು ಎಂದೂ ಸಂವಿಧಾನದ ಮೌಲ್ಯಗಳನ್ನಾಗಲಿ, ಸೈದ್ಧಾಂತಿಕ ರಾಜಕಾರಣವನ್ನಾಗಲಿ ಎತ್ತಿಹಿಡಿಯಲಿಲ್ಲ. ಬದಲಾಗಿ ಜನರಲ್ಲಿ ಭ್ರಮೆಗಳನ್ನು ತುಂಬಿದರು ಮತ್ತು ತಮ್ಮ ಮತ ಬ್ಯಾಂಕ್ ರಾಜಕಾರಣಕ್ಕೆ ಏನು ಬೇಕಾಗಿತ್ತೋ ಅವೆಲ್ಲವನ್ನೂ ಮಾಡಿದರು. ಇಂದು ಭಾರತವನ್ನೂ ಒಳಗೊಂಡಂತೆ ಜಾಗತಿಕ ಮಟ್ಟದಲ್ಲಿ ಮಾಧ್ಯಮಗಳು ಆಧುನಿಕ ರಾಜಕಾರಣಕ್ಕೆ ಬೇಕಾದ ನಾಯಕರನ್ನು ಸೃಷ್ಟಿ ಮಾಡುತ್ತವೆ. ಇದರ ಹಿಂದೆ ಊಳಿಗಮಾನ್ಯ ಮನಸ್ಥಿತಿ ಮತ್ತು ಬಂಡವಾಳಶಾಹಿಗಳು ವ್ಯವಸ್ಥಿತವಾಗಿ ತಂತ್ರ ರೂಪಿಸುತ್ತವೆ.

2014ರ ಲೋಕಸಭಾ ಚುನಾವಣೆಯ ವೇಳೆಗೆ ನರೇಂದ್ರ ಮೋದಿಯವರನ್ನು ಅಭಿವೃದ್ಧಿಯ ಹರಿಕಾರ ಎಂದು ಬಿಂಬಿಸಲಾಯಿತು. ಗುಜರಾತ್ ಮಾದರಿ ಬಗ್ಗೆ ಎಲ್ಲೆಲ್ಲೂ ಪ್ರಚಾರ ಮಾಡಲಾಯಿತು. ಆದರೆ ಇಂದಿಗೂ ಗುಜರಾತ್‌ನ ಅಭಿವೃದ್ಧಿ ಮಾದರಿ ದೇಶದೆದುರು ಬಿಡಿಸಲಾಗದ ಕಗ್ಗಂಟಾಗಿಯೇ ಉಳಿಯಿತು. ಒಂದು ಪಕ್ಷ ಒಬ್ಬ ನಾಯಕನನ್ನು ರೂಪಿಸುವುದು ಎಂದರೆ ಆ ಪಕ್ಷದ ತಂತ್ರಗಾರಿಕೆಯ ಭಾಗವೂ ಆಗಿರುತ್ತದೆ. ಹೀಗೆ ವ್ಯಕ್ತಿಕೇಂದ್ರಿತ ನೆಲೆಯಲ್ಲಿ ರೂಪುಗೊಂಡ ನಾಯಕ ತನ್ನ ರಾಜಕೀಯ ಅಸ್ತಿತ್ವವನ್ನು ಇನ್ನಷ್ಟು ಗಟ್ಟಿಗೊಳಿಸಲು ಮತದಾರರನ್ನು ಹಾಗೂ ತನ್ನ ಸುತ್ತಲಿನವರನ್ನು ಮೆಚ್ಚಿಸಲು ಸದಾ ಹಂಬಲಿಸುತ್ತಿರುತ್ತಾನೆ. ಭಾರತದಲ್ಲಿ ಎಷ್ಟೇ ಸೈದ್ಧಾಂತಿಕ ರಾಜಕಾರಣವನ್ನು ಮಾತಾಡಿದರೂ ಅದರ ಮುನ್ನೆಲೆಯಲ್ಲಿರುವುದು ವ್ಯಕ್ತಿಕೇಂದ್ರಿತ ರಾಜಕಾರಣವೇ.

ಸ್ವತಂತ್ರ ಭಾರತದ ಆರಂಭಿಕ ನಾಯಕರಾದ ಜವಾಹರಲಾಲ್ ನೆಹರೂ, ಗಾಂಧಿವಾದದ ಆದರ್ಶಗಳನ್ನಿಟ್ಟುಕೊಂಡು ಅಧಿಕಾರ ನಡೆಸಿದರೂ ಇತರ ರಾಜಕಾರಣಿಗಳು ತಮ್ಮ ಸುತ್ತಲೇ ಗಿರಕಿ ಹೊಡೆಯುವಂತೆ ಮಾಡಿಕೊಂಡಿದ್ದರು. ನೆಹರೂ ನಂತರ ಇಂದಿರಾಗಾಂಧಿ ಕೂಡ ತಮ್ಮ ಜನಪ್ರಿಯತೆಯನ್ನು ಬಳಸಿಕೊಂಡು ವ್ಯಕ್ತಿಕೇಂದ್ರಿತ ರಾಜಕಾರಣವನ್ನೇ ನಡೆಸಿದ್ದರು. 'ಕಾಂಗ್ರೆಸ್ ಎಂದರೆ ಇಂದಿರಾ, ಇಂದಿರಾ ಎಂದರೆ ಕಾಂಗ್ರೆಸ್' ಎನ್ನುವ ಮಟ್ಟಿಗೆ ಅವರ ರಾಜಕಾರಣ ಇತ್ತು. ಈ ಇಬ್ಬರೂ ಸಂವಿಧಾನ ಮತ್ತು ಜಾತ್ಯತೀತ ಮೌಲ್ಯಗಳನ್ನಿಟ್ಟುಕೊಂಡು ತಕ್ಕಮಟ್ಟಿನ ಜನಪರವಾದ ಆಡಳಿತ ನೀಡಲು ಯತ್ನಿಸಿದ್ದರು. ಒಂದು ಹಂತದಲ್ಲಿ ಇಂದಿರಾಗಾಂಧಿಯ ವ್ಯಕ್ತಿಕೇಂದ್ರಿತ ಆಡಳಿತ ಪರಾಕಾಷ್ಠೆಗೆ ತಲುಪಿ ತುರ್ತುಪರಿಸ್ಥಿತಿಯನ್ನು ಹೇರುವುದರ ಮೂಲಕ ಪ್ರಜಾಪ್ರಭುತ್ವಕ್ಕೆ ಮೊದಲ ಪೆಟ್ಟು ಕೊಟ್ಟರು.

ನಂತರ, ರಾಜೀವ್ ಗಾಂಧಿ, ಅಟಲ್ ಬಿಹಾರಿ ವಾಜಪೇಯಿ, ನರೇಂದ್ರ ಮೋದಿ, ಸೋನಿಯಾ ಗಾಂಧಿ, ರಾಹುಲ್ ಗಾಂಧಿಯಂತಹವರನ್ನು ದೆಹಲಿ ಗದ್ದುಗೆಯ ಮಟ್ಟದಲ್ಲಿ ಹೆಸರಿಸಿದರೆ ರಾಜ್ಯಗಳ ಮಟ್ಟದಲ್ಲಿ ದೇವೇಗೌಡ, ಸಿದ್ಧರಾಮಯ್ಯ, ಯಡಿಯೂರಪ್ಪ, ಜಯಲಲಿತಾ, ಕರುಣಾನಿಧಿ, ಶರದ್ ಪವಾರ್, ಮುಲಾಯಂ ಸಿಂಗ್ ಯಾದವ್, ಬಾಳಾಠಾಕ್ರೆ, ಮಾಯಾವತಿ, ಮಮತಾ ಬ್ಯಾನರ್ಜಿ, ಪಿಣರಾಯಿ ವಿಜಯನ್ ಇವರೆಲ್ಲರೂ ವ್ಯಕ್ತಿಕೇಂದ್ರಿತ ರಾಜಕಾರಣದಿಂದಲೇ ರೂಪುಗೊಂಡವರು. ಇಂತಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ರೂಪುಗೊಂಡ ನಾಯಕರನ್ನು ರಾಜಕಾರಣಿಗಳು ಮತ್ತು ಮತದಾರರು ಒಪ್ಪಿಕೊಂಡಂತಿದೆ.

ಈ ವ್ಯಕ್ತಿಕೇಂದ್ರಿತ ರಾಜಕಾರಣದ ಮತ್ತೊಂದು ಅಪಾಯವೆಂದರೆ ಇದು ಕುಟುಂಬ ರಾಜಕಾರಣಕ್ಕೂ, ಸರ್ವಾಧಿಕಾರಕ್ಕೂ ಎಡೆಮಾಡಿಕೊಡುತ್ತದೆ. ಕರ್ನಾಟಕವನ್ನೇ ಉದಾಹರಿಸುವುದಾದರೆ ಬಂಗಾರಪ್ಪ, ದೇವೇಗೌಡ, ಯಡಿಯೂರಪ್ಪ, ಸಿದ್ಧರಾಮಯ್ಯ, ಜಾರಕಿಹೊಳಿ ಕುಟುಂಬ... ಎಲ್ಲರೂ ವ್ಯಕ್ತಿಕೇಂದ್ರಿತ ರಾಜಕಾರಣವನ್ನೇ ಮಾಡಿದ್ದಾರೆ. ಹೀಗೆ ಪಕ್ಷಭೇದವಿಲ್ಲದೆ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ವ್ಯಕ್ತಿಕೇಂದ್ರಿತ ರಾಜಕಾರಣ ಪಸರಿಸಿದೆ. ಇವರ ಮಕ್ಕಳಿಗೆ ರಾಜಕೀಯ ಅಧಿಕಾರವೆಂಬುದು ಯಾವುದೇ ಪರಿಶ್ರಮವಿಲ್ಲದೆ, ಅನುಭವವಿಲ್ಲದಿದ್ದರೂ ದೊರೆಯುತ್ತದೆ. ಇಂಥವರಲ್ಲಿ ಅನೇಕರಿಗೆ ಯಾವುದೇ ಸಂಸದೀಯ ಅನುಭವವಿಲ್ಲದೆಯೂ ಪ್ರಜಾಪ್ರಭುತ್ವದ ಅತ್ಯುನ್ನತ ಸಂಸ್ಥೆ ಎನ್ನಿಸುವ ಸಂಸತ್ತಿಗೆ ಹೋಗುತ್ತಾರೆ.

ಇಂದು ಬಿಜೆಪಿಯು ತನ್ನ ಸಿದ್ಧಾಂತವಾದ ಒಂದು ದೇಶ, ಒಂದು ಭಾಷೆ, ಒಂದು ಧರ್ಮ ಎನ್ನುವ ಪ್ರತಿಪಾದನೆಯೊಂದಿಗೆ ಒಬ್ಬನೇ ನಾಯಕನಿರಬೇಕು ಎನ್ನುವ ವಾದವನ್ನೂ ಚಾಲ್ತಿಗೆ ತಂದಿದೆ. ಇದರ ಫಲವೇ ನರೇಂದ್ರ ಮೋದಿಯನ್ನು ದೇಶದ ಪ್ರಧಾನಿ ಅಭ್ಯರ್ಥಿಯಾಗಿ ಬಿಂಬಿಸಿದ್ದು. ದೇಶದ ಜ್ವಲಂತ ಸಮಸ್ಯೆಗಳಾದ, ನಿರುದ್ಯೋಗ, ಆರ್ಥಿಕ ಹಿಂಜರಿತಗಳನ್ನು ಮರೆಮಾಡಿ, ತಾವು ಆರಾಧಿಸುವ ವ್ಯಕ್ತಿ ಹೇಳುವ ಸುಳ್ಳುಗಳನ್ನೇ ನಂಬುವ ಸ್ಥಿತಿಗೆ ವ್ಯಕ್ತಿಕೇಂದ್ರಿತ ರಾಜಕಾರಣವು ಜನರನ್ನು ತಲುಪಿಸಿದೆ.

ಲೇಖಕ: ಪ್ರಾಧ್ಯಾಪಕ, ನ್ಯಾಷನಲ್ ಕಾಲೇಜ್



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 186

ಅವಧ್ಯನಾದ ದಧೀಚಿ

ಶುಕ್ರಾಚಾರ್ಯನಿಂದ ಮೃತ್ಯುಂಜಯಮಂತ್ರದ ಉಪದೇಶ ಪಡೆದ ದಧೀಚಿಯು ಕಾಡಿಗೆ ಹೋಗಿ, ಮಂತ್ರವನ್ನು ವಿಧಿವತ್ತಾಗಿ ಜಪಿಸುತ್ತಾ, ಶಿವನ ಸಾಕ್ಷಾತ್ಕಾರಕ್ಕೆ ತಪಸ್ಸು ಮಾಡಿದ. ದಧೀಚಿಮುನಿಯ ಭಕ್ತಿಗೆ ಮೆಚ್ಚಿದ ಶಂಕರನು ಪ್ರತ್ಯಕ್ಷನಾದ. ಶಿವ, 'ಎಲೈ ಮುನಿ, ಬೇಕಾದ ವರಗಳನ್ನು ಕೇಳಿಕೋ' ಎಂದ. ಶಿವನ ಮಾತನ್ನು ಕೇಳಿ ದಧೀಚಿಯು ಶಿವನನ್ನು ಭಕ್ತಿಯಿಂದ ನಮಸ್ಕರಿಸಿ ವಿನಯದಿಂದ, 'ಓ ಮಹಾದೇವನೆ, ನನ್ನ ಮೂಳೆಯು ವಜ್ರದಂತೆ ಬಲವಾಗಬೇಕು. ನಾನು ಅವಧ್ಯನಾಗಬೇಕು. ನನ್ನನ್ನು ಯಾರೂ ಕೊಲ್ಲಬಾರದು. ನನಗೆ ಯಾವ ರೀತಿಯಿಂದಲೂ ದೀನತೆಯುಂಟಾಗಬಾರದು. ಈ ಮೂರು ವರಗಳನ್ನು ನನಗೆ ಕೊಡು' ಎಂದು ಪ್ರಾರ್ಥಿಸಿದ.

ಪರಮೇಶ್ವರನು ಹಾಗೆಯೇ ಆಗಲೆಂದು, ಮೂರು ವರಗಳನ್ನು ಕರುಣಿಸಿದ. ಶಿವನಿಂದ ಅವಧ್ಯತ್ವ, ವಜ್ರಾಸ್ಥಿತ್ವ ಮತ್ತು ಅದೀನತೆ ಎಂಬ ವರಗಳನ್ನು ಪಡೆದ ದಧೀಚಿಯು ಕ್ಷುವರಾಜನ ಬಳಿಗೆ ಬಂದು ಕಾಲಿನಿಂದ ಆ ರಾಜನ ಶಿರಸ್ಸನ್ನು ಒದ್ದ. ಕ್ಷುವರಾಜನು ಕೋಪಗೊಂಡು ತಾನು ವಿಷ್ಣುಭಕ್ತನೆಂಬ ಗರ್ವದಿಂದ ದಧೀಚಿಯ ಎದೆಯಲ್ಲಿ ವಜ್ರಾಯುಧದಿಂದ ಬಲವಾಗಿ ಪ್ರಹರಿಸಿದ. ಆದರೆ ಆ ಹೊಡೆತದಿಂದ ದಧೀಚಿಗೆ ಯಾವ ತೊಂದರೆಯೂ ಆಗಲಿಲ್ಲ. ಅದನ್ನು ನೋಡಿ ಕ್ಷುವರಾಜನು ತುಂಬಾ ಆಶ್ಚರ್ಯಗೊಂಡ.

ವಜ್ರಕ್ಕೂ ವಧ್ಯನಲ್ಲದ ದಧೀಚಿಮುನಿಯ ಮಹಿಮೆಯನ್ನೂ, ಅದೀನತೆಯನ್ನೂ (ನಿರ್ಭಯ) ನೋಡಿ ಕ್ಷುವರಾಜನು ಮನಸ್ಸಿನಲ್ಲಿ ತುಂಬಾ ಆಶ್ಚರ್ಯಗೊಂಡ. ದಧೀಚಿಮುನಿಯಿಂದ ಪರಾಜಿತನಾದ ಮೇಲೆ ಕ್ಷುವರಾಜನು ಅರಣ್ಯಕ್ಕೆ ತೆರಳಿದ. ಅಲ್ಲಿ ಹರಿಯನ್ನು ಭಕ್ತಿಯಿಂದ ಆರಾಧಿಸಿದ. ಕ್ಷುವರಾಜನ ಪೂಜೆಯಿಂದ ಪ್ರಸನ್ನನಾದ ಮಧುಸೂದನನು ಅವನಿಗೆ ದಿವ್ಯದೃಷ್ಟಿಯನ್ನು ಕೊಟ್ಟ. ದಿವ್ಯದೃಷ್ಟಿಯಿಂದ ಜನಾರ್ದನನ್ನು ಪ್ರತ್ಯಕ್ಷವಾಗಿ ನೋಡಿದ ಕ್ಷುವರಾಜನು ಹರ್ಷಗೊಂಡು, ಪ್ರಿಯವಾದ ಮಾತುಗಳಿಂದ ಹರಿಯನ್ನು ಸ್ತುತಿಸಿದ.

ದೇವತೆಗಳಿಂದಲೂ ಸ್ತುತಿಸಲ್ಪಡುವ ದೇವದೇವನಾದ ನಾರಾಯಣನನ್ನು ವಿಧಿವತ್ತಾಗಿ ಪೂಜಿಸಿ, ಭಕ್ತಿಯಿಂದ ಸ್ತುತಿಸಿದ. ನಂತರ ಹೀಗೆ ವಿಜ್ಞಾಪಿಸಿಕೊಂಡ, 'ಓ ಭಗವಂತನಾದ ಹರಿಯೇ, ದಧೀಚನೆಂಬ ಓರ್ವ ಬ್ರಾಹ್ಮಣನಿರುವನು. ಅವನು ಧರ್ಮವನ್ನು ಬಲ್ಲವನೂ, ವಿನೀತನೂ ಆಗಿದ್ದು, ಹಿಂದೆ ನನ್ನ ಪ್ರಿಯಮಿತ್ರನಾಗಿದ್ದ. ಅವನು ಮೃತ್ಯುಂಜಯನಾದ ಮಹಾದೇವನನ್ನು ಆರಾಧಿಸಿ, ಯಾರೂ ಅವನನ್ನು ಕೊಲ್ಲಲಾಗದಂತಹ ವರವನ್ನು ಪಡೆದಿರುವನು. ಇಂತಹ ಮುನಿಯು ಎಲ್ಲರೆದುರಿನಲ್ಲಿ ಕಾಲಿನಿಂದ ನನ್ನ ತಲೆಯ ಮೇಲೆ ಒದ್ದು ಅಪಮಾನಿಸಿದ. ಓ ಹರಿ, ಮೃತ್ಯುಂಜಯನ ವರದಿಂದ ಕೊಬ್ಬಿರುವ ಆ ಮುನಿಯು, ನನಗೆ ಯಾವನಿಂದಲೂ ಭಯವಿಲ್ಲ ಎಂದು ಗರ್ವದಿಂದ ನುಡಿಯುತ್ತಿರುವನು. ಅವನ ಸೊಕ್ಕನ್ನು ಮುರಿಯಬೇಕು. ಅಂಥ ವರವನ್ನು ನನಗೆ ನೀಡು' ಎಂದು ಪ್ರಾರ್ಥಿಸಿದ.

ದಧೀಚಿಯು ಶಿವನ ವರದಿಂದ ಅವಧ್ಯನಾದುದನ್ನು ಕೇಳಿ ಹರಿಯು ಶಿವನ ಮಹಾಮಹಿಮೆಯನ್ನು ಸ್ಮರಿಸಿ, ಕ್ಷುವರಾಜನಿಗೆ ಹೇಳಿದ, 'ಎಲೈ ಕ್ಷುವ ರಾಜೇಂದ್ರನೇ, ರುದ್ರಭಕ್ತರಾದ ಬ್ರಾಹ್ಮಣರಿಗೆ ಭಯವಿಲ್ಲವೇ ಇಲ್ಲ. ಈಗ ನಾನು ದಧೀಚಿಮುನಿಗೆ ವಿರುದ್ಧವಾಗಿ ನಿನಗೆ ಸಹಾಯವನ್ನು ಮಾಡಿದರೆ, ಆ ಮುನಿಯು ನನಗೂ ನನ್ನನ್ನಾಶ್ರಯಿಸಿರುವ ದೇವತೆಗಳಿಗೂ ಶಾಪವನ್ನು ಕೊಡುವನು. ಆ ಮುನಿಯ ಶಾಪದಿಂದ ಮುಂದೆ ನನಗೆ ದಕ್ಷಯಜ್ಞದಲ್ಲಿ ಪರಮೇಶ್ವರನಿಂದ ಕೆಡಕುಂಟಾಗುವುದು. ಆದರೂ ನೀನು ದಧೀಚಿಮುನಿಯನ್ನು ಜಯಿಸುವಂತೆ ಯತ್ನವೊಂದನ್ನು ಮಾಡುವೆ' ಎಂದು ಭರವಸೆ ನೀಡಿದ.

ಹರಿಯ ಮಾತನ್ನು ಕೇಳಿ ಕ್ಷುವರಾಜನಿಗೆ ಸಂತೋಷವಾಗಿ, ಹರಿಯ ಸಹಾಯಕ್ಕಾಗಿ ಅಲ್ಲಿಯೇ ನಿಂತ. ಇಲ್ಲಿಗೆ ಸತೀಖಂಡದ ಮೂವತ್ತೆಂಟನೆಯ ಅಧ್ಯಾಯ ಮುಗಿಯುತ್ತದೆ.

ಪದಬಂಧ 5034

– ವಿದ್ಯಾ ವಿನಯ್

1			2		■	3	4	
	■	■		■	■	■		■
	■	■	5		6			■
7	8		■	■		■	■	■
■		■	9			■	10	■
■	■	■		■	■	11		12
■	13				14	■	■	
■		■	■	■		■	■	
15			■	16				

ಎಡದಿಂದ ಬಲಕ್ಕೆ

1.ದಾಹ ತೀರಿಸಿಕೊಂಡವ ನೀಡಿರುವ ದೃಷ್ಟಾಂತ(5)
3.ಹುಟ್ಟು ಈ ರೀತಿ ಬಂದಿದೆ(3)
5.ಕೈ ಮುಂದು ಮಾಡಿ ಬಾರಿಸಿರುವ ಚಪ್ಪಾಳೆ(5)
7. ಅಭಿನಯಿಸುವುದನ್ನು ಹೀಗೆನ್ನಿ (3)
9.ಪುನಃ ಪುನಃ ತೋರುತ್ತಿರುವ ವೈಯ್ಯಾರ(3)
11.ತುಂಬಿ ಹರಿಯುವಿಕೆ (3)
13.ನೆತ್ತರಿನಿಂದ ಇರಿಸಿರುವ ಬೊಟ್ಟು(5)
15.ಆತಂಕದಲ್ಲಿರುವ ಕೊಲೆಗಾರ (3)
16. ಅಡುಗೆ ಮಾಡುವುದರಲ್ಲಿ ನಿಸ್ಸೀಮನೀತ(5)

ಮೇಲಿಂದ ಕೆಳಕ್ಕೆ

1. ದಾಸಿ ತೋರಿಸುತ್ತಿರುವ ಅಲಕ್ಷ್ಯ! (4)
2.ರಸ ಸ್ವಾದನೆಯನ್ನು ಬಲ್ಲವನು(3)
4.ತಿರುಗಿ ನೋಡಿದರೂ ಅಕ್ಷಿ ಕಾಣುತ್ತಿದೆ-ಯಲ್ಲಾ! (3)
6.ತಾರೀಕು ನೋಡುತ್ತಾ ವ್ಯಕ್ತಪಡಿಸಿರುವ ಮೆಚ್ಚಿಗೆ(3)
8.ತಟಕ್ಕನೆ ನುಗ್ಗಿ ಬಂದಿರುವ ಕಳ್ಳ(2)
9.ಒಡನೆಯೇ ಕಾಣಿಸಿಕೊಂಡಿರುವ ಯಜಮಾನತಿ(3)
10.ಏಳು ದಿನಗಳ ಅವಧಿ ಉಲ್ಟಾ ಕಾಣುತ್ತಿದೆ(2)
12.ಹರಿಯ ಮುಂದಿರಿಸಿದ ಅಗಲವಾದ ತಟ್ಟೆ(4)
13.ವಿರಳವಾಗಿ ಕಾಣುತ್ತಿರುವ ರಕ್ತ(3)
14.ಈತ ಪ್ರಾಣಿಗಳನ್ನು ಕಡಿಯುವವನು(3)

5033ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚದುರಂಗ 3.ಮತಿಹೀನ
5.ಯಾಚಕ 6.ದಿನಕರ
8.ರಸಮಯ 10.ಕಬಳಿಸು
12.ಅವಾಂತರ 14.ದಡಿಯ
15.ವರ್ಧಮಾನ 16.ತರಕಾರಿ

ಮೇಲಿಂದ ಕೆಳಕ್ಕೆ:
1.ಚತುಷ್ಪಾದಿ 2.ಗಡಿಯಾರ
3.ಮಧುಕರ 4.ನಡುಪ್ರಾಯ
7.ನವಾಬ 9.ಮಹಂತ
10.ಕಲರವ 11.ಸುದರ್ಶನ
12.ಅಯಸ್ಕಾಂತ 13.ರಹದಾರಿ

ಸುಡೊಕು 5420

			9		2	1		6
1		6					8	
	8	2		6			4	5
7								
	5		7	1		2		8
4					6			7
2		5		7			6	
	6					8		
8		1	6		3		2	9

5419 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜುಲೈ 30, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುದ್ಧ ದ್ವಿತೀಯ ಗಂ. 27-01 ನಕ್ಷತ್ರ: ಆಶ್ಲೇಷ ಗಂ. 12-13 ಯೋಗ: ವ್ಯತೀಪಾತ ಗಂ. 19-01, ಕರಣ: ಬಾಲವ ಗಂ. 14-14, ಕರ್ಕಾಟಕ ಮಾಸದ 13ನೇ ದಿನ.
ರಾಹುಕಾಲ : ಬೆಳಿಗ್ಗೆ 09:00 – 10:30
ಸೂರ್ಯೋದಯ : 06-19 ಸೂರ್ಯಾಸ್ತ : 06-55
ಮುಸ್ಲಿಂ ದಿನಾಂಕ : 30 ಜುಲ್‌ಹಿಜಾನ್
ಅದೃಷ್ಟ ಸಂಖ್ಯೆ : 1, 8

ಮೇಷ : ವ್ಯವಹಾರಗಳಲ್ಲಿ ಮುಂದಾಲೋಚನೆ ಇಲ್ಲದೇ ಯಾವುದೇ ಭರವಸೆ ನೀಡಬೇಡಿ. ಹೊಸದನ್ನು ಕಲಿಯುವ ಉತ್ಸಾಹದಿಂದ ಮುನ್ನುಗ್ಗಿದಲ್ಲಿ ಯಶಸ್ಸು ಖಂಡಿತ ಲಭಿಸುವುದು. ಆಪಾದನೆಗಳು ಬರುವ ಸಾಧ್ಯತೆಗಳಿವೆ.

ವೃಷಭ: ಈ ದಿನ ಹೂಡಿಕೆಯ ವಿಚಾರದಲ್ಲಿ ಬಂಗಾರ ಖರೀದಿಯ ಬಗ್ಗೆ ಯೋಚಿಸಬಹುದು. ನಿಮ್ಮ ಅರ್ಹತೆಗೆ ತಕ್ಕಂತಹ ಸ್ಥಾನಮಾನ ಲಭಿಸುವವರೆಗೆ ತಾಳ್ಮೆಯಿಂದ ಇರಿ. ಮನೆ ನಿರ್ಮಾಣದ ಕೆಲಸಗಳು ಭರದಿಂದ ಸಾಗುವುವು.

ಮಿಥುನ: ಅವಿವಾಹಿತರಿಗೆ ಮನಸ್ಸಿಗೆ ಇಷ್ಟವಾಗುವ ರೀತಿಯ ಸಂಬಂಧಗಳು ಈ ದಿನ ಪ್ರಾಪ್ತಿಯಾಗುತ್ತದೆ. ಚಿಲ್ಲರೆ ವ್ಯಾಪಾರಿಗಳಿಗೆ ತೃಪ್ತಿಕರ ಲಾಭ ಸಿಗಲಿದೆ. ದೇಹದಲ್ಲಿ ಉಷ್ಣ ಹೆಚ್ಚಾಗಿ ಆರೋಗ್ಯ ಏರುಪೇರಾಗಬಹುದು.

ಕರ್ಕಾಟಕ : ಹೊಸ ಗುತ್ತಿಗೆ ಕೆಲಸ ಸುಲಭವಾಗಿ ಲಭಿಸಲಿದೆ. ಹೆಚ್ಚು ಜವಾಬ್ದಾರಿಯುತ ಹುದ್ದೆ ನಿಮ್ಮ ಪಾಲಿಗೆ ಬರಲಿದೆ . ಕರ್ತವ್ಯದಲ್ಲಿ ಯಾವುದೇ ಲೋಪವಾಗದಂತೆ ಗಮನಹರಿಸಿ. ಸಂತಸದ ಕ್ಷಣ ಹಂಚಿಕೊಳ್ಳುವಿರಿ.

ಸಿಂಹ : ವಿದೇಶದಲ್ಲಿ ಉದ್ಯೋಗ ದೊರಕಿಸಿಕೊಳ್ಳಲು ಮಾಡಿದ ಪ್ರಯತ್ನ ಜಯ ಕಾಣಲಿದೆ. ಆಸ್ತಿ ಕೊಳ್ಳುವ ವಿಚಾರದಲ್ಲಿ ಮಡದಿಯೊಂದಿಗಿನ ಪ್ರಸ್ತಾಪ ಫಲಕಾರಿಯಾಗುತ್ತದೆ. ಉಪಹಾರ ಮಂದಿರದವರಿಗೆ ಸಂಪಾದನೆ ಉಂಟಾಗುವುದು.

ಕನ್ಯಾ : ಲೇಖನ ಮಾಲೆಯನ್ನು ಸಿದ್ಧಪಡಿಸುವ ನಿಮ್ಮ ಹಲವು ದಿನದ ಕನಸು ಈಡೇರಲಿದೆ. ಈ ದಿನ ವಿವಾಹ ಸಂಬಂಧ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸುವುದು ಸರಿಯಲ್ಲ.

ತುಲಾ: ದಾಂಪತ್ಯ ಜೀವನ ಪರಸ್ಪರ ಹೊಂದಾಣಿಕೆಯಿಂದ ಸುಖಮಯವಾಗಿ ಸಾಗಲಿದೆ. ಸ್ವಂತ ಉದ್ಯೋಗ ನಡೆಸುವವರ ಹಣಕಾಸಿನ ಸ್ಥಿತಿ ಉತ್ತಮಗೊಳ್ಳಲಿದೆ. ಕೈ ಬಿಟ್ಟು ಹೋಗಿದ್ದ ಯೋಜನೆ ಪುನಃ ನಿಮ್ಮನ್ನು ಅರಸಿ ಬರುವುದು.

ವೃಶ್ಚಿಕ : ಅಧಿಕಾರಿಗಳ ಜೊತೆ ಮುಕ್ತ ಚರ್ಚೆ ಮಾಡಿದಲ್ಲಿ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆದುಕೊಳ್ಳಬಹುದು. ಸ್ವಂತ ವಿಷಯಗಳಿಗೆ ಆದ್ಯತೆ ನೀಡಿ. ಉದ್ಯೋಗಕ್ಕಾಗಿ ಪರಸ್ಥಳದಲ್ಲಿ ವಾಸ ಮಾಡುವ ಅನಿವಾರ್ಯತೆ ಬರಬಹುದು.

ಧನು : ಕಾರ್ಯಕ್ಷೇತ್ರದಲ್ಲಿ ನೀತಿ-ನಿಯಮಗಳಿಗೆ ಬದ್ಧರಾಗುವ ತೀರ್ಮಾನ ಮಾಡುವುದು ಒಳ್ಳೆಯದು. ತಾಂತ್ರಿಕ ಕ್ಷೇತ್ರದಲ್ಲಿ ಉದ್ಯೋಗ ಮಾಡುತ್ತಿರುವವರು ಸ್ವಂತ ಉದ್ಯೋಗ ನಡೆಸುವ ಯೋಚನೆ ಬರಬಹುದು.

ಮಕರ : ನಿಮಗಿಂತ ಅನುಭವದಲ್ಲಿ ಹಿರಿಯರಾದವರ ಸಲಹೆಗಳನ್ನು ಪಡೆದುಕೊಂಡು ಕಾರ್ಯಪ್ರವೃತ್ತರಾಗುವುದು ಉತ್ತಮ. ಕಾಗದ ಕಾರ್ಖಾನೆ ಮಾಲೀಕರಿಗೆ ವರಮಾನದಲ್ಲಿ ಗಣನೀಯ ಏರಿಕೆ.

ಕುಂಭ : ವೈವಾಹಿಕ ಜೀವನವು ಸುಖಮಯವಾಗಿ ಸಾಗಲಿದೆ. ಷೇರು ಮಾರಾಟದಿಂದ ಅಧಿಕ ಲಾಭ ಬರುವುದು. ಸೇವಕ ವರ್ಗದವರಿಗೆ ಆದಾಯ ಹೆಚ್ಚಿದಂತೆ ಕೆಲಸದ ವಿಸ್ತೀರ್ಣವೂ ಹೆಚ್ಚುವುದು.

ಮೀನ : ಹಾಲು, ಮೊಸರು ಮತ್ತು ಬೆಣ್ಣೆಯ ವ್ಯಾಪಾರಸ್ಥರಿಗೆ ಹೆಚ್ಚಿನ ಉತ್ಪಾದನೆಯಿಂದ ಲಾಭ ಆಗುವುದು. ಕುಟುಂಬದ ಹಿರಿಯರ ಆರೋಗ್ಯ ನಷ್ಟದಿಂದಾಗಿ ಆಸ್ಪತ್ರೆಯ ತಿರುಗಾಟದ ಕ್ಲೇಶ.

'ಸಿದ್ದರಾಮಯ್ಯ 75' ಕಾರ್ಯಕ್ರಮದ ಸಿದ್ಧತೆ ಬಗ್ಗೆ ಚರ್ಚಿಸಲು ಕರೆದಿದ್ದ ಸಭೆ

ರಮೇಶ್ ಕುಮಾರ್–ಮುನಿಯಪ್ಪ ಬಣಗಳ ಮಧ್ಯೆ ಮತ್ತೆ ಕಿತ್ತಾಟ

ಪ್ರಜಾವಾಣಿ ವಾರ್ತೆ

ಕೋಲಾರ: ದಾವಣಗೆರೆಯಲ್ಲಿ ಆಗಸ್ಟ್ 3ರಂದು ನಡೆಯಲಿರುವ 'ಸಿದ್ದರಾಮಯ್ಯ 75' ಕಾರ್ಯಕ್ರಮದ ಸಿದ್ಧತೆಗೆ ಸಂಬಂಧಿಸಿದಂತೆ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಜಿಲ್ಲಾ ಕಾಂಗ್ರೆಸ್ ಘಟಕದ ಪದಾಧಿಕಾರಿಗಳ ಸಭೆಯಲ್ಲಿ ಶಾಸಕ ಕೆ.ಆರ್. ರಮೇಶ್ ಕುಮಾರ್ ಬಣ ಹಾಗೂ ಕೇಂದ್ರದ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ ಬಣದ ನಡುವೆ ಮತ್ತೆ ಕಿತ್ತಾಟ ನಡೆಯಿತು.

ಇಲ್ಲಿನ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಉಭಯ ಬಣಗಳ ನಾಯಕರು ಪರಸ್ಪರ ಕೈಮಿಲಾಯಿಸುವ ಹಂತಕ್ಕೆ ತಲುಪಿದ್ದರು.

'ಮುನಿಯಪ್ಪ ಅವರನ್ನು ಕಡೆಗಣಿಸಿ ಸಭೆ ನಡೆಸುತ್ತಿದ್ದು, ಬೆಂಬಲಿಗರಿಗೆ ವೇದಿಕೆ ಮೇಲೆ ಅವಕಾಶ ನೀಡುತ್ತಿಲ್ಲ' ಎಂದು ಮುನಿಯಪ್ಪ ಬೆಂಬಲಿಗರು ಆಕ್ಷೇಪ ತೆಗೆದರು. ಅವರ ಬೆಂಬಲಿಗ ಹಾಗೂ ಜಿಲ್ಲಾ ಎಸ್.ಸಿ ಘಟಕದ ಅಧ್ಯಕ್ಷ ಕೆ. ಜಯದೇವ್ ಮಾತನಾಡಿ, 'ನಿಮ್ಮನ್ನೆಲ್ಲಾ ಕಾಂಗ್ರೆಸ್‌ಗೆ ಕರೆ ತಂದಿದ್ದೇ ಮುನಿಯಪ್ಪ' ಎನ್ನುತ್ತಿದ್ದಂತೆ ವಿಧಾನ ಪರಿಷತ್ ಸದಸ್ಯ ನಸೀರ್ ಅಹ್ಮದ್ ಅವರ ಕೋಪ ನೆತ್ತಿಗೇರಿತು. ಆಗ ಮತ್ತೆ ಬೆಂಬಲಿಗರ ಕಿತ್ತಾಟ ಆರಂಭವಾಯಿತು. ತಮ್ಮ ನಾಯಕರ ಪರ ಘೋಷಣೆ ಕೂಗಿದರು.

ಕೋಲಾರ ಜಿಲ್ಲಾ ಕಾಂಗ್ರೆಸ್ ಉಸ್ತುವಾರಿ ಕೆ. ನಾರಾಯಣಸ್ವಾಮಿ ಮಾತನಾಡಿ, 'ಭಿನ್ನಾಭಿಪ್ರಾಯ ಸಹಜ. ಆದರೆ, ಅದನ್ನು ಪಕ್ಷದ ಮುಖಂಡರ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬೇಕು. ಅಶಿಸ್ತನ್ನು ಪಕ್ಷ ಸಹಿಸಲ್ಲ. ಶಿಸ್ತುಕ್ರಮ ಜರುಗಿಸಲು ಕೆಪಿಸಿಸಿ ಅಧ್ಯಕ್ಷರು ನನಗೆ ಅಧಿಕಾರ ನೀಡಿದ್ದಾರೆ' ಎಂದು ಎಚ್ಚರಿಕೆ ನೀಡಿದರು.

ರಮೇಶ್ ಕುಮಾರ್ ಮಾತನಾಡಿ, 'ಕೇವಲ ತಿಂಗಳಲ್ಲಿ ಚುನಾವಣೆ ಬರಲಿದೆ. ಸಣ್ಣತನ ಬದಿಗಿಟ್ಟು ಕೆಲಸ ಮಾಡೋಣ. ನಮ್ಮ ಗುರಿ ಬಿಜೆಪಿ ಹಾಗೂ ಜೆಡಿಎಸ್ ಸೋಲಿಸುವುದು. ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ನಮ್ಮ ಎರಡು ಕಣ್ಣುಗಳಿದ್ದಂತೆ' ಎಂದರು.

ಸಭೆಯಲ್ಲಿ ಶಾಸಕ ಕೆ.ವೈ. ನಂಜೇಗೌಡ, ವಿಧಾನ ಪರಿಷತ್ ಸದಸ್ಯ ಎಂ.ಎಲ್. ಅನಿಲ್ ಕುಮಾರ್, ಮಾಜಿ ಶಾಸಕ ಕೊತ್ತೂರು ಮಂಜುನಾಥ್ ಹಾಗೂ ಎರಡೂ ಬಣಗಳ ಬೆಂಬಲಿಗರು ಭಾಗವಹಿಸಿದ್ದರು.

ಕೋಲಾರದಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಪದಾಧಿಕಾರಿಗಳ ಸಭೆಯಲ್ಲಿ ನಾಯಕರು ಕಿತ್ತಾಡಿದರು. ಶಾಸಕ ಕೆ.ಆರ್. ರಮೇಶ್ ಕುಮಾರ್, ವಿಧಾನ ಪರಿಷತ್ ಸದಸ್ಯ ನಸೀರ್ ಅಹ್ಮದ್, ಕೆಪಿಸಿಸಿ ಉಪಾಧ್ಯಕ್ಷ ಕೆ. ನಾರಾಯಣಸ್ವಾಮಿ ಹಾಗೂ ಜಿಲ್ಲಾ ಎಸ್‌ಸಿ ಘಟಕದ ಅಧ್ಯಕ್ಷ ಕೆ. ಜಯದೇವ್ ಇದ್ದಾರೆ

ಪತ್ರಕರ್ತರ ಮೇಲೆ ಹಲ್ಲೆಗೆ ಯತ್ನ

ವೇದಿಕೆ ಮೇಲೆ ನಡೆಯುತ್ತಿದ್ದ ಉಭಯ ಬಣಗಳ ಕಿತ್ತಾಟವನ್ನು ಚಿತ್ರೀಕರಿಸಲು ಮುಂದಾದ ಪತ್ರಕರ್ತರ ಮೇಲೆ ರಮೇಶ್ ಕುಮಾರ್ ಕೈ ಮಾಡಿ ತಳ್ಳಿದರು. ಅಷ್ಟೇ ಅಲ್ಲದೇ ಅವರ ಬೆಂಬಲಿಗರೂ ಪತ್ರಕರ್ತರ ಮೇಲೆ ಹಲ್ಲೆ ನಡೆಸಲು ಮುಂದಾದರು. ಸಭೆಯ ಬಳಿಕ ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಸುದ್ದಿಗಾರರು ಮುಂದಾದಾಗ ರಮೇಶ್ ಕುಮಾರ್ ಮಾತನಾಡದೆ ಹೊರನಡೆದರು.

ಪತ್ರಕರ್ತರ ಪ್ರತಿಭಟನೆ ಬಳಿಕ ಶಾಸಕ ಕೆ.ವೈ. ನಂಜೇಗೌಡ, ವಿಧಾನ ಪರಿಷತ್ ಸದಸ್ಯ ಎಂ.ಎಲ್. ಅನಿಲ್ ಕುಮಾರ್ ಹಾಗೂ ಜಿಲ್ಲಾ ಕಾಂಗ್ರೆಸ್ ಉಸ್ತುವಾರಿ ಕೆ. ನಾರಾಯಣಸ್ವಾಮಿ ವಾಪಸ್ ಕಾಂಗ್ರೆಸ್ ಭವನಕ್ಕೆ ಬಂದರು. ಬಳಿಕ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ವಿ. ಗೋಪಿನಾಥ್ ಹಾಗೂ ಪತ್ರಕರ್ತರ ಜೊತೆ ಚರ್ಚಿಸಿ ಘಟನೆಗೆ ಕ್ಷಮೆಯಾಚಿಸಿದರು.

ಕೊಡಗು: 40 ವಿದ್ಯಾರ್ಥಿಗಳಿಗೆ ಕೋವಿಡ್

ಮಡಿಕೇರಿ: ಇಲ್ಲಿನ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ ಆಸ್ಪತ್ರೆಯ ಹಾಸ್ಟೆಲ್‌ನಲ್ಲಿರುವ 40 ವಿದ್ಯಾರ್ಥಿಗಳಿಗೆ ಕೋವಿಡ್ ಪತ್ತೆಯಾಗಿದೆ. ಶುಕ್ರವಾರದಿಂದ ಆಫ್‌ಲೈನ್ ತರಗತಿಗಳನ್ನು ನಿಲ್ಲಿಸಿ, ಆನ್‌ಲೈನ್ ತರಗತಿಗಳನ್ನು ಆರಂಭಿಸಲಾಗಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಆಸ್ಪತ್ರೆಯ ಡೀನ್ ಡಾ.ಕಾರ್ಯಪ್ಪ, 'ಹಾಸ್ಟೆಲ್‌ನಲ್ಲಿ 750 ವಿದ್ಯಾರ್ಥಿಗಳಿದ್ದು, 20 ಮಂದಿಯಲ್ಲಿ ಲಘು ಪ್ರಮಾಣದ ಜ್ವರ ಕಾಣಿಸಿಕೊಂಡಿತ್ತು. ಎಲ್ಲರ ಪರೀಕ್ಷೆ ನಡೆಸಲಾಗಿದ್ದು, 40 ವಿದ್ಯಾರ್ಥಿಗಳಲ್ಲಿ ಸೋಂಕು ಪತ್ತೆಯಾಗಿದೆ. ಎಲ್ಲರನ್ನೂ ಪ್ರತ್ಯೇಕವಾಗಿರಿಸಲಾಗಿದೆ. ಆನ್‌ಲೈನ್ ತರಗತಿ ಆರಂಭಿಸಲಾಗಿದ್ದು, ಆತಂಕಪಡುವ ಸನ್ನಿವೇಶವಿಲ್ಲ' ಎಂದರು. 'ಜಿಲ್ಲೆಯಲ್ಲಿ ಶುಕ್ರವಾರ ಒಂದೇ ದಿನ 44 ಮಂದಿಯಲ್ಲಿ ಕೋವಿಡ್ ಪತ್ತೆಯಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 90ಕ್ಕೆ ಏರಿಕೆಯಾಗಿದೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಆರ್.ವೆಂಕಟೇಶ್ ತಿಳಿಸಿದ್ದಾರೆ.

ನಾಳೆಯಿಂದ ಮೊಹರಂ

ಬೆಂಗಳೂರು: ಮೊಹರಂ ಜುಲೈ 31ರಿಂದ ಆರಂಭವಾಗಲಿದೆ. ಆ.9ರಂದು (ಯೌಮೆ ಆಶುರಾ) ಮೊಹರಂ ಕೊನೆ ದಿನ ಎಂದು ಮರ್ಕಜಿ ರುಯತ್-ಎ-ಹಿಲಾಲ್ ಕಮಿಟಿ ಶುಕ್ರವಾರ ತಿಳಿಸಿದೆ.

'ದಲಿತ ಸಿಎಂ' ಅಭ್ಯರ್ಥಿಗೆ ಯಾರು ಮತ ಹಾಕುತ್ತಾರೆ?'

ಚಿತ್ರದುರ್ಗ: 'ದಲಿತ ಸಮುದಾಯದ ನಾಯಕರು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕೆ ಇಳಿದರೆ ಯಾರು ಮತ ಹಾಕುತ್ತಾರೆ' ಎಂದು ಮಾಜಿ ಸಚಿವ ಎಚ್. ಆಂಜನೇಯ ಪ್ರಶ್ನಿಸಿದರು.

'2008ರಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಇಂತಹ ಅವಕಾಶವಿತ್ತು. ಅವರ ನೇತೃತ್ವದಲ್ಲೇ ವಿಧಾನ ಸಭಾ ಚುನಾವಣೆ ನಡೆಯಿತು. ದಲಿತ ನಾಯಕರೊಬ್ಬರು ಮುಖ್ಯಮಂತ್ರಿ ಅಭ್ಯರ್ಥಿಯಾಗುವುದು ಸಮಾಜಕ್ಕೆ ಇಷ್ಟವಾಗದಿದ್ದಲ್ಲಿ ಎಂಬುದು ಫಲಿತಾಂಶ ಸಾಬೀತುಪಡಿಸಿದೆ' ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಅಭಿಪ್ರಾಯಪಟ್ಟರು.

ಬಾಲಕಿ ಮೇಲೆ ಅತ್ಯಾಚಾರ: ಕಾನ್‌ಸ್ಟೆಬಲ್ ಸೆರೆ

ಒಂದನೇ ಪುಟದಿಂದ...

'ತನ್ನ ಮನೆಯಿಂದ ವಿಜಯನಗರಕ್ಕೆ ಹೋಗಿದ್ದ ಬಾಲಕಿ, ಉದ್ಯಾನ ಬಳಿಯ ರಸ್ತೆಯಲ್ಲಿ ಒಂಟಿಯಾಗಿದ್ದಳು. ಮಫ್ತಿಯಲ್ಲಿ ಕರ್ತವ್ಯದಲ್ಲಿದ್ದ ಕಾನ್‌ಸ್ಟೆಬಲ್ ಪವನ್, ಬಾಲಕಿಯನ್ನು ಮಾತನಾಡಿಸಿದ್ದ. ಆಕೆ ಯುವಕನನ್ನು ಪ್ರೀತಿಸುತ್ತಿದ್ದ ವಿಷಯ ತಿಳಿದುಕೊಂಡಿದ್ದ. ಯುವಕನ ಮನೆ ಇರುವ ಚಾಮರಾಜನಗರಕ್ಕೆ ಹೋಗಲು ನಿಲ್ದಾಣಕ್ಕೆ ಡ್ರಾಪ್ ಕೊಡುವುದಾಗಿ ಹೇಳಿ ಬೈಕ್‌ನಲ್ಲಿ ಹತ್ತಿಸಿಕೊಂಡು ಅಲ್ಲಿಂದ ಹೊರಟಿದ್ದ.'

'ಮಾರ್ಗಮಧ್ಯೆ ಬಾಲಕಿಯನ್ನು ಪುಸಲಾಯಿಸಿದ್ದ ಕಾನ್‌ಸ್ಟೆಬಲ್, 'ಈಗ ಸಂಜೆ ಆಗಿದೆ. ಚಾಮರಾಜನಗರಕ್ಕೆ ಹೋಗುವುದು ಬೇಡ. ರಾತ್ರಿ ಇದ್ದು, ಬೆಳಿಗ್ಗೆ ನಿಲ್ದಾಣಕ್ಕೆ ಬಿಡುತ್ತೇನೆ. ಇಂದು ರಾತ್ರಿ ಕೊಠಡಿಯಲ್ಲಿ ಇರು' ಎಂದಿದ್ದ. ಅದನ್ನು ನಂಬಿದ್ದ ಬಾಲಕಿ, ಆತನ ಕೊಠಡಿಯಲ್ಲಿ ಉಳಿದುಕೊಂಡಿದ್ದಳು' ಎಂದು ಮೂಲಗಳು ಹೇಳಿವೆ.

'ಕೊಠಡಿಯಲ್ಲಿ ಬಾಲಕಿ ಜೊತೆ ಅನುಚಿತವಾಗಿ ವರ್ತಿಸಿದ್ದ ಕಾನ್‌ಸ್ಟೆಬಲ್, ಅತ್ಯಾಚಾರ ಎಸಗಿದ್ದ. ಜುಲೈ 27ರಂದು ಬೆಳಿಗ್ಗೆ ಬಾಲಕಿಯನ್ನು ನಿಲ್ದಾಣಕ್ಕೆ ಕರೆದೊಯ್ದು ಹಣ ನೀಡಿ ಚಾಮರಾಜನಗರದ ಬಸ್ ಹತ್ತಿಸಿ ಕಳುಹಿಸಿದ್ದ' ಎಂದು ತಿಳಿಸಿವೆ.

'ನ್ಯಾಯ ಮಂಡಳಿಯಲ್ಲಿ ಬಯಲಾದ ಪ್ರಕರಣ': 'ಚಾಮರಾಜನಗರದ ಯುವಕನ ಮನೆಗೆ ಜುಲೈ 27ರಂದು ಬಾಲಕಿ ಹೋಗಿದ್ದಳು. ಅಪ್ರಾಪ್ತೆಯಾಗಿದ್ದರಿಂದ ಹೆದರಿದ್ದ ಯುವಕನ ತಂದೆ, ಸ್ಥಳೀಯ ಠಾಣೆಗೆ ಮಾಹಿತಿ ನೀಡಿದ್ದರು. ಅಲ್ಲಿಯ ಸಿಬ್ಬಂದಿ, ಕೆ.ಪಿ. ಅಗ್ರಹಾರ ಠಾಣೆಗೆ ಮಾಹಿತಿ ರವಾನಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಪಹರಣ ಪ್ರಕರಣ ದಾಖಲಾಗಿದ್ದರಿಂದ ಬಾಲಕಿಯನ್ನು ಕರೆತಂದಿದ್ದ ಕೆ.ಪಿ.ಅಗ್ರಹಾರ ಪೊಲೀಸರು, ಬಾಲ ನ್ಯಾಯ ಮಂಡಳಿ ಎದುರು ಹಾಜರುಪಡಿಸಿದ್ದರು. ಇದೇ ವೇಳೆಯೇ ಬಾಲಕಿ, ತನ್ನ ಮೇಲೆ ಕಾನ್‌ಸ್ಟೆಬಲ್ ಅತ್ಯಾಚಾರ ಎಸಗಿರುವುದಾಗಿ ಹೇಳಿಕೆ ನೀಡಿದ್ದಳು. ಮಂಡಳಿ ನಿರ್ದೇಶನದಂತೆ ಪೋಕ್ಸೊ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಕಾನ್‌ಸ್ಟೆಬಲ್‌ನನ್ನು ಬಂಧಿಸಿದ್ದಾರೆ. ಈತನನ್ನು ಸೇವೆಯಿಂದಲೂ ಅಮಾನತು ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಸಂ. 4, 100 ಅಡಿ ರಿಂಗ್ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085
ದೂ: 080-26980100, ಫ್ಯಾಕ್ಸ್: 080-26422377
ಇ-ಮೇಲ್: dpi.dsert-ka@gmail.com । ವೆಬ್‌ಸೈಟ್: http://dsert.kar.nic.in
ಸಂಖ್ಯೆ: DSERT/ADMN/OTPR/1/2022-ADMN ದಿನಾಂಕ: 27.07.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು. ಇವರಿಂದ e-bid Notification for supply of 31 All-in-one Desktop Computers to DSERT office ಸಂಬಂಧ ಅರ್ಹ ಬಿಡ್‌ದಾರರಿಂದ ಎರಡು ಬಿಡ್ ವಿಧಾನದಲ್ಲಿ ಇ-ಟೆಂಡರ್ ಕರೆಯಲಾಗಿದೆ. ಟೆಂಡರಿನ ಅಂದಾಜು ಮೊತ್ತ: ರೂ. 20,15,000/-ಗಳು. ಇ.ಎಂ.ಡಿ ಮೊತ್ತ: ರೂ. 40,000/-. 1) ಪ್ರೀ-ಬಿಡ್ ಸಭೆಯ ದಿನಾಂಕ: 01.08.2022ರ ಬೆಳಿಗ್ಗೆ 11:00 ಗಂಟೆಗೆ. 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 06.08.2022 ರಂದು ಸಂಜೆ 5:00 ಗಂಟೆಯವರೆಗೆ. ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಲ್ಲಿ ವೀಕ್ಷಿಸಬಹುದು.
ಸಹಿ/-
ನಿರ್ದೇಶಕರು
ವಾಸಾಸಂಇ/ವಾಪ್ರ/ಜಿಎ/1562/2022-23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ನಂ.4. ಡಿ.ಎಸ್.ಇ.ಆರ್.ಟಿ. ಕಟ್ಟಡ, 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು-560085. ಇ-ಮೇಲ್: mdktbs.tender@gmail.com
ವೆಬ್‌ಸೈಟ್: http://www.ktbs.kar.nic.in ದೂ: 080-26422238/ 45
ಸಂ: ಎ7/ಕ.ಪ.ಪು.ಸಂ/ಮು.ಶಾ.ಅ.ಪ.ಪು.ಮು.ಟೆಂ/11/2022-23 ದಿ: 29.07.2022
ಅಲ್ಪಾವಧಿ ಟೆಂಡರ್ ಅಧಿಸೂಚನೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
2022-23ನೇ ಸಾಲಿಗೆ, ರಾಜ್ಯದ ಅನುದಾನಿತ ಹಾಗೂ ಖಾಸಗಿ ಮದರಸಾ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಅರೇಬಿಕ್ ಪಠ್ಯಪುಸ್ತಕಗಳನ್ನು ಮುದ್ರಿಸಿ ರಾಜ್ಯದ 38 ಬ್ಲಾಕ್‌ಗಳಿಗೆ ಈ ಕಛೇರಿ ವತಿಯಿಂದ ನೀಡಲಾಗುವ ವಿತರಣಾ ಪಟ್ಟಿಯಂತೆ ಮುದ್ರಿಸಿ ಸರಬರಾಜು ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವ ಮೂಲಭೂತ ಸೌಲಭ್ಯವುಳ್ಳ ಅರ್ಹ ಮುದ್ರಕರುಗಳಿಂದ 2 ಬಿಡ್ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಪೂರ್ಣ ವಿವರಗಳನ್ನು ಇ-ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು ದಿನಾಂಕ: 05.08.2022ರಂದು ಸಂಜೆ 5.30ರವರೆಗೂ ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ.
ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ: https://www.eproc.karnataka.gov.in
ಸಹಾಯವಾಣಿ: 080-46010000 & 080-22631200
ಇಲಾಖೆಯ ವೆಬ್‌ಸೈಟ್: http://www.ktbs.kar.nic.in
ಸಹಿ/- ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗದಗ-582101
ಜಿಲ್ಲಾ : ಗದಗ, ರಾಜ್ಯ : ಕರ್ನಾಟಕ,
Email : apmcgadag4@gmail.com
☎: 08372-238354 ಫ್ಯಾಕ್ಸ : 08372-237897
ಸಂ : ಕೃ.ಉ.ಮಾ.ಸ:ಗ:302:2022-2023 ದಿನಾಂಕ : 22-07-2022
ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗದಗ. ಮುಖ್ಯ ಮಾರುಕಟ್ಟೆ ಪ್ರಾಂಗಣ ಮತ್ತು ಉಪ ಮಾರುಕಟ್ಟೆ ಪ್ರಾಂಗಣದ ಭದ್ರತಾ & ಸ್ವಚ್ಛತಾ ಮತ್ತು ಇತರೆ ಕಾರ್ಯಗಳಿಗೆ ಸನ್ 2022-23 ನೇ ಸಾಲಿಗಾಗಿ, ಅಂದರೆ ಕೆಲಸದ ಆದೇಶ ನೀಡಿದ ದಿನಾಂಕದಿಂದ 31-05-2023 ರ ವರೆಗೂ ಸೇವೆ ಒದಗಿಸಲು ಆಸಕ್ತ ಏಜೆನ್ಸಿದಾರರಿಂದ, ಕಾರ್ಮಿಕ ಇಲಾಖೆ ಹಾಗೂ ಪೋಲೀಸ್ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ, ಈ ಸಮಿತಿಯು ವಿಧಿಸುವ ಷರತ್ತು-ವ-ನಿಬಂಧನೆಗಳನ್ವಯ, ಒಟ್ಟು 19 ಜನ ಹೊರಗುತ್ತಿಗೆ ಸಿಬ್ಬಂದಿಗಳನ್ನು ಒದಗಿಸಲು, ಜಿಲ್ಲಾ ಕೇಂದ್ರಕ್ಕೆ ಕಾರ್ಮಿಕ ಇಲಾಖೆಯಿಂದ ನಿಗದಿಪಡಿಸುವ 2022-23 ನೇ ಸಾಲಿನ ಕನಿಷ್ಠ ವೇತನ ದರಕ್ಕೆ ಪ್ರತಿಶತ ಸರ್ವಿಸ್ ಚಾರ್ಜನ್ನು ಮಾತ್ರ ನಮೂದಿಸಬೇಕು ಹಾಗೂ ಇ.ಪಿ.ಎಫ್, ಇ.ಎಸ್.ಆಯ್ ಮತ್ತು ಜಿ.ಎಸ್.ಟಿ ಗಳನ್ನೊಳಗೊಂಡ ಟೆಂಡರನ್ನು ಇ-ಪ್ರೊಕ್ಯೂರಮೆಂಟ್ ವೆಬ್‌ಸೈಟ್ (www.eproc.karnataka.gov.in) ಮೂಲಕ ಸಲ್ಲಿಸಲು ಕೊನೆಯ ದಿನಾಂಕ : 10-08-2022 ಸಾಯಂಕಾಲ: 4-00 ಗಂಟೆಯೊಳಗಾಗಿ, ಟೆಂಡರ್‌ಗಳನ್ನು ತೆರೆಯುವ ದಿನಾಂಕ : 11-08-2022 ಸಾಯಂಕಾಲ: 5-00 ಗಂಟೆ. ಹೆಚ್ಚಿನ ವಿವರಗಳಿಗೆ ಮತ್ತು ಷರತ್ತು-ವ-ನಿಬಂಧನೆಗಳಿಗೆ ಸಮಿತಿಯ ಕಛೇರಿ ವೇಳೆಯಲ್ಲಿ ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಗದಗ ಇವರನ್ನು ಸಂಪರ್ಕಿಸುವುದು. ಫೋನ ನಂ. 08372-238354 ಅಥವಾ (www.eproc.karnataka.gov.in)
ಸಹಿ/- ಕಾರ್ಯದರ್ಶಿ, ಕೃ.ಉ.ಮಾ.ಸ., ಗದಗ
ಸಹಿ/- ಆಡಳಿತಾಧಿಕಾರಿ ಹಾಗೂ ಜಿಲ್ಲಾಧಿಕಾರಿ, ಗದಗ ಜಿಲ್ಲೆ ಗದಗ
ವಾಸಾಸಂಇ/ಗದಗ/213/ಎಂ.ಸಿ.ಎ/2022-23

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ
ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 2022-23ನೇ ಸಾಲಿನ ತಿಪಟೂರು ವಿಧಾನಸಭಾಕ್ಷೇತ್ರದ 03 ಎಸ್‌ಸಿಪಿ/ಟಿಎಸ್‌ಪಿ ಕಾಮಗಾರಿಗಳಿಗೆ ಟೆಂಡರ್ ಗಿಟ್ಟಿ ಮೊತ್ತ ರೂ.40.08 ಲಕ್ಷಗಳಿಂದ ರೂ.80.30 ಲಕ್ಷಗಳವರೆಗೆ "ಶೇಕಡಾವಾರು ದರಗಳಲ್ಲಿ" ಏಕ ಲಕೋಟೆ ಹಾಗೂ ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ, ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಇ-ಪೋರ್ಟಲ್‌ನಲ್ಲಿ ದಿ: 30.07.2022 ರಿಂದ ದಿ:.06.08.2022ರವರೆಗೆ ವೀಕ್ಷಿಸಬಹುದಾಗಿದೆ. ಟೆಂಡರ್‌ನ ಅಂದಾಜು ಮೊತ್ತ/ ಇ.ಎಂ.ಡಿ/ಟೆಂಡರ್ ಪ್ರೋಸೆಸಿಂಗ್ ಶುಲ್ಕ/ವೇಳಾ ಪಟ್ಟಿ/ ಗುತ್ತಿಗೆದಾರರ ವರ್ಗ/ ಟೆಂಡರ್ ನಿಯಮ/ ಟೆಂಡರ್ ಪ್ರಕಟಣೆ/ ಇತ್ಯಾದಿ ವಿವರಗಳನ್ನು https://eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ: 06.08.2022 ರವರೆಗೆ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ತಿದ್ದುಪಡಿ ಪ್ರಕಟಣೆ ಹೊರಡಿಸಿದಲ್ಲಿ ಇ-ಪೋರ್ಟ್‌ಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು.
ದೂರವಾಣಿ ಸಂಖ್ಯೆ:0816-2201844, ಇಮೇಲ್ ವಿಳಾಸ-eeypd2tmk@gmail.com

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಅಟಲ್ ಬಿಹಾರಿ ವಾಜಪೇಯಿ ಸಂಕೀರ್ಣ, ಕೇಂದ್ರ ಕಛೇರಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560027. ದೂರವಾಣಿ : 080-22537481
ಇ-ಮೇಲ್: cmhrd@mybmtc.com ವೆಬ್‌ಸೈಟ್: www.mybmtc.in
ಪ್ರಕಟಣೆ
ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್.ಸಿ.ಎಸ್.ಪಿ) ಹಾಗೂ ಗಿರಿಜನ ಉಪ ಯೋಜನೆ (ಟಿ.ಎಸ್.ಪಿ) ಯೋಜನೆಯಡಿ ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡ (ಎಸ್.ಟಿ)ಗಳ ಅಭ್ಯರ್ಥಿಗಳಿಗೆ ಉಚಿತವಾಗಿ ಲಘು ಮತ್ತು ಭಾರಿ ವಾಹನ ಚಾಲನ ತರಬೇತಿ ನೀಡಿ ಪ್ರಾದೇಶಿಕ ಸಾರಿಗೆ ಕಛೇರಿಯಿಂದ ಚಾಲನ ಅನುಜ್ಞಾ ಪತ್ರ/ಬ್ಯಾಡ್ಜ್ ನೀಡುವ ಕಾರ್ಯಕ್ರಮವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದ್ದು, ಆಸಕ್ತ ಫಲಾಪೇಕ್ಷಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಸದರಿ ತರಬೇತಿಯನ್ನು ಪಡೆಯಲು ಇಚ್ಚಿಸುವ ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡ (ಎಸ್.ಟಿ)ಗಳ ಅಭ್ಯರ್ಥಿಗಳು ಹೊಂದಿರಬೇಕಾದ ಕನಿಷ್ಠ ಅರ್ಹತೆಗಳು/ ಸಲ್ಲಿಸಬೇಕಾಗಿರುವ ದಾಖಲಾತಿಗಳ ವಿವರ ಕೆಳಕಂಡಂತೆ ಇರುತ್ತದೆ.
➢ ಲಘು ವಾಹನ ಚಾಲನಾ ತರಬೇತಿ (ಕಾರ್/ಜೀಪ್):
- ಕನಿಷ್ಠ 18 ವರ್ಷ ವಯೋಮಿತಿ ತುಂಬಿರಬೇಕು. ಗರಿಷ್ಠ: 45 ವರ್ಷ.
- ಜನ್ಮ ದಿನಾಂಕದ ಬಗ್ಗೆ ಜನನ ಪ್ರಮಾಣಪತ್ರ ಅಥವಾ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಶಾಲಾ ವರ್ಗಾವಣಾ ಪ್ರಮಾಣಪತ್ರ ಅಥವಾ ನೋಟರಿಯಿಂದ ಪ್ರಮಾಣಪತ್ರ.
- ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣಪತ್ರ.
- ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ – 5.
➢ ಭಾರಿ ವಾಹನ ಚಾಲನಾ ತರಬೇತಿ (ಬಸ್):
- ಕನಿಷ್ಠ 20 ವರ್ಷಗಳ ವಯೋಮಿತಿ ಪೂರೈಸಿರಬೇಕು.
- ಲಘು ವಾಹನ ಚಾಲನಾ ಅನುಜ್ಞಾ ಪತ್ರ ಪಡೆದು ಒಂದು ವರ್ಷ ಪೂರೈಸಿರಬೇಕು.
- ಜನ್ಮ ದಿನಾಂಕದ ಬಗ್ಗೆ ಜನನ ಪ್ರಮಾಣಪತ್ರ ಅಥವಾ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಶಾಲಾ ವರ್ಗಾವಣಾ ಪ್ರಮಾಣ ಪತ್ರ ಅಥವಾ ನೋಟರಿಯಿಂದ ಪ್ರಮಾಣ ಪತ್ರ.
- ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ.
- ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ – 5.
❖ ಅರ್ಹ ಎಸ್.ಸಿ/ಎಸ್.ಟಿ ಅಭ್ಯರ್ಥಿಗಳಿಗೆ ಲಘು/ಭಾರಿ ವಾಹನ ಚಾಲನಾ ತರಬೇತಿ (30 ದಿನಗಳು) ಮತ್ತು ತರಬೇತಿಯ ಅವಧಿಯಲ್ಲಿ ವಸತಿ ಮತ್ತು ಊಟೋಪಚಾರದ ವ್ಯವಸ್ಥೆಯನ್ನು ಉಚಿತವಾಗಿ ನೀಡಲಾಗುತ್ತದೆ.
ಮೇಲಿನ ಅರ್ಹತೆ ಹೊಂದಿದ್ದು, ಆಸಕ್ತಿ ಇರುವ ಪರಿಶಿಷ್ಟ ಜಾತಿ/ಪಂಗಡದ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ತಮ್ಮ ಮೂಲ ದಾಖಲೆ ಮತ್ತು 02 ಸೆಟ್ ಜೆರಾಕ್ಸ್ ಪ್ರತಿಗಳೊಂದಿಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, 3ನೇ ಮಹಡಿ, ಶಾಂತಿನಗರ ಬಸ್ ನಿಲ್ದಾಣ, ಬೆಂಗಳೂರು-560027 ಇಲ್ಲಿ ದಿನಾಂಕ 01.08.2022ರಿಂದ ಹೆಸರು ನೋಂದಾಯಿಸಿ ಕೊಳ್ಳಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಸಂಸ್ಥೆಯ ವೆಬ್‌ಸೈಟ್ www.mybmtc.com ನಿಂದ ಪಡೆಯಬಹುದಾಗಿದೆ. ಈ ಸಂಬಂಧ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳು: 080-22537481, 7760991086, 7760979980, 7760991348, 7760991190, 7892529634, 7760576556.
ಸಹಿ/- ವ್ಯವಸ್ಥಾಪಕ ನಿರ್ದೇಶಕರು, ಬೆಂ.ಮ.ಸಾ.ಸಂಸ್ಥೆ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಸಂಪರ್ಕ ಸೌಧ, ನಂ.8, ಡಾ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು-560010. ಟೆಲಿಫ್ಯಾಕ್ಸ್: 080-22204000
ಇ-ಮೇಲ್: mdkrdcl@gmail.com ವೆಬ್‌ಸೈಟ್: www.krdcl.in
ಸಂ. ಕೆಆರ್‌ಡಿಸಿಎಲ್/ಐಎಫ್‌ಬಿ/2022-23/10-1 ದಿನಾಂಕ : 29-07-2022
ಟೆಂಡರ್ ಪ್ರಕಟಣೆಗೆ ತಿದ್ದುಪಡಿ
(ಇ-ಪ್ರೊಕ್ಯೂರ್‌ಮೆಂಟ್ ಆಧಾರದ ಮೇಲೆ)
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು "ಹೈಬ್ರಿಡ್ ಆನ್ಯುಟಿ ಮಾದರಿಯಲ್ಲಿ (ಹೆಚ್‌ಎಎಂ) ಅಡಿಯಲ್ಲಿ 10 ರಸ್ತೆಗಳಿಗಾಗಿ ವಿವರವಾದ ಯೋಜನಾ ವರದಿ (ಡಿಪಿಆರ್) ತಯಾರಿಕೆಗಾಗಿ ಸಮಾಲೋಚಕರು" ಇದಕ್ಕಾಗಿ ಟೆಂಡರ್ ಪ್ರಕಟಣೆ ಸಂ. ಕೆಆರ್‌ಡಿಸಿಎಲ್/ಐಎಫ್‌ಬಿ/2022-23/10 ದಿನಾಂಕ : 18-07-2022 ಅನ್ವಯ ಹೆಸರಾಂತ ಸಮಾಲೋಚಕರಿಂದ ಬಿಡ್‌ಗಳನ್ನು ಆಹ್ವಾನಿಸಲಾಗಿತ್ತು ಹಾಗೂ ಈ ಪ್ರಕಟಣೆಯನ್ನು ದಿನಾಂಕ : 19-07-2022 ರಂದು ಈ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಮಾರ್ಪಡಿಸಲಾದ ವೇಳಾಪಟ್ಟಿಯು ಕೆಳಕಂಡಂತಿದೆ : ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 16-08-2022 ರಂದು 17.30 ಗಂಟೆಗಳವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 18-08-2022 ರಂದು 11.00 ಗಂಟೆಗೆ. ಬಿಡ್-ಪೂರ್ವ (Pre-bid) ಸಭೆಯ ದಿನಾಂಕ : 03-08-2022 ರಂದು 15.00 ಗಂಟೆಗೆ.
ದಯವಿಟ್ಟು ಗಮನಿಸಿ, ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆಗಳು ಇದ್ದರೆ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ ಮತ್ತು ಮುಂದಿನ ಬದಲಾವಣೆಗಳನ್ನು ಇ-ಪೋರ್ಟಲ್ / ಕೆಆರ್‌ಡಿಸಿಎಲ್ ವೆಬ್‌ಸೈಟ್‌ನಲ್ಲಿ ಮಾತ್ರವೇ ಅಪ್‌ಡೇಟ್ ಮಾಡಲಾಗುತ್ತದೆ.
ಸಹಿ/- ಮುಖ್ಯ ಇಂಜಿನಿಯರ್,
ಕೆಆರ್‌ಡಿಸಿಎಲ್, ಬೆಂಗಳೂರು.
ವಾಸಾಸಂಇ/ವಾ.ಪ್ರ/1573/ಶ್ರೇಷ್ಠ/2022-23
ಕೋವಿಡ್-19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆಯ, ಉಪನಿರ್ದೇಶಕರ ಕಾರ್ಯಾಲಯ,
ಸಮಗ್ರ ಶಿಕ್ಷಣ ಕರ್ನಾಟಕ – ಬೀದರ
ಸಂಖ್ಯೆ:-ಸಶಿಕ/ಬೀ/ಕೆಜಿಬಿವಿ. ಟೈಪ್-1/ವಿ.ನಿ./ಆಹಾರ/Call-2/2021-22 ದಿನಾಂಕ : 27-07-2022
ಟೆಂಡರ್ ಪ್ರಕಟಣೆ -ಕರೆ-2
ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿಯಲ್ಲಿ ಜಿಲ್ಲೆಯ 2021-22 ಮತ್ತು 2022-23ನೇ ಸಾಲಿನಲ್ಲಿ 4 ಕೆ.ಕೆ.ಜಿ.ಬಿ.ವಿ. ನಿಲಯಗಳಲ್ಲಿ (1)ಕೆ.ಕೆ.ಜಿ.ಬಿ.ವಿ. ಧೂಪತಮಹಾಗಾಂವ್ ತಾ:ಔರಾದ, (2) ಕೆ.ಕೆ.ಜಿ.ಬಿ.ವಿ. ಮುಡಬಿ ತಾ:ಬಸವಕಲ್ಯಾಣ, (3) ಕೆ.ಕೆ.ಜಿ.ಬಿ.ವಿ. ಕೋನಮೇಳಕುಂದಾ ತಾ: ಭಾಲ್ಕಿ ಮತ್ತು (4) ಕೆ.ಕೆ.ಜಿ.ಬಿ.ವಿ. ಕೂಡಂಬಲ್ ತಾ: ಹುಮನಾಬಾದ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಸರಬರಾಜು ಮಾಡುವ ನಿಟ್ಟಿನಲ್ಲಿ ಇ ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಇ-ಟೆಂಡರ್ ಅಹ್ವಾನಿಸಲಾಗಿದೆ. ಒಟ್ಟು ರೂ. 70,00,000/- (ರೂಪಾಯಿ ಎಪ್ಪತ್ತು ಲಕ್ಷ ಮಾತ್ರ) ನಿಗಧಿಪಡಿಸಲಾಗಿದೆ. ಅಲ್ಪಾವಧಿ ಇ-ಟೆಂಡರ್ ಪ್ರಕ್ರೀಯೆಯ ವೇಳಾಪಟ್ಟಿ ಈ ಕೆಳಗಿನಂತಿದೆ.
ಅನುಬಂಧ
Call-2
1) ಅಲ್ಪಾವಧಿ ಟೆಂಡರ್ ಪ್ರಕಟಣೆಯ ಸಂಖ್ಯೆ ಹಾಗೂ ದಿನಾಂಕ : ಸಶಿಕ/ಬೀ/ಕೆಕೆಜಿಬಿವಿ. ಟೈಪ್-1/ವಿ.ನಿ./ಆಹಾರ/Call-2/2021-22 dt: 27-07-2022, 2) ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: ದಿ: 10-08-2022 ಬೆಳಿಗ್ಗೆ 11.00 ಗಂಟೆ, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 12-08-2022 ಬೆಳಿಗ್ಗೆ 11:00 ಗಂಟೆ, 4) ಹಣಕಾಸಿನ ಬಿಡ್ ತೆರೆಯುವ ಸಂಭಾವ್ಯ ದಿನಾಂಕ ಮತ್ತು ವೇಳೆ: ತಾಂತ್ರಿಕ ಬಿಡ್ ಅಂತಿಮಗೊಳಿಸಿದ ನಂತರ, 5) ಟೆಂಡರ್ ಮೊತ್ತ: ರೂ. 70,00,000/- (ರೂಪಾಯಿ ಎಪ್ಪತ್ತು ಲಕ್ಷ ಮಾತ್ರ), 6) ಪಾವತಿಸಬೇಕಾದ ಇ.ಎಮ್.ಡಿ ಮೊತ್ತ:ರೂ. 1,75,000/- (ರೂಪಾಯಿ ಒಂದು ಲಕ್ಷದ ಎಪ್ಪತ್ತೈದು ಸಾವಿರ ಮಾತ್ರ), 7) ಟೆಂಡರ್ ಅಂಗೀಕರಿಸುವ ಅಧಿಕಾರಿ : ಟೆಂಡರ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಅಧಿಕಾರವು ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಬೀದರ ಇವರು ಹೊಂದಿರುತ್ತಾರೆ. 8) ವ್ಯವಹರಿಸಬೇಕಾದ ಅಧಿಕಾರಿ, ಕಛೇರಿ ವಿಳಾಸ ಮತ್ತು ದೂರವಾಣಿ ಸಂಖ್ಯೆ: ಡಾ॥ ಟಿ.ಆರ.ದೊಡ್ಡೆ ಜಿಲ್ಲಾ ಯೋಜನಾ ಉಪ -ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಬೀದರ. ಮೊಬೈಲ್ ಸಂಖ್ಯೆ:- 9448999388 ಸ್ಥಿರ ದೂರವಾಣಿ ಸಂಖ್ಯೆ: 08482-233136
ಸಹಿ/- ಉಪ ನಿರ್ದೇಶಕರು ಪದನಿಮಿತ್ತ, ಜಿಲ್ಲಾ ಯೋಜನಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಬೀದರ
ವಾ.ಸಾ.ಸಂ.ಇ/ಬೀದರ/160/ಎಂಸಿ&ಎ/2022-23

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
(ಕಾರ್ಮಿಕ ಇಲಾಖೆ)
ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029.
ದೂ.: 080-29753350, ಇ-ಮೇಲ್: karbuildworkerswelfare@gmail.com
No.: KBOCWWB/NOTIFICATIONS/CR-01/2022-23 Dated: 29.07.2022
ಇ-ಟೆಂಡರ್ ಪ್ರಕಟಣೆ
ಈ ಅಧಿಸೂಚನೆಯಲ್ಲಿ ವಿವರಿಸಿದ ಉಲ್ಲೇಖದ ನಿಯಮಗಳ ಪ್ರಕಾರ ಪೂರ್ವ ಅರ್ಹತಾ ಟೆಂಡರ್ ಮತ್ತು ಮೂರು ಹಂತದ ಇ-ಟೆಂಡರ್‌ಗಳನ್ನು (ಪೂರ್ವ ಅರ್ಹತಾ, ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಈ ಕೆಳಗಿನ ಸೇವೆಗಳಿಗೆ ಮತ್ತು ನಿಗದಿಪಡಿಸಿದ ಅವಧಿಗಾಗಿ ಅರ್ಹ ಏಜನ್ಸಿಗಳಿಂದ ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಸೇವೆಯ ವಿವರಗಳು	ಅವಧಿ	ಮುಂಗಡ ಠೇವಣಿ ಹಣ (ಇಎಂಡಿ)
1	KBOCWWB/MHC/CR-23/2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ಉಪ ವಿಭಾಗ 1, ಮಂಗಳೂರು ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಾಯೋಗಿಕವಾಗಿ 01 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 1,77,000/-
2	KBOCWWB/MHC/CR-18/2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ವಿಜಯಪುರ ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಾಯೋಗಿಕವಾಗಿ 05 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 8,85,000/-
3	KBOCWWB/MHC/CR-27/2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ರಾಯಚೂರು ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಾಯೋಗಿಕವಾಗಿ 02 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 3,56,000/-
4	KBOCWWB/MHC/CR-15/2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ಬಾಗಲಕೋಟೆ ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಾಯೋಗಿಕವಾಗಿ 03 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 5,31,000/-
5	KBOCWWB/MHC/CR-33/2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ಉಪ ವಿಭಾಗ 2, ಬಳ್ಳಾರಿ ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಾಯೋಗಿಕವಾಗಿ 02 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 3,56,000/-
6	KBOCWWB/MHC/CR-32/2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ಉಪ ವಿಭಾಗ 1, ಬಳ್ಳಾರಿ ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಾಯೋಗಿಕವಾಗಿ 03 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 5,31,000/-
7	KBOCWWB/MHC/CR-34/2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ಚಿತ್ರದುರ್ಗ ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಾಯೋಗಿಕವಾಗಿ 04 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 7,11,000/-
8	KBOCWWB/MHC/CR-22/2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ಉಡುಪಿ ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಾಯೋಗಿಕವಾಗಿ 02 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 3,56,000/-
9	KBOCWWB/PHC/CR-05/2022-23	ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಪ್ರಿವೆಂಟಿವ್ ಹೆಲ್ತ್ ಚೆಕಪ್ ಸೌಲಭ್ಯಗಳನ್ನು ಒದಗಿಸಲು ಏಜೆನ್ಸಿಗಳನ್ನು ಎಂಪಾನೆಲ್ಮೆಂಟ್ ಮಾಡುವ ಟೆಂಡರ್.	01 ವರ್ಷ	ಇಎಂಡಿ ಅನ್ವಯಿಸುವುದಿಲ್ಲ

ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಏಜೆನ್ಸಿಗಳು ಇ-ಪ್ರೊಕ್ಯೂರ್‌ಮೆಂಟ್ https://eproc.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಮ್ರ ಸಂಖ್ಯೆ 1 ರಿಂದ 05ರ ಇ-ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: 24.08.2022ರಂದು ಸಂಜೆ 5:30 ಗಂಟೆಯವರೆಗೆ, ಕ್ರಮ ಸಂಖ್ಯೆ: 06 ರಿಂದ 08 ರ ಇ-ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: 25.08.2022ರಂದು ಸಂಜೆ 5:30 ಗಂಟೆಯವರೆಗೆ ಹಾಗೂ ಕ್ರಮ ಸಂಖ್ಯೆ: 09ರ ಇ-ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: 16.08.2022ರಂದು ಸಂಜೆ 5:30 ಗಂಟೆಯವರೆಗೆ ಇರುತ್ತದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ.ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/-
ಜಂಟಿ ಕಾರ್ಯದರ್ಶಿಗಳು, ಕ.ಕ.&ಇ.ನಿ.ಕಾ.ಕ.ಮಂಡಳಿ
ವಾಸಾಸಂಇ/ವಾಪ್ರ/ಎಲ್‌ಸಿ/1561/2022-23
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರ್ಯನಿರ್ವಾಹಕ ಇಂಜನೀಯರರು, ಬಾ.ಪ.ಅ.ಪ್ರಾ
ವಿಭಾಗ ನಂ.02, ಬಾಗಲಕೋಟೆ
ನಂ.ಕಾನಿಇಂ/ಬಾ.ಪ.ಅ.ಪ್ರಾ/ವಿ-2/ಟೆಂಡರ ನಂ.4/2022-23/1493 ದಿನಾಂಕ:28.07.2022
ಅಲ್ಪಾವಧಿ ಟೆಂಡರ್ ಪ್ರಕಟಣೆ. (ಇ-ಪ್ರೋಕ್ಯೂರಮೆಂಟ್ ಮುಖಾಂತರ)
ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿನ ಕಾಮಗಾರಿಗಳಿಗೆ ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಶೇಕಡಾ ವಾರು ಟೆಂಡರನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿ ಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತವು ರೂ. 8.38 ರಿಂದ 305.61 ಲಕ್ಷಗಳು ಇರುತ್ತದೆ.
ಸದರಿ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ವಿವರ ಹಾಗೂ ಕಾಮಗಾರಿಗಳ ವಿವರಗಳಿಗಾಗಿ ಇ-ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ 10.08.2022 ಸಂಜೆ 5.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ದಿನಾಂಕ: 12.08.2022 ರಂದು ಬೆಳಿಗ್ಗೆ 11.00 ಘಂಟೆ (ಸಾಧ್ಯವಾದಲ್ಲಿ) 50 ಲಕ್ಷ ವರೆಗಿನ ಕಾಮಗಾರಿಗಳ ಆರ್ಥಿಕ ಬಿಡ್ ಹಾಗೂ 50 ಲಕ್ಷ ಮೇಲ್ಪಟ್ಟ ಕಾಮಗಾರಿಗಳ ತಾಂತ್ರಿಕ ಬಿಡ್‌ಗಳನ್ನು ಹಾಗೂ 50 ಲಕ್ಷ ಮೇಲ್ಪಟ್ಟ ಕಾಮಗಾರಿಗಳ ಆರ್ಥಿಕ ಬಿಡ್ಡುಗಳನ್ನು ದಿನಾಂಕ :16.08.2022 ರಂದು ಬೆಳಿಗ್ಗೆ 11.00 ಘಂಟೆ (ಸಾಧ್ಯವಾದಲ್ಲಿ) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ:08354-297054 ಸಂಪರ್ಕಿಸಬಹುದಾಗಿದೆ.
ಸಹಿ/-ಕಾರ್ಯನಿರ್ವಾಹಕ ಇಂಜನೀಯರರು,
ಬಾ.ಪ.ಅ.ಪ್ರಾ.,ವಿಭಾಗ ನಂ.2,ಬಾಗಲಕೋಟೆ
DIPR/BGK/RO-NO-309/MCA/2022-23

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ
ಮೌಲಾನ ಅಬುಲ್ ಕಲಾಂ ಆಜಾದ್ ಭವನ, ನಂ.16ಸಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560 052 ಸಹಾಯವಾಣಿ: 8277799990
ವೆಬ್‌ಸೈಟ್: https://dom.karnataka.gov.in ದಿನಾಂಕ: 30.07.2022
ಪ್ರಕಟಣೆ
ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯಲು ವಿದ್ಯಾರ್ಥಿವೇತನ ಯೋಜನೆ-2022-23
ಅಲ್ಪಸಂಖ್ಯಾತರ ನಿರ್ದೇಶನಾಲಯದ ಮುಖಾಂತರ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಾತ್ರ ಪ್ರತಿಷ್ಠಿತ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪಿಜಿ ವ್ಯಾಸಂಗ ಮಾಡಲು ಹಣಕಾಸಿನ ನೆರವು (ವಿದ್ಯಾರ್ಥಿವೇತನ ರೂಪದಲ್ಲಿ) ನೀಡಲಾಗುತ್ತದೆ. (2022-23 ಶೈಕ್ಷಣಿಕ ವರ್ಷಕ್ಕೆ ಜಾಗತಿಕ ವಿಶ್ವ ಶ್ರೇಯಾಂಕ ಪಟ್ಟಿಯ ಅನುಸಾರ ಪುರುಷ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ಟಾಪ್ 100 ವಿಶ್ವವಿದ್ಯಾನಿಲಯಗಳನ್ನು ಪರಿಗಣಿಸಲಾಗುತ್ತದೆ ಮತ್ತು ಮಹಿಳಾ ವಿದ್ಯಾರ್ಥಿಗಳಿಗೆ ಟಾಪ್ 200 ವಿಶ್ವವಿದ್ಯಾಲಯಗಳನ್ನು ಮಾತ್ರ ಪರಿಗಣಿಸಲಾಗುತ್ತದೆ).
ಕರ್ನಾಟಕ ರಾಜ್ಯ ನಿವಾಸದ ಆಸಕ್ತ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳು http://103.138.196.8/nos/ಲಿಂಕ್ ಮೂಲಕ ದಾಖಲೆಗಳೊಂದಿಗೆ ಆನ್‌ಲೈನ್‌ನಲ್ಲಿ ಮಾತ್ರ ಅರ್ಜಿ ಸಲ್ಲಿಸಬಹುದು.
ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30.08.2022
ಹೆಚ್ಚಿನ ಮಾಹಿತಿ ಮತ್ತು ಷರತ್ತುಗಳಿಗಾಗಿ, ಅಭ್ಯರ್ಥಿಗಳು ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು, ಅಧಿಕೃತ ವೆಬ್‌ಸೈಟ್ https://dom.karnataka.gov.inಗೆ ಭೇಟಿ ನೀಡುವಂತೆ ಸೂಚಿಸಲಾಗಿದೆ.
ಸಹಿ/- ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.
ನಂ.ಲೋ.ಇ./ಚಿ.ವಿ./ಸ.ಇಂ.-2/ಟೆಂಡರ/2022-23/2450 ದಿನಾಂಕ:28/07/2022
ಅಲ್ಪಾವಧಿ ಇ-ಟೆಂಡರ್/ಮರುಟೆಂಡರ್ ಪ್ರಕಟಣೆ (Call-1 & Call-2)
ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021-22 ನೇ ಸಾಲಿನ ಲೆಕ್ಕ ಶೀರ್ಷಿಕೆ 5054-ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಅಡಿ 1 ಕಾಮಗಾರಿ ಹಾಗೂ 5054-ರಾಹೆ ಸುಧಾರಣೆ ಅಡಿ 2 ಕಾಮಗಾರಿಗಳು, ಹೀಗೆ ಒಟ್ಟು 3 ಕಾಮಗಾರಿಗಳ ಗುತ್ತಿಗೆ ಇಟ್ಟ ಕನಿಷ್ಟ ಮೊತ್ತ ರೂ. 263.16 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. 872.81 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್/ಮರುಟೆಂಡರ್ ಆಹ್ವಾನಿಸಲಾಗಿದೆ.
ಕ್ರ.ಸಂ. 1 & 2 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:01-08-2022 ರಂದು (11.00 ಗಂಟೆಗೆ), 2)ಆಕ್ಷೇಪಣೆ -ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:03-08-2022 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:05-08-2022 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):08-08-2022 (ಸಾಯಂ ಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
ಕ್ರ.ಸಂ. 3 ರಲ್ಲಿನ ಕಾಮಗಾರಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:06-08-2022 ರಂದು (11.00 ಗಂಟೆಗೆ), 2)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:08-08-2022 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:10-08-2022 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):12-08-2022 (ಸಾಯಂ ಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಹಿ/-ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-627/MCA/2022-23

‘ಸೂಪರ್ ದಾದಿ’ ಭಗವಾನಿ

ವಯಸ್ಸು ಒಂದು ಸಂಖ್ಯೆ ಮಾತ್ರ. ಮನದಲ್ಲಿ ಸಾಧಿಸಬೇಕು ಎಂಬ ಛಲ ಇರಬೇಕು. ಅದಕ್ಕಾಗಿ ಸಾಧ್ಯವಿರುವ ಎಲ್ಲ ಪರಿಶ್ರಮವನ್ನೂ ಪಡಬೇಕು. ಯಶಸ್ಸು ತಾನಾಗಿಯೇ ಒಲಿಯುತ್ತದೆ. ಯಾವುದೇ ವಯಸ್ಸಿನಲ್ಲಿಯೂ ಏನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಈ 94 ವರ್ಷದ ‘ಸೂಪರ್ ದಾದಿ’ ಉತ್ತಮ ನಿದರ್ಶನ

ಕ್ರೀಡೆ

ಮೊಮ್ಮಗ ವಿಕಾಸ್ ದಾಗರ್ ಜೊತೆಗೆ ಭಗವಾನಿ ದೇವಿ –ಪಿಟಿಐ ಚಿತ್ರ

ಗಿರೀಶ ದೊಡ್ಡಮನಿ

ಎಂಟು ವರ್ಷದ ಹಿಂದಿನ ಮಾತು. ದುಬೈ ಕ್ರೀಡಾಂಗಣದಲ್ಲಿ ಪ್ಯಾರಾ ಅಥ್ಲೀಟ್ ವಿಕಾಸ್ ದಾಗರ್ ತಮ್ಮ ಮೈಮೇಲೆ ತ್ರಿವರ್ಣಧ್ವಜ ಹೊದ್ದುಕೊಂಡು, ಕೊರಳಲ್ಲಿ ಮಿನುಗುವ ಪದಕವನ್ನು ಧರಿಸಿ ಸಂಭ್ರಮಿಸಿದ್ದರು. ಆ ವಿಜಯೋತ್ಸವಕ್ಕೆ ದೇಶದ ಕ್ರೀಡಾಭಿಮಾನಿಗಳು ಹೆಮ್ಮೆಪಟ್ಟಿದ್ದರು.

ಅದೇ ಹೊತ್ತಿಗೆ ವಿಕಾಸ್ ಅವರ ಕುಟುಂಬದಲ್ಲಿಯೇ ಕ್ರೀಡಾಪ್ರತಿಭೆಯೊಂದರ ಉದಯವಾಯಿತು. ಅದು ಬೇರೆ ಯಾರೂ ಅಲ್ಲ. ವಿಕಾಸ್ ಅವರ ಅಜ್ಜಿ ಭಗವಾನಿ ದೇವಿ. ಹೋದ ವಾರದಿಂದ ಸಾಮಾಜಿಕ ಜಾಲತಾಣಗಳಲ್ಲಿ ಈ 94 ವರ್ಷದ ಅಜ್ಜಿಯ ಸಾಧನೆಯ ಕತೆಗಳು ಓಡಾಡುತ್ತಿವೆ. ಫಿನ್ಲೆಂಡ್‌ನಲ್ಲಿ ನಡೆದ ಮಾಸ್ಟರ್ಸ್ ಅಥ್ಲೆಟಿಕ್ಸ್‌ನಲ್ಲಿ 100 ಮೀಟರ್ಸ್ ಓಟದಲ್ಲಿ ಚಿನ್ನ ಗೆದ್ದ ಸಾಧನೆ ಅವರದ್ದು. ಥೇಟ್ ತಮ್ಮ ಮೊಮ್ಮಗನಂತೆಯೇ ಹೆಗಲ ಮೇಲೆ ತ್ರಿವರ್ಣ ಧ್ವಜ ಹೊದ್ದುಕೊಂಡು, ಬಂಗಾರದ ಪದಕಕ್ಕೆ ಮುತ್ತಿಡುತ್ತ ಸಂಭ್ರಮಿಸಿದ ‘ಸೂಪರ್ ದಾದಿ’ ಚಿತ್ರಗಳು ಎಲ್ಲರ ಚಿತ್ತವನ್ನು ಗೆಲ್ಲುತ್ತಿವೆ.

ಫಿನ್ಲೆಂಡ್‌ನಲ್ಲಿ ಅವರು 90 ರಿಂದ 100 ವರ್ಷದೊಳಗಿನವರ ವಿಭಾಗದ 100 ಮೀಟರ್ಸ್ ಓಟದಲ್ಲಿ 24.74 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಚಿನ್ನ ಗೆದ್ದರು. ಅಲ್ಲದೇ ಶಾಟ್‌ಪಟ್‌ನಲ್ಲಿ ಕಂಚು ಪಡೆದರು. ಅವರಿಗೆ ತರಬೇತುದಾರರಾಗಿ ನಿಂತವರು ಸ್ವತಃ ಮೊಮ್ಮಗ ವಿಕಾಸ್.

ಭಗವಾನಿದೇವಿ ಯಾವತ್ತೂ ಆಟೋಟದ ಕಡೆಗೆ ಹೆಚ್ಚು ಒಲವು ತೋರಿದವರಲ್ಲ. ಕುಟುಂಬದ ದೇಖರೇಕಿಯಲ್ಲಿಯೇ ಜೀವನ ಸವೆಸಿದವರು. 29ನೇ ವಯಸ್ಸಿನಲ್ಲಿ ಪತಿವಿಯೋಗದ ದುಃಖ ಆವರಿಸಿತು. ಆ ಸಂದರ್ಭದಲ್ಲಿ ಭಗವಾನಿದೇವಿ ತುಂಬು ಗರ್ಭಿಣಿಯಾಗಿದ್ದರು. ಎರಡನೇ ಮಗುವಿನ (ವಿಕಾಸ್ ಅವರ ತಂದೆ) ನಿರೀಕ್ಷೆಯಲ್ಲಿದ್ದರು. ಇದಾಗಿ ನಾಲ್ಕು ವರ್ಷ ಕಳೆದಾಗ ಮೊದಲ ಮಗಳು 11 ವರ್ಷದ ವಯಸ್ಸಿನಲ್ಲಿಯೇ ನಿಧನಳಾದ ಆಘಾತ ಎದುರಿಸಿದರು. ಅಷ್ಟಕ್ಕೆ ಅವರ ದುಃಖ ಮುಗಿಯಲಿಲ್ಲ. ಹೃದಯಸಂಬಂಧಿ ಕಾಯಿಲೆ ಕಾಡಿತು. ಬೈಪಾಸ್ ಸರ್ಜರಿಯೂ ಆಗಿಹೋಯಿತು.

ಭಗವಾನಿ ದೇವಿ ಸಂಭ್ರಮ

ಇದೆಲ್ಲದರ ನಡುವೆ ಸಂಸಾರದ ರಥ ಎಳೆದರು. ಅಳುಕದೇ ಮುನ್ನುಗ್ಗಿದರು. ಮಗನಿಗೆ ಒಳ್ಳೆಯ ಭವಿಷ್ಯ ರೂಪಿಸಿದರು. ಮೊಮ್ಮಗ ವಿಕಾಸ್ ಕ್ರೀಡೆಯಲ್ಲಿ ಸಾಧನೆಯ ಒಂದೊಂದೇ ಮೆಟ್ಟಿಲು ಹತ್ತುವುದನ್ನು ನೋಡಿದರು. ಅಂಗವಿಕಲನಾದರೂ 100 ಮೀಟರ್ ಓಟ, ಲಾಂಗ್ ಜಂಪ್ ಕ್ರೀಡೆಗಳಲ್ಲಿ ಮಿಂಚುತ್ತಿದ್ದ ವಿಕಾಸ್ ಸಾಧನೆ ಅಜ್ಜಿಗೆ ಪ್ರೇರಣೆಯಾಯಿತು. ಇದೀಗ ಅವರೇ ಸಾವಿರಾರು ಜನರಿಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ. ಮೊದಲಿಗೆ ಶಾಟ್‌ಪಟ್ ಅಭ್ಯಾಸ ಆರಂಭಿಸಿದರು. ನಂತರ ನಿಧಾನವಾಗಿ ಓಟದತ್ತ ಒಲವು ತೋರಿದರು.

‘ವಯಸ್ಸು ಒಂದು ಸಂಖ್ಯೆ ಮಾತ್ರ. ಮನದಲ್ಲಿ ಸಾಧಿಸಬೇಕು ಎಂಬ ಛಲ ಇರಬೇಕು. ಅದಕ್ಕಾಗಿ ಸಾಧ್ಯವಿರುವ ಎಲ್ಲ ಪರಿಶ್ರಮವನ್ನೂ ಪಡಬೇಕು. ಯಶಸ್ಸು ತಾನಾಗಿಯೇ ಒಲಿಯುತ್ತದೆ. ಯಾವುದೇ ವಯಸ್ಸಿನಲ್ಲಿಯೂ ಏನು ಬೇಕಾದರೂ ಸಾಧಿಸಬಹುದು. ಮುಂದೆ ಪೋಲೆಂಡ್‌ನಲ್ಲಿ ನಡೆಯಲಿರುವ ವಿಶ್ವ ಮಾಸ್ಟರ್ಸ್ ಅಥ್ಲೆಟಿಕ್ಸ್‌ನಲ್ಲಿ ಭಾಗವಹಿಸುವ ಸಿದ್ಧತೆ ಆರಂಭಿಸಿದ್ದಾರೆ.

ಭಗವಾನಿ ದೇವಿ

‘ನಾವು ಅಭ್ಯಾಸಕ್ಕಾಗಿ ಅವರ ಮೇಲೆ ಒತ್ತಡ ಹಾಕುವುದಿಲ್ಲ. ಈ ವಯಸ್ಸಿನಲ್ಲಿ ಗಾಯಗೊಳ್ಳುವ ಅಪಾಯ ಹೆಚ್ಚು. ಬೆಳಿಗ್ಗೆ ಮತ್ತು ಸಂಜೆ ಐದು ಕಿಲೋಮೀಟರ್ ವಾಕಿಂಗ್ ಮಾಡ್ತಾರೆ. ಒಂದಷ್ಟು ಸರಳ ವ್ಯಾಯಾಮಗಳನ್ನು ರೂಢಿಸಿಕೊಂಡಿದ್ದೇವೆ. ವಿಶ್ರಾಂತಿ ಮತ್ತು ಪೌಷ್ಟಿಕ ಆಹಾರ ಕ್ರಮ ಇದೆ. ದೇಹಶಕ್ತಿಗಿಂತಲೂ ಅವರ ಮನೋಬಲ ದೊಡ್ಡದು. ಆತ್ಮವಿಶ್ವಾಸದ ಶಕ್ತಿಯಿಂದಲೇ ಅವರ ಕಾಲುಗಳಿಗೆ ಚೈತನ್ಯ ಪ್ರವಹಿಸುತ್ತದೆ’ ತಮ್ಮ ಅಜ್ಜಿಯ ಕುರಿತು ವಿಕಾಸ್ ಹೇಳುತ್ತಾರೆ.

> ಬೇರೊಂದು ದೇಶದ ನೆಲದಲ್ಲಿ ನನ್ನ ಭಾರತಕ್ಕಾಗಿ ಪದಕ ಜಯಿಸಿದ್ದು ಅಪಾರ ಸಂತಸ ಮತ್ತು ಹೆಮ್ಮೆ ತಂದಿದೆ
>
> –ಭಗವಾನಿ

ಭಗವಾನಿದೇವಿಯವರು ಇಳಿವಯಸ್ಸಿನಲ್ಲಿ ದೇಶಕ್ಕೆ ಪದಕಗಳ ಕಾಣಿಕೆಯನ್ನು ನೀಡಿದ್ದಾರೆ. ಜೊತೆಗೆ ಬಾಳ ಮುಸ್ಸಂಜೆಯಲ್ಲಿ ಹಲವಾರು ರೀತಿಯ ಸಮಸ್ಯೆಗಳನ್ನು ಅನುಭವಿಸುತ್ತಿರುವ ಹಿರಿಯಜೀವಗಳ ಬದುಕಿನಲ್ಲಿ ಉತ್ಸಾಹ ತುಂಬಿದ್ದಾರೆ. ಮೆಚ್ಚಿನ ಹವ್ಯಾಸವನ್ನು ಯಾವುದೇ ವಯಸ್ಸಿನಲ್ಲಿಯೂ ಮಾಡಿ ಜಯಿಸಬಹುದು ಎಂದು ತೋರಿಸಿಕೊಟ್ಟಿದ್ದಾರೆ. ಸ್ಪರ್ಧೆಯೊಂದಿಗೆ ಬದುಕನ್ನು ಗೆಲ್ಲುವ ಕಲೆಯನ್ನೂ ಪ್ರದರ್ಶಿಸಿದ್ದಾರೆ.

‘ಹೈಪೊಥೈರಾಯ್ಡ್’ಗೆ ಪರಿಹಾರವೇನು?

ಸ್ಪಂದನ

ಡಾ. ವೀಣಾ ಎಸ್. ಭಟ್

- **ನನಗೆ 26 ವರ್ಷ.2020ರ ಡಿಸೆಂಬರ್‌ನಲ್ಲಿ ಗರ್ಭದಲ್ಲಿದ್ದ ಮಗುವಿಗೆ ಹೃದಯಬಡಿತವಿಲ್ಲ ಎಂಬ ಕಾರಣಕ್ಕೆ ಗರ್ಭಪಾತ ಮಾಡಲಾಯಿತು. 2021ರಲ್ಲಿ ಮತ್ತೆ ಗರ್ಭಿಣಿಯಾದೆ. ಆದರೆ, ಐದು ತಿಂಗಳ ಸ್ಕ್ಯಾನಿಂಗ್‌ನಲ್ಲಿ ಮಗುವಿಗೆ ಬೆನ್ನುಮೂಳೆ (ಸ್ಪೈನಲ್ ಕಾರ್ಡ್) ಬೆಳವಣಿಗೆಯಾಗಿಲ್ಲ ಎಂದು ಗರ್ಭಪಾತ ಮಾಡಲಾಯಿತು. ಮತ್ತೆ ಗರ್ಭ ಧರಿಸುವ ಮುನ್ನ ಏನಾದ್ರೂ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕಾ? ದಯವಿಟ್ಟು ತಿಳಿಸಿ.**

ಹೆಸರು, ಊರು ತಿಳಿಸಿಲ್ಲ.

ಎರಡನೇ ಬಾರಿ ಗರ್ಭಪಾತವಾದಾಗ ಮಗುವಿಗೆ ಸ್ಪೈನಲ್ ಕಾರ್ಡ್ ಸರಿಯಾಗಿ ಬೆಳವಣಿಗೆ ಆಗಿಲ್ಲ ಎಂದು ಹೇಳಿದ್ದೀರಿ. ಹೆಚ್ಚಿನ ಸಂದರ್ಭಗಳಲ್ಲಿ ರಕ್ತದಲ್ಲಿ ಫೋಲಿಕ್ ಆ್ಯಸಿಡ್‌ನ ಕೊರತೆಯಿಂದಾಗಿ ಇಂಥ ನ್ಯೂರಲ್‌ಟ್ಯೂಬ್ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ಹಾಗಾಗಿ ಮತ್ತೆ ಗರ್ಭಧಾರಣೆಯಾಗುವ ಮುನ್ನ ಪ್ರತಿ ದಿನ 4 ಎಂ.ಜಿ ಫೋಲಿಕ್ ಆ್ಯಸಿಡ್ ಮಾತ್ರೆಗಳನ್ನು ತೆಗೆದುಕೊಳ್ಳಬೇಕು. ಈಗ ಎಲ್ಲ ಕಡೆಗಳಲ್ಲಿಯೂ ಫೋಲಿಕ್ ಆ್ಯಸಿಡ್ ಮಾತ್ರೆ ಲಭ್ಯವಿದೆ. ಗರ್ಭಧಾರಣೆಗೂ ಮುನ್ನ ಪ್ರತಿ ಮಹಿಳೆಯು 4 ರಿಂದ 6 ವಾರ ಮೊದಲೇ 4 ಎಂ.ಜಿ. ಫೋಲಿಕ್ ಆ್ಯಸಿಡ್ ಮಾತ್ರೆ ನಿತ್ಯ ತೆಗೆದುಕೊಳ್ಳಬೇಕು ಎಂದು ವಿಶ್ವ ಆರೋಗ್ಯ ಸಂಸ್ಥೆ ಶಿಫಾರಸು ಮಾಡಿದೆ. ಇದರಿಂದ ನ್ಯೂರಲ್ ಟ್ಯೂಬ್ ದೋಷಗಳು, ಅಕಾಲಿಕ ಹೆರಿಗೆ, ಗರ್ಭಪಾತ ಸಂಭವವನ್ನು ಕಡಿಮೆ ಮಾಡುತ್ತದೆ. ಹಸಿರುಸೊಪ್ಪು ತರಕಾರಿ, ಹಣ್ಣು ಹೆಚ್ಚು ಸೇವಿಸಿ. ಅದರಲ್ಲೂ ಪಾಲಕ್, ಬಸಳೆ ಸೊಪ್ಪುಗಳಲ್ಲಿ ಫೋಲಿಕ್ ಆ್ಯಸಿಡ್ ಅಧಿಕ ಪ್ರಮಾಣದಲ್ಲಿರುತ್ತದೆ. ಇವುಗಳ ಬಳಕೆ ಹೆಚ್ಚಿರಲಿ. ಹಿಮೋಗ್ಲೋಬಿನ್ ಮಟ್ಟ ಸರಿಯಾಗಿದೆಯೇ ನೋಡಿಕೊಳ್ಳುತ್ತಿರಿ. ಕಬ್ಬಿಣಾಂಶದ ಕೊರತೆಯಿದ್ದರೆ ಆ ಮಾತ್ರೆಗಳನ್ನು ತೆಗೆದುಕೊಳ್ಳಿ. ಆರೋಗ್ಯ ಸುಧಾರಿಸಿದ ಮೇಲೆ ಗರ್ಭಧಾರಣೆಯಾದರೆ ಆರೋಗ್ಯವಂತ ಮಗು ಪಡೆಯಬಹುದು.

- **ನನಗೆ 24 ವರ್ಷ. ನಾಲ್ಕು ವರ್ಷಗಳಿಂದ ಹೈಪೋಥೈರಾಯ್ಡ್ ಸಮಸ್ಯೆ ಇದೆ. 75 ಎಂ.ಜಿ ಮಾತ್ರೆ ತಗೋತಿದೀನಿ. ನನ್ನ ಎತ್ತರ ಐದೂಕಾಲು ಅಡಿ. ತೂಕ 86 ಕೆ.ಜಿ. 4 ಅಥವಾ 5 ತಿಂಗಳಿಗೊಮ್ಮೆ ಮುಟ್ಟಾಗುತ್ತದೆ. ಸ್ಕ್ಯಾನಿಂಗ್‌ನಲ್ಲಿ ಪಿಸಿಓಡಿ ತೊಂದರೆ ಇದೆ ಎಂದು ಗೊತ್ತಾಯಿತು. ನನ್ನ ಋತುಚಕ್ರ ನಿಯಮಿತವಾಗಲು ಏನು ಮಾಡಬೇಕು ತಿಳಿಸಿ.**

ಹೆಸರು, ಊರು ತಿಳಿಸಿಲ್ಲ

ನಿಮಗಿರುವ ಹೈಪೋಥೈರಾಯ್ಡ್ ಸಮಸ್ಯೆ, ನೀವು ತೆಗೆದುಕೊಳ್ಳುವ ಮಾತ್ರೆಯಿಂದ ನಿಯಂತ್ರಣದಲ್ಲಿದೆಯೇ ಇಲ್ಲವೇ ಎಂದು 6 ತಿಂಗಳಿಗೊಮ್ಮೆಯಾದರೂ ತಿಳಿದುಕೊಳ್ಳಬೇಕು. ಇದನ್ನು ಟಿಎಸ್‌ಎಚ್ ಹಾರ್ಮೋನು ಪರೀಕ್ಷೆಯ ಮೂಲಕ ತಿಳಿದು ಕೊಳ್ಳಿ. ಪಿಸಿಓಡಿ ತೊಂದರೆಗೆ ಮುಖ್ಯವಾದ ಚಿಕಿತ್ಸೆಯೆಂದರೆ ಜೀವನಶೈಲಿಯಲ್ಲಿ ಬದಲಾವಣೆ. ಜತೆಗೆ ಸೂಕ್ತ ಚಿಕಿತ್ಸೆ ಪಡೆಯುವುದು. ತೂಕವನ್ನು ಕಡಿಮೆ ಮಾಡಿಕೊಳ್ಳಲು ಆಹಾರ ಸೇವನೆಯಲ್ಲಿ ನಿಯಂತ್ರಣವಿರಲಿ. ಪಿಸಿಓಡಿ ನಿವಾರಣೆಗೆ ನಿರ್ದಿಷ್ಟ ಆಹಾರವಿಲ್ಲ. ಸ್ಥಳೀಯವಾಗಿ ಸಿಗುವ ಸೊಪ್ಪು, ತರಕಾರಿ ಸೇವಿಸಿ. ಜಂಕ್‌ಫುಡ್ ತಿನ್ನುವ ಅಭ್ಯಾಸವಿದ್ದರೆ ಸಂಪೂರ್ಣ ಬಿಟ್ಟುಬಿಡಿ. ನಿತ್ಯ ಒಂದು ಗಂಟೆಯಾದರೂ ಸೈಕ್ಲಿಂಗ್, ವಾಕಿಂಗ್, ಸ್ವಿಮಿಂಗ್, ಡ್ಯಾನ್ಸಿಂಗ್, ಯೋಗ ಯಾವುದಾದರೊಂದು ಅಭ್ಯಾಸ ಮಾಡಿ. ಆರರಿಂದ ಎಂಟು ತಾಸು ನಿದ್ರೆ ಬೇಕು. ತಿಂಗಳಿಗೆ ಸರಿಯಾಗಿ ಮುಟ್ಟಾಗಲು ಅಂಡಾಶಯದಿಂದ ಅಂಡೋತ್ಪತ್ತಿಯಾಗುವ ಮಾತ್ರೆಗಳನ್ನು ಇಲ್ಲವೇ ಹಾರ್ಮೋನು ಮಾತ್ರೆಗಳನ್ನು ತಜ್ಞರು ನೀಡುತ್ತಾರೆ.

- **ನನಗೆ 13 ವರ್ಷ. ತೂಕ 42 ಕೆ.ಜಿ. ಎರಡು ವರ್ಷಗಳ ಹಿಂದೆ ಋತುಚಕ್ರ ಆರಂಭವಾಯಿತು. ಆರಂಭದಲ್ಲಿ ಮೂರು ತಿಂಗಳಿಗೊಮ್ಮೆ ಮುಟ್ಟಾಗುತ್ತಿದ್ದೆ. ಆದರೆ ಏಳು ತಿಂಗಳಿಂದ 2 ತಿಂಗಳಿಗೊಮ್ಮೆ ಮುಟ್ಟಾಗುತ್ತಿದ್ದೇನೆ. ಐದು ದಿನಗಳ ಕಾಲವೂ ಸ್ರಾವ ಇರುತ್ತದೆ. ಇದಕ್ಕೆ ಪರಿಹಾರವೇನು? ಮುಂದೆ ಏನಾದರೂ ತೊಂದರೆಯಾಗುವುದೇ?**

ಹೆಸರು, ಊರು ತಿಳಿಸಿಲ್ಲ

ಋತುಚಕ್ರ ಆರಂಭವಾಗಿ ಎರಡು ವರ್ಷವಾಗಿದೆ. ಇನ್ನು ಒಂದು ವರ್ಷದಲ್ಲಿ ಋತುಚಕ್ರ ನಿಯಮಿತವಾಗಿ ಆಗದೇ ಇದ್ದಲ್ಲಿ ತಜ್ಞ ವೈದ್ಯರ ಸಲಹೆ ಪಡೆದುಕೊಳ್ಳಿ. ಮೂರು ವರ್ಷದ ನಂತರವೂ ಋತುಚಕ್ರ ಏರುಪೇರಿನ ಸಮಸ್ಯೆ ಇದ್ದರೆ ಪಿಸಿಓಎಸ್ ಸಮಸ್ಯೆಯ ಮುನ್ಸೂಚನೆಯಾಗಿರಬಹುದು. ನಿರ್ಲಕ್ಷ್ಯ ಬೇಡ. ಹಾಗೆಂದೂ ಆತಂಕ ಪಡುವುದೂ ಬೇಡ. ಒಂದು ವರ್ಷದ ನಂತರ ನಿಮ್ಮ ಋತುಚಕ್ರವನ್ನು ಅರ್ಥ ಮಾಡಿಕೊಂಡು ತಜ್ಞರು ಚಿಕಿತ್ಸೆ ನೀಡುತ್ತಾರೆ.

- **ನಾನು ಎಂ.ಎ, ಬಿ.ಇಡಿ ಪೂರ್ಣಗೊಳಿಸಿದ್ದೇನೆ. ಅಲ್ಲಿ ಒಬ್ಬ ವ್ಯಕ್ತಿ ನನ್ನ ಇಷ್ಟಪಟ್ಟು ಮದುವೆ ಆಗ್ತೀನಿ ಅಂತ ಹೇಳಿ 18 ಬಾರಿ ಲೈಂಗಿಕ ಸಂಪರ್ಕ ಮಾಡಿದ್ದ. ತಿಂಗಳು ಮುಟ್ಟು ಆಗ್ತಿಲ್ಲ ಅಂತ ಹೇಳಿದ್ದಕ್ಕೆ ಮುಟ್ಟಾಗುವ ಮಾತ್ರೆ ಕೊಡ್ತೀನಿ ಅಂತ ಹೇಳಿ ಗರ್ಭಪಾತ ಆಗುವ ಮಾತ್ರೆ ಕೊಟ್ಟಿದ್ದ. ಮುಟ್ಟಿನ ಮಾತ್ರೆ ಎಂದು ತೆಗೆದುಕೊಂಡೆ. ಗರ್ಭಪಾತವೂ ಆಯಿತು. ಈಗ ಅವನೂ ದೂರವಾಗಿದ್ದಾನೆ. ಅವನನ್ನು ಮರೆಯಲು ಆಗುತ್ತಿಲ್ಲ. ದಯವಿಟ್ಟು ಪರಿಹಾರ ಹೇಳಿ.**

ಹೆಸರು, ಊರು ತಿಳಿಸಿಲ್ಲ

ನೀವು ಉನ್ನತ ಶಿಕ್ಷಣ ಪಡೆದು ತಿಳಿವಳಿಕೆಯುಳ್ಳವರಾಗಿದ್ದೀರಿ ಎಂಬುದು ನನ್ನ ಅಭಿಪ್ರಾಯ. ಮದುವೆಯಾಗಿ ಸತಿಪತಿಗಳಾಗುತ್ತಿರೋ ಇಲ್ಲವೋ ಸರಿಯಾಗಿ ಖಾತ್ರಿಪಡಿಸಿಕೊಳ್ಳದೇ ಲೈಂಗಿಕ ಸಂಪರ್ಕ ಮಾಡಲು ಆತುರಪಟ್ಟಿದ್ದಕ್ಕೆ ಈಗ ಪಶ್ಚಾತ್ತಾಪ ಪಡುತ್ತಿದ್ದೀರೆಂದು ಎನ್ನಿಸುತ್ತದೆ. ಮೋಸ ಮಾಡಿದ ಮೇಲೂ ಅವನನ್ನು ಮರೆಯಲು ಆಗುತ್ತಿಲ್ಲವೆಂದರೆ ಅದು ನಿಮ್ಮ ಮಾನಸಿಕ ದೌರ್ಬಲ್ಯ. ಯಾವುದೇ ವ್ಯಕ್ತಿಯ ಕೌಟುಂಬಿಕ, ಶೈಕ್ಷಣಿಕ ಹಾಗೂ ಆರ್ಥಿಕ ಹಿನ್ನೆಲೆ ತಿಳಿದುಕೊಂಡು ಒಡನಾಟ ಬೆಳೆಸಬೇಕೇ ಹೊರತು ಅಪರಿಚಿತರು ಹೆಣೆಯುವ ಬಲೆಗೆ ಬೀಳಬಾರದು. ಆತ ಅಯೋಗ್ಯನಾಗಿದ್ದರೆ ಮರೆಯಲು ಪ್ರಯತ್ನಿಸಿ. ಒಳ್ಳೆಯ ಉದ್ಯೋಗ ಪಡೆದು ಆರ್ಥಿಕವಾಗಿ ಸಬಲರಾಗಿ. ಹಳೆಯದೆಲ್ಲ ಮರೆತು ಹೊಸ ಬದುಕು ಕಟ್ಟಿಕೊಳ್ಳಿ.

ಸ್ಪಂದನ... ಮುಟ್ಟು, ಗರ್ಭದಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್.ಭಟ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು boomi@prajavani.co.in. ಕಳುಹಿಸಬಹುದು.

ಸೌಂದರ್ಯ

ಸಾಂದರ್ಭಿಕ ಚಿತ್ರ

ಕೂದಲ ಎಳೆಗಳಲ್ಲಿ ಕಾಮನಬಿಲ್ಲು!

ವನಿತಾ ಜೈನ್

ಮೊದಲೆಲ್ಲ ಬಿಳಿ ಕೂದಲು ಕಾಣಿಸಿಕೊಂಡರೆ ಆತಂಕಕ್ಕೆ ಒಳಗಾಗಿ ಕಪ್ಪು ಬಣ್ಣದ ಹೇರ್ ಡ್ರೈಯಿಂಗ್ ಮಾಡಿಕೊಳ್ಳುತ್ತಿದ್ದರು. ಈಗೆಲ್ಲ ಹೇರ್ ಡ್ರೈಯಿಂಗ್ ಮಾಡಿಕೊಳ್ಳೋಕೆ ಬಿಳಿ ಕೂದಲು ಬರೋವರೆಗೂ ಕಾಯಬೇಕಾಗಿಲ್ಲ. ಕೂದಲು ಯಾವತ್ತು ಕಪ್ಪಾಗೇ ಇರಲಿ ಅಂತ ಊಟದಲ್ಲಿ ಕರಿಬೇವನ್ನು ಹುಡುಕಿ ಹುಡುಕಿ ತಿನ್ನಿಸುತ್ತಿದ್ದ ಕಾಲವೂ ಹೋಯ್ತು. ಕಪ್ಪು ಕೂದಲಿಗೆ ತರಹೇವಾರಿ ಬಣ್ಣಗಳು ಸೇರಿ ತಲೆಯಲ್ಲೊಂದು ಕಾಮನಬಿಲ್ಲು ಮೂಡಿದಂತೆ ಕಂಡರೆ ಆಶ್ಚರ್ಯವಿಲ್ಲ.

> ಕಪ್ಪಾದ, ಸೊಂಪಾದ ಕೂದಲು ಸೌಂದರ್ಯ ಪ್ರತೀಕ ಎನ್ನುವ ಮಾತಿತ್ತು. ಆದರೆ, ಈಗ ಕಪ್ಪು ಕೂದಲು ಬಗೆ ಬಗೆಯ ಬಣ್ಣಗಳಲ್ಲಿ ಮಿಂದೇಳುತ್ತಿದೆ. ನೀಲಿ, ಹಸಿರು, ಕಂದು, ಕೆಂಪು, ಬಿಳಿ ಹೀಗೆ ನಾನಾ ಬಣ್ಣಗಳ ಹೇರ್ ಕಲರಿಂಗ್ ಮಾಡಿಸಿಕೊಂಡು ‘ಫಂಕಿ’ಯಾಗಿ ಕಾಣಿಸಿಕೊಳ್ಳೋದು ಕೂಡ ಇವತ್ತಿನ ಟ್ರೆಂಡ್.

ಹಿಂದೆಲ್ಲ ಮೆಹಂದಿ ಸೊಪ್ಪನ್ನು ಅರೆದು ಹಚ್ಚಿಕೊಳ್ಳುತ್ತಿದ್ದರು. ಕರಿಬೇವಿನ ಪುಡಿ, ಒಣಗಿಸಿ ಪುಡಿ ಮಾಡಿದ ದಾಸವಾಳ ಎಲೆಗಳ ಮಿಶ್ರಣವನ್ನು ಮೆಹಂದಿ ಪುಡಿಗೆ ಸೇರಿಸಿಯೂ ಹಚ್ಚಲಾಗುತ್ತಿತ್ತು. ಈಗಲೂ ಈ ಸಾಂಪ್ರದಾಯಿಕ ಶೈಲಿಯ ಹೇರ್ ಕಲರಿಂಗ್ ಮುಂದುವರಿದಿದೆ.

ಹೇರ್‌ಕಲರಿಂಗ್‌ನಲ್ಲಿಯೂ ಎರಡು ವಿಧಗಳಿವೆ. ಒಂದು ಸಸ್ಯಜನ್ಯ ಕಲರಿಂಗ್ ಮತ್ತೊಂದು ಸಿಂಥಟಿಕ್ ಕಲರಿಂಗ್ (ರಾಸಾಯನಿಕ ಆಧಾರಿತ). ಶಾಶ್ವತವಾಗಿಯೂ ಹೇರ್ ಕಲರಿಂಗ್‌ನ ಮೊರೆ ಹೋಗಬಹುದು. ಆಯಾ ಕಾಲಕ್ಕೆ ಬೇಕಾದ ಹಾಗೆ ತಾತ್ಕಾಲಿಕವಾಗಿಯೂ ಕಲರಿಂಗ್ ಮಾಡಿಸಿಕೊಳ್ಳಬಹುದು. ಬ್ಲಂಡ್, ಬಿಳಿ, ಕೆಂಪು, ಕಂದು ಮತ್ತು ಕಪ್ಪು... ಈ ಐದು ಬಣ್ಣಗಳಲ್ಲಿ ಹೇರ್ ಕಲರಿಂಗ್ ಲಭ್ಯವಿದೆ. ಈ ಬಣ್ಣಗಳನ್ನು ಸ್ವಲ್ಪಮಟ್ಟಿಗೆ ಬದಲಾಯಿಸಿ ವಿಭಿನ್ನ ಬಣ್ಣಗಳು ಬರುವಂತೆ ಮಾಡಬಹುದು.

ಯಾವ ಯಾವ ಬಣ್ಣಗಳಿವೆ ?

ಚಾಕಲೇಟ್ ಬ್ರೌನ್ , ಡಾರ್ಕ್ ಗೋಲ್ಡನ್ ಬ್ರೌನ್, ಮೀಡಿಯಂ ಆ್ಯಶ್ ಬ್ರೌನ್, ರೆಡ್ಡಿಶ್ ಬ್ಲಂಡ್ , ಲೈಟ್ ಅಬರ್ನ್, ಮೀಡಿಯಮ್ ಅಬರ್ನ್, ರೆಡ್ ಹಾಟ್ ಸಿನಮನ್, ಎಕ್ಸ್‌ಪ್ರೆಸ್ಸೋ, ಜೆಟ್ ಬ್ಲಾಕ್, ಕಾಟನ್ ಕ್ಯಾಂಡಿ ಹೀಗೆ ತರಹೇವಾರಿ ಬಣ್ಣಗಳು ಸದ್ಯಕ್ಕೆ ಟ್ರೆಂಡ್‌ನಲ್ಲಿವೆ. ಇವೆಲ್ಲವೂ ಸಾಮಾನ್ಯವಾಗಿ ಸಿಂಥೆಟಿಕ್ ಹೇರ್ ಕಲರಿಂಗ್ ಆಗಿರುತ್ತವೆ. ಮೈ ಬಣ್ಣಕ್ಕೆ ಅನುಗುಣವಾಗಿ ಹಾಕಿಕೊಂಡರೆ ಹೆಚ್ಚು ಒಪ್ಪವಾಗಿ ಕಾಣಬಹುದು.

ಚಾಲ್ತಿಯಲ್ಲಿರುವ ಟ್ರೆಂಡ್

ಪೂರ್ಣ ಕೂದಲಿಗೆ ಕಲರಿಂಗ್ ಮಾಡಿಸುವುದಕ್ಕಿಂತ ಕೆಲವು ಎಳೆಗಳಿಗೆ ಕಲರಿಂಗ್ ಮಾಡಿಸುವುದು ಹೆಚ್ಚು ಚೆನ್ನಾಗಿ ಕಾಣುತ್ತದೆ. ಮೇಲೆ ಎತ್ತಿ ಕಟ್ಟುವ ಜುಟ್ಟಿನ ಬುಡದಲ್ಲಿ ಒಂದು ಬಣ್ಣವಿದ್ದರೆ, ತುದಿಯಲ್ಲಿ ಮತ್ತೊಂದು ಬಣ್ಣವಿರುತ್ತದೆ. ಈ ಬಣ್ಣಗಳೆಲ್ಲ ಆಸಕ್ತಿಗೆ ಅನುಗುಣವಾಗಿರುತ್ತದೆ. ತುರುಬು ಕಟ್ಟಿದಾಗ ತುರುಬು ಮಧ್ಯೆ ಇಷ್ಟವಾದ ಬಣ್ಣ ಬರುವ ಹಾಗೆ ಕಲರಿಂಗ್ ಮಾಡಿಸಬಹುದು.

ಗ್ರೇ ಹೇರ್‌ಗೆ ಭಾರಿ ಬೇಡಿಕೆ

ಬಿಳಿ ಕೂದಲು ಬಂತೆಂದು ಮೂಗು ಮುರಿಯುವ ಹಾಗಿಲ್ಲ. ಸದ್ಯಕ್ಕೆ ಗ್ರೇ ಹೇರ್ ಕಲರಿಂಗ್ ಸಿಕ್ಕಾಪಟ್ಟೆ ಟ್ರೆಂಡ್‌ನಲ್ಲಿದೆ. ಕೂದಲಿನ ಕೆಲವು ಎಳೆಗಳನ್ನು ಗ್ರೇ ಮಾಡಿಸಿಕೊಂಡರೆ, ಇನ್ನು ಕೆಲವರು ಸಂಪೂರ್ಣ ಕೂದಲನ್ನು ಗ್ರೇ ಮಾಡಿಸಿಕೊಳ್ಳುತ್ತಿದ್ದಾರೆ. ಇದರಲ್ಲಿ ಆ್ಯಶ್ ಗ್ರೇ, ಗ್ರೇ ಒಮ್ರೇ, ಸಿಲ್ವರ್ ಗ್ರೇ, ಸಿಲ್ವರ್ ಹೇರ್ ಹೀಗೆ ಸಾಕಷ್ಟು ಬಗೆಗಳಿವೆ. ಬ್ಲ್ಯಾಕ್ ಆ್ಯಂಡ್ ಗ್ರೇ ಬಣ್ಣಕ್ಕೆ ಸಾಲ್ಟ್ ಆ್ಯಂಡ್ ಪೆಪ್ಪರ್ ಬಣ್ಣದ ಮಿಶ್ರಣ ಎಂದೂ ಕರೆಯಲಾಗುತ್ತದೆ. ಹಾಗಾಗಿ ಇದಕ್ಕೆ ಹೆಚ್ಚಿನ ಬೇಡಿಕೆ ಇದೆ.

ಮಹಿಳೆಯರು ಹೆಚ್ಚಾಗಿ ಬ್ಲ್ಯಾಕ್ ನ್ಯಾಚುರಲ್ ಕಲರಿಂಗ್ ಇಷ್ಟಪಡುತ್ತಾರೆ. ಸ್ಪ್ಯಾನಿಂಗ್ ಪಿಂಕ್ , ಟರ್ಕ್ವೊಯಿಸ್ ಮತ್ತು ನೇರಳೆ ಈ ಬಣ್ಣದ ಕಲರಿಂಗ್ ಅನ್ನು ಯುವತಿಯರು ಹೆಚ್ಚು ಬಳಸುತ್ತಾರೆ. ಇನ್ನು ಗ್ರೇ ಕಲರಿಂಗ್ ಎಲ್ಲರಿಗೂ ಅಚ್ಚುಮೆಚ್ಚು. ಇದನ್ನು ಮಾಡಿಸಿಕೊಳ್ಳುವವರು ಬೇಡವೆನಿಸಿದಾಗ ಸುಲಭವಾಗಿ ಬೇರೆ ಬಣ್ಣಗಳ ಮೊರೆ ಹೋಗಬಹುದು.

ಕಾಲಕ್ಕೆ ತಕ್ಕಂತೆ ಕಲರಿಂಗ್

ಕೂದಲು ಬಣ್ಣಗಳನ್ನು ಚಳಿ, ಬೇಸಿಗೆ, ಮಳೆಗಾಲಕ್ಕೆ ಅನುಗುಣವಾಗಿ ಬದಲಾಯಿಸಿಕೊಳ್ಳಬಹುದು. ಸಾಮಾನ್ಯವಾಗಿ ಬೇಸಿಗೆಯ ಸಮಯದಲ್ಲಿ ವೈಟ್ ಗೋಲ್ಡ್ ಶೇಡ್ ಆಫ್ ಪ್ಲಾಟಿನಂ , ಟೈಗರ್ಸ್ ಐ ಬ್ಲಂಡ್ ಹೇರ್ ಕಲರ್ ಬಳಸುವುದರಿಂದ ಅಂದ ಹೆಚ್ಚುತ್ತದೆ.

ಜಿಟಿ ಜಿಟಿ ಮಳೆಗೆ ಬಿಸಿ ಬಿಸಿ ರಸಂ

ನಳಪಾಕ

ಕವಿತಾ ಶಿರಸಿ

ಜಿಟಿ ಜಿಟಿ ಮಳೆಯಲ್ಲಿ ಬೆಚ್ಚನೆಯ ಆಹಾರ ಮನಸ್ಸಿಗೆ ಸುಖ, ಆರೋಗ್ಯಕ್ಕೂ ಹಿತ. ಅಂತಹ ಬಿಸಿ ಬಿಸಿ ಪೌಷ್ಟಿಕಾಂಶಯುಕ್ತ ‘ರಸಂ‘ಗಳ ವಿಶೇಷ ರೆಸಿಪಿಗಳು ಇಲ್ಲಿವೆ.

ಮಾವಿನಕಾಯಿ ರಸಂ

ಬೇಕಾಗುವ ಸಾಮಗ್ರಿಗಳು

ಮಾವಿನ ಕಾಯಿ 3, ತೆಂಗಿನ ತುರಿ ಅರ್ಧ ಕಪ್, ರಸಂ ಪುಡಿ 2 ಚಮಚ, ಬೆಲ್ಲದ ಪುಡಿ 1 ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಚಿಟಿಕೆಯಷ್ಟು ಇಂಗು, ಅರಿಶಿನ ಪುಡಿ, ಕರಿಬೇವು 4 ರಿಂದ 5 ಎಲೆಗಳು, ಒಣ ಮೆಣಸಿನಕಾಯಿ 2, ಎಣ್ಣೆ 4 ಚಮಚ

ತಯಾರಿಸುವ ವಿಧಾನ

ಮೊದಲಿಗೆ ನೀರು ಮತ್ತು ಮಾವಿನಕಾಯಿ, ಅರಿಶಿನ ಪುಡಿ ಸೇರಿಸಿ ಬೇಯಿಸಿ. ನಂತರ ತೆಂಗಿನ ತುರಿ, ರಸಂ ಪೌಡರ್, ಸೇರಿಸಿ ನುಣ್ಣಗೆ ರುಬ್ಬಿ. ನಂತರ ಬಾಣಲೆಗೆ ಸ್ವಲ್ಪ ಎಣ್ಣೆ ಹಾಕಿ. ಕಾದ ನಂತರ ಸಾಸಿವೆ, ಒಣಮೆಣಸಿನಕಾಯಿ, ಇಂಗು ಹಾಕಿ ಒಗ್ಗರಣೆ ಮಾಡಿ. ಅದರಲ್ಲಿ ರುಬ್ಬಿದ ಮಸಾಲೆ ಬೇಯಿಸಿಕೊಂಡು, ಸಿಪ್ಪೆ ತೆಗೆದ ಮಾವಿನಕಾಯಿ, ಉಪ್ಪು ಬೆಲ್ಲ, ಹಾಕಿ. ಸಾಸಿವೆ, ಒಣಮೆಣಸು, ಕರಿಬೇವು ಒಗ್ಗರಣೆ ಹಾಕಿ. ಚೆನ್ನಾಗಿ ಕುದಿಸಿರಿ. ಮಾವಿನ ಕಾಯಿ ರಸಂ ತಯಾರಾಯ್ತು.

ಬೀಟ್ರೂಟ್ ರಸಂ

ಬೇಕಾಗುವ ಸಾಮಗ್ರಿಗಳು

ಬೀಟ್ರೂಟ್ 1 , ಬೆಲ್ಲ 2 ಚಮಚ , ಹುಣಸೆ ರಸ 2 ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಹಸಿಮೆಣಸು 3 ರಿಂದ 4, ಕೊತ್ತಂಬರಿ ಸೊಪ್ಪು ಸ್ವಲ್ಪ, ಸಾಸಿವೆ ಅರ್ಧ ಚಮಚ, ಜೀರಿಗೆ ಕಾಲು ಚಮಚ, ಇಂಗು ಸ್ವಲ್ಪ, ಒಣಮೆಣಸಿನಕಾಯಿ ಎರಡು, ಕರಿಬೇವು ಸ್ವಲ್ಪ, ತುಪ್ಪ 2 ಚಮಚ

ತಯಾರಿಸುವ ವಿಧಾನ

ಮೊದಲಿಗೆ ಬೀಟ್ರೂಟ್ ಚಿಕ್ಕದಾಗಿ ಹೆಚ್ಚಿ, ಮಿಕ್ಸಿ ಜಾರ್‌ಗೆ ಹಾಕಿ ನಂತರ ಹುಣಸೆರಸ, ಹಸಿಮೆಣಸಿನ ಕಾಯಿ ಹಾಕಿ, ಸ್ವಲ್ಪ ನೀರು ಸೇರಿಸಿ ಪೇಸ್ಟ್ ಮಾಡಿಕೊಳ್ಳಿ. ನಂತರ ಒಂದು ಪಾತ್ರೆಗೆ ಆ ರುಬ್ಬಿದ ಮಿಶ್ರಣವನ್ನು ಹಾಕಿ. ಬೇಕಾದಷ್ಟು ನೀರು ಸೇರಿಸಿ. ಅದಕ್ಕೆ ಉಪ್ಪು, ಬೆಲ್ಲ ಹಾಕಿ ಚೆನ್ನಾಗಿ 10 ನಿಮಿಷ ಕುದಿಸಿ.

ತುಪ್ಪದ ಜೊತೆ ಸಾಸಿವೆ ,ಜೀರಿಗೆ ಒಣಮೆಣಸು ಹಾಕಿ ಒಗ್ಗರಣೆ ಮಾಡಿ. ಇದನ್ನು ರಸಂಗೆ ಹಾಕಿ, ಕೊನೆಯಲ್ಲಿ ಕೊತ್ತಂಬರಿ ಸೊಪ್ಪು ಉದುರಿಸಿದರೆ ಬೀಟ್ರೂಟ್ ರಸಂ ಸಿದ್ಧ.

ಪೈನಾಪಲ್ ರಸಂ

ಬೇಕಾಗುವ ಸಾಮಗ್ರಿಗಳು:

ಪೈನಾಪಲ್(ಅನಾನಸ್) 1 /2, ಹಸಿ ಮೆಣಸಿನಕಾಯಿ 2, ಶುಂಠಿ 1 ಇಂಚು, ಟೊಮೆಟೊ 2, ಅರಶಿನ ಪುಡಿ ಸ್ವಲ್ಪ, ಬೆಲ್ಲ 1 ಚಮಚ, ತೆಂಗಿನಕಾಯಿ ತುರಿ 1/4 ಕಪ್, ತುಪ್ಪ 2 ಚಮಚ, ಸಾಸಿವೆ 1 ಚಮಚ ಜೀರಿಗೆ 1 ಚಮಚ, ಕರೀಬೇವು 4 ಎಲೆ, ಇಂಗು ಚಿಟಿಕೆ, ಕೊತ್ತಂಬರಿ ಸೊಪ್ಪು ಸ್ವಲ್ಪ, ರಸಂ ಪೌಡರ್ 4 ಚಮಚ

ತಯಾರಿಸುವ ವಿಧಾನ:

ಬಾಣಲೆಯಲ್ಲಿ ತುಪ್ಪವನ್ನು ಹಾಕಿ ಬಿಸಿ ಮಾಡಿಕೊಳ್ಳಿ. ಸಾಸಿವೆ, ಜೀರಿಗೆ, ಇಂಗು ಹಾಕಿ. ಸಾಸಿವೆ ಸಿಡಿದ ನಂತರ , ಕರಿಬೇವಿನ ಎಲೆ, ಹಸಿ ಮೆಣಸಿನಕಾಯಿ, ಶುಂಠಿ, ಹೆಚ್ಚಿದ ಟೊಮೆಟೊ, ಅನಾನಸ್ ಹಣ್ಣು ಹಾಕಿ ಚೆನ್ನಾಗಿ ಬಾಡಿಸಿ.

ಮಿಕ್ಸಿಯಲ್ಲಿ ತೆಂಗಿನ ತುರಿ ಬೇಯಿಸಿದ ಪೈನಾಪಲ್, ಟೊಮೆಟೊ ಜೊತೆ ರಸಂ ಪೌಡರ್ ಹಾಕಿ ನುಣ್ಣಗೆ ರುಬ್ಬಿ. ರುಬ್ಬಿಕೊಂಡ ಮಿಶ್ರಣವನ್ನು ಕುದಿಸಿ. ಸಾಕಷ್ಟು ಉಪ್ಪು ಬೆಲ್ಲವನ್ನು ಹಾಕಿ. ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿ.

ಕುಟುಂಬಕ್ಕೆ ನೆರವಾಗುವುದಕ್ಕಾಗಿ ತೈಲ ಕಂಪನಿಗಳ ಟ್ಯಾಂಕರ್‌ನಲ್ಲಿ 'ಅರೆಕಾಲಿಕ' ಕ್ಲೀನರ್ ಆಗಿದ್ದ ಫಾಝಿಲ್

'ಒಳ್ಳೆಯ ಉದ್ಯೋಗದ ಹುಡುಕಾಟದಲ್ಲಿದ್ದ'

ಪ್ರಜಾವಾಣಿ ವಾರ್ತೆ

ಸುರತ್ಕಲ್ (ಮಂಗಳೂರು): ಸುರತ್ಕಲ್‌ನಲ್ಲಿ ಗುರುವಾರ ರಾತ್ರಿ ಹತ್ಯೆಯಾದ ಕಾಟಿಪಳ್ಳದ ಮಂಗಳಪೇಟೆಯ ಮಹಮ್ಮದ್ ಫಾಝಿಲ್ ಅವರ ಅಂತ್ಯಕ್ರಿಯೆ ಶುಕ್ರವಾರ ನಡೆಯಿತು.

ಸುರತ್ಕಲ್ ಮಾರುಕಟ್ಟೆ ಪ್ರದೇಶದ ಜನನಿಬಿಡ ಪ್ರದೇಶದ ಮೊಬೈಲ್ ಫೋನ್ ಅಂಗಡಿಗೆ ತೆರಳಿದ್ದ ಫಾಝಿಲ್ ಅವರನ್ನು ಕಾರಿನಲ್ಲಿ ಬಂದ ಮೂವರು ಅಟ್ಟಾಡಿಸಿ ಸಮೀಪದ ಬಟ್ಟೆ ಅಂಗಡಿಯ ಎದುರು ಕೊಚ್ಚಿಹಾಕಿ ಪರಾರಿಯಾಗಿದ್ದರು. ಫಾಝಿಲ್ ಅವರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದರು.

ಮಂಗಳೂರಿನ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆಯ ನಂತರ ಶುಕ್ರವಾರ ಬೆಳಿಗ್ಗೆ ಮೃತದೇಹವನ್ನು ಮನೆಗೆ ತೆಗೆದುಕೊಂಡು ಹೋಗಲಾಯಿತು. ಸುಮಾರು 40 ನಿಮಿಷಗಳ ನಂತರ ಮಸೀದಿಗೆ ಒಯ್ದು ಪ್ರಾರ್ಥನೆ ಸಲ್ಲಿಸಲಾಯಿತು. ನಂತರ ಅಂತ್ಯಕ್ರಿಯೆ ನಡೆಯಿತು. ಗ್ರಾಮಸ್ಥರು, ಮಿತ್ರರು ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಜನ ಸೇರಿದ್ದರು.

ಒಳ್ಳೆಯ ಉದ್ಯೋಗದ ಹುಡುಕಾಟದಲ್ಲಿದ್ದ ಫಾಝಿಲ್ ಅವರದು ಒಟ್ಟು ಐವರ ಕುಟುಂಬ. ಉಮರ್ ಫಾರೂಕ್ ಮತ್ತು ಜೈನಬಾ ದಂಪತಿಯ ಮೂವರು ಮಕ್ಕಳಲ್ಲಿ ಮಧ್ಯದವರು ಫಾಝಿಲ್. ತಂದೆ ಲಾರಿ ಚಾಲಕ. ಅಣ್ಣ ಆದಿಲ್ ಟ್ರಕ್ ಚಾಲಕ. ತಮ್ಮ ಆಸಿಲ್ ಶಾಲಾ ವಿದ್ಯಾರ್ಥಿ. ಫಾಝಿಲ್ ಹತ್ಯೆಯೊಂದಿಗೆ ಕುಟುಂಬದ ಆಧಾರಸ್ತಂಭ ಮುರಿದು ಬಿದ್ದಂತಾಗಿದೆ.

ಮುಹಿಯುದ್ದೀನ್ ಮಸೀದಿಯಿಂದ ಸುಮಾರು 200 ಮೀಟರ್ ದೂರದಲ್ಲಿರುವ ಮನೆಯಲ್ಲಿ ಕಷ್ಟಪಟ್ಟು ಸಾಗುತ್ತಿದ್ದ ಸಂಸಾರ. ಪಿಯುಸಿ ಮುಗಿದ ನಂತರ ವಾಮಂಜೂರಿನಲ್ಲಿ ಬಿಕಾಂ ಓದಲು ಪ್ರಯತ್ನಿಸಿದರೂ ಪೂರ್ಣಗೊಳಿಸಲು ಆಗಲಿಲ್ಲ. ಜೀವನ ನಿರ್ವಹಣೆಯಲ್ಲಿ ತಂದೆ ಮತ್ತು ಅಣ್ಣನಿಗೆ ನೆರವಾಗುವ ಉದ್ದೇಶದಿಂದ ಉದ್ಯೋಗ ಹುಡುಕುತ್ತಿದ್ದ ಅವರು ತೈಲ ಕಂಪನಿಗಳ ಟ್ಯಾಂಕರ್‌ನಲ್ಲಿ 'ಅರೆಕಾಲಿಕ' ಕ್ಲೀನರ್ ಆಗಿ ದುಡಿಯುತ್ತಿದ್ದರು ಎಂದು ಅವರ ಕುಟುಂಬದ ಆಪ್ತ ಮೂಲಗಳು ತಿಳಿಸಿದವು.

ಮೊಹಮ್ಮದ್ ಫಾಝಿಲ್ ಅವರ ಅಂತ್ಯಸಂಸ್ಕಾರಕ್ಕೂ ಮೊದಲು ಮುಹಿಯುದ್ದೀನ್ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸಲಾಯಿತು

ಮುಖ್ಯಾಂಶಗಳು

- ತಂದೆ, ಅಣ್ಣನಿಗೆ ನೆರವಾಗುವ ಉದ್ದೇಶದಿಂದ ಉದ್ಯೋಗ ಹುಡುಕಾಟ
- ಪಿಯುಸಿ ನಂತರ ಪೂರ್ಣಗೊಳ್ಳದ ಬಿಕಾಂ ಪದವಿ

'ಸುಳ್ಳು ಸುದ್ದಿ ಹಬ್ಬಿಸುವವರ ವಿರುದ್ಧ ಕ್ರಮ'

ಕೊಲೆಗೆ ಸಂಬಂಧಿಸಿ ಸಾಮಾಜಿಕ ತಾಣಗಳಲ್ಲಿ ಸುಳ್ಳು ಸುದ್ದಿಯನ್ನು ಹಬ್ಬಿಸುವ ಪೋಸ್ಟ್‌ಗಳನ್ನು ಹಾಕಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಕಾನೂನು ಸುವ್ಯವಸ್ಥೆಯ ಎಡಿಜಿಪಿ ಅಲೋಕ್ ಕುಮಾರ್ ಎಚ್ಚರಿಸಿದರು.

ಮಹಮ್ಮದ್ ಫಾಝಿಲ್ ಅವರ ಅಂತ್ಯಕ್ರಿಯೆ ನಂತರ ಸ್ಥಳಕ್ಕೆ ಬಂದು ಮಸೀದಿಗೆ ಭೇಟಿ ನೀಡಿದ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಲಭ್ಯ ಸಾಕ್ಷ್ಯಗಳನ್ನು ಆಧರಿಸಿ ತನಿಖೆ ನಡೆಯುತ್ತಿದೆ. ಅಪರಾಧಿಗಳನ್ನು ಆದಷ್ಟು ಬೇಗ ಪತ್ತೆ ಮಾಡಲಾಗುವುದು. ವದಂತಿ ಹಬ್ಬಿಸುವುದು ಬೇಡ. ಕೊಲೆ ಮಾಡಲು ಬಳಸಿದ ಕಾರಿನ ನೋಂದಣಿ ಸಂಖ್ಯೆ ಆಧರಿಸಿ ತನಿಖೆ ನಡೆಯುತ್ತಿದೆ' ಎಂದರು.

'ಯಾವ ಕಾರಣಕ್ಕೆ ಹತ್ಯೆಯಾಗಿದೆ ಎಂಬುದನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಕೊಲೆಗೆ ಸಂಬಂಧಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹಾಕುತ್ತಿರುವ ಪೋಸ್ಟ್‌ಗಳನ್ನು ಗಮನಿಸುತ್ತಿದ್ದು ಸೈಬರ್ ಕ್ರೈಂ ಪೊಲೀಸರ ಸಹಕಾರ ಪಡೆದು ಅವರ ಮೇಲೆ ಕ್ರಮ ಕೈಗೊಳ್ಳಲಾಗುವುದು' ಎಂದು ಮಂಗಳೂರು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದರು.

ಮಾಧ್ಯಮದವರ ಮೇಲೆ ಆಕ್ರೋಶ

ಮಹಮ್ಮದ್ ಫಾಝಿಲ್ ಅವರ ಪಾರ್ಥಿವ ಶರೀರದ ದಫನದ ಸಂದರ್ಭದಲ್ಲಿ ವಿಡಿಯೊ ಚಿತ್ರೀಕರಣ ಮಾಡಲು ಪ್ರಯತ್ನಿಸಿದ ಮಾಧ್ಯಮದವರನ್ನು ಕೆಲವರು ತರಾಟೆಗೆ ತೆಗೆದುಕೊಂಡರು. ಜನಾಝ ನಮಾಜ್ (ಮೃತದೇಹದ ಪ್ರಾರ್ಥನೆ) ಸಲ್ಲಿಸಿದ ನಂತರ ದಫನ್ ಮಾಡಲು ಹೊರತರುತ್ತಿದ್ದಂತೆ ಸಮೀಪದ ಕಟ್ಟಡದ ಮೇಲೆ ನಿಂತು ವಿಡಿಯೊ ಮಾಡುತ್ತಿದ್ದವರನ್ನು ನಿರ್ಬಂಧಿಸಲಾಯಿತು.

'ಇನ್ನು ವಿಡಿಯೊ ಮಾಡಿ ಏನೂ ಪ್ರಯೋಜನ ಇಲ್ಲ. ನೀವು ಇದನ್ನೆಲ್ಲ ಜಗತ್ತಿಗೇ ತೋರಿಸಿ ಸಮಾಜವನ್ನು ಮತ್ತಷ್ಟು ಉದ್ರಿಕ್ತಗೊಳಿಸಬೇಡಿ. ಎಲ್ಲ ಕ್ಯಾಮೆರಾ ಆಫ್ ಮಾಡಿ. ಆಚೆ ಹೋಗಿ' ಎಂದು ಹೇಳಿದರು. ಫಾಝಿಲ್ ಮನೆಗೆ ಭೇಟಿ ನೀಡಿದಾಗಲೂ ಮಾಧ್ಯಮದವರಿಗೆ ಇದೇ ರೀತಿಯ ಪ್ರತಿಕ್ರಿಯೆ ವ್ಯಕ್ತವಾಯಿತು.

ಸುದ್ದಿ 2 ನಿಮಿಷ

ವೈಫಲ್ಯ ಮುಚ್ಚಿಕೊಳ್ಳಲು 'ಬುಲ್ಡೋಜರ್' ಜಪ: ಎಚ್‌ಡಿಕೆ

ಬೆಂಗಳೂರು: ಸಂವಿಧಾನದ ಮೇಲೆ ಗೌರವ ಇಲ್ಲದವರು ಆಡಳಿತ ವೈಫಲ್ಯ ಮುಚ್ಚಿಕೊಳ್ಳಲು ಉತ್ತರ ಪ್ರದೇಶದ ಬುಲ್ಡೋಜರ್ ಮಾದರಿಯ ಜಪ ಮಾಡುತ್ತಿದ್ದಾರೆ. ಇದು ಹೊಣೆಗೇಡಿತನದ ಪರಮಾವಧಿ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ಕಿಡಿಕಾರಿದ್ದಾರೆ.

ಸರಣಿ ಟ್ವೀಟ್‌ಗಳ ಮೂಲಕ ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿ ಬೊಮ್ಮಾಯಿ ಅವರನ್ನು ತರಾಟೆಗೆ ತೆಗೆದುಕೊಂಡಿರುವ ಅವರು, 'ನೀವು ಬಿಜೆಪಿಗಷ್ಟೇ ಮುಖ್ಯಮಂತ್ರಿಯಲ್ಲ. ಜನತಾ ಪರಿವಾರಿ ಆಗಿದ್ದವರು ಇಂದು ಸಂಘ ಪರಿವಾರಿಯಾಗಿ ರೂಪಾಂತರಗೊಂಡಿದ್ದೀರಿ. ನಿಮ್ಮ ತಂದೆ ಎಸ್.ಆರ್.ಬೊಮ್ಮಾಯಿ ಎಂ.ಎನ್.ರಾಯ್ ಅವರ ಅನುಯಾಯಿ. ಅವರ ಪುತ್ರರಾಗಿ ಸಂವಿಧಾನ ವಿರೋಧಿ ಮಾದರಿ ಮಾತನಾಡುತ್ತಿರುವುದು ಅತೀವ ಆಘಾತ ಉಂಟು ಮಾಡಿದೆ. ನಿಮ್ಮ ನಡೆ ಸಹಜ ನ್ಯಾಯ, ಸಂವಿಧಾನಕ್ಕೆ ವಿರುದ್ಧ' ಎಂದು ಟೀಕಿಸಿದ್ದಾರೆ.

'ಕೊಲೆಗೆ ಕೊಲೆ, ಪ್ರತೀಕಾರಕ್ಕೆ ಪ್ರತೀಕಾರ ಪ್ರತ್ಯುತ್ತರವಲ್ಲ. ಮುಖ್ಯಮಂತ್ರಿ ನಡೆ ಹಿಂಸೆ ಪ್ರಚೋದಿಸುವಂತಿದೆ. ಕೊಲೆಯಾದ ಇಬ್ಬರೂ ಯುವಕರ ಮನೆಗಳಿಗೆ ಭೇಟಿ ನೀಡಿ ಕೊಲೆಗೆಡುಕರಿಗೆ ಕಠಿಣ ಸಂದೇಶ ರವಾನಿಸಬೇಕಿತ್ತು. ನೀವು ಮಂಗಳೂರಿನಲ್ಲಿ ಇದ್ದಾಗಲೇ ಇನ್ನೊಂದು ಕೊಲೆ ನಡೆಯಿತು ಎಂದರೆ ಆಡಳಿತ ವೈಫಲ್ಯಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕಾ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಹತ್ಯೆ ಮಾಡಿದವರ ಎನ್‌ಕೌಂಟರ್‌ಗೂ ಸರ್ಕಾರ ಸಿದ್ಧ'

ರಾಮನಗರ: 'ಮಂಗಳೂರಿನಲ್ಲಿ ಅಮಾಯಕರ ಹತ್ಯೆ ಮಾಡಿದ ಆರೋಪಿಗಳ ವಿರುದ್ಧ ಎನ್‌ಕೌಂಟರ್ ಸೇರಿದಂತೆ ಕಠಿಣ ಕ್ರಮಕ್ಕೆ ಸರ್ಕಾರ ಸಿದ್ಧವಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ನಗರದಲ್ಲಿ ಶುಕ್ರವಾರ ಗಾಳಿಪಟ ಉತ್ಸವಕ್ಕೆ ಚಾಲನೆ ನೀಡಿದ ವೇಳೆ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು.

'ಯಾವ ಕಾರಣಕ್ಕೂ ಕೊಲೆ ಗಡುಕರು, ದುಷ್ಕರ್ಮಿಗಳನ್ನು ರಕ್ಷಿಸುವ ಪ್ರಶ್ನೆ ಇಲ್ಲ. ಈಗಾಗಲೇ, ತನಿಖೆಗೆ ತಂಡಗಳನ್ನು ರಚಿಸಲಾಗಿದೆ. ಅಮಾಯಕರ ರಕ್ಷಣೆ ನಮ್ಮ ಕರ್ತವ್ಯ' ಎಂದರು.

ಪಿಎಫ್‌ಐ, ಎಸ್‌ಡಿಪಿಐ ನಿಷೇಧಿಸುವಂತೆ ಕಾಂಗ್ರೆಸ್ ಒತ್ತಾಯ ಕುರಿತು ಪ್ರತಿಕ್ರಿಯಿಸಿದ ಸಚಿವರು, 'ಈ ಬಗ್ಗೆ ಮಾತನಾಡಲು ಕಾಂಗ್ರೆಸ್‌ಗೆ ನೈತಿಕತೆ ಇಲ್ಲ. ಅವರ ತುಷ್ಟೀಕರಣ ರಾಜಕಾರಣವೇ ಇದಕ್ಕೆಲ್ಲ ಕಾರಣ. ಅವರಿಗೂ ದೇಶದ್ರೋಹಿಗಳಿಗೂ ವ್ಯತ್ಯಾಸ ಇಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಬಿಜೆಪಿ ಕಾರ್ಯಕರ್ತರ ಆಕ್ರೋಶ ಈ ಸಂದರ್ಭದಲ್ಲಿ ಸಹಜ. ಈಗಾಗಲೇ ಆರೋಪಿಗಳನ್ನು ಬಂಧಿಸಲಾಗಿದೆ. ಸರ್ಕಾರ ಹಾಗೂ ಗೃಹ ಸಚಿವರು ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜನರ ಭಾವನೆಗಳಿಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತೇವೆ. ಉತ್ತರ ಪ್ರದೇಶ ಮಾದರಿ ಅಲ್ಲ; ಅದಕ್ಕಿಂತ ಐದು ಹೆಜ್ಜೆ ಮುಂದೆ ಹೋಗಿ ಕ್ರಮ ಕೈಗೊಳ್ಳುತ್ತೇವೆ. ಅದರಲ್ಲಿ ಯಾವುದೇ ಮುಲಾಜಿಲ್ಲ' ಎಂದು ಸ್ಪಷ್ಟಪಡಿಸಿದರು.

'ಸಿದ್ದರಾಮಯ್ಯ ಹೇಳಿದ್ದೆಲ್ಲ ವೇದವಾಕ್ಯವಲ್ಲ'

ಬೆಂಗಳೂರು: 'ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದೆಲ್ಲವೂ ವೇದವಾಕ್ಯವಲ್ಲ. ಅವರ ಹೇಳಿಕೆಗಳಿಗೆ ಹೆಚ್ಚಿನ ಮಹತ್ವ ನೀಡುವುದಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

ಸಿದ್ದರಾಮಯ್ಯ ಹೇಳಿಕೆ ಕುರಿತು ಸುದ್ದಿಗಾರರಿಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, 'ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ, ರಾಜ್ಯದಲ್ಲಿ 32 ಸರಣಿ ಕೊಲೆಗಳಾಗಿದ್ದವು.ಎಲ್ಲಾ ವಿಷಯಗಳಲ್ಲೂ ರಾಜಕಾರಣ ಮಾಡಬಾರದು' ಎಂದರು.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಇದ್ದಾಗ ಪಿಎಫ್‌ಐ, ಎಸ್‌ಡಿಪಿಐ ಕಾರ್ಯಕರ್ತರ ವಿರುದ್ಧದ 200ಕ್ಕೂ ಹೆಚ್ಚು ಕ್ರಿಮಿನಲ್ ಪ್ರಕರಣಗಳನ್ನು ವಿಚಾರಣೆಯಿಂದ ಹಿಂದಕ್ಕೆ ಪಡೆಯಲಾಗಿತ್ತು. ಇದರಿಂದ ಅವರು ಮತ್ತಷ್ಟು ಬಲಿತರು. ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಅವರ ಕೊಲೆಗೂ ಯತ್ನಿಸಿದರು. ಈಗಲೂ ಮತ್ತೆ ಹಿಂಸಾಕೃತ್ಯ ನಡೆಸುತ್ತಿದ್ದಾರೆ ಎಂದರು.

ರಾಜೀನಾಮೆ ಕೊಟ್ಟು ಹೋಗಿ: ಆಕ್ರೋಶ

ಮೃತ ಫಾಝಿಲ್ ಮನೆಗೆ ಮುಖ್ಯಮಂತ್ರಿ ಬೊಮ್ಮಾಯಿ ಹೋಗಲಿಲ್ಲವೇಕೆ: ಸಿದ್ದರಾಮಯ್ಯ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಸಿದ್ದರಾಮಯ್ಯ ಕಾಲದಲ್ಲೂ ಕೊಲೆಗಳಾಗಿವೆ' ಎಂಬ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆಗೆ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಶುಕ್ರವಾರ ತಿರುಗೇಟು ನೀಡಿದ್ದು, 'ಆಗ ಕೊಲೆ ಆಯ್ತು, ಈಗಲೂ ಕೊಲೆಯಾಗಿದೆ ಎಂದರೆ ಅದು ಸಮರ್ಥನೆಯಾ? ಅವರ ಸರ್ಕಾರ ಹಾಗಿತ್ತು, ನಾವು ಹೀಗಿದ್ದೇವೆ ಎಂದು ಹೋಲಿಸಲು ಅಧಿಕಾರ ನಡೆಸುತ್ತಿದ್ದಾರಾ' ಎಂದು ಆಕ್ರೋಶದಿಂದ ಕೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಹತಾಶೆಯಿಂದ ಮಾತನಾಡಬಾರದು. ಸರ್ಕಾರ ನಡೆಸಲು ಆಗದಿದ್ದರೆ, ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲದಿದ್ದರೆ, ವಿರೋಧ ಪಕ್ಷದವರ ಮಾತುಗಳನ್ನು ಕೇಳದಿದ್ದರೆ ರಾಜೀನಾಮೆ ಕೊಟ್ಟು ಹೊರ ಹೋಗಲಿ' ಎಂದರು.

'ಕರಾವಳಿಯಲ್ಲಿ ಇಬ್ಬರ ಕೊಲೆಯಾಗಿದೆ. ಮುಖ್ಯಮಂತ್ರಿಯು ಅಲ್ಲಿ ಪ್ರವಾಸದಲ್ಲಿದ್ದಾಗಲೇ ಒಂದು ಕೊಲೆಯಾಗಿದೆ. ಅವರ ಬಳಿಯೇ ಇರುವ ಗುಪ್ತಚರ ಇಲಾಖೆ ಏನು ಮಾಡುತ್ತಿದೆ? ಇದು ಮುಖ್ಯಮಂತ್ರಿ, ಗೃಹ ಸಚಿವರ ವೈಫಲ್ಯ. ಜನರಿಗೆ ರಕ್ಷಣೆ ಕೊಡಲು ಆಗುತ್ತಿಲ್ಲ' ಎಂದು ಆರೋಪಿಸಿದರು.

'ಪರಿವಾರದ ಬಿಕ್ಕಟ್ಟು ಗಲಭೆಗೆ ಕಾರಣವೇ?'

ಬೆಂಗಳೂರು: 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುತ್ತಿರುವ ಸರಣಿ ಹತ್ಯೆಗಳಿಗೂ ಸಂಘ ಪರಿವಾರದೊಳಗಿನ ಆಂತರಿಕ ಬಿಕ್ಕಟ್ಟುಗಳಿಗೂ ಸಂಬಂಧ ಇರುವಂತೆ ಕಾಣುತ್ತಿದೆ. ಈ ಕುರಿತೂ ತನಿಖೆ ನಡೆಸಿದರೆ ಸತ್ಯ ಬಯಲಾಗಬಹುದು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಶುಕ್ರವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಬಿಜೆಪಿ ಯುವ ಮೋರ್ಚಾ ಮುಖಂಡ ಪ್ರವೀಣ್ ನೆಟ್ಟಾರು ಅಂತಿಮ ದರ್ಶನಕ್ಕೆ ಬಂದಿದ್ದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಚಿವ ಸುನಿಲ್ ಕುಮಾರ್, ವಿಎಚ್‌ಪಿ ನಾಯಕ ಕಲ್ಲಡ್ಕ ಪ್ರಭಾಕರ್ ಭಟ್ ಮತ್ತು ಸ್ಥಳೀಯ ಶಾಸಕರ ವಿರುದ್ಧ ಭುಗಿಲೆದ್ದ ಜನಾಕ್ರೋಶದ ಹಿನ್ನೆಲೆಯನ್ನೂ ಪೊಲೀಸರು ತನಿಖೆ ಮಾಡಬೇಕಾಗಿದೆ' ಎಂದಿದ್ದಾರೆ.

ಹಿಂದೂಗಳು ಸತ್ತರೆ ಮುಸ್ಲಿಮರ ಮೇಲೆ, ಮುಸ್ಲಿಮರು ಸತ್ತರೆ ಹಿಂದೂಗಳ ಮೇಲೆ ಸಂಶಯ ಪಡುವುದು ಸಾಮಾನ್ಯವಾಗಿಬಿಟ್ಟಿದೆ. ಹತ್ಯೆ ನಡೆಸಿರುವ ದುಷ್ಕರ್ಮಿಗಳು ಯಾವುದೇ ಪಕ್ಷ, ಜಾತಿ, ಧರ್ಮ ಇಲ್ಲವೇ ಸಂಘಟನೆಗಳಿಗೆ ಸೇರಿದ್ದರೂ ಮುಲಾಜಿಲ್ಲದೆ ಅವರನ್ನು ಬಂಧಿಸಿ ಜೈಲಿಗಟ್ಟಬೇಕು. ಯಾವುದಾದರೂ ಸಂಘಟನೆ ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸುತ್ತಿದ್ದರೆ ಅವುಗಳನ್ನು ನಿಷೇಧಿಸುವ ದಿಟ್ಟತನವನ್ನು ರಾಜ್ಯ ಸರ್ಕಾರ ತೋರಬೇಕು ಎಂದು ಆಗ್ರಹಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ಜಾತಿಗಳ ಅದರಲ್ಲೂ ಮುಖ್ಯವಾಗಿ ಬಿಲ್ಲವ ಯುವಕರೇ ಕೋಮು ಘರ್ಷಣೆಯಲ್ಲಿ ಏಕೆ ಬಲಿಯಾಗುತ್ತಿದ್ದಾರೆ? ರಾಜಕೀಯ ಪ್ರಾತಿನಿಧ್ಯ ಕಳೆದುಕೊಳ್ಳುತ್ತಿರುವ ಈ ಸಮುದಾಯದ ಯುವಕರು ಪ್ರಾಣವನ್ನೂ ಏಕೆ ಕಳೆದುಕೊಳ್ಳುತ್ತಿದ್ದಾರೆ ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

> **ಈ ಸರ್ಕಾರದವರಿಗೆ ನೈತಿಕತೆಯೇ ಇಲ್ಲ. ಹೀಗಿರುವಾಗ ಕೊಲೆ ಪ್ರಕರಣಗಳ ನೈತಿಕ ಹೊಣೆ ಹೊರುತ್ತಾರೆಯೇ?**
> **ಸಿದ್ದರಾಮಯ್ಯ,** ವಿಧಾನಸಭೆ ವಿರೋಧಪಕ್ಷದ ನಾಯಕ

'ರಾಜ್ಯದಲ್ಲೂ ಉತ್ತರಪ್ರದೇಶ ಮಾದರಿ ಅನುಸರಿಸಬೇಕಾಗುತ್ತದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಕರ್ನಾಟಕವು ಬಿಹಾರ, ಉತ್ತರಪ್ರದೇಶ ರೀತಿ ಆಗಿದೆಯಾ? ಅದನ್ನು ಅವರು ಒಪ್ಪಿಕೊಂಡಿದ್ದಾರಾ? ಅಲ್ಲಿನಂತೆಯೇ ಇಲ್ಲೂ ಕಾನೂನು-ಸುವ್ಯವಸ್ಥೆ ಕೆಟ್ಟಿದೆ ಎಂದರ್ಥವೇ' ಎಂದರು.

'ಎಸ್‌ಡಿಪಿಐ, ಪಿಎಫ್‌ಐ ಸಂಘಟನೆಯವರು ಕಾನೂನು ಉಲ್ಲಂಘಿಸಿದ್ದರೆ ನಿಷೇಧಿಸಲಿ. ಪ್ರವೀಣ್ ಮನೆಗೆ ಹೋಗಿದ್ದ ಮುಖ್ಯಮಂತ್ರಿ ಸುರತ್ಕಲ್‌ನ ಮಹಮ್ಮದ್ ಫಾಝಿಲ್ ಮನೆಗೆ ಹೋಗಲಿಲ್ಲ. ಬಾದಾಮಿಯ ಗಲಾಟೆ ಪ್ರಕರಣದಲ್ಲೂ ಸಚಿವರು, ಗಾಯಗೊಂಡ ಮುಸ್ಲಿಮರನ್ನು ನೋಡಲು ಹೋಗಲಿಲ್ಲ. ಅವರು ಸರ್ಕಾರ ನಡೆಸಲು ಯೋಗ್ಯರಾ? ಎಂದು ಪ್ರಶ್ನಿಸಿದರು. 'ಕಾಂಗ್ರೆಸ್ ಆಡಳಿತವಿದ್ದಿದ್ದರೆ ಕಲ್ಲು ಹೊಡೆಯಬಹುದಿತ್ತು ಎಂದು ಸಂಸದ ತೇಜಸ್ವಿ ಸೂರ್ಯ ಬೇಜವಾಬ್ದಾರಿಯಿಂದ ಮಾತನಾಡಿದ್ದಾರೆ. ಅವರ ಸರ್ಕಾರಕ್ಕೆ ಕೊಳಕು ಮೊಟ್ಟೆ, ಚಪ್ಪಲಿಯಲ್ಲಿ ಹೊಡೆಯಬೇಕು' ಎಂದ ಅವರು, ಕೂಡಲೇ 'ಮಾತಿನ ಭರದಲ್ಲಿ ಚಪ್ಪಲಿ ಪದ ಬಳಸಿದೆ. ಸರಿಯಲ್ಲ' ಎಂದು ತಿದ್ದಿಕೊಂಡರು.

'ನಳಿನ್ ಕುಮಾರ್ ವಿಚಾರಣೆ ಮಾಡಿ'

'ಕೊಲೆಗೀಡಾಗಿರುವ ಪ್ರವೀಣ್ ನೆಟ್ಟಾರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರಿಗೆ ಆತ್ಮೀಯನಾಗಿದ್ದು, ಕೆಲಕಾಲ ಅವರ ಕಾರಿಗೆ ಚಾಲಕನೂ ಆಗಿದ್ದರಂತೆ. ಇಷ್ಟೊಂದು ಆತ್ಮೀಯರಾಗಿದ್ದವರು ದೂರವಾಗಿರುವುದು ಏಕೆ? ಪೊಲೀಸರು ಅವರನ್ನೂ ವಿಚಾರಣೆಗೊಳಪಡಿಸಿದರೆ ದುಷ್ಕರ್ಮಿಗಳ ಪತ್ತೆಗೆ ನೆರವಾಗಬಹುದು' ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

'ನಳಿನ್ ಕುಮಾರ್ ಅವರು ಬಹಿರಂಗವಾಗಿ ಮುಸ್ಲಿಮರ ಬಗ್ಗೆ ಬೆಂಕಿ ಕಾರಿದರೂ, ಮುಸ್ಲಿಂ ಉದ್ಯಮಿಗಳ ಜೊತೆ ಅವರಿಗೆ ಒಳ್ಳೆಯ ಸಂಬಂಧ ಇರುವುದನ್ನು ಅವರೇ ಹಲವಾರು ಬಾರಿ ಬಹಿರಂಗ ಸಭೆಯಲ್ಲಿ ಹೇಳಿಕೊಂಡಿದ್ದಾರೆ. ಈ ಸಂಬಂಧಗಳು ಕೇವಲ ಸಾಮಾಜಿಕವಾದುದ್ದೇ? ಇಲ್ಲವೇ ವ್ಯಾಪಾರ ವಹಿವಾಟಿನದ್ದೆ' ಎಂದೂ ಪ್ರಶ್ನಿಸಿದ್ದಾರೆ.

ಪ್ರವೀಣ್ ಹತ್ಯೆ: ಎನ್‌ಐಎ ತನಿಖೆಗೆ

ಒಂದನೇ ಪುಟದಿಂದ...

'ಸೂಕ್ಷ್ಮ ಸ್ಥಳಗಳಲ್ಲಿ ಪೊಲೀಸ್ ಕ್ಯಾಂಪ್ ಆರಂಭಿಸಲಾಗುವುದು. ರಾತ್ರಿ ಗಸ್ತು ಹೆಚ್ಚಿಸಲಾಗುವುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಲಾಗುವುದು. ಅಲ್ಲಿಗೆ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯ ಇನ್ನೊಂದು ತುಕಡಿಯನ್ನು ನಿಯೋಜಿಸಲಾಗುವುದು' ಎಂದು ಬೊಮ್ಮಾಯಿ ತಿಳಿಸಿದರು.

ಆರೋಪಿಗಳ ಬಂಧನಕ್ಕೆ ಕ್ರಮ: 'ಗುರುವಾರ ರಾತ್ರಿ ಸುರತ್ಕಲ್‌ನಲ್ಲಿ ನಡೆದ ಹತ್ಯೆ ಪ್ರಕರಣದ ತನಿಖೆಯನ್ನೂ ತೀವ್ರಗೊಳಿಸಲಾಗಿದೆ. ಆರೋಪಿಗಳ ಬಂಧನಕ್ಕೆ ತಂಡಗಳನ್ನು ರಚಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಎಲ್ಲ ಧರ್ಮಗಳ ಪ್ರಮುಖರ ಜತೆಗೂಡಿ ಶಾಂತಿ ಸಭೆಗಳನ್ನು ನಡೆಸಲು ನಿರ್ಧರಿಸಲಾಗಿದೆ' ಎಂದರು.

'ಪ್ರವೀಣ್ ಮನೆಗೆ ಭೇಟಿ ನೀಡಿ ಬೆಂಗಳೂರಿಗೆ ಹಿಂದಿರುಗಲು ಮಂಗಳೂರಿನಲ್ಲಿ ವಿಮಾನ ಏರುತ್ತಿದ್ದ ಸಂದರ್ಭದಲ್ಲೇ ಸುರತ್ಕಲ್‌ನಲ್ಲಿ ಯುವಕನೊಬ್ಬನ ಕೊಲೆಯಾಗಿರುವ ಮಾಹಿತಿ ಲಭಿಸಿತು. ಮಂಗಳೂರಿನಲ್ಲೇ ಮೊಕ್ಕಾಂ ಹೂಡಿ ತನಿಖೆಯ ಮೇಲುಸ್ತುವಾರಿ ಮತ್ತು ಪರಿಸ್ಥಿತಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವಂತೆ ಕಾನೂನು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ ಸೂಚನೆ ನೀಡಿದ್ದೆ' ಎಂದು ಹೇಳಿದರು.

21 ಮಂದಿ ವಿಚಾರಣೆ

ಸುರತ್ಕಲ್: ಮಹಮ್ಮದ್ ಫಾಝಿಲ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ರಾಜ್ಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಮಾರ್ಗದರ್ಶನದಂತೆ ಮಂಗಳೂರು ನಗರ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ನೇತೃತ್ವದಲ್ಲಿ ಐದು ತಂಡಗಳನ್ನು ರಚಿಸಲಾಗಿದೆ.

ಒಂದು ತಂಡ ಅನುಮಾನಾಸ್ಪದ ವ್ಯಕ್ತಿಗಳ ಮೇಲೆ ಕಾರ್ಯಾಚರಣೆ ನಡೆಸಿದರೆ, ಇನ್ನೊಂದು ತಂಡ ಇನ್ನಿತರ ಠಾಣೆ ವ್ಯಾಪ್ತಿಯ ಮೇಲೆ ನಿಗಾ ಇಟ್ಟಿದೆ. ಮೂರು ತಂಡಗಳು ತಾಂತ್ರಿಕ ಮಾಹಿತಿ ಕಲೆಹಾಕುವಲ್ಲಿ ನಿರತವಾಗಿವೆ. ಸುರತ್ಕಲ್, ಮೂಲ್ಕಿ, ಬಜ್ಪೆ, ಪಣಂಬೂರು ಠಾಣಾ ವ್ಯಾಪ್ತಿಯಲ್ಲಿ ಶಂಕಿತ 21 ಮಂದಿಯನ್ನು ತನಿಖಾ ತಂಡ ವಿಚಾರಣೆ ನಡೆಸಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದಕ್ಷಿಣ ಕನ್ನಡ: ಆತಂಕ ನಿವಾರಣೆಗೆ ಬಿಗಿ ಕ್ರಮ

ಒಂದನೇ ಪುಟದಿಂದ...

ಪ್ರವೀಣ್ ನೆಟ್ಟಾರು ಪಾರ್ಥಿವ ಶರೀರದ ಮೆರವಣಿಗೆ ವೇಳೆ ತಮ್ಮ ಮೇಲೆ ಲಾಠಿಪ್ರಹಾರ ನಡೆಸಿದ್ದ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಕಾರ್ಯಕರ್ತರು ಪಟ್ಟು ಹಿಡಿದಿದ್ದರು.

ಬಂಟ್ವಾಳ, ಪುತ್ತೂರು, ಕಡಬ ಮತ್ತು ಸುಳ್ಯ ತಾಲ್ಲೂಕುಗಳಲ್ಲಿ ನಿಷೇಧಾಜ್ಞೆಯನ್ನು ಆಗಸ್ಟ್ 6ವರೆಗೂ ಮುಂದುವರಿಸಲಾಗಿದೆ.

ಸುರತ್ಕಲ್‌ನಲ್ಲಿ ಗುರುವಾರ ರಾತ್ರಿ ಫಾಝಿಲ್ ಅವರ ಹತ್ಯೆಯಾಗಿರುವ ಕಾರಣ ಮಂಗಳೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಮಾಡಲಾಗಿವೆ. ಈ ವ್ಯಾಪ್ತಿಯ ಶಾಲೆಗಳಿಗೆ ಶುಕ್ರವಾರ ರಜೆ ನೀಡಲಾಗಿತ್ತು. ಜಿಲ್ಲೆಯಲ್ಲಿರುವ ಸಂಜೆಯ ಕಾಲೇಜುಗಳಿಗೆ ಎರಡು ದಿನ ರಜೆ ಘೋಷಿಸಲಾಗಿದೆ.

> **ಶಾಂತಿ ಕಾಪಾಡುವ ಉದ್ದೇಶದಿಂದ ಶನಿವಾರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಎಲ್ಲ ಧರ್ಮದ ಮುಖಂಡರು, ಸಂಘಟನೆಗಳ ಪ್ರಮುಖರು, ಜನಪ್ರತಿನಿಧಿಗಳ ಸಭೆ ಕರೆಯಲಾಗಿದೆ**
> **ಡಾ.ರಾಜೇಂದ್ರ ಕೆ.ವಿ.,** ಡಿ.ಸಿ

ಶ್ರೀರಾಮಸೇನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಅವರ ದಕ್ಷಿಣ ಕನ್ನಡ ಜಿಲ್ಲಾ ಪ್ರವೇಶ ನಿರ್ಬಂಧಿಸಲಾಗಿತ್ತು. ಪ್ರವೀಣ್ ಮನೆಗೆ ಭೇಟಿ ನೀಡಲು ಬಂದ ಅವರನ್ನು, ಗಡಿಭಾಗದ ಹೆಜಮಾಡಿ ಚೆಕ್‌ಪೋಸ್ಟ್ ಬಳಿ ತಡೆದು ವಾಪಸ್ ಕಳಿಸಲಾಯಿತು. ಈ ವೇಳೆ ಶ್ರೀರಾಮಸೇನೆ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಸಂಕ್ಷಿಪ್ತ ಸುದ್ದಿ

ಖಾದರ್ ಭೇಟಿಗೆ ಪ್ರವೀಣ್ ಕುಟುಂಬ ನಿರಾಕರಣೆ

ಬೆಳ್ಳಾರೆ (ದಕ್ಷಿಣ ಕನ್ನಡ): ಕೊಲೆಯಾದ ಪ್ರವೀಣ್ ನೆಟ್ಟಾರು ಅವರ ಕುಟುಂಬಕ್ಕೆ ಸಾಂತ್ವನ ಹೇಳುವ ಸಲುವಾಗಿ ನೆಟ್ಟಾರುವರೆಗೆ ಬಂದಿದ್ದ ವಿಧಾನಸಭೆಯ ವಿರೋಧಪಕ್ಷದ ಉಪ ನಾಯಕ ಯು.ಟಿ.ಖಾದರ್ ಅವರನ್ನು ಭೇಟಿ ಆಗಲು ಕುಟುಂಬದವರು ನಿರಾಕರಿಸಿದರು. ಪ್ರವೀಣ್ ಕುಟುಂಬದವರ ಭೇಟಿ ಸಾಧ್ಯವಾಗದೇ ಅವರು ನೆಟ್ಟಾರು ವೃತ್ತದ ಬಳಿಯಿಂದಲೇ ನಿರ್ಗಮಿಸಿದರು.

'ಮೂರು ದಿನಗಳಿಂದ ಮನೆಗೆ ಸತತವಾಗಿ ಮುಖಂಡರು ಅಭಿಮಾನಿಗಳು ಭೇಟಿ ನೀಡುತ್ತಿರುವುದರಿಂದ ಪ್ರವೀಣ್ ಕುಟುಂಬದವರಿಗೆ ವಿಶ್ರಾಂತಿಗೆ ಸಮಯವೇ ಇಲ್ಲದ ಸ್ಥಿತಿ ಎದುರಾಗಿದೆ. ಪ್ರವೀಣ್ ಅವರ ಹತ್ತಿರದ ಬಂಧುಗಳು ವಿಶ್ರಾಂತಿಯಲ್ಲಿರುವುದರಿಂದ ಭೇಟಿಯಾಗಲು ನಿರಾಕರಿಸಿದ್ದಾರೆ. ಪ್ರವೀಣ್ ಅವರ ಚಿಕ್ಕಪ್ಪನ ಜೊತೆ ದೂರವಾಣಿ ಮೂಲಕ ಮಾತನಾಡಿದ್ದೇನೆ. ನೆಟ್ಟಾರುವರೆಗೆ ಬಂದಿದ್ದಕ್ಕೆ ಅವರು ಕೃತಜ್ಞತೆ ಸಲ್ಲಿಸಿದರು. ಪ್ರವೀಣ್ ಕುಟುಂಬದವರಿಗೆ ಮತ್ತಷ್ಟು ತೊಂದರೆ ಆಗಬಾರದು ಎಂಬ ಕಾರಣಕ್ಕೆ ಹಿಂದಿರುಗಿದೆ' ಎಂದು ಯು.ಟಿ.ಖಾದರ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಯುದ್ಧ ಇವತ್ತು– ನಾಳೆಗೆ ಮುಗಿಯುವುದಿಲ್ಲ'

ಬೆಳ್ಳಾರೆ (ದಕ್ಷಿಣ ಕನ್ನಡ): 'ಪ್ರವೀಣ್ ನೆಟ್ಟಾರು ಕೊಲೆಯಂತಹ ಪ್ರಕರಣಗಳು ಮರುಕಳಿಸುತ್ತಿವೆ. ಈ ರೀತಿ ಆಗಬಾರದಿತ್ತು. ಪ್ರತಿ ಬಾರಿ ನಾವು ನಮ್ಮ ಕಾರ್ಯಕರ್ತರನ್ನು ಈ ರೀತಿ ದುಃಖದಿಂದ ಕಳುಹಿಸಿಕೊಟ್ಟಾಗಲೂ ಇಂತಹ ಸಂಕಲ್ಪ ಮಾಡಿರುತ್ತೇವೆ. ಆದರೆ, ಪ್ರವೀಣನ ಸಾವು ಇಡೀ ದೇಶವನ್ನು ಎಬ್ಬಿಸಿದೆ' ಎಂದು ಭಾರತೀಯ ಜನತಾ ಯುವ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷ ತೇಜಸ್ವಿಸೂರ್ಯ ಹೇಳಿದರು.

'ಇಂತಹ ಘಟನೆಗಳಿಂದ ಕಾರ್ಯಕರ್ತರು ಧೃತಿಗೆಡಬೇಕಿಲ್ಲ. ಸ್ವಾಮಿ ವಿವೇಕಾನಂದರು, ನಾರಾಯಣ ಗುರುಗಳು ಹಾಗೂ ಶಿವಾಜಿ ಅವರಲ್ಲಿ ಹರಿಯುತ್ತಿದ್ದಂತಹ ಕ್ಷಾತ್ರ ರಕ್ತವೇ ನಮ್ಮಲ್ಲೂ ಹರಿಯುತ್ತಿದೆ' ಎಂದರು. ನೆಟ್ಟಾರಿನಲ್ಲಿ ಪ್ರವೀಣ್ ಅವರ ಕುಟುಂಬದವರಿಗೆ ಶುಕ್ರವಾರ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದರು.

ಸರ್ಕಾರದ ವಿರುದ್ಧ ಪ್ರತಿಭಟನೆ

ಮಡಿಕೇರಿ: 'ಮುಖ್ಯಮಂತ್ರಿಯಾಗಿ ಬಸವರಾಜ ಬೊಮ್ಮಾಯಿ ಅಧಿಕಾರಕ್ಕೆ ಬಂದ ಬಳಿಕ ಕಾರ್ಯಕರ್ತರ ಮೇಲೆ ಪೊಲೀಸರ ದಾಳಿ ಹೆಚ್ಚಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ ಅಹೋರಾತ್ರಿ ಧರಣಿ ಆರಂಭಿಸಿದರು.

ತಿಪಟೂರು ಬಂದ್

ತಿಪಟೂರು: ನಿರಂತರವಾಗಿ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರ ಹತ್ಯೆಗಳು ನಡೆಯುತ್ತಿರುವುದನ್ನು ಖಂಡಿಸಿ ಹಿಂದೂ ಹಿತರಕ್ಷಣಾ ಸಮಿತಿ ಮತ್ತು ಬಜರಂಗ ದಳದಿಂದ ಶುಕ್ರವಾರ ಕರೆ ನೀಡಿದ್ದ ತಿಪಟೂರು ನಗರ ಬಂದ್ ಶಾಂತಿಯುತವಾಗಿತ್ತು. ನಗರದ ವ್ಯಾಪ್ತಿಯ ವ್ಯಾಪಾರಿಗಳು ಅಂಗಡಿಗಳನ್ನು ಸ್ವಯಂ ಪ್ರೇರಿತವಾಗಿ ಮುಚ್ಚಿ ಬೆಂಬಲ ವ್ಯಕ್ತಪಡಿಸಿದರು.

'ಅನೇಕರ ಅಸಮಾಧಾನಕ್ಕೆ ಕಾರಣವಾಗಿದ್ದ ಕೋಳಿ ಅಂಗಡಿ'

ಸುಳ್ಯ (ದಕ್ಷಿಣ ಕನ್ನಡ): 'ಪ್ರವೀಣ್ ನೆಟ್ಟಾರು ಅವರು ಒಂಬತ್ತು ತಿಂಗಳ ಹಿಂದೆ ಬೆಳ್ಳಾರೆಯಲ್ಲಿ 'ಅಕ್ಷಯ ಫಾರ್ಮ್ ಫ್ರೆಶ್ ಚಿಕನ್' ಎಂಬ ಕೋಳಿ ಅಂಗಡಿ ಆರಂಭಿಸಿದ್ದರು. ಈ ಉದ್ಯಮದಲ್ಲಿ ಅವರು ಯಶಸ್ವಿಯಾಗಿದ್ದು ಕೆಲವರ ಕೆಂಗಣ್ಣಿಗೆ ಗುರಿಯಾಗಿತ್ತು' ಎಂದು ಪ್ರವೀಣ್ ಅವರ ಮಾವನ ಮಗ ರಂಜಿತ್ ತಿಳಿಸಿದರು.

'ಪ್ರವೀಣ್ ರಾಷ್ಟ್ರೀಯವಾದಿ ಚಿಂತನೆಗೆ ಸಂಬಂಧಿಸಿದ ಸಂದೇಶಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದರು. ಇಂತಹ ಸಂದೇಶಗಳನ್ನು ಹಂಚಿಕೊಂಡ ಬಳಿಕ ಅವರಿಗೆ ಬೆದರಿಕೆ ಕರೆಗಳು ಬರುತ್ತಿದ್ದವು. ಕೆಲ ದಿನಗಳ ಹಿಂದೆಯೂ ಅವರಿಗೆ ಕೊಲೆ ಬೆದರಿಕೆ ಕರೆಗಳು ಬಂದಿದ್ದು, ಈ ಕುರಿತು ಪೊಲೀಸರಿಗೂ ಮಾಹಿತಿ ನೀಡಿದ್ದರು' ಎಂದರು.

'ಜಿಲ್ಲೆಯಲ್ಲಿ ಹಿಂದೂಗಳು ಅನ್ಯ ಧರ್ಮೀಯರಿಂದ ಮಾಂಸ ಖರೀದಿಸಬಾರದು ಎಂಬ ಕುರಿತು ಅಭಿಯಾನ ನಡೆದಿತ್ತು. ಈ ಅಭಿಯಾನದ ಕುರಿತು ಜಾಗೃತಿ ಮೂಡಿಸುವ ಕಾರ್ಯದ ನೇತೃತ್ವವನ್ನು ಪ್ರವೀಣ್ ವಹಿಸಿಕೊಂಡಿದ್ದರು. ಹಿಂದೂಗಳು ಮೀನು ಮಾರಾಟ ನಡೆಸಲು, ಕೋಳಿಮಾಂಸದ ಮಳಿಗೆಗಳನ್ನು ಆರಂಭಿಸಲು ಹುರಿದುಂಬಿಸಿದ್ದರು' ಎಂದರು.

'ಕೋಳಿ ಮಾಂಸದ ವ್ಯಾಪಾರ ಅನ್ಯಧರ್ಮೀಯರ ಹತೋಟಿಯಲ್ಲಿದೆ. ಪ್ರವೀಣ್ ಅವರು ಸ್ವತಃ ಕೋಳಿ ಮಾಂಸದ ವ್ಯಾಪಾರ ಆರಂಭಿಸಿ ಅವರಿಗೆ ಸೆಡ್ಡು ಹೊಡೆದಿದ್ದರು. ಯಾರು ಎಷ್ಟೇ ಅಡ್ಡಿಪಡಿಸಿದರೂ ಈ ಉದ್ಯಮದಲ್ಲಿ ಯಶಸ್ವಿಯೂ ಆದರು. ಇವರಿಂದ ಪ್ರೇರಣೆ ಪಡೆದು ಜಿಲ್ಲೆಯಲ್ಲಿ ಅನೇಕ ಕಡೆ ಹಿಂದೂ ಯುವಕರು ಇಂತಹ ವ್ಯಾಪಾರ ಆರಂಭಿಸಿದ್ದರು' ಎಂದರು.

'ಈ ಕಾರಣಕ್ಕಾಗಿಯೇ ಹತ್ಯೆ ನಡೆದಿರುವ ಸಾಧ್ಯತೆ ಅಧಿಕ. ಬಂಧಿತ ಝಾಕೀರ್, ಶಫೀಕ್ ಪ್ರಮುಖ ಆರೋಪಿಗಳಲ್ಲ. ಇವರ ಹಿಂದೆ ದೊಡ್ಡ ಜಾಲವಿದೆ' ಎಂದರು.

ಹತ್ಯೆಗೆ ಬಳಸಿದ ಬೈಕ್ ಜಪ್ತಿ ಮಾಡಿಲ್ಲ: ಬಂಧುಗಳ ಆರೋಪ

ಸಾಂತ್ವನ ಹೇಳುವವರಿಲ್ಲ: ಮಸೂದ್ ಕುಟುಂಬ

• ಪ್ರವೀಣ ಕುಮಾರ್ ಪಿ.ವಿ

ಬೆಳ್ಳಾರೆ (ದಕ್ಷಿಣ ಕನ್ನಡ): 'ನಮಗೆ ಸಾಂತ್ವನ ಹೇಳುವವರೇ ಇಲ್ಲ'– ಇದು ಬೆಳ್ಳಾರೆ ಸಮೀಪದ ಕಳೆಂಜ ಗ್ರಾಮದಲ್ಲಿ ಕೆಲ ದಿನಗಳ ಹಿಂದೆ ಹತ್ಯೆಗೀಡಾದ ಮಸೂದ್ ಎಂಬವರ ಕುಟುಂಬದ ಸದಸ್ಯರು ಶುಕ್ರವಾರ ತೋಡಿಕೊಂಡ ಅಳಲು.

'ಮುಖ್ಯಮಂತ್ರಿ ಬಿಡಿ, ಕನಿಷ್ಠಪಕ್ಷ ನಮ್ಮ ಕ್ಷೇತ್ರದ ಶಾಸಕರಾಗಲಿ, ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಲಿ ನಮ್ಮ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿಲ್ಲ' ಎಂದು ಬೇಸರ ತೋಡಿಕೊಂಡರು ಮಸೂದ್ ಕುಟುಂಬಸ್ಥರು.

ಕಳೆಂಜದಲ್ಲಿ ಜುಲೈ 19ರಂದು ಮಸೂದ್ ಮೇಲೆ ಹಲ್ಲೆ ನಡೆದಿತ್ತು. ಜುಲೈ 21ರಂದು ಅವರು ಕೊನೆಯುಸಿರೆಳೆದಿದ್ದರು.

'ನನ್ನ ಮಗನನ್ನು ಬೆಳೆಸಲು ಎಷ್ಟು ಕಷ್ಟಪಟ್ಟಿದ್ದೇನೆ ಎಂಬುದು ನನಗೆ ಮಾತ್ರ ಗೊತ್ತು. ಮಗ ದುಡಿದು ನನ್ನನ್ನು ಸಾಕುವಷ್ಟು ದೊಡ್ಡವನಾಗಿದ್ದ. ಅಷ್ಟರಲ್ಲೇ ಅವನನ್ನು ಕಳೆದುಕೊಂಡಿದ್ದೇನೆ' ಎಂದು ಮಸೂದ್ ಅವರ ತಾಯಿ ಸಾರಮ್ಮ ಕಣ್ಣೀರಿಟ್ಟರು.

ಕಳೆಂಜ ಗ್ರಾಮದಲ್ಲಿರುವ ಮಸೂದ್ ಅವರ ಅಜ್ಜನ ಮನೆ

'ಸತ್ತವರ ಮನೆಗೆ ದೊಡ್ಡವರು ಬಂದು ಸಾಂತ್ವನ ಹೇಳುವುದನ್ನು ಎಲ್ಲ ಕಡೆ ನೋಡುತ್ತಿದ್ದೇವೆ. ಆದರೆ, ಮಗನನ್ನು ಕಳೆದುಕೊಂಡ ನಮಗೆ ಸಾಂತ್ವನ ಹೇಳುವವರು ಯಾರೂ ಇಲ್ಲ. ನಮಗೂ ನ್ಯಾಯ ಸಿಗುವುದು ಬೇಡವೇ. ನಮ್ಮ ಸಂಕಟವನ್ನು ಯಾರ ಬಳಿ ತೋಡಿಕೊಳ್ಳಬೇಕು' ಎಂದು ಅವರು ಪ್ರಶ್ನಿಸಿದರು.

ಮಸೂದ್ ಅವರ ಅಣ್ಣ ಮಿರ್ಷಾದ್, 'ನಮಗೆ ಪರಿಹಾರ ನೀಡಲು ಮುಖ್ಯಮಂತ್ರಿಯೂ ಬರಲಿಲ್ಲ, ಶಾಸಕರೂ ಬರಲಿಲ್ಲ. ನಮಗೆ ಅದೇ ಬೇಸರ. ನಾವು ಶಾಂತಿಯ ಮಾರ್ಗ ಅನುಸರಿಸಿದ್ದಕ್ಕೆ ಹೀಗೆ ಆಗಿದೆ. ಗಲಾಟೆ ಮಾಡುತ್ತಿದ್ದರೆ ನಮಗೂ ಪರಿಹಾರ ಸಿಗುತ್ತಿತ್ತೋ ಏನೋ' ಎಂದು ಬೇಸರ ತೋಡಿಕೊಂಡರು.

'ನಮ್ಮ ತಂದೆ–ತಾಯಿಗೆ ಐವರು ಮಕ್ಕಳು. ನನ್ನ ಅಕ್ಕ ಆಯಿಷಾ ಅವರನ್ನು ಕೊಚ್ಚಿಯ ಕುಞಿ ಅವರಿಗೆ ಮದುವೆ ಮಾಡಿ ಕೊಟ್ಟಿದ್ದೆವು. ತಮ್ಮ ಮರ್ಷಾದ್ ಹಾಗೂ ತಂಗಿ ಶಿಫಾನ್ ಅವರಿನ್ನೂ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅಣ್ಣ-ತಮ್ಮ ದುಡಿಯುತ್ತಿದ್ದೆವು. ಅಷ್ಟರಲ್ಲಿ ತಮ್ಮನನ್ನು ಕಳೆದುಕೊಳ್ಳಬೇಕಾಯಿತು' ಎಂದು ಮಿರ್ಷಾದ್ ವಿವರಿಸಿದರು.

'ನಾನು ಬೆಂಗಳೂರಿನ ನೀಲಸಂದ್ರದಲ್ಲಿ ಟೀ ಅಂಗಡಿಯೊಂದರಲ್ಲಿ ಕೆಲಸಕ್ಕಿದ್ದೇನೆ. ತಮ್ಮನೂ ಬೆಂಗಳೂರಿನಲ್ಲೇ ಕೆಲಸ ಮಾಡಿಕೊಂಡು ನನ್ನ ಜೊತೆಗೇ ಇದ್ದ. ಸರಿಯಾದ ಕೆಲಸ ಇಲ್ಲದ ಕಾರಣ ಮೂರು ತಿಂಗಳ ಹಿಂದೆ ಊರಿಗೆ ಬಂದಿದ್ದ. ಇಲ್ಲಿ ಪೇಂಟಿಂಗ್ ಹಾಗೂ ಮೇಸ್ತ್ರಿಯ ಹೆಲ್ಪರ್ ಕೆಲಸಗಳಿಗೆ ಹೋಗುತ್ತಿದ್ದ. ಹೊಡೆದಾಟ ಬಡಿದಾಟದಲ್ಲಿ ತೊಡಗುವ ಜಾಯಮಾನವೂ ಅವನದಲ್ಲ. ಯಾವ ಸಂಘಟನೆಯಲ್ಲೂ ಇರಲಿಲ್ಲ. ಸಿಕ್ಕಿದ ಕೆಲಸ ಮಾಡಿಕೊಂಡು ಇದ್ದ' ಎಂದು ಅವರು ತಿಳಿಸಿದರು.

ಅಸಮಾಧಾನ: 'ಮಸೂದ್ ಕೊಲೆಗೆ ಬಳಸಿದ್ದ ಬೈಕನ್ನೇ ಪೊಲೀಸರು ಜಪ್ತಿ ಮಾಡಿಲ್ಲ. ಈ ಪ್ರಕರಣದ ಬಗ್ಗೆ ಮಾಹಿತಿ ಕಲೆ ಹಾಕಲು ಪೊಲೀಸರು ನಮ್ಮ ಮನೆಗೇ ಬಂದಿರಲಿಲ್ಲ. ಆದರೆ, ಪ್ರವೀಣ್ ನೆಟ್ಟಾರು ಹತ್ಯೆಯಾದ ಬಳಿಕ ಪದೇಪದೇ ಭೇಟಿ ನೀಡುತ್ತಿದ್ದಾರೆ' ಎಂದು ಮಸೂದ್ ಕುಟುಂಬಸ್ಥರೊಬ್ಬರು ಬೇಸರ ತೋಡಿಕೊಂಡರು.

ಏಳು ವರ್ಷದ ಹಿಂದೆ ತಂದೆ ನಿಧನ

'ನಮ್ಮ ತಂದೆ– ತಾಯಿ ಕೇರಳದ ಮೊಗರಾಲು ಎಂಬಲ್ಲಿ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ತಂದೆ (ಅಬ್ಬಾಸ್) ಅವರು ಏಳು ವರ್ಷದ ಹಿಂದೆ ಅನಾರೋಗ್ಯದಿಂದ ತೀರಿಕೊಂಡರು. ನಾನು ಮತ್ತು ಮಸೂದ್ ಬಾಲ್ಯದಲ್ಲೇ ಶಿಕ್ಷಣವನ್ನು ಮೊಟಕುಗೊಳಿಸಿ ಕುಟುಂಬದ ಜವಾಬ್ದಾರಿ ನಿಭಾಯಿಸಬೇಕಾಯಿತು. ಬಳಿಕ ಅಮ್ಮ ಬೇರೆ ಮದುವೆಯಾದರು. ನನ್ನ ಕಿರಿಯ ತಮ್ಮ ಮರ್ಷಾದ್ ಹಾಗೂ ತಂಗಿ ಶಿಫಾನ್ ಅಮ್ಮನ ಬಳಿ ಮೂಡಿಗೆರೆಯಲ್ಲಿಯೇ ಇದ್ದುಕೊಂಡು ಶಾಲೆಗೆ ಹೋಗುತ್ತಿದ್ದಾರೆ. ಅವರ ವಿದ್ಯಾಭ್ಯಾಸದ ವೆಚ್ಚವನ್ನೂ ನಾವೇ ಭರಿಸುತ್ತಿದ್ದೇವೆ. ತಾಯಿಗೂ ನೆರವಾಗುತ್ತಿದ್ದೆವು' ಎಂದು ಮಿರ್ಷಾದ್ ತಿಳಿಸಿದರು.

'ಕಾರ್ಯಕರ್ತರಲ್ಲಿ ಪ್ರಬುದ್ಧತೆ ಇಲ್ಲ'

ಶಿವಮೊಗ್ಗ: 'ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರಲ್ಲಿ ಮೆಚ್ಯುರಿಟಿ (ಪ್ರಬುದ್ಧತೆ) ಇಲ್ಲ. ಹೀಗಾಗಿಯೇ ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ ರಾಜೀನಾಮೆ ಕೊಡುತ್ತಿದ್ದಾರೆ. ಪಕ್ಷದ ಹಿರಿಯರನ್ನು ಬೈಯ್ಯುತ್ತಿದ್ದಾರೆ' ಎಂದು ಶಾಸಕ ಕೆ.ಎಸ್.ಈಶ್ವರಪ್ಪ ಅಭಿಪ್ರಾಯಪಟ್ಟರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜೀನಾಮೆ ಕೊಟ್ಟವರು ಅದನ್ನು ವಾಪಸ್ ಪಡೆಯಬೇಕು. ಅಕಸ್ಮಾತ್ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ರಾಜೀನಾಮೆ ಒಪ್ಪಿಕೊಂಡರೆ ಹೊಸಬರು ಬರುತ್ತಾರೆ. ಅದು ಐದು ನಿಮಿಷದ ಕೆಲಸ. ಬಿಜೆಪಿಗೆ ಕಾರ್ಯಕರ್ತರು ಸಿಗುವುದಿಲ್ಲವೇ' ಎಂದು ಪ್ರಶ್ನಿಸಿದರು.

'ಯುವ ಮೋರ್ಚಾ ಕಾರ್ಯಕರ್ತರು ಈಗ ತಾನೇ ಕಣ್ಣು ಬಿಡುತ್ತಿದ್ದಾರೆ. ಪಕ್ಷಕ್ಕೆ ನೀವು ಕೊಟ್ಟಿರುವ ಕೊಡುಗೆ ಏನು ಎಂದು ಮೊದಲು ಪ್ರಶ್ನಿಸಿಕೊಳ್ಳಿ' ಎಂದು ಸಲಹೆ ನೀಡಿದರು.

ಷೇರುಪೇಟೆ ವಹಿವಾಟು 713



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,930
ಇಂದಿನ ಅಂತ್ಯ	17,158
▲	228
ದಿನದ ಗರಿಷ್ಠ	17,172

ವಿನಿಮಯ ದರ

$ ಡಾಲರ್	79.24
£ ಪೌಂಡ್	96.29
€ ಯುರೊ	80.88
¥ ಯೆನ್ (100ಕ್ಕೆ)	59

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹425
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹425

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1610)
ಸೋಯಾ (ರಿಫೈನ್ಡ್)	₹1270 (1240)
ಸೂರ್ಯಕಾಂತಿ (ರಿಫೈನ್ಡ್)	₹1580 (1570)
ಪಾಮೋಲಿನ್	₹1247 (1235)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹333-608
ದ್ವಿತಳಿ (ಬಿ.ವಿ) ₹335-795

ಎನ್‌.ಆರ್‌.ಪುರ ರಬ್ಬರ್

(ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್‌-4 ₹167
ಆರ್‌ಎಸ್‌ಎಸ್‌-5 ₹158
ಗುಡ್ ಲಾಟ್ ₹152

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ವಿದೇಶಿ ಬಂಡವಾಳ ಒಳಹರಿವು, ನಿರೀಕ್ಷಿತ ಮಟ್ಟದಲ್ಲಿ ತ್ರೈಮಾಸಿಕ ಫಲಿತಾಂಶ

3 ತಿಂಗಳ ಗರಿಷ್ಠ ಮಟ್ಟಕ್ಕೆ ಷೇರುಪೇಟೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳ ಪ್ರಮುಖ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಶುಕ್ರವಾರದ ವಹಿವಾಟಿನಲ್ಲಿ ಶೇಕಡ 1ಕ್ಕೂ ಹೆಚ್ಚಿನ ಗಳಿಕೆ ಕಂಡವು. ಹೀಗಾಗಿ ಮುಂಬೈ ಷೇರುಪೇಟೆ ಮತ್ತು ರಾಷ್ಟ್ರೀಯ ಷೇರುಪೇಟೆ ವಹಿವಾಟು ದಿನದ ಕೊನೆಯಲ್ಲಿ ಮೂರು ತಿಂಗಳ ಗರಿಷ್ಠ ಮಟ್ಟದಲ್ಲಿ ಅಂತ್ಯವಾಯಿತು.

ಬಿಎಸ್‌ಇ ಸೆನ್ಸೆಕ್ಸ್ 713 ಅಂಶ ಏರಿಕೆಯಾಗಿ 57,570 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 228 ಅಂಶ ಹೆಚ್ಚಾಗಿ 17,158 ಅಂಶಗಳಿಗೆ ಏರಿಕೆ ಕಂಡಿತು.

ರಿಲಯನ್ಸ್ ಇಂಡಸ್ಟ್ರೀಸ್, ಇನ್ಫೊಸಿಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಎಚ್‌ಡಿಎಫ್‌ಸಿ ಲಿಮಿಟೆಡ್‌ನ ಷೇರುಗಳು ಹೆಚ್ಚಿನ ಖರೀದಿಗೆ ಒಳಗಾದವು. ಇದು ಸೂಚ್ಯಂಕಗಳ ಏರಿಕೆಗೆ ಕಾರಣವಾಯಿತು.

ಜೂನ್ ತ್ರೈಮಾಸಿಕದ ಫಲಿತಾಂಶ ಉತ್ತಮವಾಗಿರುವುದು, ವಿದೇಶಿ ಸಾಂಸ್ಥಿಕ ಬಂಡವಾಳ ಹೂಡಿಕೆ, ಅಮೆರಿಕದ ಫೆಡರಲ್ ರಿಸರ್ವ್ ಇನ್ನು ಮುಂದೆ ಹೆಚ್ಚಿನ ಪ್ರಮಾಣದಲ್ಲಿ ಬಡ್ಡಿದರ ಏರಿಕೆ ಮಾಡುವುದಿಲ್ಲ ಎನ್ನುವ ನಿರೀಕ್ಷೆಯು ಹೂಡಿಕೆ ಚಟುವಟಿಕೆ ಹೆಚ್ಚಾಗುವಂತೆ ಮಾಡಿತು ಎಂದು ವಿಶ್ಲೇಷಕರು ಹೇಳಿದ್ದಾರೆ.

‘ವಿದೇಶಿ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡುವುದನ್ನು ಕಡಿಮೆ ಮಾಡಿದ್ದಾರೆ. ಅಲ್ಲದೆ, ಈ ತಿಂಗಳಿನಲ್ಲಿ ಎಂಟು ದಿನ ವಿದೇಶಿ ಹೂಡಿಕೆಯ ಒಳಹರಿವು ಹೆಚ್ಚಾಗಿದೆ. ಇದು ಭಾರತದ ಷೇರುಪೇಟೆಗಳ ಪಾಲಿಗೆ ಮಹತ್ವದ ಅಂಶ. ಹಣಕಾಸು ವಲಯದ ತ್ರೈಮಾಸಿಕ ಫಲಿತಾಂಶವು ನಿರೀಕ್ಷಿತ ಮಟ್ಟದಲ್ಲಿಯೇ ಇರುವುದು ಸಹ ಸಕಾರಾತ್ಮಕ ವಹಿವಾಟಿಗೆ ಕಾರಣವಾಗಿದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ತಿಳಿಸಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರವು ಶೇ 1.92ರಷ್ಟು ಹೆಚ್ಚಾಗಿ ಪ್ರತಿ ಬ್ಯಾರಲ್‌ಗೆ 109.2 ಡಾಲರ್‌ಗೆ ತಲುಪಿದೆ.

ಮುಖ್ಯಾಂಶಗಳು

- ಬಿಎಸ್‌ಇ ಸ್ಮಾಲ್‌ಕ್ಯಾಪ್ ಶೇ 1.38ರಷ್ಟು ಏರಿಕೆ
- ಬಿಎಸ್‌ಇ ಮಿಡ್‌ಕ್ಯಾಪ್ ಶೇ 1.01ರಷ್ಟು ಹೆಚ್ಚಳ
- ಮೂರು ದಿನಗಳಲ್ಲಿ ಹೂಡಿಕೆದಾರರ ಸಂಪತ್ತು ₹ 9 ಲಕ್ಷ ಕೋಟಿ ವೃದ್ಧಿ

ವಲಯವಾರು ಗಳಿಕೆ (%)



ರೂಪಾಯಿ 45 ಪೈಸೆ ಹೆಚ್ಚಳ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಶುಕ್ರವಾರ 45 ಪೈಸೆ ಹೆಚ್ಚಾಯಿತು. ಒಂಬತ್ತು ತಿಂಗಳಲ್ಲಿ ದಿನದ ಅತಿ ಹೆಚ್ಚಿನ ಏರಿಕೆ ಇದಾಗಿದೆ.

ದಿನದ ಅಂತ್ಯಕ್ಕೆ ಒಂದು ಡಾಲರ್‌ಗೆ ₹ 79.24ಕ್ಕೆ ತಲುಪಿತು. ಇದು ಮೂರು ವಾರಗಳ ಗರಿಷ್ಠ ಮಟ್ಟ.

ವಿದೇಶಿ ಬಂಡವಾಳ ಒಳಹರಿವು ಮತ್ತು ಡಾಲರ್ ಮೌಲ್ಯ ಇಳಿಕೆಯಿಂದಾಗಿ ರೂಪಾಯಿ ಮೌಲ್ಯ ಹೆಚ್ಚಾಗಿದೆ.

ಸ್ವಿಗ್ಗಿ: ಎಲ್ಲಿಂದಲಾದರೂ ಕೆಲಸ ಶೀಘ್ರವೇ ಜಾರಿ

ನವದೆಹಲಿ (ಪಿಟಿಐ): ಸ್ವಿಗ್ಗಿ ಕಂಪನಿಯು ತನ್ನ ಉದ್ಯೋಗಿಗಳಿಗೆ ಎಲ್ಲಿಂದಲಾದರೂ ಕೆಲಸ ಮಾಡುವ ಕಾಯಂ ವ್ಯವಸ್ಥೆಯನ್ನು ಜಾರಿಗೆ ತರುವುದಾಗಿ ಶುಕ್ರವಾರ ಹೇಳಿದೆ.

ಕಾರ್ಪೊರೇಟ್ ವಹಿವಾಟಿಗೆ ಸಂಬಂಧಿತ ಕೆಲಸಗಳು ಮತ್ತು ತಾಂತ್ರಿಕ ಕೆಲಸಗಳ ತಂಡವು ಕಚೇರಿಗೇ ಬಂದು ಕೆಲಸ ಮಾಡಬೇಕು ಎಂಬುದೇನೂ ಇಲ್ಲ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಉದ್ಯೋಗಿಗಳ ನಡುವೆ ವೈಯಕ್ತಿಕ ಬಾಂಧವ್ಯ ಬೆಳೆಯಬೇಕು ಎಂಬ ಉದ್ದೇಶದಿಂದ ಪ್ರತಿ ತ್ರೈಮಾಸಿಕದಲ್ಲಿ ಒಂದು ವಾರ ಕಚೇರಿಯಿಂದ ಕೆಲಸ ಮಾಡಬೇಕು ಎಂದು ಹೇಳಿದೆ.

ಕಳೆದ ಎರಡು ವರ್ಷಗಳಲ್ಲಿ ಮನೆಯಿಂದ ಕೆಲಸ ಮಾಡುವ ಅವಕಾಶ ಕಲ್ಪಿಸಿದ್ದರಿಂದ ಉತ್ಪಾದಕತೆಯಲ್ಲಿ ಹೆಚ್ಚಳ ಆಗಿದೆ. ಹೀಗಾಗಿ ಎಲ್ಲಿಂದಲಾದರೂ ಕೆಲಸ ಮಾಡಲು ಅವಕಾಶ ನೀಡುವಂತೆ ಹಲವು ವ್ಯವಸ್ಥಾಪಕರು ಮತ್ತು ಉದ್ಯೋಗಿಗಳು ಕೋರಿದ್ದರು ಎಂದು ಕಂಪನಿ ತಿಳಿಸಿದೆ.

ಸ್ವಿಗ್ಗಿಯಲ್ಲಿ ಸದ್ಯ 27 ರಾಜ್ಯಗಳು ಮತ್ತು ನಾಲ್ಕು ಕೇಂದ್ರಾಡಳಿತ ಪ್ರದೇಶಗಳ 487 ನಗರಗಳಲ್ಲಿ ಒಟ್ಟಾರೆ ಐದು ಸಾವಿರ ಮಂದಿ ಕೆಲಸ ಮಾಡುತ್ತಿದ್ದಾರೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

10ನೇ ವರ್ಷದ ಪುಣ್ಯಸ್ಮರಣೆ

ಕೆ ಎಸ್ ಮೊದಲಿಯಾರ್
(ದಿವಂಗತ ಕುಟ್ಟಿಯಪ್ಪರವರ ಪುತ್ರ)
ನಿಧನ : 31.07.2012
ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳು ಕಳೆದವು. ನಿಮ್ಮ ನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗುಳಿದಿದೆ. ಅನುದಿನವೂ, ಅನುಕ್ಷಣವೂ ನಿಮ್ಮ ಸ್ಮರಣೆಯೇ ನಮಗೆ ದಿವ್ಯ ಚೇತನವಾಗಿದೆ.
ಸದಾ ನಿಮ್ಮನ್ನು ಸ್ಮರಿಸುವ : ಪತ್ನಿ ಚಂದ್ರಮ್ಮ ಮಕ್ಕಳು ಹಾಗೂ ಕುಟುಂಬವರ್ಗದವರು

ಸವಿನೆನಪು

ಜನನ : 11.01.1981
ನಿಧನ : 30.07.2007
ನಾಗವೇಣಿ ಎನ್ ವಿ
ಮೌನದಲಿ ಜ್ಞಾನಿಯಾಗಿ ಮಾತಿನಲಿ ಮುತ್ತಾಗಿ ನಮ್ಮೆಲ್ಲರಿಗೆ ಚೂಡಾಮಣಿಯಾಗಿ ನೆಲೆನಿಂತ ಅಜಾತ ನೀನು
ಇಂತಿ ನಿನ್ನ ನೆನಪಿನಲ್ಲಿ
ಎನ್‌.ಪಿ. ವೆಂಕಟಸ್ವಾಮಿ ಮತ್ತು ಕುಟುಂಬದವರು
(ಮಾಜಿ ಅಧ್ಯಕ್ಷರು, ಪಿ.ಎಲ್‌.ಡಿ. ಬ್ಯಾಂಕ್)
ನಾಗಮಂಗಲ, ದೇವನಹಳ್ಳಿ ತಾಲ್ಲೂಕು.

LOOKING FOR JOB OPPORTUNITY
Refer Classifieds on Wednesday

ಬುಳ್ಳಹಳ್ಳಿ ಗೌಡರ ಎನ್ ಆಂಜನಪ್ಪ ರವರ 1ನೇ ವರ್ಷದ ಪುಣ್ಯಸ್ಮರಣೆ

WE MISS YOU...- EVERY SECOND OF EVERY MINUTE OF EVERY HOUR OF EVERY DAY WE MISS YOU APPAJI
ಸದಾ ನಿಮ್ಮನ್ನು ನೆನೆಯುತ್ತಿರುವ:
ಶ್ರೀಮತಿ ಯಶೋದ - ಸುನೀಲ್ ಗೌಡ - ಶ್ರೀಮತಿ ಶಿಲ್ಪಾ ಎ
ಬುಳ್ಳಹಳ್ಳಿ ದೇವನಹಳ್ಳಿ ತಾಲ್ಲೂಕು ಬೆಂಗಳೂರು ಗ್ರಾ. ಜಿಲ್ಲೆ

ಮುಂಬೈ ಧಾರಣೆ

ಶೇಂಗಾ

29-7-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10650-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1620)
ಒಂದು ವಾರದ ಡೆಲಿವರಿ	1625 (1615)
ಸೋಯಾ ಕಚ್ಚಾ	1230 (1170)
ಪಾಮ್ ವಾರದ ಡೆಲಿವರಿ	1245 (1233)
ಸೂರ್ಯಕಾಂತಿ ಎಣ್ಣೆ ಕಚ್ಚಾ	1480 (1480)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,225 (51,200)
ಬೆಳ್ಳಿ ಕೆ.ಜಿ 57,550 (56,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

₹ 8,900 ಕೋಟಿ ಬಂಡವಾಳ ಸಂಗ್ರಹಿಸಲಿದೆ ಯೆಸ್ ಬ್ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಖಾಸಗಿ ವಲಯದ ಪ್ರಮುಖ ಬ್ಯಾಂಕ್‌ಗಳ ಪೈಕಿ ಒಂದಾಗಿರುವ ಯೆಸ್ ಬ್ಯಾಂಕ್ ಎರಡು ಹೂಡಿಕೆ ಸಂಸ್ಥೆಗಳಿಂದ ಒಟ್ಟು ₹ 8,900 ಕೋಟಿ ಬಂಡವಾಳ ಸಂಗ್ರಹಿಸಲಿದೆ. ಕಾರ್ಲೈಲ್ ಮತ್ತು ಅಡ್ವೆಂಟ್ ಇಂಟರ್‌ನ್ಯಾಷನಲ್ ಸಂಸ್ಥೆಗಳು ಯೆಸ್ ಬ್ಯಾಂಕ್‌ನ ಒಟ್ಟು ಶೇಕಡ 10ರಷ್ಟು ಷೇರುಗಳನ್ನು ಖರೀದಿಸಲಿವೆ.

ಈ ಷೇರು ಖರೀದಿಗೆ ಯೆಸ್ ಬ್ಯಾಂಕ್ ಷೇರುದಾರರ ಅನುಮೋದನೆ ಸಿಗಬೇಕಿದೆ. ಬಂಡವಾಳ ಸಂಗ್ರಹದಿಂದಾಗಿ ಬ್ಯಾಂಕ್‌ನ ಬಂಡವಾಳ ಲಭ್ಯತೆಯು ಹೆಚ್ಚಾಗಲಿದೆ. ಮಧ್ಯಮಾವಧಿ ಹಾಗೂ ದೀರ್ಘಾವಧಿಯಲ್ಲಿ ಸುಸ್ಥಿರ ಅಭಿವೃದ್ಧಿಗೆ ನೆರವಾಗಲಿದೆ ಎಂದು ಯೆಸ್ ಬ್ಯಾಂಕ್ ಷೇರುಪೇಟೆಗೆ ಶುಕ್ರವಾರ ಮಾಹಿತಿ ನೀಡಿದೆ. ಈ ಹೂಡಿಕೆಗೆ ಷೇರುದಾರರ ಒಪ್ಪಿಗೆ ದೊರೆತಲ್ಲಿ, ದೇಶದ ಖಾಸಗಿ ಬ್ಯಾಂಕೊಂದು ಮಾಡಿದ ಅತಿದೊಡ್ಡ ಖಾಸಗಿ ಬಂಡವಾಳ ಸಂಗ್ರಹಗಳಲ್ಲಿ ಇದೂ ಒಂದಾಗಲಿದೆ.

ಜೂನ್ ತ್ರೈಮಾಸಿಕ: ಐಒಸಿಗೆ ನಷ್ಟ

ನವದೆಹಲಿ (ಪಿಟಿಐ): ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (ಐಒಸಿ) ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್– ಜೂನ್ ತ್ರೈಮಾಸಿಕದಲ್ಲಿ ಒಟ್ಟು ₹ 1,992 ಕೋಟಿ ನಿವ್ವಳ ನಷ್ಟ ಕಂಡಿದೆ.

ಪೆಟ್ರೋಲ್ ಮತ್ತು ಡೀಸೆಲ್ ದರ ಹೆಚ್ಚಳವನ್ನು ತಡೆಹಿಡಿದಿದ್ದು ಇದಕ್ಕೆ ಕಾರಣ ಎಂದು ಕಂಪನಿ ಹೇಳಿದೆ.

ಹಿಂದಿನ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ₹ 5,941 ಕೋಟಿ ನಿವ್ವಳ ಲಾಭ ಗಳಿಸಿತ್ತು. ಎರಡು ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ ತ್ರೈಮಾಸಿಕವೊಂದರಲ್ಲಿ ನಷ್ಟ ಅನುಭವಿಸಿರುವುದು ಇದೇ ಮೊದಲು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಕಚ್ಚಾ ತೈಲದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರತಿ ಬ್ಯಾರಲ್‌ಗೆ 100 ಡಾಲರ್‌ಗಿಂತ ಹೆಚ್ಚಾಗಿದ್ದರೂ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳಾದ ಐಒಸಿ, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಪೆಟ್ರೋಲ್ ಹಾಗೂ ಡೀಸೆಲ್ ಮಾರಾಟ ಬೆಲೆಯನ್ನು ಏಪ್ರಿಲ್–ಜೂನ್ ಅವಧಿಯಲ್ಲಿ ಹೆಚ್ಚಿಸಿಲ್ಲ.

ಸುನಕ್‌ಗೆ ಟೋರಿ ಸಂಸದರ ತರಾಟೆ

ಲಂಡನ್ (ಪಿಟಿಐ): ಕನ್ಸರ್ವೇಟಿವ್ ಪಕ್ಷದ ನಾಯಕತ್ವ ಮತ್ತು ಬ್ರಿಟನ್ ಪ್ರಧಾನಿ ಹುದ್ದೆಗೆ ಅಂತಿಮ ಕಣದಲ್ಲಿರುವ ಲಿಸ್ ಟ್ರಸ್ ಅವರ ಪ್ರತಿಸ್ಪರ್ಧಿ, ಭಾರತೀಯ ಮೂಲದ ರಿಷಿ ಸುನಕ್ ಚುನಾವಣಾ ಪ್ರಚಾರದ ಟಿ.ವಿ ಚರ್ಚೆಯಲ್ಲಿ ಸ್ವಪಕ್ಷದ ಸಂಸದರಿಂದ ತಮ್ಮ ಆರ್ಥಿಕ ಮತ್ತು ತೆರಿಗೆ ನೀತಿಗಳಿಗಾಗಿ ತೀವ್ರ ತರಾಟೆಗೆ ಒಳಗಾದರು.

ದೇಶದಲ್ಲಿನ ಆರ್ಥಿಕತೆ ಮತ್ತು ಜೀವನ ವೆಚ್ಚ ಹೆಚ್ಚಳ ಬಿಕ್ಕಟ್ಟು ಈ ಹಿಂದಿನ ಟಿ.ವಿ ಚರ್ಚೆಗಳಲ್ಲೂ ಕೇಂದ್ರಬಿಂದುವಾಗಿತ್ತು. ಉತ್ತರ ಇಂಗ್ಲೆಂಡ್‌ನ ಯಾರ್ಕ್‌ಶೈರ್‌ನ ಲೀಡ್ಸ್‌ನಲ್ಲಿ ಗುರುವಾರ ರಾತ್ರಿ ನಡೆದ ಚರ್ಚೆಯಲ್ಲೂ ಇಂತಹವೇ ವ್ಯಾಪಕ ಪ್ರಶ್ನೆಗಳನ್ನು ಸುನಕ್ ಎದುರಿಸಿದರು. ಟೋರಿ ಸದಸ್ಯರೊಬ್ಬರು ಈ ತಿಂಗಳ ಆರಂಭದಲ್ಲಿ ಚಾನ್ಸಲರ್ ಹುದ್ದೆಗೆ ರಾಜೀನಾಮೆ ನೀಡಿದ ಸುನಕ್ ಅವರ ನಿರ್ಧಾರವನ್ನು ಪ್ರಶ್ನಿಸಿದರು. ‘ತಮ್ಮ ಮಾಜಿ ಬಾಸ್ ಬೆನ್ನಿಗೆ ಇರಿದಿದ್ದೀರಿ’ ಎಂದು ಆರೋಪಿಸಿದರು.

‘ನೀವೊಬ್ಬ ಉತ್ತಮ ಸೇಲ್ಸ್‌ಮನ್. ನಿಮ್ಮಲ್ಲಿ ಅಂತಹ ಹಲವು ಗುಣಗಳಿವೆ. ಆದರೆ, ಹಲವು ಜನರು ತಮ್ಮ ಬೆಂಬಲವನ್ನು ಬೋರಿಸ್ ಜಾನ್ಸನ್ ಅವರಿಗೆ ಮುಂದುವರಿಸಿದ್ದಾರೆ’ ಎಂದು ವೆಸ್ಟ್ ಯಾರ್ಕ್‌ಶೈರ್‌ನ ಪ್ರತಿನಿಧಿ ವಾಗ್ದಾಳಿ ಮಾಡಿದರು.‘ರಿಷಿ ಕ್ಯಾಬಿನೆಟ್ ಸಚಿವರಾಗಲೂ ಸಮರ್ಥರಲ್ಲ. ವಿದೇಶಾಂಗ ಸಚಿವೆ ಲಿಜ್ ಟ್ರಸ್ ಅವರು ಮಾತ್ರ ದೇಶ ಮುನ್ನಡೆಸಬಲ್ಲರು’ ಎಂದಿರುವ ಬ್ರಿಟನ್ ರಕ್ಷಣಾ ಸಚಿವ ಬೆನ್ ವ್ಯಾಲೇಸ್ ಕೂಡ ಟ್ರಸ್ ಅವರ ಬೆಂಬಲಕ್ಕೆ ನಿಂತಿದ್ದಾರೆ.

ರೋಹಿಣಿ ಸಿಂಧೂರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಜಿಲ್ಲಾಧಿಕಾರಿಯಾಗಿದ್ದ ಅವಧಿಯಲ್ಲಿ ನಿಯಮ ಮೀರಿ ಕೆಲವು ಆದೇಶಗಳನ್ನು ಹೊರಡಿಸಿದ್ದ ಆರೋಪಗಳ ಕುರಿತು ವಿಚಾರಣೆಗೆ ಹಾಜರಾಗುವಂತೆ ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆ ಆಯುಕ್ತೆ ರೋಹಿಣಿ ಸಿಂಧೂರಿ ಅವರಿಗೆ ವಸತಿ ಇಲಾಖೆ ಕಾರ್ಯದರ್ಶಿ ಡಾ.ಜೆ.ರವಿಶಂಕರ್ ನೋಟಿಸ್ ನೀಡಿದ್ದಾರೆ.

ಮೈಸೂರು ಜಿಲ್ಲಾಧಿಕಾರಿಯಾಗಿದ್ದ ಸಮಯದಲ್ಲಿ 14,71,458 ಬಟ್ಟೆ ಬ್ಯಾಗ್‌ಗಳನ್ನು ನಗರ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಸರಬರಾಜು ಮಾಡಲು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ನೀಡಿದ್ದ ಆದೇಶದಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿದೆ. ₹13ಕ್ಕೆ ದೊರೆಯುವ ಬ್ಯಾಗ್‌ಗೆ ₹ 52 ನಿಗದಿ ಮಾಡಲಾಗಿತ್ತು. ಅಲ್ಲದೇ, ಸ್ಥಳೀಯ ಸಂಸ್ಥೆಗಳ ಅನುಮೋದನೆ ಪಡೆದಿರಲಿಲ್ಲ. ಪಾರಂಪರಿಕ ಕಟ್ಟಡದ ವ್ಯಾಪ್ತಿಗೆ ಒಳಪಡುವ ಮೈಸೂರು ಜಿಲ್ಲಾಧಿಕಾರಿ ವಸತಿಗೃಹದಲ್ಲಿ ಅನುಮತಿ ಪಡೆಯದೆ ₹ 50 ಲಕ್ಷ ವೆಚ್ಚದಲ್ಲಿ ಈಜುಕೊಳ, ಜಿಮ್ ನಿರ್ಮಿಸಲಾಗಿತ್ತು ಎಂಬುದೂ ಸೇರಿದಂತೆ ಕೆಲವು ನಿರ್ಧಾರಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಶಾಸಕ ಸಾ.ರಾ. ಮಹೇಶ್, ಮೈಸೂರು ನಗರ ಪಾಲಿಕೆ ಮಾಜಿ ಉಪ ಮೇಯರ್ ಶೈಲೇಂದ್ರ ವಿ.ಭೀಮರಾವ್ ದೂರು ಸಲ್ಲಿಸಿದ್ದರು.

ಆರೋಪಗಳ ಕುರಿತು ಪ್ರಾಥಮಿಕ ತನಿಖೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಸರ್ಕಾರ ರವಿಶಂಕರ್ ಅವರಿಗೆ ಸೂಚಿಸಿತ್ತು. ಇದೇ 30ರಂದು ಬೆಳಿಗ್ಗೆ 11ಕ್ಕೆ ದಾಖಲೆಗಳೊಂದಿಗೆ ವಿಚಾರಣೆಗೆ ಹಾಜರಾಗಲು ನೋಟಿಸ್ ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಜೋಯಾಲುಕ್ಕಾಸ್: ಹೊಸ ಆಭರಣ ಸಂಗ್ರಹ

ಬೆಂಗಳೂರು: ಚಿನ್ನಾಭರಣ ಮಾರಾಟ ಕಂಪನಿ ಜೋಯಾಲುಕ್ಕಾಸ್ ವಧುವಿಗಾಗಿ ಹೊಸ ಆಭರಣಗಳ ಸಂಗ್ರಹ ಆರಂಭಿಸಿದೆ. ಇದಕ್ಕೆ ಕಂಪನಿಯು ‘ಅನುಗ್ರಹ’ ಎಂಬ ಹೆಸರಿತ್ತಿದೆ.

‘ಅನುಗ್ರಹ’ ಬ್ರ್ಯಾಂಡ್ ಅಡಿಯಲ್ಲಿ ದೇಶದ ಮೂಲೆ ಮೂಲೆಗಳಲ್ಲಿ ಇರುವ ವಿವಿಧ ಸಮುದಾಯಗಳ ವಧು ಧರಿಸುವ ಸಾಂಪ್ರದಾಯಿಕ ಆಭರಣಗಳ ಸಂಗ್ರಹ ಇರಲಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಜೋಯಾಲುಕ್ಕಾಸ್‌ನ ಎಲ್ಲ ಮಳಿಗೆಗಳಲ್ಲಿ ಈ ಆಭರಣಗಳ ಸಂಗ್ರಹ ಲಭ್ಯವಿರಲಿದೆ. ನುರಿತ ಕುಶಲಕರ್ಮಿಗಳು ಹಾಗೂ ಸಾಂಪ್ರದಾಯಿಕ ಅಕ್ಕಸಾಲಿಗರು ವಧುವಿನ ಅಭಿರುಚಿ, ಆಶಯ ಪರಿಗಣಿಸಿ ಇವುಗಳನ್ನು ತಯಾರಿಸಿದ್ದಾರೆ. ಪ್ರಸಕ್ತ ವಿವಾಹ ಋತುವಿನಲ್ಲಿ ವಜ್ರದ ಆಭರಣಗಳ ಮೇಲೆ ಶೇಕಡ 25ರಷ್ಟು ರಿಯಾಯಿತಿ ಇರಲಿದೆ ಎಂದು ಕಂಪನಿ ಹೇಳಿದೆ.

ಎಂಆರ್‌ಪಿಎಲ್‌ಗೆ ಲಾಭ

ಮಂಗಳೂರು: ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ, ಮಂಗಳೂರು ರಿಫೈನರೀಸ್ ಆ್ಯಂಡ್ ಪೆಟ್ರೊಕೆಮಿಕಲ್ಸ್ ಲಿ. (ಎಂಆರ್‌ಪಿಎಲ್) ₹ 2,707 ಕೋಟಿ ನಿವ್ವಳ ಲಾಭ ಗಳಿಸಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಕಂಪನಿ ₹ 230 ಕೋಟಿ ನಷ್ಟ ಅನುಭವಿಸಿತ್ತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಯು ಸತತವಾಗಿ ಏರಿಕೆ ಆಗಿರುವುದರಿಂದ ಮೊದಲ ತ್ರೈಮಾಸಿಕದ ಒಟ್ಟಾರೆ ವಹಿವಾಟು ದ್ವಿಗುಣಗೊಂಡು ₹ 35,915 ಕೋಟಿಗೆ ತಲುಪಿದೆ. ಕಳೆದ ವರ್ಷ ಇದು ₹ 15,069 ಕೋಟಿ ಆಗಿತ್ತು ಎಂದು ಪ್ರಕಟಣೆ ತಿಳಿಸಿದೆ.

ಪ್ರಮುಖ ವಲಯಗಳಲ್ಲಿ ಶೇ 12.7 ಬೆಳವಣಿಗೆ

ನವದೆಹಲಿ (ಪಿಟಿಐ): ದೇಶದ ಎಂಟು ಪ್ರಮುಖ ಮೂಲಸೌಕರ್ಯ ವಲಯಗಳು ಜೂನ್ ತಿಂಗಳಿನಲ್ಲಿ ಶೇಕಡ 12.7ರಷ್ಟು ಬೆಳವಣಿಗೆ ದಾಖಲಿಸಿವೆ. ಬೆಳವಣಿಗೆ ಪ್ರಮಾಣವು ಹಿಂದಿನ ವರ್ಷದ ಜೂನ್‌ನಲ್ಲಿ ಶೇ 9.4ರಷ್ಟು ಇತ್ತು.

ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ಸಂಸ್ಕರಣಾ ಘಟಕಗಳ ಉತ್ಪನ್ನಗಳು, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ವಲಯಗಳ ಬೆಳವಣಿಗೆ ಪ್ರಮಾಣವು ಮೇ ತಿಂಗಳಿನಲ್ಲಿ ಶೇ 19.3ರಷ್ಟು ಆಗಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-56000
ಹೊಸನಗರ	
ಬಿಳಿಗೋಟು	24899-29399
ಚಾಲಿ	35569-37399
ಕೆಂಪುಗೋಟು	34200-38000
ರಾಶಿ	47500-51769
ಸಿಪ್ಪೆಗೋಟು	16699-16699
ಕಾರ್ಕಳ	
ಹೊಸತು	40000-45000
ಹಳತು	46000-56000
ಕುಮಟ	
ಚಿಪ್ಪು	28019-32509
ಕೋಕ	20109-30089
ಫ್ಯಾಕ್ಟರಿ	13019-21569
ಹೊಸಚಾಲಿ	36699-40099
ಹಳೆಚಾಲಿ	43509-46399
ಪುತ್ತೂರು	
ಕೋಕ	11000-26000
ಹೊಸತು	32000-45000
ಶಿವಮೊಗ್ಗ	
ಬೆಟ್ಟೆ	52699-53899
ಗೊಬರಲು	22009-38069
ರಾಶಿ	47769-50899
ಸರಕು	60069-77700
ಸಿದ್ದಾಪುರ	
ಬಿಳಿಗೋಟು	27799-32900
ಚಾಲಿ	36744-40349
ಕೋಕ	23599-31599
ಕೆಂಪುಗೋಟು	32499-33419
ರಾಶಿ	46699-49739
ತಟ್ಟಿಬೆಟ್ಟೆ	43469-46699
ಶಿರಸಿ	
ಬೆಟ್ಟೆ	34123-46009
ಬಿಳಿಗೋಟು	21616-35399
ಚಾಲಿ	35699-40799
ರಾಶಿ	47289-50909
ಯಲ್ಲಾಪುರ	
ಬಿಳಿಗೋಟು	27699-34312
ಚಾಲಿ	34099-40489
ಕೋಕ	18099-31812
ಕೆಂಪುಗೋಟು	28119-35309
ರಾಶಿ	47309-55459
ತಟ್ಟಿಬೆಟ್ಟೆ	38809-46302

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	15800	16000	219.10 ಸೆಂಟ್ಸ್
ಎಸಿ	8820	8400	8900	
ಆರ್‌ಪಿ	9500	9500	9700	ಲಂಡನ್
ಆರ್‌ಸಿ	4800	4500	4550	2009 ಡಾಲರ್ಸ್

2025ರ ಹೊತ್ತಿಗೆ ಮಿಗ್–21 ವಿಮಾನಗಳ ಸೇವೆ ರದ್ದು?

ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆಯಲ್ಲಿ ಸೇವೆಯಲ್ಲಿರುವ ನಾಲ್ಕು ಮಿಗ್– 21 ವಿಮಾನಗಳನ್ನು 2025ರ ಹೊತ್ತಿಗೆ ಸೇವೆಯಿಂದ ಹಿಂಪಡೆಯಲಾಗುವುದು. ಇದರಲ್ಲಿ ಒಂದು ವಿಮಾನದ ಸೇವೆಯನ್ನು ಸೆಪ್ಟೆಂಬರ್ ಹೊತ್ತಿಗೆ ಹಿಂಪಡೆಯಲಾಗುವುದು ಎಂದು ಈ ಕುರಿತು ಮಾಹಿತಿ ಇರುವ ಮೂಲಗಳು ಶುಕ್ರವಾರ ತಿಳಿಸಿವೆ.

ಇದರೊಂದಿಗೆ ಮಿಗ್–29 ಯುದ್ಧ ವಿಮಾನಗಳ ಸೇವೆಯನ್ನು ಮುಂದಿನ ಐದು ವರ್ಷಗಳಲ್ಲಿ ಹಿಂಪಡೆಯುವ ಚಿಂತನೆ ನಡೆದಿದೆ. ಮಿಗ್–21 ವಿಮಾನವನ್ನು ಸೇವೆಯಿಂದ ಹಿಂಪಡೆಯುವ ನಿರ್ಧಾರಕ್ಕೂ ಇಬ್ಬರು ಪೈಲಟ್‌ಗಳು ಗುರುವಾರ ರಾತ್ರಿ ಮೃತಪಟ್ಟ ಘಟನೆಗೂ ಸಂಬಂಧವಿಲ್ಲ. ವಾಯುಪಡೆಯನ್ನು ಆಧುನೀಕರಣಗೊಳಿಸುವ ಯೋಜನೆಯ ಭಾಗವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ಮಿಗ್–21 ತರಬೇತಿ ವಿಮಾನದಲ್ಲಿ ಹಾರಾಟ ನಡೆಸುತ್ತಿದ್ದ ಭಾರತೀಯ ವಾಯುಪಡೆಯ ಇಬ್ಬರು ಪೈಲಟ್‌ಗಳು ಗುರುವಾರ ಹಾರಾಟವೇಳೆಯೇ ಮೃತಪಟ್ಟಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಬಿಜೆಪಿ ಸಂಸದ ವರುಣ್ ಗಾಂಧಿ, ಮಿಗ್–21 ವಿಮಾನಗಳನ್ನು ‘ಹಾರುವ ಶವಪೆಟ್ಟಿಗೆ’ ಎಂದು ಕರೆದಿದ್ದಾರೆ. ‘ಈ ವಿಮಾನವನ್ನು ಸೇವೆಯಿಂದ ಎಂದಿಗೆ ತೆಗೆದು ಹಾಕಲಾಗುವುದು’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ದೇಶದ ಸಂಸತ್ತು ಈ ಬಗ್ಗೆ ಯೋಚಿಸಬೇಕಿದೆ. ನಾವು ನಮ್ಮ ಮಕ್ಕಳನ್ನು ಈ ವಿಮಾನದಲ್ಲಿ ಹಾರಾಡಲು ಬಿಡಬಹುದೇ’ ಎಂದು ಪ್ರಶ್ನಿಸಿದ್ದಾರೆ.

ಮಂಕಿಪಾಕ್ಸ್: ಬ್ರೆಜಿಲ್‌ನಲ್ಲಿ ಮೊದಲ ಸಾವು

ಸಾವೋ ಪಾಲೊ, ಬ್ರೆಜಿಲ್ (ರಾಯಿಟರ್ಸ್): ಬ್ರೆಜಿಲ್‌ನಲ್ಲಿ ಮಂಕಿಪಾಕ್ಸ್ ವೈರಾಣುವಿನಿಂದ ವ್ಯಕ್ತಿ ಮೃತಪಟ್ಟ ಮೊದಲ ಪ್ರಕರಣ ಶುಕ್ರವಾರ ವರದಿಯಾಗಿದೆ.

ಕ್ಯಾನ್ಸರ್ ಮತ್ತು ಪ್ರತಿರಕ್ಷಣೆಯ ಕ್ಷೀಣತೆಯಿಂದ ಬಳಲುತ್ತಿದ್ದ 41 ವರ್ಷದ ವ್ಯಕ್ತಿಯೊಬ್ಬರು, ಮಂಕಿಪಾಕ್ಸ್ ರೋಗ ಲಕ್ಷಣಗಳು ಕಾಣಿಸಿಕೊಂಡು ಮೃತಪಟ್ಟಿರುವುದಾಗಿ ಆರೋಗ್ಯ ಸಚಿವಾಲಯ ಹೇಳಿಕೆಯಲ್ಲಿ ಖಚಿತಪಡಿಸಿದೆ.

ಈ ಪ್ರಕರಣದಿಂದ ವಿಶ್ವದಾದ್ಯಂತ ಮಂಕಿಪಾಕ್ಸ್ ರೋಗದಿಂದ ಮೃತಪಟ್ಟವರ ಸಂಖ್ಯೆ 6ಕ್ಕೆ ಏರಿಕೆಯಾಗಿದೆ.

ಕ್ಷಿಪಣಿ ದಾಳಿ: ಉಕ್ರೇನಿನ 53 ಯುದ್ಧ ಕೈದಿಗಳು ಸಾವು

ಕೀವ್ (ಎಪಿ): ರಷ್ಯಾ ಬೆಂಬಲಿತ ಪ್ರತ್ಯೇಕತಾವಾದಿಗಳ ಹಿಡಿತದಲ್ಲಿರುವ ಪೂರ್ವ ಪ್ರಾಂತ್ಯ ಡೊನೆಟ್‌ಸ್ಕ್ ಮೇಲೆ ಉಕ್ರೇನ್ ಸೇನೆ ಕ್ಷಿಪಣಿ ದಾಳಿ ನಡೆಸಿದ್ದು, ಇದರಲ್ಲಿ ಮರಿಯುಪೋಲ್‌ನ ಅಜೋವ್‌ಸ್ಟಾಲ್ ಉಕ್ಕಿಸ್ಥಾವರದಲ್ಲಿ ರಷ್ಯಾ ಪಡೆಗಳು ಬಂಧಿಸಿದ್ದ 53 ಮಂದಿ ಉಕ್ರೇನ್ ಯುದ್ಧ ಕೈದಿಗಳು ಹತರಾಗಿದ್ದಾರೆ.

ಆದರೆ, ಉಕ್ರೇನ್ ಸೇನೆಯು ‘ಇದು ರಷ್ಯಾ ಸೇನೆ ನಡೆಸಿರುವ ಶೆಲ್ ದಾಳಿ. ಯುದ್ಧ ಕೈದಿಗಳಿಗೆ ನೀಡಿರುವ ಚಿತ್ರಹಿಂಸೆಯ ಸಾಕ್ಷ್ಯಗಳನ್ನು ನಾಶಪಡಿಸಲು ದಾಳಿ ನಡೆಸಲಾಗಿದೆ’ ಎಂದು ಆರೋಪಿಸಿದೆ.

ಒಲೆನಿವ್ಕಾದಲ್ಲಿ ಯುದ್ಧ ಕೈದಿಗಳನ್ನು ಇರಿಸಲಾಗಿದ್ದ ಕಾರಾಗೃಹದ ಮೇಲೆ ಹಿಮಾರ್ಸ್ ಬಹು ಕ್ಷಿಪಣಿಗಳ ದಾಳಿಯಾಗಿದೆ. ಸುಮಾರು 130 ಮಂದಿ ಉಕ್ರೇನ್ ಯುದ್ಧ ಕೈದಿಗಳು ಗಾಯಗೊಂಡಿದ್ದಾರೆ ಎಂದು ರಷ್ಯಾ ರಕ್ಷಣಾ ಸಚಿವಾಲಯದ ವಕ್ತಾರ ಮೇಜರ್ ಜನರಲ್ ಐಗೋರ್ ಕೊನಶೆಂಕೊವ್ ಶುಕ್ರವಾರ ತಿಳಿಸಿದ್ದಾರೆ.

‘ಇದೊಂದು ದುರುದ್ದೇಶಪೂರಿತ ಪ್ರಚೋದನೆ. ಉಕ್ರೇನ್ ಸೈನಿಕರ ಶರಣಾಗತಿಗೆ ತಣ್ಣೀರೆರೆಚುವ ಉದ್ದೇಶ ಈ ದಾಳಿಯ ಹಿಂದಿದೆ. ಶೆಲ್ ದಾಳಿಯಲ್ಲಿ ಬಂದೀಖಾನೆಯ ಎಂಟು ಸಿಬ್ಬಂದಿಯೂ ಗಾಯಗೊಂಡಿದ್ದಾರೆ’ ಎಂದು ಅವರು ತಿಳಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್
House
Banashankari
BANASHANKARI 2ND STAGE, Building (GF, FF) for Sale 30'x45' S/F opposite to Umamaheshwara Park 9341890909.
Sites
Bannerghatta Road
BANNERGHATTA ROAD GOTTIGERE Sites Sale 'A' khatha. W/F 1) 38'x38' 2) 37'x38' 3) 33x130. 9341890909.

EDUCATION CORNER
IAS/KAS 2023 & PSI/PC
FREE Coaching batch Starts On August 16
Dr Kalam IAS Academy Bangalore
9535215127 / 28
Dr Kalam is a Private Institute

ಉದ್ಯೋಗಾವಕಾಶ
Drivers
ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 08047106868
General
ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.
ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಭವಿಷ್ಯ
Astrology
ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071
★॥ಶ್ರೀಕೇದಾರನಾಥ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ ಪರಿಹಾರ. 9148773459
ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ. ಎಲ್ಲಾ ರೀತಿಯ ದೈಹಿಕ, ಮಾನಸಿಕ ಕಾಯಿಲೆಗಳು, ನಿಮ್ಮೆಲ್ಲಾ ರೀತಿಯ ಪರಹಾರವಾಗದ ಸಮಸ್ಯೆಗಳು, ಜನ್ಮಜನ್ಮಾಂತರಗಳ ದೋಷಗಳ ನಿವಾರಣೆಗಾಗಿ ಕೂಡಲೇ ಸಂಪರ್ಕಿಸಿ. 7676750280

ಸಮಾಜಸೇವೆ
Old Age Home
ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂರ್ಪಕಿಸಿ: 9900371597, 9739320897, 9916551457, 9916544057, 9620761222

ಪ್ರವಾಸ
Travel
09.09.2022 ರಿಂದ 12 ದಿನಗಳು ದೆಹಲಿ, ಹರಿದ್ವಾರ್, ಗಂಗೋತ್ರಿ ಯಮುನೋತ್ರಿ, ಕೇದಾರನಾಥ್, ಬದ್ರಿನಾಥ್. ಸಂಪರ್ಕಿಸಿ: ಶ್ರೀಗಂಗಾ ಟೂರಿಸ್ಟ್, 9480253807

DH ಪ್ರಜಾವಾಣಿ

Classifieds EDUCATION SPECIAL
SPECIAL RATES FOR • Admission Notice, Education Success • Congratulation Ads
For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕಾಮನ್‌ವೆಲ್ತ್ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದ ಪಥಸಂಚಲನದಲ್ಲಿ ಹಾಕಿ ಆಟಗಾರ ಮನ್‌ಪ್ರೀತ್ ಸಿಂಗ್ ಮತ್ತು ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ.ಸಿಂಧು ಅವರು ಧ್ವಜಧಾರಿಗಳಾಗಿ ಭಾರತದ ಕ್ರೀಡಾಪಟುಗಳನ್ನು ಮುನ್ನಡೆಸಿದರು (ಎಡಚಿತ್ರ) ಬಾಣ ಬಿರುಸುಗಳ ಪ್ರದರ್ಶನದ ವೇಳೆ ಕಂಗೊಳಿಸಿದ ಅಲೆಕ್ಸಾಂಡರ್ ಕ್ರೀಡಾಂಗಣ (ಮಧ್ಯ) ದೈತ್ಯ ಗೂಳಿಯ ಯಂತ್ರದ ಮಾದರಿ ಪ್ರದರ್ಶಿಸಿದ ಕಲಾವಿದರು ಎಎಫ್‌ಪಿ/ಪಿಟಿಐ ಚಿತ್ರ

ಮಹಿಳಾ ಹಾಕಿ: ಘಾನಾ ವಿರುದ್ಧ ಭಾರತಕ್ಕೆ ಸುಲಭ ಜಯ; ಇಂದು ವೇಲ್ಸ್ ಜತೆ ಪೈಪೋಟಿ

ಗುರ್ಜಿತ್ ಕೌರ್ ಮಿಂಚಿನ ಆಟ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಗುರ್ಜಿತ್ ಕೌರ್ ಗಳಿಸಿದ ಸೊಗಸಾದ ಎರಡು ಗೋಲುಗಳ ಬಲದಿಂದ ಭಾರತ ಮಹಿಳಾ ಹಾಕಿ ತಂಡವು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭರ್ಜರಿ ಗೆಲುವಿನ ಆರಂಭ ಮಾಡಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಸವಿತಾ ಪೂನಿಯಾ ನಾಯಕತ್ವದ ಭಾರತ 5–0ಯಿಂದ ತನಗಿಂತ ಕೆಳ ರ‍್ಯಾಂಕಿನ ಘಾನಾ ವಿರುದ್ಧ ಜಯಭೇರಿ ಮೊಳಗಿಸಿತು.

ಗುರ್ಜಿತ್ ಕೌರ್ ಮೂರು ಮತ್ತು 39ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ನೇಹಾ ಗೋಯಲ್ (28ನೇ ನಿಮಿಷ), ಸಂಗೀತಾ ಕುಮಾರಿ (36ನೇ ನಿ.) ಮತ್ತು ಸಲೀಮಾ ಟೆಟೆ (56ನೇ ನಿ.) ತಂಡದ ಗೆಲುವಿನಲ್ಲಿ ಮಿಂಚಿದರು.

ಆಟದ ಎಲ್ಲ ವಿಭಾಗಗಳಲ್ಲೂ ಭಾರತ ಪಾರಮ್ಯ ಮೆರೆಯಿತು. ಆದರೆ ಪಂದ್ಯದ ಮೊದಲ ಎರಡು ಕ್ವಾರ್ಟರ್‌ಗಳಲ್ಲಿ ಘಾನಾದ ಅದ್ಭುತ ಡಿಫೆನ್ಸ್ ಆಟದ ಮುಂದೆ ಸವಿತಾ ಪಡೆಯ ಆಟ ನೀರಸ ಎನಿಸಿತು. ಮಿಡ್‌ಫೀಲ್ಡ್ ಮತ್ತು ಫಾರ್ವರ್ಡ್‌ಲೈನ್‌ನಲ್ಲಿ ಆಟಗಾರ್ತಿಯರ ಮಧ್ಯೆ ಹೊಂದಾಣಿಕೆ ಕಂಡುಬರಲಿಲ್ಲ.

ಗೋಲು ಗಳಿಸಿದ ಭಾರತ ತಂಡದ ಗುರ್ಜಿತ್ ಕೌರ್ (ಎಡದಿಂದ ಎರಡನೆಯವರು) ಸಹ ಆಟಗಾರ್ತಿಯರೊಂದಿಗೆ ಸಂಭ್ರಮಿಸಿದರು– ಪಿಟಿಐ ಚಿತ್ರ

ಮುಖ್ಯಾಂಶಗಳು

- ಘಾನಾ ತಂಡವನ್ನು 5–0ಯಿಂದ ಮಣಿಸಿದ ಸವಿತಾ ಪಡೆ
- ಗೋಲು ಗಳಿಸಿದ ನೇಹಾ, ಸಂಗೀತಾ, ಸಲೀಮಾ
- ಪೆನಾಲ್ಟಿ ಕಾರ್ನರ್‌ಗಳಲ್ಲಿ ಗೋಲು ಗಳಿಸಲು ಎಡವಿದ ಭಾರತ

ಪೆನಾಲ್ಟಿ ಕಾರ್ನರ್‌ಗಳನ್ನು ಗೋಲಾಗಿಸುವ ಅವಕಾಶಗಳಲ್ಲೂ ಭಾರತ ಎಡವಿತು. 10 ಅವಕಾಶಗಳ ಪೈಕಿ ಕೇವಲ ಒಂದರಲ್ಲಿ ಭಾರತ ಯಶಸ್ಸು ಸಾಧಿಸಿತು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಘಾನಾ 30ನೇ ಸ್ಥಾನದಲ್ಲಿದ್ದರೆ ಭಾರತ 9ನೇ ಸ್ಥಾನದಲ್ಲಿದೆ.

ಭಾರತ ಆರಂಭದಿಂದಲೇ ವೇಗದ ಆಟಕ್ಕೆ ಒತ್ತುನೀಡಿತು. ಮೂರನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗುರ್ಜಿತ್ ಕೌರ್ ತಪ್ಪು ಮಾಡಲಿಲ್ಲ. ಬಲ ಕಾರ್ನರ್‌ನಲ್ಲಿ ಡ್ರ್ಯಾಗ್‌ಫ್ಲಿಕ್ ಮೂಲಕ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು.

ಘಾನಾ ತಂಡಕ್ಕೂ ಎರಡು ಪೆನಾಲ್ಟಿ ಕಾರ್ನರ್ ಲಭಿಸಿದರೂ ಗೋಲು ದಾಖಲಿಸಲು ಸಾಧ್ಯವಾಗಲಿಲ್ಲ. ಭಾರತದ ತಂಡದ ರಕ್ಷಣಾ ವಿಭಾಗದ ಆಟಗಾರ್ತಿಯರು ತಡೆಯಾದರು.

ಭಾರತ ತಂಡದ ಮುನ್ನಡೆಯನ್ನು ನೇಹಾ ಎರಡಕ್ಕೇರಿಸಿದರು. ಬಳಿಕ ಸಂಗೀತಾ ಕುಮಾರಿ ಮತ್ತು ಸಲೀಮಾ ಟೆಟೆ ಮೂಲಕ ಗೋಲುಗಳು ಬಂದವು.

ಭಾರತ ತಂಡವು ಶನಿವಾರ ನಡೆಯುವ ಗುಂಪು ಹಂತದ ಎರಡನೇ ಪಂದ್ಯದಲ್ಲಿ ವೇಲ್ಸ್ ತಂಡವನ್ನು ಎದುರಿಸಲಿದೆ.

ಟಿಟಿ: ಭಾರತ ತಂಡ ಶುಭಾರಂಭ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಮಣಿಕಾ ಬಾತ್ರಾ ನೇತೃತ್ವದ ಭಾರತ ಮಹಿಳಾ ಟೇಬಲ್ ಟೆನಿಸ್ ತಂಡವು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಶುಕ್ರವಾರ ಶುಭಾರಂಭ ಮಾಡಿತು.

ಇಲ್ಲಿ ನಡೆದ ಎರಡನೇ ಗುಂಪಿನ ಪಂದ್ಯದಲ್ಲಿ ಭಾರತದ ಆಟಗಾರ್ತಿಯರು 3–0ಯಿಂದ ದಕ್ಷಿಣ ಆಫ್ರಿಕಾಕ್ಕೆ ಸೋಲುಣಿಸಿದರು. ಡಬಲ್ಸ್ ಪಂದ್ಯದಲ್ಲಿ ಶ್ರೀಜಾ ಅಕುಲಾ ಮತ್ತು ರೀತ್ ಟೆನಿಸನ್ 11-7, 11-7, 11-5ರಿಂದ ಲೈಲಾ ಎಡ್ವರ್ಡ್ಸ್ ಮತ್ತು ದನೀಶಾ ಪಟೇಲ್ ಗೆದ್ದು 1-0 ಮುನ್ನಡೆ ಗಳಿಸಿಕೊಟ್ಟರು.

ಕಾಮನ್‌ವೆಲ್ತ್ ಗೇಮ್ಸ್ ಹಾಲಿ ಚಾಂಪಿಯನ್ ಮಣಿಕಾ ಬಾತ್ರಾ, ಸಿಂಗಲ್ಸ್ ಹಣಾಹಣಿಯಲ್ಲಿ 11-5, 11-3, 11-2ರಿಂದ ಮುಶ್ಫೀಕ್ ಕಲಾಮ್ ಅವರನ್ನು ಸುಲಭವಾಗಿ ಮಣಿಸಿದರು. ಸಿಂಗಲ್ಸ್‌ನ ಮತ್ತೊಂದು ಸೆಣಸಾಟದಲ್ಲಿ ಅಕುಲಾ 11-5, 11-3, 11-6ರಿಂದ ದನಿಶಾ ಪಟೇಲ್ ವಿರುದ್ಧ ಗೆದ್ದು ಬೀಗಿದರು.

ಪುರುಷರ ತಂಡ ಜಯಭೇರಿ: ಮೂರನೇ ಗುಂಪಿನ ಹಣಾಹಣಿಯಲ್ಲಿ ಭಾರತ ಪುರುಷರ ತಂಡವು 3–0ಯಿಂದ ದುರ್ಬಲ ಬಾರ್ಬಡೀಸ್ ತಂಡಕ್ಕೆ ಸೋಲುಣಿಸಿತು. ಡಬಲ್ಸ್‌ನಲ್ಲಿ ಹರ್ಮೀತ್ ದೇಸಾಯಿ– ಜಿ.ಸತ್ಯನ್ 11-9, 11-9, 11-4ರಿಂದ ಕೆವಿನ್ ಫರ್ಲಿ ಮತ್ತು ಟೈರೆಸ್ ನೈಟ್ ಎದುರು ಗೆದ್ದರೆ, ಸಿಂಗಲ್ಸ್‌ನಲ್ಲಿ ಶರತ್ ಕಮಲ್ 11-5, 11-3, 11-3ರಿಂದ ರಾಮೊನ್ ಮ್ಯಾಕ್ಸ್‌ವೆಲ್ ಎದುರು ಸುಲಭವಾಗಿ ಜಯಿಸಿದರು.

ಸಿಂಗಲ್ಸ್ ವಿಭಾಗದ ಮತ್ತೊಂದು ಹಣಾಹಣಿಯಲ್ಲಿ ಸತ್ಯನ್ 11-4, 11-4, 11-5ರಿಂದ ಟೈರೆಸ್ ಎದುರು ಗೆದ್ದರು.

ಶ್ರೀಜಾ ಅಕುಲಾ– ಪಿಟಿಐ ಚಿತ್ರ

ಲಾನ್‌ಬಾಲ್‌ನಲ್ಲಿ ನಿರಾಸೆ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತ ಲಾನ್‌ಬಾಲ್ ಆಟಗಾರರು ಕಾಮನ್‌ವೆಲ್ತ್ ಕೂಟದ ಮೊದಲ ದಿನ ನಿರಾಸೆ ಅನುಭವಿಸಿದರು.

ಮಹಿಳಾ ಸಿಂಗಲ್ಸ್‌ನ ಮೊದಲ ಪಂದ್ಯದಲ್ಲಿ ತಾನಿಯಾ ಚೌಧರಿ 10–21ರಿಂದ ಸ್ಕಾಟ್ಲೆಂಡ್‌ನ ದೀ ಹೊಗ್ಗಾನ್ ಎದುರು ಸೋತರು. ಮತ್ತೊಂದು ಹಣಾಹಣಿಯಲ್ಲಿ 20–21ರಿಂದ ಫಾಲ್ಕ್‌ಲ್ಯಾಂಡ್ ಐಸ್‌ಲ್ಯಾಂಡ್‌ನ ಡಾಪ್ನೆ ಅರ್ಥರ್ ಅಲ್ಮಂಡ್ ವಿರುದ್ಧ ಮಣಿದರು.

ಚಂದನ್ ಕುಮಾರ್ ಸಿಂಗ್, ನವನೀತ್ ಸಿಂಗ್ ಮತ್ತು ಮೃದುಲ್ ಬೊರ್ಗೊಹೈನ್ ಅವರಿದ್ದ ತಂಡವು 6–23ರಿಂದ ನ್ಯೂಜಿಲೆಂಡ್ ಎದುರು ಸೋತಿತು. ಮತ್ತೊಂದು ಪಂದ್ಯದಲ್ಲಿ 12–19ರಿಂದ ಸ್ಕಾಟ್ಲೆಂಡ್ ವಿರುದ್ಧವೂ ತಂಡಕ್ಕೆ ನಿರಾಸೆ ಕಾಡಿತು.

ಪ್ರೀ ಕ್ವಾರ್ಟರ್‌ಗೆ ಶಿವ ಥಾಪಾ

ಬಾಕ್ಸಿಂಗ್: ಪಾಕ್‌ನ ಸುಲೆಮಾನ್ ವಿರುದ್ಧ 5–0 ಗೆಲುವು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಬಾಕ್ಸರ್ ಶಿವ ಥಾಪಾ ಅವರು ಪದಕದೆಡೆಗಿನ ಅಭಿಯಾನವನ್ನು ಭರ್ಜರಿಯಾಗಿಯೇ ಆರಂಭಿಸಿದ್ದು, ಪುರುಷರ 63.5 ಕೆ.ಜಿ. ವಿಭಾಗದಲ್ಲಿ ಪ್ರೀ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದಾರೆ.

ಶುಕ್ರವಾರ ನಡೆದ ಮೊದಲ ಸುತ್ತಿನಲ್ಲಿ ಅವರು 5–0ರಲ್ಲಿ ಪಾಕಿಸ್ತಾನದ ಸುಲೆಮಾನ್ ಬಲೋಚ್ ವಿರುದ್ಧ ಗೆದ್ದರು. ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಐದು ಬಾರಿ ಚಿನ್ನ ಗೆದ್ದಿರುವ ಶಿವ, ಮೇಲಿಂದ ಮೇಲೆ ಬಲವಾದ ಪಂಚ್‌ಗಳನ್ನು ನೀಡಿ ಎದುರಾಳಿಯನ್ನು ಕಂಗೆಡಿಸಿದರು.

ಆಕ್ರಮಣದ ಜತೆ ರಕ್ಷಣೆಯಲ್ಲೂ ಚಾಕಚಕ್ಯತೆ ಮೆರೆದ ಭಾರತದ ಬಾಕ್ಸರ್, ರಿಂಗ್‌ನಲ್ಲಿ ಸಲೀಸಾಗಿ ಅತ್ತಿತ್ತ ಚಲಿಸಿ ಎದುರಾಳಿಗೆ ಪಂಚ್ ನೀಡಲು ಅವಕಾಶವನ್ನೇ ಕೊಡದೆ ಸುಲಭ ಜಯ ಪಡೆದರು.

28 ವರ್ಷದ ಥಾಪಾ ಭಾನುವಾರ ನಡೆಯಲಿರುವ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಸ್ಕಾಟ್ಲೆಂಡ್‌ನ ರೀಸ್ ಲಿಂಚ್ ವಿರುದ್ಧ ಪೈಪೋಟಿ ನಡೆಸುವರು. ಥಾಪಾ ಅವರು ಈ ಹಿಂದೆ ಒಮ್ಮೆ ಮಾತ್ರ ಕಾಮನ್‌ವೆಲ್ತ್ ಕೂಟದಲ್ಲಿ ಪಾಲ್ಗೊಂಡಿದ್ದರು. 2014ರ ಗ್ಲಾಸ್ಗೊ ಗೇಮ್ಸ್‌ನಲ್ಲಿ ಸ್ಪರ್ಧಿಸಿದ್ದ ಅವರು ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಸೋತಿದ್ದರು.

ಕಳೆದ ಸಲ ಗೋಲ್ಡ್‌ಕೋಸ್ಟ್‌ನಲ್ಲಿ ನಡೆದಿದ್ದ ಕೂಟದಲ್ಲಿ ಭಾರತವು ಬಾಕ್ಸಿಂಗ್‌ನಲ್ಲಿ ತಲಾ ಮೂರು ಚಿನ್ನ, ಬೆಳ್ಳಿ ಹಾಗೂ ಕಂಚು ಜಯಿಸಿತ್ತು. ಆ ಸಾಧನೆಯನ್ನು ಮೀರುವ ವಿಶ್ವಾಸದಲ್ಲಿ ಭಾರತದ ಬಾಕ್ಸರ್‌ಗಳು ಇದ್ದಾರೆ. ಹಾಲಿ ವಿಶ್ವ ಚಾಂಪಿಯನ್ ನಿಖತ್ ಜರೀನ್, ಒಲಿಂಪಿಕ್ ಪದಕ ವಿಜೇತೆ ಲವ್ಲಿನಾ ಬೊರ್ಗೊಹೈನ್ ಮತ್ತು ವಿಶ್ವ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತರಾದ ಅಮಿತ್ ಪಂಘಾಲ್ ಅವರು ಪದಕದ ಭರವಸೆ ಎನಿಸಿಕೊಂಡಿದ್ದಾರೆ.

ಭಾರತದ ಶಿವ ಥಾಪಾ ಅವರು ಪಾಕಿಸ್ತಾನದ ಸುಲೆಮಾನ್ ಬಲೋಚ್‌ಗೆ ಪಂಚ್ ನೀಡಿದರು –ಪಿಟಿಐ ಚಿತ್ರ

ಫೈನಲ್ಸ್ ತಲುಪದ ಸೈಕ್ಲಿಸ್ಟ್‌ಗಳು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಸೈಕ್ಲಿಂಗ್ ಪಟುಗಳು ಕೂಟದ ಮೊದಲ ದಿನವಾದ ಶುಕ್ರವಾರ ನಿರಾಸೆ ಮೂಡಿಸಿದರು. ಯಾವ ವಿಭಾಗದಲ್ಲೂ ತಂಡಗಳು ಫೈನಲ್ಸ್ ತಲುಪಲಿಲ್ಲ. ಅರ್ಹತಾ ಸುತ್ತಿನಲ್ಲೇ ನಿರಾಸೆ ಅನುಭವಿಸಿದವು.

ರೊನಾಲ್ಡೊ ಲೈತೊಂಜಮ್, ವೈ. ರೋಜಿತ್ ಸಿಂಗ್ ಮತ್ತು ಡೇವಿಡ್ ಬೆಕಮ್ ಎಲ್ಕಾತೊಚೂಂಗೊ ಅವರನ್ನೊಳಗೊಂಡ ಭಾರತದ ಪುರುಷರ ಸ್ಪ್ರಿಂಟ್ ತಂಡವು ಅರ್ಹತಾ ಸುತ್ತಿನಲ್ಲಿ ಆರನೇ ಸ್ಥಾನ (44.702 ಸೆಕೆಂಡು) ಗಳಿಸಿತು.

ಮೊದಲ ಎರಡು ಸ್ಥಾನ ಗಳಿಸಿದ ತಂಡಗಳು ಚಿನ್ನದ ಪದಕಕ್ಕಾಗಿ ಪೈಪೋಟಿ ನಡೆಸಲಿವೆ. ಭಾರತದ ಮಹಿಳೆಯರ ತಂಡವೂ 51.433 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಏಳನೇ ಸ್ಥಾನ ಗಳಿಸಿತು. ಈ ತಂಡದಲ್ಲಿ ಶುಶಿಕಲಾ ಅಗಸೆ, ತ್ರಿಯಾಶಾ ಪೌಲ್ ಮತ್ತು ಮಯೂರಿ ಲೂಟೆ ಇದ್ದರು.

ಭಾರತದ ಪುರುಷರ 4,000 ಮೀಟರ್ಸ್ ಪರ್ಸ್ಯೂಟ್ ತಂಡ ಕೂಡ ಆರನೇ ಸ್ಥಾನ (ಒಟ್ಟು ಸಮಯ: 4 ನಿ. 12.865 ಸೆ.) ಗಳಿಸಿತು.

ಈ ತಂಡದಲ್ಲಿ ಕರ್ನಾಟಕದ ವೆಂಕಪ್ಪ ಕೆಂಗಲಗುತ್ತಿ, ದಿನೇಶ್ ಕುಮಾರ್ ಮತ್ತು ವಿಶ್ವಜೀತ್ ಸಿಂಗ್ ಇದ್ದರು.

ಕ್ರಿಕೆಟ್: ಹರ್ಮನ್‌ಪ್ರೀತ್ ಅರ್ಧಶತಕ ವ್ಯರ್ಥ; ಆಸ್ಟ್ರೇಲಿಯಾ ಶುಭಾರಂಭ

ಭಾರತದ ಜಯಕ್ಕೆ ಗಾರ್ಡನರ್ ಅಡ್ಡಿ

ಎಜ್‌ಬಾಸ್ಟನ್, ಬರ್ಮಿಂಗ್‌ಹ್ಯಾಮ್: ಆರನೇ ಕ್ರಮಾಂಕದ ಬ್ಯಾಟರ್ ಆ್ಯಷ್ಲೆ ಗಾರ್ಡನರ್ ಅಬ್ಬರದ ಆಟದ ಬಲದಿಂದ ಆಸ್ಟ್ರೇಲಿಯಾ ತಂಡವು ಕಾಮನ್‌ವೆಲ್ತ್ ಕೂಟದ ಮಹಿಳಾ ಟಿ20 ಕ್ರಿಕೆಟ್‌ನಲ್ಲಿ ಶುಭಾರಂಭ ಮಾಡಿತು.

155 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಆಸ್ಟ್ರೇಲಿಯಾ ತಂಡವು 49ಕ್ಕೆ5 ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟದಲ್ಲಿತ್ತು. ಭಾರತದ ಮಧ್ಯಮವೇಗಿ ರೇಣುಕಾಸಿಂಗ್ (18ಕ್ಕೆ4) ದಾಳಿಗೆ ತತ್ತರಿಸಿತ್ತು. ಆದರೆ, ಈ ಹಂತದಲ್ಲಿ ಜೊತೆಗೂಡಿದ ಗಾರ್ಡನರ್ (ಅಜೇಯ 52; 35ಎ, 4X9) ಎರಡು ಮಹತ್ವದ ಜೊತೆಯಾಟಗಳ ಮೂಲಕ ತಂಡವನ್ನು 3 ವಿಕೆಟ್‌ಗಳ ವಿಜಯದತ್ತ ಮುನ್ನಡೆಸಿದರು. ಭಾರತದ ಕೈಯಿಂದ ಗೆಲುವನ್ನು ಕಿತ್ತುಕೊಂಡರು.

ಗಾರ್ಡನರ್ ಮತ್ತು ಗ್ರೇಸ್ ಹ್ಯಾರಿಸ್ (37;20ಎ,4X5, 6X2) ಆರನೇ ವಿಕೆಟ್ ಜೊತೆಯಾಟದಲ್ಲಿ 51 ರನ್‌ಗಳನ್ನು ಸೇರಿಸಿದರು. ಗಾರ್ಡನರ್ ಮತ್ತು ಅಲನಾ ಕಿಂಗ್ (ಅಜೇಯ 18) ಮುರಿಯದ ಎಂಟನೇ ವಿಕೆಟ್‌ಗೆ 47 ರನ್ ಸೇರಿಸಿ ಜಯಭೇರಿ ಬಾರಿಸಿದರು. ಇದರಿಂದಾಗಿ ತಂಡವು 19 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 157 ರನ್ ಗಳಿಸಿತು.

ಶಫಾಲಿ–ಹರ್ಮನ್ ಆಟ: ಟಾಸ್ ಗೆದ್ದ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಮಂದಾನ (24; 17ಎ) ಮತ್ತು ಶಫಾಲಿ (48;33ಎ, 4X9) ಉತ್ತಮ ಆರಂಭ ನೀಡಿದರು. ಆದರೆ ತಂಡದ ಮೊತ್ತವು ನೂರರ ಗಡಿ ದಾಟುವ ಮುನ್ನವೇ ಮೂರು ವಿಕೆಟ್‌ಗಳು ಪತನವಾದವು. ಈ ಹಂತದಲ್ಲಿ ಏಕಾಂಗಿ ಹೋರಾಟ ನಡೆಸಿದ ಹರ್ಮನ್‌ಪ್ರೀತ್ (52; 34ಎ, 4X8, 6X1) ಗಳಿಸಿದ ಅರ್ಧಶತಕದ ಬಲದಿಂದ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 154 ರನ್ ಗಳಿಸಲು ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 8ಕ್ಕೆ154 (ಸ್ಮೃತಿ ಮಂದಾನ 24, ಶಫಾಲಿ ವರ್ಮಾ 48, ಹರ್ಮನ್‌ಪ್ರೀತ್ ಕೌರ್ 52, ಮೆಗನ್ ಶುಟ್ 26ಕ್ಕೆ2, ಜಾನ್ಸನ್ 22ಕ್ಕೆ4), ಆಸ್ಟ್ರೇಲಿಯಾ: 19 ಓವರ್‌ಗಳಲ್ಲಿ 7ಕ್ಕೆ157 (ಆ್ಯಷ್ಲೆ ಗಾರ್ಡನರ್ ಅಜೇಯ 52, ಗ್ರೇಹ್ ಹ್ಯಾರಿಸ್ 37, ಅಲನಾ ಕಿಂಗ್ ಔಟಾಗದೆ 18, ರೇಣುಕಾ ಸಿಂಗ್ 18ಕ್ಕೆ4, ದೀಪ್ತಿ ಶರ್ಮಾ 24ಕ್ಕೆ2) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 3 ವಿಕೆಟ್‌ಗಳ ಜಯ.

ಶನಿವಾರದ ಪಂದ್ಯಗಳು: ನ್ಯೂಜಿಲೆಂಡ್–ದಕ್ಷಿಣ ಆಫ್ರಿಕಾ (ಮಧ್ಯಾಹ್ನ 3.30)

ಇಂಗ್ಲೆಂಡ್–ಶ್ರೀಲಂಕಾ (ರಾತ್ರಿ 10.30)

ಆಸ್ಟ್ರೇಲಿಯಾದ ಆ್ಯಷ್ಲೆ ಗಾರ್ಡನರ್ –ಎಎಫ್‌ಪಿ ಚಿತ್ರ

ಈಜು: ಸಜನ್ ಪ್ರಕಾಶ್, ಕುಶಾಗ್ರಗೆ ನಿರಾಸೆ

ಸೆಮಿಫೈನಲ್‌ಗೆ ಶ್ರೀಹರಿ ನಟರಾಜ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಶ್ರೀಹರಿ ನಟರಾಜ್ ಅವರು ಪುರುಷರ ವಿಭಾಗದ 100 ಮೀ. ಬ್ಯಾಕ್‌ಸ್ಟ್ರೋಕ್ ಈಜು ಸ್ಪರ್ಧೆಯಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದು, ಪದಕದ ಭರವಸೆ ಮೂಡಿಸಿದ್ದಾರೆ.

ಬೆಂಗಳೂರಿನ 21 ವರ್ಷದ ಈಜುಪಟು ಶುಕ್ರವಾರ ತಾವು ಪಾಲ್ಗೊಂಡ ಹೀಟ್ಸ್‌ನಲ್ಲಿ 54.68 ಸೆ.ಗಳೊಂದಿಗೆ ಮೂರನೇ ಸ್ಥಾನ ಹಾಗೂ ಒಟ್ಟಾರೆಯಾಗಿ ಐದನೇ ಸ್ಥಾನ ಪಡೆದು ಸೆಮಿಗೆ ಅರ್ಹತೆ ಗಿಟ್ಟಿಸಿಕೊಂಡರು.

ಶ್ರೀಹರಿ ತಮ್ಮ ವೈಯಕ್ತಿಕ ಶ್ರೇಷ್ಠ (53.77 ಸೆ.) ಸಮಯ ಕಂಡುಕೊಂಡಿದ್ದರೆ, ಇಲ್ಲಿ ಅಗ್ರಸ್ಥಾನ ಪಡೆದು ಸೆಮಿ ಪ್ರವೇಶಿಸುತ್ತಿದ್ದರು. ಹೀಟ್ಸ್‌ನಲ್ಲಿ ದಕ್ಷಿಣ ಆಫ್ರಿಕಾದ ಪೀಟರ್ ಕೊಯೆಟ್ಜ್ (53.91 ಸೆ.) ಮೊದಲ ಸ್ಥಾನ ಪಡೆದರು.

ಆದರೆ ಸಜನ್ ಪ್ರಕಾಶ್ ಮತ್ತು ಕುಶಾಗ್ರ ರಾವತ್ ಅವರು ತಮ್ಮ ಸ್ಪರ್ಧೆಗಳಲ್ಲಿ ಸೆಮಿಫೈನಲ್ ಪ್ರವೇಶಿಸಲು ವಿಫಲರಾದರು.

ಶ್ರೀಹರಿ ನಟರಾಜನ್

ಪುರುಷರ 50 ಮೀ. ಬಟರ್‌ಫ್ಲೈ ಸ್ಪರ್ಧೆಯ ಹೀಟ್ಸ್‌ನಲ್ಲಿ ಸಜನ್ 25.01 ಸೆ.ಗಳೊಂದಿಗೆ ಎಂಟನೇ ಸ್ಥಾನ ಪಡೆದರು.

ಪುರುಷರ 400 ಮೀ. ಫ್ರೀಸ್ಟೈಲ್‌ನಲ್ಲಿ ಕಣಕ್ಕಿಳಿದ ಕುಶಾಗ್ರ ಹೀಟ್ಸ್‌ನಲ್ಲಿ 3 ನಿ. 57.45 ಸೆ.ಗಳೊಂದಿಗೆ ಕೊನೆಯ ಸ್ಥಾನ ಗಳಿಸಿದರು.

ಸಜನ್ ಅವರು ಪುರುಷರ 100 ಮೀ. ಮತ್ತು 200 ಮೀ. ಬಟರ್‌ಫ್ಲೈ ಹಾಗೂ ಕುಶಾಗ್ರ ಅವರು ಪುರುಷರ 1,500 ಮೀ. ಫ್ರೀಸ್ಟೈಲ್ ಮತ್ತು 200 ಮೀ. ಫ್ರೀಸ್ಟೈಲ್ ಸ್ಪರ್ಧೆಗಳಲ್ಲೂ ಪಾಲ್ಗೊಳ್ಳಲಿದ್ದಾರೆ.

ಭಾರತೀಯರ ಇಂದಿನ ಸ್ಪರ್ಧೆಗಳು

ಅಥ್ಲೆಟಿಕ್ಸ್
ನಿತೇಂದ್ರ ರಾವತ್ (ಪುರುಷರ ಮ್ಯಾರಥಾನ್) (ಮಧ್ಯಾಹ್ನ **1.30**ರಿಂದ)

ಮಹಿಳಾ ಹಾಕಿ
ಭಾರತ ಮತ್ತು ವೇಲ್ಸ್ (ರಾತ್ರಿ **11.30**ರಿಂದ)

ಸ್ಕ್ವಾಷ್
ಮಹಿಳಾ ಸಿಂಗಲ್ಸ್ ಮತ್ತು ಪುರುಷರ ಸಿಂಗಲ್ಸ್ ಎರಡನೇ ಸುತ್ತಿನ ಪಂದ್ಯಗಳು (ಸಂಜೆ **5**ರಿಂದ)

ವೇಟ್‌ಲಿಫ್ಟಿಂಗ್ (ಫೈನಲ್ ಬೌಟ್‌ಗಳು)
ಮೀರಾಬಾಯಿ ಚಾನು, ಸಂಕೇತ್ ಮಹಾದೇವ್, ಚನಂಬಮ್ ರಿಷಿಕಾಂತ್ ಸಿಂಗ್ (ಮಧ್ಯಾಹ್ನ **1.30**ರಿಂದ)

ಟೇಬಲ್ ಟೆನಿಸ್
ಪುರುಷ ಮತ್ತು ಮಹಿಳೆಯರ ಮೂರನೇ ಸುತ್ತಿನ ಪಂದ್ಯಗಳು (ಮಧ್ಯಾಹ್ನ **2** ಗಂಟೆಯಿಂದ)

ಬಾಕ್ಸಿಂಗ್
ಪುರುಷರು: ಅಮಿತ್ ಪಂಘಲ್ (**51** ಕೆಜಿ), ಮೊಹಮ್ಮದ್ ಹುಸಾಮುದ್ದೀನ್ (**57** ಕೆಜಿ), ಶಿವ ಥಾಪಾ (**63** ಕೆಜಿ), ರೋಹಿತ್ ಟೋಕಾಸ್ (**67** ಕೆಜಿ), ಸುಮಿತ್ ಕುಂದು (**75** ಕೆಜಿ), ಆಶೀಶ್ ಚೌಧರಿ (**80** ಕೆಜಿ), ಸಂಜೀವ್ ಕುಮಾರ್ (**92** ಕೆಜಿ), ಸಾಗರ್ ಅಹ್ಲಾವತ್ (**92**+ ಕೆಜಿ), ಮಹಿಳೆಯರು: ನೀತು ಗಂಗಾಸ್ (**48** ಕೆಜಿ), ನಿಖತ್ ಜರೀನ್ (50 ಕೆಜಿ), ಜಾಸ್ಮೀನ್ ಲಂಬೋರಿಯಾ (**60** ಕೆಜಿ), ಲವ್ಲಿನಾ ಬೊರ್ಗೊಹೈನ್ (**70** ಕೆಜಿ) (ಸಂಜೆ **4.30**ರಿಂದ)

ಲಾನ್‌ಬಾಲ್ಸ್
ಪುರುಷ ಮತ್ತು ಮಹಿಳೆಯರ ಮೂರು ಮತ್ತು ನಾಲ್ಕನೇ ಸುತ್ತಿನ ಪಂದ್ಯಗಳು (ಮಧ್ಯಾಹ್ನ **1** ಗಂಟೆಯಿಂದ)

ಈಜು
ಪುರುಷರ **200** ಮೀ. ಫ್ರೀಸ್ಟೈಲ್ ಹೀಟ್ 3 ಕುಶಾಗ್ರ ರಾವತ್) (ಮಧ್ಯಾಹ್ನ **3.06**ರಿಂದ)

ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್
ಎಲ್ಲ ಸ್ಪರ್ಧೆಗಳ ಸಮಯ: ಭಾರತೀಯ ಕಾಲಮಾನ



ಭಾರತದ ಕೆ. ಶ್ರೀಕಾಂತ್ ಆಟದ ವೈಖರಿ –ಪಿಟಿಐ ಚಿತ್ರ

ಬ್ಯಾಡ್ಮಿಂಟನ್: ಭಾರತಕ್ಕೆ ಮಣಿದ ಪಾಕಿಸ್ತಾನ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತ ಬ್ಯಾಡ್ಮಿಂಟನ್ ತಂಡವು ಕಾಮನ್‌ವೆಲ್ತ್ ಕೂಟದಲ್ಲಿ ಶುಕ್ರವಾರ ಶುಭಾರಂಭ ಮಾಡಿತು.

ಭಾರತ ತಂಡವು 3–0ಯಿಂದ ಪಾಕಿಸ್ತಾನ ವಿರುದ್ಧ ಸುಲಭವಾಗಿ ಜಯಿಸಿತು.

ಮಿಶ್ರ ಡಬಲ್ಸ್‌ನಲ್ಲಿ ಬಿ. ಸುಮಿತ್ ರೆಡ್ಡಿ ಮತ್ತು ಅಶ್ವಿನಿ ಪೊನ್ನಪ್ಪ ಜೋಡಿಯು 21–9, 21–12ರಿಂದ ಪಾಕ್ ತಂಡದ ಮೊಹಮ್ಮದ್ ಇರ್ಫಾನ್ ಸಯೀದ್ ಭಟ್ಟಿ ಮತ್ತು ಘಜಾಲಾ ಸಿದ್ಧಿಕಿ ವಿರುದ್ಧ ಜಯಿಸಿತು.

ಸಿಂಗಲ್ಸ್‌ನಲ್ಲಿ ಕೆ. ಶ್ರೀಕಾಂತ್ ತಮ್ಮ ಪಾರಮ್ಯ ಮೆರೆದರು. 21–7, 21–12ರಿಂದ ಮುರಾದ್ ಅಲಿ ವಿರುದ್ಧ ಗೆದ್ದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಒಲಿಂಪಿಯನ್ ಪಿ.ವಿ. ಸಿಂಧು 21–7, 21–6ರಿಂದ ಪಾಕ್ ತಂಡದ ಮಹೂರ್ ಶಹಜಾದ್ ವಿರುದ್ಧ ಪಾರಮ್ಯ ಮೆರೆದರು.

ಇಂಗ್ಲೆಂಡ್‌ನ ಅಲೆಕ್ಸ್‌ಗೆ ಮೊದಲ ಚಿನ್ನ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಇಂಗ್ಲೆಂಡ್‌ನ ಅಲೆಕ್ಸ್ ಯೀ ಅವರು ಈ ಬಾರಿಯ ಕಾಮನ್‌ವೆಲ್ತ್ ಕೂಟದಲ್ಲಿ ಚಿನ್ನದ ಪದಕ ಗೆದ್ದ ಮೊದಲ ಕ್ರೀಡಾಪಟು ಎಂಬ ಗೌರವ ತಮ್ಮದಾಗಿಸಿಕೊಂಡರು.

ಗುರುವಾರ ನಡೆದ ಪುರುಷರ ಟ್ರಯಥ್ಲಾನ್ ಸ್ಪರ್ಧೆಯನ್ನು ಗೆದ್ದು ಅವರು ಈ ಸಾಧನೆ ಮಾಡಿದರು. ಟ್ರಯಥ್ಲಾನ್‌ನ ಮೂರು ಸ್ಪರ್ಧೆಗಳನ್ನು (750 ಮೀ. ಈಜು, 20 ಕಿ.ಮೀ. ಸೈಕ್ಲಿಂಗ್ ಮತ್ತು 5 ಕಿ.ಮೀ ಓಟ) 50 ನಿಮಿಷ 34 ಸೆ.ಗಳಲ್ಲಿ ಕ್ರಮಿಸಿ ಮೊದಲ ಸ್ಥಾನ ಪಡೆದರು.

ನ್ಯೂಜಿಲೆಂಡ್‌ನ ಹೇಡನ್ ವಿಲ್ಡ್ (50 ನಿ. 47 ಸೆ.) ಬೆಳ್ಳಿ ಗೆದ್ದರೆ, ಆಸ್ಟ್ರೇಲಿಯಾದ ಮ್ಯಾಥ್ಯು ಹೌಸೆರ್ (50 ನಿ. 50 ಸೆ.) ಕಂಚು ಪಡೆದರು.

ಈಜು ಮತ್ತು ಸೈಕ್ಲಿಂಗ್ ಸ್ಪರ್ಧೆಗಳ ಬಳಿಕ ವಿಲ್ಡ್ ಮೊದಲ ಸ್ಥಾನದಲ್ಲಿದ್ದರೆ, ಯೀ ಎರಡನೇ ಸ್ಥಾನದಲ್ಲಿದ್ದರು. ಆದರೆ ಓಟದಲ್ಲಿ ಉತ್ತಮ ಸಾಮರ್ಥ್ಯ ತೋರಿದ ಇಂಗ್ಲೆಂಡ್‌ನ ಕ್ರೀಡಾಪಟು ಚಿನ್ನಕ್ಕೆ ಕೊರಳೊಡ್ಡಿದರು.

ಚೆಸ್ ಒಲಿಂಪಿಯಾಡ್: ಜಿಂಬಾಬ್ವೆ ವಿರುದ್ಧ 'ಎ' ತಂಡಕ್ಕೆ ಜಯ

ಭಾರತ ತಂಡಗಳ ಶುಭಾರಂಭ

ಮಾಮಲ್ಲಪುರಂ (ಪಿಟಿಐ): ಭಾರತದ ತಂಡಗಳು 44ನೇ ಚೆಸ್ ಒಲಿಂಪಿಯಾಡ್‌ನ ಮುಕ್ತ ಹಾಗೂ ಮಹಿಳೆಯರ ವಿಭಾಗಗಳಲ್ಲಿ ಮೊದಲ ಸುತ್ತಿನಲ್ಲಿ ಗೆದ್ದು ಶುಭಾರಂಭ ಮಾಡಿದವು.

ಮುಕ್ತ ವಿಭಾಗದಲ್ಲಿ ಭಾರತ 'ಎ', 'ಬಿ' ಮತ್ತು 'ಸಿ' ತಂಡಗಳು ಕ್ರಮವಾಗಿ ಜಿಂಬಾಬ್ವೆ, ಯುಎಇ ಹಾಗೂ ದಕ್ಷಿಣ ಸುಡಾನ್ ತಂಡಗಳ ಎದುರು ಜಯಿಸಿದವು.

'ಎ' ತಂಡದಲ್ಲಿ ಕಣಕ್ಕಿಳಿದ ಅರ್ಜುನ್ ಎರಿಗೈಸಿ ಮತ್ತು ಕೆ.ಶಶಿಕಿರಣ್ ಅವರು ಕಪ್ಪು ಕಾಯಿಗಳೊಂದಿಗೆ ಆಡಿ ಜಿಂಬಾಬ್ವೆಯ ಮಸಂಗೊ ಸ್ಪೆನ್ಸರ್ ಹಾಗೂ ಜೆಂಬಾ ಜೆಮುಸೆ ಅವರನ್ನು ಮಣಿಸಿದರು.

ಬಿಳಿ ಕಾಯಿಗಳೊಂದಿಗೆ ಆಡಿದ ವಿದಿತ್ ಗುಜರಾತಿ ಮತ್ತು ಎಸ್.ಎಲ್. ನಾರಾಯಣನ್ ಅವರು ಮಕೊಟೊ ರಾಡ್‌ವೆಲ್ ಹಾಗೂ ಮಶೋರ್ ಎಮರಾಲ್ಡ್ ವಿರುದ್ಧ ಗೆದ್ದರು.

ಮಹಿಳೆಯರ ವಿಭಾಗದಲ್ಲಿ ಅಗ್ರಶ್ರೇಯಾಂಕ ಹೊಂದಿರುವ ಭಾರತ 'ಎ' ತಂಡ 3–0 ರಲ್ಲಿ ತಜಿಕಿಸ್ತಾನ ತಂಡವನ್ನು ಮಣಿಸಿತು. ಟಾಪ್ ಬೋರ್ಡ್‌ನಲ್ಲಿ ಆಡಿದ ಕೊನೇರು ಹಂಪಿ ಅಲ್ಲದೆ ಆರ್.ವೈಶಾಲಿ ಮತ್ತು ಭಕ್ತಿ ಕುಲಕರ್ಣಿ ಅವರು ತಮ್ಮ ಎದುರಾಳಿಗಳ ವಿರುದ್ಧ ಗೆದ್ದರು.

ಭಾರತ 'ಬಿ' ತಂಡ ವೇಲ್ಸ್ ವಿರುದ್ಧ ಗೆದ್ದಿತು. 'ಸಿ' ತಂಡವೂ ಮೊದಲ ಸುತ್ತಿನಲ್ಲಿ ಗೆಲುವಿನ ನಗು ಬೀರಿತು.

ಕ್ರೀಡಾ ಸಚಿವರಿಂದ ಚಾಲನೆ: ಭಾರತದಲ್ಲಿ ಇದೇ ಮೊದಲ ಬಾರಿಗೆ ಆಯೋಜಿಸಿರುವ ಚೆಸ್ ಒಲಿಂಪಿಯಾಡ್‌ನ ಮೊದಲ ಸುತ್ತಿನ ಪಂದ್ಯಗಳಿಗೆ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರು, ವಿದಿತ್ ಗುಜರಾತಿ ಅವರೊಂದಿಗೆ ಚೆಸ್ ಆಡುವ ಮೂಲಕ ಚಾಲನೆ ನೀಡಿದರು.

ಐದು ಬಾರಿಯ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್, ಅಂತರರಾಷ್ಟ್ರೀಯ ಚೆಸ್ ಸಂಸ್ಥೆ (ಫಿಡೆ) ಅರ್ಕೆದಿ ದೊರ್ಕೊವಿಚ್, ಅಖಿಲ ಭಾರತ ಚೆಸ್ ಫೆಡರೇಷನ್ ಅಧ್ಯಕ್ಷ ಸಂಜಯ್ ಕಪೂರ್ ಪಾಲ್ಗೊಂಡಿದ್ದರು.

ಮೊದಲ ಸುತ್ತಿನ ಪಂದ್ಯದಲ್ಲಿ ತಲ್ಲೀನರಾದ ಸ್ಪರ್ಧಿಗಳು — ಪಿಟಿಐ ಚಿತ್ರ

ಪುಟ್ಟ ಬಾಲೆಯ ಮಿಂಚು

ಬೆಂಗಳೂರು: ಮಹಾಬಲಿಪುರಂನಲ್ಲಿ ನಡೆಯುತ್ತಿರುವ ಚೆಸ್ ಒಲಿಂಪಿಯಾಡ್‌ನಲ್ಲಿ ಸ್ಪರ್ಧಿಸಿರುವ ಎಂಟು ವರ್ಷದ ಬಾಲೆ ರಾಂದಾ ಸೆದೆರ್ ಎಲ್ಲರ ಗಮನ ಸೆಳೆಯುತ್ತಿದ್ದಾಳೆ.

ಈ ಒಲಿಂಪಿಯಾಡ್‌ನಲ್ಲಿ ಭಾಗವಹಿಸಿರುವ ಅತಿ ಕಿರಿಯ ವಯಸ್ಸಿನ ಸ್ಪರ್ಧಿ ರಾಂದಾ. ಸದಾ ಸಂಘರ್ಷಗಳನ್ನು ಎದುರಿಸುತ್ತಿರುವ ಪ್ಯಾಲೆಸ್ಟೈನ್ ದೇಶದ ಹೆಬ್ರಾನ್‌ನಿಂದ ಬಂದಿರುವ ಆಟಗಾರ್ತಿ.

ಅಂತರರಾಷ್ಟ್ರೀಯ ಚೆಸ್ ಫೆಡರೇಷನ್ (ಫಿಡೆ) ಈ ಹುಡುಗಿಯ ಕುರಿತು ಮಾಡಿರುವ ಟ್ವೀಟ್ ಈಗ ಸಾಮಾಜಿಕ ಜಾಲತಾಣಗಳಲ್ಲಿ ಅಪಾರ ಜನಾಕರ್ಷಣೆ ಗಳಿಸುತ್ತಿದೆ.

ರಾಂದಾ ಸೆದೆರ್

ರಾಂದಾ ಐದು ವರ್ಷದವಳಿದ್ದಾಗ ತಂದೆ ಚೆಸ್ ಕಲಿಸಲು ಆರಂಭಿಸಿದ್ದರು. ಅಲ್ಪಾವಧಿಯಲ್ಲಿಯೇ ಒಲಿಂಪಿಯಾಡ್‌ನಲ್ಲಿ ಆಡುವ ಮಟ್ಟಕ್ಕೆ ಈ ಬಾಲೆ ಬೆಳೆದಿದ್ದಾಳೆ ಎಂದೂ ಫಿಡೆ ಟ್ವಿಟರ್‌ನಲ್ಲಿ ಬರೆದಿದೆ. ಇದಕ್ಕೂ ಮುನ್ನ ರಾಂದಾ ಹಲವು ಪ್ರಮುಖ ಟೂರ್ನಿಗಳಲ್ಲಿ ಆಡಿದ್ದಾಳೆ. ಪ್ಯಾಲೆಸ್ಟೈನ್ ಮಹಿಳೆಯರ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಸ್ಥಾನ ಗಳಿಸಿದ್ದಳು. ರಾಂದಾಗೆ ಗ್ರ್ಯಾಂಡ್‌ಮಾಸ್ಟರ್ ಆಗುವ ಗುರಿ ಇದೆ. ಅಲ್ಲದೇ ತನ್ನ ನೆಚ್ಚಿನ ಆಟಗಾರ್ತಿಯಾಗಿರುವ ಜುಡಿತ್ ಪೊಲ್ಗಾರ್ ಅವರನ್ನು ಭೇಟಿಯಾಗುವ ಇಚ್ಛೆಯನ್ನೂ ರಾಂದಾ ವ್ಯಕ್ತಪಡಿಸಿದ್ದಾಳೆ.

ಈ ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಜುಡಿತ್, 'ರಾಂದಾ ಸಾಧನೆಯನ್ನು ನಿರಂತರವಾಗಿ ನೋಡುತ್ತಿರುತ್ತೇನೆ. ಈ ಒಲಿಂಪಿಯಾಡ್‌ನಲ್ಲಿ ಆಕೆ ಯಾವುದೇ ಪಂದ್ಯದಲ್ಲಿ ಜಯಿಸಿದರೂ ಸ್ಟುಡಿಯೊಗೆ ಕರೆದು ಸಂದರ್ಶನ ಮಾಡುವೆ' ಎಂದಿದ್ದಾರೆ. ಈ ಒಲಿಂಪಿಯಾಡ್‌ನಲ್ಲಿ ಜುಡಿತ್ ಟಿವಿ ವೀಕ್ಷಕ ವಿವರಣೆಗಾರರಾಗಿದ್ದಾರೆ.

ರೋಹಿತ್, ದಿನೇಶ್ ಅಬ್ಬರ

ಟಿ20: ವಿಂಡೀಸ್ ವಿರುದ್ಧ ಭಾರತಕ್ಕೆ 68 ರನ್ ಗೆಲುವು

ಟ್ರಿನಿಡಾಡ್ (ಪಿಟಿಐ): ಇನಿಂಗ್ಸ್ ಆರಂಭದಲ್ಲಿ ನಾಯಕ ರೋಹಿತ್ ಶರ್ಮಾ ಹಾಗೂ ಕೊನೆಯಲ್ಲಿ ದಿನೇಶ್ ಕಾರ್ತಿಕ್ ಅಬ್ಬರದ ಆಟಕ್ಕೆ ವೆಸ್ಟ್ ಇಂಡೀಸ್ ತಂಡದ ಬೌಲರ್‌ಗಳು ಬಸವಳಿದರು.

ಇವರಿಬ್ಬರ ಮಿಂಚಿನ ಬ್ಯಾಟಿಂಗ್ ಬಲದಿಂದ ಭಾರತ ತಂಡವು ಶುಕ್ರವಾರ ಇಲ್ಲಿ ನಡೆದ ಮೊದಲ ಟಿ20 ಪಂದ್ಯವನ್ನು 68 ರನ್‌ಗಳಿಂದ ಗೆದ್ದಿತು. ಐದು ಪಂದ್ಯಗಳ ಸರಣಿಯಲ್ಲಿ 1–0 ರಲ್ಲಿ ಮುನ್ನಡೆ ಗಳಿಸಿತು.

ಮೊದಲು ಬ್ಯಾಟ್ ಮಾಡಿದ ಭಾರತ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 190 ರನ್ ಗಳಿಸಿದರೆ, ವಿಂಡೀಸ್ ನಿಗದಿತ ಓವರ್‌ಗಳಲ್ಲಿ 8 ವಿಕೆಟ್‌ಗೆ 122 ರನ್ ಗಳಿಸಿತು. ಆತಿಥೇಯ ತಂಡದ ಶಮರ್ ಬ್ರೂಕ್ಸ್ (20) ಗರಿಷ್ಠ ಸ್ಕೋರರ್ ಎನಿಸಿದರು. ಅರ್ಶ್‌ದೀಪ್ ಸಿಂಗ್, ಆರ್. ಅಶ್ವಿನ್ ಮತ್ತು ರವಿ ಬಿಷ್ಣೋಯ್ ತಲಾ ಎರಡು ವಿಕೆಟ್ ಪಡೆದರು.

ರೋಹಿತ್ ಮಿಂಚು: ಟಾಸ್ ಗೆದ್ದ ವೆಸ್ಟ್ ಇಂಡೀಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರೋಹಿತ್ (64; 44ಎ,4X7, 6X2) ಅರ್ಧಶತಕ ಬಾರಿಸಿ ಉತ್ತಮ ಆರಂಭ ನೀಡಿದರು. ಕೊನೆಯ ಹಂತದ ಓವರ್‌ಗಳಲ್ಲಿ ಮತ್ತೊಮ್ಮೆ ತಮ್ಮ ಸಾಮರ್ಥ್ಯ ಮೆರೆದ ಅನುಭವಿ ದಿನೇಶ್ (ಔಟಾಗದೆ 41, 19ಎಸೆತ, 4X4, 6X2) ತಂಡದ ಮೊತ್ತವನ್ನು ಹೆಚ್ಚಿಸಿ ದರು. ಮುರಿಯದ ಏಳನೇ ವಿಕೆಟ್ ಜೊತೆಯಾಟದಲ್ಲಿ ದಿನೇಶ್ ಮತ್ತು ಆರ್. ಅಶ್ವಿನ್ (ಔಟಾಗದೆ 13) ಅವರು 52 ರನ್ ಸೇರಿಸಿದರು. ಕೊನೆಯ 18 ಎಸೆತಗಳಲ್ಲಿ ಈ ರನ್‌ಗಳು ಸೇರಿದವು.

ರೋಹಿತ್ ಅವರೊಂದಿಗೆ ಸೂರ್ಯಕುಮಾರ್ ಯಾದವ್ ಇನಿಂಗ್ಸ್ ಆರಂಭಿಸಿದರು. ಇಬ್ಬರೂ ಮೊದಲ ವಿಕೆಟ್ ಜೊತೆಯಾಟದಲ್ಲಿ 4.3 ಓವರ್‌ಗಳಲ್ಲಿ 44 ರನ್ ಗಳಿಸಿದರು. ಮೂರನೇ ಓವರ್‌ನಲ್ಲಿ ಸೂರ್ಯ ಕುಮಾರ್‌ಗೆ ಒಂದು ಜೀವದಾನ ಕೂಡ ಸಿಕ್ಕಿತು. ಆದರೆ ಐದನೇ ಓವರ್‌ನಲ್ಲಿ ಅಕೇಲ್ ಹುಸೇನ್ ಎಸೆತದಲ್ಲಿ ಸೂರ್ಯ ಔಟಾದರು. ಕ್ರೀಸ್‌ಗೆ ಬಂದ ಶ್ರೇಯಸ್ ಅಯ್ಯರ್ ಖಾತೆ ತೆರೆಯದೇ ಔಟಾದರು.

ರಿಷಭ್ (14 ರನ್) ಮತ್ತು ಹಾರ್ದಿಕ್ ಪಾಂಡ್ಯ (1) ಕೂಡ ನಿರೀಕ್ಷೆ ಹುಸಿಗೊಳಿಸಿದರು. ಇದೆಲ್ಲದರ ನಡುವೆ ರೋಹಿತ್ ಏಕಾಂಗಿ ಹೋರಾಟ ಮಾಡಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 6ಕ್ಕೆ190 (ರೋಹಿತ್ ಶರ್ಮಾ 64, ಸೂರ್ಯಕುಮಾರ್ ಯಾದವ್ 24, ರಿಷಭ್ ಪಂತ್ 14, ರವೀಂದ್ರ ಜಡೇಜ 16, ದಿನೇಶ್ ಕಾರ್ತಿಕ್ ಔಟಾಗದೆ 41, ಆರ್. ಅಶ್ವಿನ್ ಔಟಾಗದೆ 13, ಅಲ್ಜರಿ ಜೋಸೆಫ್ 46ಕ್ಕೆ2, ಅಕೆಲ್ ಹುಸೇನ್ 14ಕ್ಕೆ1)
ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 122 (ಶಮರ್ ಬ್ರೂಕ್ಸ್ 20, ನಿಕೊಲಸ್ ಪೂರನ್ 18, ಕೀಮೊ ಪೌಲ್ ಔಟಾಗದೆ 19, ಅರ್ಶ್‌ದೀಪ್ ಸಿಂಗ್ 24ಕ್ಕೆ 2, ಆರ್.ಅಶ್ವಿನ್ 22ಕ್ಕೆ 2, ರವಿ ಬಿಷ್ಣೋಯ್ 26ಕ್ಕೆ 2) ಫಲಿತಾಂಶ: ಭಾರತಕ್ಕೆ 68 ರನ್ ಗೆಲುವು

ದಿನೇಶ್ ಕಾರ್ತಿಕ್ ಬ್ಯಾಟಿಂಗ್ ಸೊಬಗು—ಎಎಫ್‌ಪಿ ಚಿತ್ರ

ಆಸ್ಟ್ರೇಲಿಯಾ ತಂಡ ತೊರೆದ ಶ್ರೀಧರನ್

ಸಿಡ್ನಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಲ್‌ರೌಂಡರ್ ಶ್ರೀಧರನ್ ಶ್ರೀರಾಮ್ ಅವರು ಆಸ್ಟ್ರೇಲಿಯಾ ತಂಡದ ಸ್ಪಿನ್ ಬೌಲಿಂಗ್ ಕೋಚ್ ಸ್ಥಾನ ತೊರೆದಿದ್ದಾರೆ.

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿಆಡುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬೌಲಿಂಗ್ ಮತ್ತು ಫೀಲ್ಡಿಂಗ್ ಸಲಹೆಗಾರನಾಗಿ ಮುಂದುವರಿಯುವು-ದಾಗಿ ತಿಳಿಸಿದ್ದಾರೆ.

'ಆರು ವರ್ಷಗಳಿಂದ ಆಸ್ಟ್ರೇಲಿಯಾ ತಂಡದ ಸಹಾಯಕ ಕೋಚ್ ಆಗಿದ್ದೇನೆ. ಭಾರವಾದ ಹೃದಯದಿಂದ ಈ ತಂಡದಿಂದ ದೂರವಾಗುತ್ತಿದ್ದೇನೆ. ಒಳ್ಳೆಯ ಅನುಭವ, ನೆನಪುಗಳೊಂದಿಗೆ ತಾಯ್ನಾಡಿಗೆ ತೆರಳುತ್ತಿದ್ದೇನೆ'ಎಂದು ಶ್ರೀರಾಮ್ ಹೇಳಿದ್ದಾರೆ.

ಆಸ್ಟ್ರೇಲಿಯಾದ ಸ್ಪಿನ್ನರ್‌ಗಳಾದ ನೇಥನ್ ಲಯನ್, ಆ್ಯಡಂ ಜಂಪಾ, ಮಿಚೆಲ್ ಸ್ವೆಪ್ಸನ್, ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಮಾರ್ನಸ್ ಲಾಬುಷೇನ್ ಅವರಿಗೂ ಶ್ರೀಧರ್ ಮಾರ್ಗದರ್ಶನ ನೀಡಿದ್ದರು.

2016ರಲ್ಲಿ ಮುಖ್ಯ ಕೋಚ್ ಆಗಿದ್ದ ಡರೆನ್ ಲೆಹ್ಮನ್ ಅವರ ತಂಡದಲ್ಲಿ ಶ್ರೀಧರ್ ಕಾರ್ಯಾರಂಭ ಮಾಡಿದ್ದರು.

ಸ್ಟೇಡಿಯಂನಲ್ಲಿ ಗ್ರೆನೇಡ್ ಸ್ಫೋಟ

ಕಾಬೂಲ್: ಅಫ್ಗಾನಿಸ್ತಾನದ ಕಾಬೂಲ್‌ನ ಮುಖ್ಯ ಕ್ರಿಕೆಟ್ ಮೈದಾನದಲ್ಲಿ ಶುಕ್ರವಾರ ದೇಶೀಯ ಪಂದ್ಯ ನಡೆಯುತ್ತಿರುವಾಗ-ಲೇ ಗ್ರೆನೇಡ್ ಸ್ಫೋಟಗೊಂಡಿದ್ದು, ನಾಲ್ವರು ಗಾಯಗೊಂಡಿದ್ದಾರೆ ಎಂದು ಅಫ್ಗಾನಿಸ್ತಾನ ಕ್ರಿಕೆಟ್ ಮಂಡಳಿ (ಎಸಿಬಿ) ತಿಳಿಸಿದೆ.

ಮಹಾರಾಜ ಟ್ರೋಫಿಯೊಂದಿಗೆ ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್, ಶ್ರೀರಾಮ್ ಕ್ಯಾಪಿಟಲ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಡಿ.ವಿ. ರವಿ, ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ, ಶ್ರೀರಾಮ್ ಪ್ರಾಪರ್ಟೀಸ್ ಮುಖ್ಯಸ್ಥ ಎಂ. ಮುರಳಿ, ಖಜಾಂಚಿ ವಿನಯ್ ಮೃತ್ಯುಂಜಯ

ಮಹಾರಾಜ ಟ್ರೋಫಿಗೆ ಶ್ರೀರಾಮ್ ಸಮೂಹ ಪ್ರಾಯೋಜಕತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಆಯೋಜಿಸಲಿರುವ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಪ್ರಶಸ್ತಿಗೆ ಶ್ರೀರಾಮ್ ಸಮೂಹವು ಪ್ರಾಯೋಜಕತ್ವ ನೀಡಲಿದೆ.

ಮುಂದಿನ ಒಟ್ಟು ಮೂರು ಋತುಗಳಿಗೆ ಶ್ರೀರಾಮ್ ಸಮೂಹವು ಪ್ರಾಯೋಜಕತ್ವ ನೀಡಲಿದೆ. ಶುಕ್ರವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಈ ವಿಷಯ ಪ್ರಕಟಿಸಿದ ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ ಅವರು ಶ್ರೀರಾಮ್ ಸಮೂಹವನ್ನು ಸ್ವಾಗತಿಸಿದರು.

ಈ ಟೂರ್ನಿಯು ಆಗಸ್ಟ್ 7ರಂದು ಮೈಸೂರಿನಲ್ಲಿ ಆರಂಭವಾಗಲಿದೆ. ಇಲ್ಲಿ 18 ಪಂದ್ಯಗಳು ನಡೆಯಲಿವೆ. ಎರಡನೇ ಹಂತದ ಪಂದ್ಯಗಳು ಮತ್ತು ಫೈನಲ್ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂ-ಗಣದಲ್ಲಿ ನಡೆಯಲಿದೆ. ಒಟ್ಟು ಆರು ತಂಡಗಳು ಸ್ಪರ್ಧಿಸಲಿವೆ. ಈ ಹಿಂದೆ ನಡೆದಿದ್ದ ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್) ಟೂರ್ನಿಯು ಸ್ಥಗಿತ-ವಾಗಿದ್ದು, ಅದೇ ಮಾದರಿಯಲ್ಲಿ ನೂತನ ಟೂರ್ನಿ ಆರಂಭವಾಗುತ್ತಿದೆ. ಆದರೆ, ಕೆಪಿಎಲ್ ಫ್ರ್ಯಾಂಚೈಸಿ ಲೀಗ್ ಆಗಿತ್ತು. ಮಹಾರಾಜ ಟ್ರೋಫಿ ಟೂರ್ನಿಯು ಫ್ರ್ಯಾಂಚೈಸಿ ಲೀಗ್ ಅಲ್ಲ. ಪ್ರಾಯೋಜಕ-ತ್ವದ ಮಾದರಿಯದ್ದಾಗಿದೆ.

ಶ್ರೀರಾಮ್ ಪ್ರಾಪರ್ಟೀಸ್ ಮುಖ್ಯಸ್ಥ ಹಾಗೂ ಆಡಳಿತ ನಿರ್ದೇಶಕ ಎಂ. ಮುರಳಿ, ನಿರ್ದೇಶಕ ಡಿ.ವಿ. ರವಿ, ಕೆಎಸ್ ಸಿಎ ಕಾರ್ಯದರ್ಶಿ ಸಂತೋಷ್ ಮೆನನ್, ಖಜಾಂಚಿ ವಿನಯ್ ಮೃತ್ಯುಂಜಯ ಮತ್ತಿತರರು ಹಾಜರಿ ದ್ದರು.

ಐಒಎ- ರಿಲಯನ್ಸ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖೇಶ್ ಅಂಬಾನಿ ನೇತೃತ್ವದ ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಭಾರತತ ಒಲಿಂಪಿಕ್ ಸಂಸ್ಥೆ (ಐಒಎ) ಒಪ್ಪಂದಕ್ಕೆ ಬುಧವಾರ ಸಹಿ ಹಾಕಿವೆ. ಕಾಮನ್‌ವೆಲ್ತ್, ಏಷ್ಯನ್ ಗೇಮ್ಸ್ ಮತ್ತು ಒಲಿಂಪಿಕ್ಸ್ ಸೇರಿದಂತೆ ಹಲವು ಪ್ರಮುಖ ಕ್ರೀಡಾಕೂಟಗಳಲ್ಲಿ ಭಾರತದ ಅಥ್ಲೀಟ್‌ಗಳಿಗೆ ನೆರವು ನೀಡುವುದು ಈ ಒಪ್ಪಂದದ ಉದ್ದೇಶ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಒಪ್ಪಂದದ ಅಡಿ ರಿಲಯನ್ಸ್ ಮತ್ತು ಐಒಎ ಜಂಟಿಯಾಗಿ 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಮೊಟ್ಟ ಮೊದಲ ಬಾರಿಗೆ 'ಇಂಡಿಯಾ ಹೌಸ್' ಅನ್ನು ಸ್ಥಾಪಿಸಲಿವೆ.

ಟೆನಿಸ್: ಹರ್ಷಿಣಿಗೆ ಪ್ರಶಸ್ತಿ 'ಡಬಲ್'

ಬೆಂಗಳೂರು: ಅಗ್ರಶ್ರೇಯಾಂಕಕ್ಕೆ ಅರ್ಹ ಆಟವಾಡಿದ ಕರ್ನಾಟಕದ ಹರ್ಷಿಣಿ ಎನ್. ಹಾಗೂ ಆರಾಧ್ಯ ಕ್ಷಿತಿಜ್ ಎಐಟಿಎ ಸೂಪರ್ ಸಿರೀಸ್ 16 ವರ್ಷದೊಳಗಿನ-ವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕಿ ಮತ್ತು ಬಾಲಕರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಬಾಲಕಿಯರ ಡಬಲ್ಸ್ ನಲ್ಲೂ ಹರ್ಷಿಣಿ ಪ್ರಶಸ್ತಿ ತಮ್ಮದಾಗಿಸಿ-ಕೊಂಡರು.

ಇಲ್ಲಿಯ ಕೆಎಸ್‌ಎಲ್‌ಟಿಎ ಅಂಗಣ ದಲ್ಲಿ ನಡೆದ ಬಾಲಕಿಯರ ಸಿಂಗಲ್ಸ್ ವಿಭಾಗದಲ್ಲಿ ಹರ್ಷಿಣಿ 6-2, 6-0ಯಿಂದ ರಾಜ್ಯದವರೇ ಆದ ದಿಶಾ ಸಂತೋಷ್ ಖಂಡೋಜಿ ಅವರನ್ನು ಪರಾಭವಗೊಳಿಸಿದರು. ಬಾಲಕರ ಸಿಂಗಲ್ಸ್ ಪ್ರಶಸ್ತಿ ಸುತ್ತಿನ ಸೆಣಸಾಟದಲ್ಲಿ ಆರಾಧ್ಯ 6-1, 6-4ರಿಂದ ಶ್ರೀನಿಕೇತ್ ಕಣ್ಣನ್ ಎದುರು ಗೆದ್ದರು. ಬಾಲಕಿಯರ ಡಬಲ್ಸ್‌ನಲ್ಲಿ ಹರ್ಷಿಣಿ ಮತ್ತು ಅರ್ಜಾನ್ ಕೊರಾಕಿವಾಲಾ 6-3, 6-1ರಿಂದ ಲುಕ್ಷಿತಾ ಗೋಪಿನಾಥ್ ಮತ್ತು ಸವಿತಾ ಭುವನೇಶ್ವರನ್ ಅವರನ್ನು ಮಣಿಸಿದರು. ಬಾಲಕರ ಡಬಲ್ಸ್‌ನಲ್ಲಿ ಪ್ರಕಾಶ್ ಸರಣ್–ಸುಹಾಸ್ ಸೋಮ 6-3, 1-6, 10-7ರಿಂದ ಅಭ್ರದೀಪ್ ಭಟ್ಟಾಚಾರ್ಯ ಅವರಿಗೆ ಸೋಲುಣಿಸಿದರು.

ಸಿಂಗಲ್ಸ್ ವಿಭಾಗದ ಪ್ರಶಸ್ತಿಯೊಂದಿಗೆ ಹರ್ಷಿಣಿ ಎನ್. ಮತ್ತು ಆರಾಧ್ಯ ಕ್ಷಿತಿಜ್

ಟೆನ್‌ಪಿನ್ ಬೌಲಿಂಗ್: ಆಕಾಶ್, ಜೂಡಿ ಚಾಂಪಿಯನ್

ಬೆಂಗಳೂರು: ಹಾಲಿ ಚಾಂಪಿಯನ್ ಆಕಾಶ್ ಅಶೋಕಕುಮಾರ್ ಮತ್ತು ಜೂಡಿ ಅಲ್ಬನ್ ಶುಕ್ರವಾರ ಇಲ್ಲಿ ನಡೆದ ಕರ್ನಾಟಕ ರಾಜ್ಯ ಟೆನ್‌ಪಿನ್ ಬೌಲಿಂಗ್ ಚಾಂಪಿಯ-ನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಪ್ರಶಸ್ತಿ ಜಯಿಸಿದರು.

ಪುರುಷರ ವಿಭಾಗದಲ್ಲಿ ಆಕಾಶ್ 92 ಪಿನ್‌ಗಳಿಂದ ಆರ್. ಕಿಶನ್ ಅವರನ್ನು ಸೋಲಿಸಿದರು. ಅದರೊಂದಿಗೆ ಐದನೇ ಟ್ರೋಫಿಯನ್ನು ಗೆದ್ದುಕೊಂಡರು. ಆಕಾಶ್ ಮೊದಲ ಗೇಮ್‌ನಲ್ಲಿ 209–166 ಪಿನ್ ಮತ್ತು ಎರಡನೇ-ಯದ್ದರಲ್ಲಿ 217–168ರಿಂದ ಜಯಿಸಿದರು.

ಮಹಿಳೆಯರ ವಿಭಾಗದಲ್ಲಿ ಜೂಡಿ ಅಲ್ಬನ್ ಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಪ್ರೀಮಲ್ ಜಾನ್ ವಿರುದ್ಧ ಗೆದ್ದರು. ಇದು ಅವರಿಗೆ ನಾಲ್ಕನೇ ಪ್ರಶಸ್ತಿ.

ಜೂಡಿ ಮೊದಲ ಗೇಮ್‌ನಲ್ಲಿ 178–158ರಿಂದ ಮತ್ತು ಎರಡನೇಯದ್ದರಲ್ಲಿ 179–156 ಪಿನ್‌ಗಳಿಂದ ಪ್ರೀಮಲ್ ವಿರುದ್ಧ ಜಯಭೇರಿ ಬಾರಿಸಿದರು.

ಪ್ರಶಸ್ತಿ ಜಯಿಸಿದ ಆಕಾಶ್ ಅಶೋಕ್ ಕುಮಾರ್ ಮತ್ತು ಜೂಡಿ ಅಲ್ಬನ್

ಬೆಂಗಳೂರು ರೇಸ್

ಮಲ್ಟಿಫೆಸೆಟೆಡ್ ಗೆಲ್ಲುವ ನಿರೀಕ್ಷೆ

ಸಿಟಿ ಸ್ಪ್ರಿಂಟ್ ಚಾಂಪಿಯನ್‌ಷಿಪ್ ಗೋಲ್ಡ್ ಕಪ್ ಶನಿವಾರ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಲ್ಟಿಫೆಸೆಟೆಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಟೊರೊನೆರೊ 4, ಅನ್ಸಾಲ್ಡೊ 2, ಓನ್ಲಿ ಯು 1
2ನೇ ರೇಸ್: ಕುಲ್‌ಸಮ್ 8, ಡೊಮಿಂಗೊ 3, ಬ್ರೂಸ್ ಆಲ್‌ಮೈಟಿ 2
3ನೇ ರೇಸ್: ಎಟರ್ನಲ್ ಪ್ರಿನ್ಸಸ್ 4, ಕೆನ್ಸಿಂಗ್‌ಟನ್ ಕೋರ್ಟ್ 1, ಸಿಲ್ವರ್ ಡ್ಯೂ 2
4ನೇ ರೇಸ್: ಮಲ್ಟಿಫೆಸೆಟೆಡ್ 2, ಎನಿಗ್ಮಾ 3, ಗೋಲ್ಡನ್ ಓಕ್ಸ್ 1
5ನೇ ರೇಸ್: ಸೀಝ್ ಪೆರಿಲಸ್ 2, ಗ್ಯಾರಾಮಾಂಡ್ 3, ಕಟಾನ 6
6ನೇ ರೇಸ್: ಅಮ್ರೇಲಿ 1, ಯುಕಾನ್ 4, ನಿಕೊಲಿನಾ 6
7ನೇ ರೇಸ್: ಮೆಸರ್ಸ್ ಥ್ಯಾಚರ್ 2, ಲೈಟ್ನಿಂಗ್ ಫ್ಲೇಮ್ 4 , ಮಾರ್ಕೊ ಪೋಲೊ 1

ಉತ್ತಮ ಬೆಟ್: ಅಮ್ರೇಲಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಶನಿವಾರ, 30 ಜುಲೈ 2022
ಪ್ರಜಾವಾಣಿ
ಪ್ರಜಾ ಪ್ಲಸ್+
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ಕೊಹಿನೂರು ರಹಸ್ಯ ಭೇದಿಸುತ್ತಾ... 2

ಎದೆಹಾಲು ವೃದ್ಧಿಗೆ ಇಲ್ಲಿವೆ ಸರಳ ಮಾರ್ಗಗಳು



ಎದೆಹಾಲಿನ ಮಹತ್ವ ಹಾಗೂ ಜಾಗೃತಿಗಾಗಿ ಪ್ರತಿ ವರ್ಷ ಆಗಸ್ಟ್ ಮೊದಲ ವಾರವನ್ನು **ಸ್ತನ್ಯಪಾನ ಜಾಗೃತಿ ಸಪ್ತಾಹ**ವನ್ನಾಗಿ ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಎದೆಹಾಲಿನ ಕೊರತೆಗೆ ಕಾರಣ ಮತ್ತು ಉತ್ಪಾದನೆ ಹೆಚ್ಚಿಸಿಕೊಳ್ಳಲು ಕೈಗೊಳ್ಳಬೇಕಾದ ಕ್ರಮಗಳ ಕುರಿತ ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರ ಸಮಾಲೋಚಕಿ **ಡಾ.ಪ್ರೀತಿ ಗೌಡ** ಒಂದಷ್ಟು ಸಲಹೆಗಳನ್ನು ನೀಡಿದ್ದಾರೆ.

ಆರೋಗ್ಯ

ಹಸುಗೂಸುಗಳಿಗೆ ತಾಯಿಯ ಎದೆ ಹಾಲು ಅತ್ಯವಶ್ಯಕ. ಅದಕ್ಕೆ ಎದೆ ಹಾಲನ್ನು ಅಮೃತಕ್ಕೆ ಸಮ ಎನ್ನುತ್ತಾರೆ. ಮಗು ಜನಿಸಿದಾಗಿನಿಂದ ಕನಿಷ್ಠ ವರ್ಷದವರೆಗೆ ಮಕ್ಕಳಿಗೆ ತಾಯಂದಿರು ಎದೆಹಾಲು ಉಣಿಸಬೇಕು. ಮಗುವಿನ ಬೆಳವಣಿಗೆಗೆ ನಿಜವಾದ ಅಡಿಪಾಯವೇ 'ಸ್ತನ್ಯಪಾನ'.

ಆದರೆ, ಇತ್ತೀಚೆಗೆ ಹಲವು ಕಾರಣಗಳಿಂದಾಗಿ ಅನೇಕ ಮಹಿಳೆಯರಿಗೆ (ಬಾಣಂತಿಯರಿಗೆ) ಎದೆಹಾಲಿನ ಕೊರತೆ ಕಾಡುತ್ತಿದೆ. ಕೆಲವರಿಗೆ ಹಾಲು ಉತ್ಪತ್ತಿಯಾಗುವುದಿಲ್ಲ. ಇನ್ನೂ ಕೆಲವರಿಗೆ ಉತ್ಪತ್ತಿಯಾಗುವ ಹಾಲು ಮಗುವಿಗೆ ಸಾಕಾಗುವುದಿಲ್ಲ. ಇದರಿಂದ ಬಾಟಲಿ ಹಾಲಿನ ಮೊರೆ ಹೋಗುತ್ತಾರೆ. ಇದಕ್ಕೆ ಕಾರಣವೇನು ? ಎದೆಹಾಲು ಉತ್ಪತ್ತಿ ಹೆಚ್ಚಿಸಲು ಏನೆಲ್ಲ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದರ ಕುರಿತು ಸಲಹೆಗಳು ಇಲ್ಲಿವೆ.

ಎದೆಹಾಲು ಕೊರತೆಗೆ ಕಾರಣ

ವೈಜ್ಞಾನಿಕ ಸಂಶೋಧನೆಯ ಪ್ರಕಾರ ಬಾಣಂತಿಯರಲ್ಲಿ ಶೇ 90ರಷ್ಟು ಮಗುವಿಗೆ ಅಗತ್ಯವಿರುವಷ್ಟು ಎದೆಹಾಲು ಸಹಜವಾಗಿಯೇ ಉತ್ಪಾದನೆಯಾಗುತ್ತದೆ. ಆದರೆ, ಒತ್ತಡದ ಬದುಕಿನಿಂದಾಗಿ ತಾಯಂದಿರು ಮಕ್ಕಳಿಗೆ ಸಕಾಲದಲ್ಲಿ ಎದೆಹಾಲು ಉಣಿಸಲು ಸಾಧ್ಯವಾಗದ ಕಾರಣ, ಹಾಲು ಎದೆಯಲ್ಲೇ ಇಂಗುತ್ತದೆ. ಇದರಿಂದ 'ಹಾಲು ಉತ್ಪತ್ತಿಯಾಗುತ್ತಿಲ್ಲ' ಎಂಬ ನಿರ್ಣಯಕ್ಕೆ ಬರುವ ಅಮ್ಮಂದಿರು ಮಕ್ಕಳಿಗೆ ಬಾಟಲಿ ಹಾಲು ಕುಡಿಸಲು ಆರಂಭಿಸುತ್ತಾರೆ. ಇದು ಸರಿಯಾದ ಕ್ರಮವಲ್ಲ.

ಎದೆಹಾಲು ಉತ್ಪತ್ತಿ ಬಗ್ಗೆ ಸರಿಯಾದ ಮಾಹಿತಿ ಕೊರತೆಯೂ ತಾಯಂದಿರು ಇಂಥ ಗೊಂದಲಕ್ಕೆ ಸಿಲುಕಲು ಕಾರಣ. ಇಂಥ ವೇಳೆಯಲ್ಲಿ ಎದೆಹಾಲು ಉತ್ಪತ್ತಿ ಹೆಚ್ಚಿಸಲು ಇರುವ ಸರಳ ಮಾರ್ಗಗಳ ಬಗ್ಗೆ ವೈದ್ಯ ರಿಂದ ತಿಳಿದುಕೊಳ್ಳಬೇಕು. ಅಂಥ ಮಾರ್ಗಗಳ ಕುರಿತು ಇಲ್ಲಿ ವಿವರಿಸಲಾಗಿದೆ.

ಪ್ರೋಟಿನ್‌ಯುಕ್ತ ಆಹಾರ

ಪ್ರಸವದ ನಂತರ ತಾಯಿ ನಿಶ್ಯಕ್ತಳಾಗುತ್ತಾಳೆ. ಈ ವೇಳೆ ಅವರಿಗೆ ಪ್ರೋಟಿನ್‌ಯುಕ್ತ ಆಹಾರ ಬೇಕು. ಹಣ್ಣು, ತರಕಾರಿ, ಸೊಪ್ಪು, ಕಾರ್ಬೋಹೈಡ್ರೇಟ್ ಮತ್ತು ಪ್ರೋಟೀನ್ ಅಂಶವಿರುವ ಪೌಷ್ಟಿಕ ಆಹಾರ ಸೇವಿಸಬೇಕು. ಮೆಂತ್ಯ, ಬೆಳ್ಳುಳ್ಳಿ, ಅಜವಾನ (ಕೇರಮ್ ಬೀಜಗಳು), ಸಬ್ಬಿಗೆ ಸೊಪ್ಪು, ನುಗ್ಗೆ ಸೊಪ್ಪು, ಜೀರಿಗೆ, ಓಟ್ಸ್ ಇವು ಹಾಲು ಉತ್ಪಾದನೆಯನ್ನು ಹೆಚ್ಚಿಸುವ ಕೆಲವು ಆಹಾರ ಪದಾರ್ಥಗಳು. ಇಂಥ ಆಹಾರ ಸೇವನೆಯಿಂದ ತಾಯಿಗೂ ಶಕ್ತಿ ಬರುತ್ತದೆ, ಜೊತೆಗೆ ಎದೆಹಾಲು ಹೆಚ್ಚು ಉತ್ಪತ್ತಿಯಾಗಲು ಸಹಕಾರಿಯಾಗುತ್ತದೆ. ಇದರ ಜೊತಗೆ, ದಿನದಲ್ಲಿ ಪ್ರತಿ ಎರಡು ಗಂಟೆಗಳಿಗೊಮ್ಮೆ ಮಗುವಿಗೆ ಎದೆಹಾಲು ಉಣಿಸುತ್ತಿರಬೇಕು.

ಹೆಚ್ಚು ನೀರು ಸೇವಿಸಿ

ಎದೆಹಾಲಿನಲ್ಲಿ ಶೇ 87ರಷ್ಟು ನೀರು ಇರುವುದರಿಂದ, ಹಾಲುಣಿಸುವ ತಾಯಂದಿರು ದಿನಕ್ಕೆ ಕನಿಷ್ಠ ಎರಡರಿಂದ ಮೂರು ಲೀಟರ್ ನೀರು ಕುಡಿಯುತ್ತಿರಬೇಕು. ಇದು ಎದೆಹಾಲು ಉತ್ಪತ್ತಿಗೆ ಸಹಕಾರಿಯಾಗಲಿದೆ. ಮಗುವಿಗೆ ಹಾಲುಣಿಸುವ ಮೊದಲು ಹಾಗೂ ನಂತರ ನೀರು ಕುಡಿಯಲು ಸೂಕ್ತ ಸಮಯ.

ಮಲಗುವ ಮುನ್ನ ಹಾಲುಣಿಸಿ

ಮಗು ಕಕ್ಕುವ(ವಾಂತಿ) ಸಾಧ್ಯತೆ ಇರುತ್ತದೆ ಎಂದು ಆಲೋಚಿಸಿ, ಕೆಲವು ತಾಯಂದಿರು ಮಗುವಿಗೆ ರಾತ್ರಿ ಮಗುವ ವೇಳೆ ಹಾಲುಣಿಸುವುದಿಲ್ಲ. ಇದು ಸರಿಯಾದ ಕ್ರಮವಲ್ಲ. ರಾತ್ರಿ ಮಲಗುವ ಮುನ್ನ ಮಗುವಿಗೆ ಹಾಲು ಉಣಿಸಿದರೆ, ಹಾಲು ಉತ್ಪತ್ತಿ ಪ್ರಮಾಣ ದ್ವಿಗುಣಗೊಳ್ಳುತ್ತದೆ. ಏಕೆಂದರೆ, ಸ್ತನ್ಯಪಾನ ಮಾಡಿಸುವಾಗ, ಸ್ತನಗಳಲ್ಲಿನ ನರಗಳು ನಿಮ್ಮ ಮೆದುಳಿಗೆ 'ಪ್ರೊಲ್ಯಾಕ್ಟಿನ್' ಬಿಡುಗಡೆ ಮಾಡುವಂತೆ ಸೂಚಿಸುತ್ತವೆ. ಇದು ಎದೆ ಹಾಲಿನ ಉತ್ಪಾದನೆಗೆ ಕಾರಣವಾಗುತ್ತದೆ. ಎದೆಹಾಲು ಉತ್ಪಾದನೆಗೆ ಮತ್ತೊಂದು ಪ್ರಮುಖ ಹಾರ್ಮೋನ್ ಆಕ್ಸಿಟೋಸಿನ್. ಇದು ನಿಮ್ಮ ಮತ್ತು ಮಗುವಿನ ಬಾಂಧ್ಯ ವೃದ್ಧಿಸಿ, ಮನಸ್ಸನ್ನು ನಿರ್ಮಲವಾಗಿಡಲು ಸಹಕರಿಸುತ್ತದೆ.

ಎರಡೂ ಸ್ತನಗಳಿಂದಲೂ ಸಮವಾಗಿ ಹಾಲುಣಿಸಿ

ಎರಡೂ ಸ್ತನಗಳಿಂದಲೂ ಹಾಲುಣಿಸುವುದು, ಹಾಲುಣಿಸುವಿಕೆ ಸುಧಾರಿಸುವ ಇನ್ನೊಂದು ವಿಧಾನ. ಮಗುವಿಗೆ ಒಂದೇ ಸ್ತನದಲ್ಲಿ ಹಾಲು ಕುಡಿಸುವುದರಿಂದ, ಹಾಲು ಉತ್ಪತ್ತಿಗೆ ಹಿನ್ನೆಡೆ ಆಗಬಹುದು. ಶಿಶುವು ಕನಿಷ್ಠ 15 ರಿಂದ 20 ನಿಮಿಷ ಹಾಲು ಕುಡಿಯಬೇಕು. ಏಕೆಂದರೆ ಮೊದಲ ಏಳರಿಂದ ಹತ್ತು ನಿಮಿಷಗಳಲ್ಲಿ ಬರುವ ಹಾಲು ಹೆಚ್ಚಿನದಾಗಿ ನೀರಿನ ಅಂಶ ಒಳಗೊಂಡಿರುತ್ತದೆ. ಹೀಗಾಗಿ ಕನಿಷ್ಠ 10 ನಿಮಿಷಗಳವರೆಗೂ ಮಗುವಿಗೆ ಹಾಲುಣಿ ಸಬೇಕು. ಇದರಿಂದ ಮಗುವಿಗೆ ಹೆಚ್ಚು ಪ್ರೋಟಿನ್ ಅಂಶ ಲಭ್ಯವಾಗುತ್ತದೆ.

ಆಗಾಗ್ಗೆ ಸ್ತನಗಳ ಮಸಾಜ್ ಮಾಡಿ

ಹಾಲುಣಿಸುವ ಸಂದರ್ಭದಲ್ಲಿ ಕೆಲವೊಮ್ಮೆ ಹಾಲಿನ ನಾಳಗಳು ಮುಚ್ಚಿಹೋಗಬಹುದು, ಗಟ್ಟಿಯಾಗ ಬಹುದು. ಹೀಗಾಗಿ ಆಗಾಗ್ಗೆ ಸ್ತನ ಮಸಾಜ್ ಮಾಡುವುದರಿಂದ ನಾಳಗಳಲ್ಲಿ ಹಾಲು ಸರಾಗವಾಗಿ ಬರಲು ಸಾಧ್ಯವಾಲಿದೆ. ಒಂದೊಮ್ಮೆ ಸ್ತನಗಟ್ಟಿಯಾಗುವುದು, ಗಡ್ಡೆಕಟ್ಟಿದಂತಾದರೂ ಈ ಮಸಾಜ್ ಮೂಲಕ ಗಡ್ಡೆಗಳು ಕರಗಲು ಸಹಕಾರಿಯಾಗುತ್ತದೆ.

ಎದೆ ಹಾಲನ್ನು ಪವರ್ ಪಂಪಿಂಗ್ ಮಾಡಿ

ಎದೆ ಹಾಲನ್ನು ಮಗುವಿಗೆ ಕುಡಿಸುವ ಜೊತೆಗೆ ಸ್ತನಗಳಿಗೆ ಪವರ್ ಪಂಪ್ ಮೂಲಕ ಹಾಲನ್ನು ಹಿಂಡಿ ಬಾಟಲಿಗೆ ತುಂಬಬಹುದು. ಈ ಪಂಪ್ ಮಾರುಕಟ್ಟೆಯಲ್ಲಿ ಲಭ್ಯವಿದೆ. ಹೀಗೆ ಮಾಡುವುದರಿಂದ ಮಗುವಿಗೆ ಆಗಾಗ್ಗೇ ಮೊಲೆತೊಟ್ಟು ಕೊಡುವ ಬದಲು ಈ ಹಾಲನ್ನೇ ಕುಡಿಸಬಹುದು. ಇದು ಹೆಚ್ಚಿದ ಹಾಲಿನ ಬೇಡಿಕೆಯ ಸಂವೇದನೆಯನ್ನು ಸೃಷ್ಟಿಸುತ್ತದೆ. ಇದರಿಂದಾಗಿ ನೈಸರ್ಗಿಕ ಎದೆ ಹಾಲು ಉತ್ಪಾದನೆಯನ್ನು ಸುಧಾರಿಸುತ್ತದೆ.

ಹಾಲು ಬರದೇ ಇದ್ದರೆ ವೈದ್ಯರನ್ನು ಸಂಪರ್ಕಿಸಿ

ನಿಮ್ಮ ಮಗುವಿಗೆ ಸಾಕಷ್ಟು ಹಾಲು ಸಿಗುತ್ತಿಲ್ಲ ಅಥವಾ ಮಗು ಹಾಲು ಕುಡಿಯುತ್ತಿದ್ದರೂ ಬೆಳವಣಿಗೆ ಕಾಣುತ್ತಿಲ್ಲ ಎಂದೆನಿಸಿದರೆ ಕೂಡಲೇ ವೈದ್ಯರನ್ನು ಕಾಣುವುದು ಒಳ್ಳೆಯದು. ಏಕೆಂದರೆ, ಕೆಲವರಲ್ಲಿ ಹಾರ್ಮೋನ್‌ಗಳ ಏರಿಳಿತದಿಂದ ಹಾಲು ಉತ್ಪತ್ತಿಯಲ್ಲಿ ಕೊರತೆ ಉಂಟಾಗಬಹುದು ಅಥವಾ ಇತರೆ ನಿಮ್ಮ ದೈನಂದಿನ ಚಟುವಟಿಕೆಯ ಸಮಸ್ಯೆಯಿಂದಲೂ ಹಾಲು ಉತ್ಪತ್ತಿ ಸಾಧ್ಯವಾಗದೇ ಇರಬಹುದು. ❖

ಹಾಲು ಉತ್ಪತ್ತಿಯಾಗದೇ ಇರಲು ಇರುವ ಇತರೆ ಕಾರಣಗಳು

ಭಾವನಾತ್ಮಕ ಅಂಶಗಳು: ಆತಂಕ, ಒತ್ತಡ, ಮತ್ತು ಮುಜುಗರವೂ ಸಹ ತಾಯಂದಿರಲ್ಲಿ ಹಾಲು ಉತ್ಪತ್ತಿಗೆ ಅಡ್ಡಿಪಡಿಸಬಹುದು, ಇದರಿಂದಾಗಿ ಕಡಿಮೆ ಹಾಲು ಉತ್ಪಾದನೆಯಾಗುತ್ತದೆ. ಹೀಗಾಗಿ ನಿಮಗೆ ಹಿತವೆನಿಸುವ ಜಾಗದಲ್ಲಿ ಎದೆಹಾಲು ನೀಡಿ, ವಿಶ್ರಾಂತಿ ಪಡೆಯಿರಿ.

ಆರೋಗ್ಯ ಸಮಸ್ಯೆಗಳು: ಮಧುಮೇಹ, ಪಾಲಿಸಿಸ್ಟಿಕ್ ಓವೆರಿಯನ್ ಸಿಂಡ್ರೋಮ್ ಪ್ರೆಗ್ನೆನ್ಸಿ(ಪಿಸಿಒಎಸ್)-ಇಂಡ್ಯೂಸ್ಡ್ ಹೈಪರ್ ಟೆನ್ಷನ್ ನಂತಹ ಕೆಲವು ಆರೋಗ್ಯ ಸಮಸ್ಯೆಗಳು ಹಾಲು ಉತ್ಪಾದನೆಗೆ ಅಡ್ಡಿಪಡಿಸಬಹುದು. ಸೈನಸ್ ಮತ್ತು ಅಲರ್ಜಿ ಔಷಧಿಗಳಂತಹ ಸ್ಯೂಡೊಫೆಡ್ರಿನ್-ಒಳಗೊಂಡಿರುವ ಔಷಧಿಗಳೂ ಎದೆ ಹಾಲಿನ ಉತ್ಪಾದನೆ ಕಡಿಮೆ ಮಾಡಬಹುದು.

ತಂಬಾಕು ಮತ್ತು ಮದ್ಯ : ಧೂಮಪಾನ ಮತ್ತು ಮದ್ಯಪಾನದಿಂದಲೂ ಹಾಲಿನ ಉತ್ಪಾದನೆ ಕಡಿಮೆಯಾಗುತ್ತದೆ. ಹಾಗೂ ಮಗುವಿನ ಆರೋಗ್ಯದ ಮೇಲೂ ಪರಿಣಾಮ ಬೀರಬಹುದು.

ಗೂಗಲ್ ಸ್ಟ್ರೀಟ್ ವ್ಯೂ ಸೇವೆ ಮತ್ತೆ ಆರಂಭ

ಸ್ಥಳೀಯ ಸಂಸ್ಥೆಗಳೆರಡರ ಸಹಯೋಗದೊಂದಿಗೆ ಬೆಂಗಳೂರು ಸೇರಿದಂತೆ ದೇಶದ 10 ನಗರಗಳಲ್ಲಿ ಸ್ಟ್ರೀಟ್ ವ್ಯೂ ಸೇವೆಯನ್ನು ಗೂಗಲ್ ಮತ್ತೆ ಆರಂಭಿಸಿದೆ.

ತಂತ್ರಜ್ಞಾನ



ಸ್ಥಳೀಯ ಸಂಸ್ಥೆಗಳೆರಡರ ಸಹಯೋಗದೊಂದಿಗೆ ಬೆಂಗಳೂರು ಸೇರಿದಂತೆ ದೇಶದ 10 ನಗರಗಳಲ್ಲಿ ಸ್ಟ್ರೀಟ್ ವ್ಯೂ ಸೇವೆಯನ್ನು ಗೂಗಲ್ ಬುಧವಾರದಿಂದ ಮತ್ತೆ ಆರಂಭಿಸಿದೆ.

ಜೆನೆಸಿಸ್ ಇಂಟರ್‌ನ್ಯಾಷನಲ್ ಹಾಗೂ ಟೆಕ್ ಮಹಿಂದ್ರಾ ಸಹಯೋಗದಲ್ಲಿ ಸ್ಟ್ರೀಟ್ ವ್ಯೂ ಸೇವೆ ಒದಗಿಸುತ್ತಿರುವುದಾಗಿ ಗೂಗಲ್ ಪ್ರಕಟಣೆ ತಿಳಿಸಿದೆ.

ರಸ್ತೆಗಳು ಮತ್ತು ಇತರ ಪ್ರದೇಶಗಳ 'ಹೈ ಡೆಫಿನಿಷನ್' ಚಿತ್ರಗಳನ್ನು ತೋರಿಸುವ ಸ್ಟ್ರೀಟ್ ವ್ಯೂ ಸೇವೆಯನ್ನು ಭದ್ರತಾ ಕಾರಣಗಳಿಗಾಗಿ ಈ ಹಿಂದೆ ಸರ್ಕಾರ ನಿಷೇಧಿಸಿತ್ತು.

'ಬೆಂಗಳೂರು, ಚೆನ್ನೈ, ದೆಹಲಿ, ಮುಂಬೈ, ಹೈದರಾಬಾದ್, ಪುಣೆ, ನಾಶಿಕ್, ವಡೋದರ, ಅಹ್ಮದ್ ನಗರ ಹಾಗೂ ಅಮೃತಸರ ಒಳಗೊಂಡಂತೆ ಭಾರತದ 1,50,000 ಕಿ.ಮೀ. ವ್ಯಾಪ್ತಿಯ ಪ್ರದೇಶಗಳ ಹೊಸ ಚಿತ್ರಣ ಮ್ಯಾಪ್‌ನಲ್ಲಿ ಲಭ್ಯವಾಗಲಿದೆ. ಸಹಭಾಗಿತ್ವ ಹೊಂದಿದ ಸ್ಥಳೀಯ ಸಂಸ್ಥೆಗಳು ಪರವಾನಗಿ ಪಡೆದಿರುವ ಚಿತ್ರಗಳು ಸ್ಟ್ರೀಟ್ ವ್ಯೂನಲ್ಲಿ ಕಾಣಿಸಲಿವೆ' ಎಂದು ಪ್ರಕಟಣೆ ತಿಳಿಸಿದೆ.

ಈ ಯೋಜನೆಯನ್ನು 2022ರ ಅಂತ್ಯದ ವೇಳೆಗೆ 50 ನಗರಗಳಿಗೆ ವಿಸ್ತರಿಸಲು ಗೂಗಲ್, ಜೆನೆಸಿಸ್ ಇಂಟರ್‌ನ್ಯಾಷನಲ್ ಹಾಗೂ ಟೆಕ್ ಮಹಿಂದ್ರಾ ಚಿಂತನೆ ನಡೆಸುತ್ತಿವೆ.

ಸ್ಥಳೀಯ ಸಹಭಾಗಿತ್ವದೊಂದಿಗೆ ಗೂಗಲ್ ಸ್ಟ್ರೀಟ್ ವ್ಯೂ ಸೇವೆ ನೀಡುತ್ತಿರುವುದು ವಿಶ್ವದಲ್ಲೇ ಮೊದಲಾಗಿದೆ.

ಬೆಂಗಳೂರಿನಲ್ಲಿ ವೇಗದ ಮಿತಿ ಮಾಹಿತಿಯೂ ಲಭ್ಯ

ಸಂಚಾರ ವಿಭಾಗದಿಂದ ಪಡೆದ ದತ್ತಾಂಶಗಳ ಆಧಾರದಲ್ಲಿ ವೇಗದ ಮಿತಿಯ ಮಾಹಿತಿ ನೀಡುವ ಸೇವೆಯನ್ನೂ ಗೂಗಲ್ ಆರಂಭಿಸಲಿದೆ. ಈ ನಿಟ್ಟನಲ್ಲಿ ಬೆಂಗಳೂರು ಸಂಚಾರ ಪೊಲೀಸರ ಜತೆ ಸಹಭಾಗಿತ್ವ ಹೊಂದುವುದಾಗಿ ಗೂಗಲ್ ಹೇಳಿದೆ.

ಗೂಗಲ್ ಸ್ಟ್ರೀಟ್ ವ್ಯೂ ಎಂದರೆ...

ರಸ್ತೆ, ಪ್ರವಾಸಿ ಸ್ಥಳ, ಬೆಟ್ಟ-ಗುಡ್ಡ, ನದಿ ಇತ್ಯಾದಿಗಳ 360 ಡಿಗ್ರಿ ಕೋನದ 'ಹೈ ಡೆಫಿನಿಷನ್' ಚಿತ್ರಗಳನ್ನು ಗೂಗಲ್ ಸ್ಟ್ರೀಟ್ ವ್ಯೂ ಬಳಕೆದಾರರಿಗೆ ತೋರಿಸುತ್ತದೆ. ಇದು ನಿರ್ದಿಷ್ಟ ಸ್ಥಳದ 360 ಡಿಗ್ರಿ ಪನೋರಮಿಕ್ ಹಾಗೂ ಸ್ಟ್ರೀಟ್ ಲೆವೆಲ್ 3ಡಿ ಚಿತ್ರಗಳನ್ನು ಒಳಗೊಂಡಿರುತ್ತದೆ. ಈ ಸೇವೆ 2007ರಲ್ಲಿ ಅಮೆರಿಕದ ಕೆಲವು ನಗರಗಳಲ್ಲಿ ಮೊದಲ ಬಾರಿಗೆ ಜಾರಿಗೆ ಬಂದಿತ್ತು.

ಬೆಂಗಳೂರಿನಲ್ಲಿ 2011ರಲ್ಲೇ ಲಭ್ಯವಿದ್ದ ಸ್ಟ್ರೀಟ್ ವ್ಯೂ

2011ರಲ್ಲಿ ಪೈಲಟ್ ಯೋಜನೆ ರೂಪದಲ್ಲಿ ಬೆಂಗಳೂರಿನಲ್ಲಿ ಸ್ಟ್ರೀಟ್ ವ್ಯೂ ಸೇವೆ ಲಭ್ಯವಿತ್ತು. 2016ರಲ್ಲಿ ಭದ್ರತಾ ಕಾರಣಗಳಿಗಾಗಿ ಇದನ್ನು ಸರ್ಕಾರ ನಿಷೇಧಿಸಿತ್ತು. ಇದೀಗ, ಗೂಗಲ್ ಭಾರತೀಯ ಕಂಪನಿಗಳ ಜೊತೆಗೆ ಸೇರಿಕೊಂಡು ಸ್ಟ್ರೀಟ್ ವ್ಯೂ ಲಭ್ಯವಾಗುವಂತೆ ಮಾಡಿದೆ.

ನೋಡುವುದು ಹೇಗೆ?

ಗೂಗಲ್ ಮ್ಯಾಪ್‌ನಲ್ಲಿರುವ ಪೆಗ್‌ಮ್ಯಾನ್ ಅನ್ನು ಕ್ಲಿಕ್ ಮಾಡಿ ಆ ಬಳಿಕ ನೀಲಿ ರೇಖೆಗಳು ಅಥವಾ ಬಿಂದುಗಳು ಕಾಣಿಸುವ ಜಾಗದಲ್ಲಿ ಕ್ಲಿಕ್ ಮಾಡಿದರೆ ಸ್ಟ್ರೀಟ್ ವ್ಯೂ ಕಾಣಿಸುತ್ತದೆ. ಭದ್ರತಾ ಕಳವಳ ಇರುವ ಪ್ರದೇಶಗಳನ್ನು ಮಬ್ಬಾಗಿಸಿ ತೋರಿಸಲಾಗುತ್ತಿದೆ. ❖

ಮಳೆಗಾಲದಲ್ಲಿ ಶ್ವಾನಗಳ ರಕ್ಷಣೆ

ಮಳೆಗಾಲ ಬಂತೆಂದರೆ ಸಾಕು ಮನುಷ್ಯರಿಗೆ ಮಾತ್ರವಲ್ಲ ಸಾಕುಪ್ರಾಣಿಗಳಿಗೂ ವಿವಿಧ ರೀತಿಯ ಆರೋಗ್ಯ ಸಮಸ್ಯೆ ಕಾಣಿಸಿಕೊಳ್ಳುತ್ತವೆ. ವರ್ಷದಲ್ಲಿ ನಾಲ್ಕೈದು ತಿಂಗಳ ಮುಂಗಾರು ಮಳೆಯ ಅವಧಿಯಲ್ಲಿ ಸಾಕುಪ್ರಾಣಿಗಳಿಗೆ ಅದರಲ್ಲೂ ವಿಶೇಷವಾಗಿ ಶ್ವಾನಗಳಿಗೆ ಸೊಳ್ಳೆಗಳು, ಮರಳು ನೊಣಗಳು, ಉಣ್ಣೆ (ಟಿಕ್) ಮತ್ತು ಚಿಗಟೆಗಳು ಬಾಧಿಸುತ್ತವೆ. ಇದು ಹಲವು ರೋಗಗಳನ್ನು ಹರಡಲು ಕಾಣವಾಗುತ್ತವೆ. ಈ ಹಿನ್ನೆಲೆಯಲ್ಲಿ ಮಳೆಗಾಲದಲ್ಲಿ ಶ್ವಾನಗಳ ನಿರ್ವಹಣೆ ಕುರಿತು ಮಾಹಿತಿ ಇಲ್ಲಿದೆ.

ಡಾ. ಅನಿರುದ್ಧ ಅಜ್ಜಂಪುರ

- **ಉಣ್ಣೆ(ಟಿಕ್ ಜ್ವರ) ಬಾಧೆ**

ಮುಂಗಾರು ಮಳೆ ಸಮಯದಲ್ಲಿ ನಾಯಿಗಳಿಗೆ ವೇಗವಾಗಿ ಉಣ್ಣೆಗಳು ಅಂಟಿಕೊಳ್ಳುತ್ತವೆ. ಇವು ಎರ್ಲಿಚಿಯಾ, ಬಾಬೆಸಿಯಾ, ಅನಾಪ್ಲಾಸ್ಮಾ ಮತ್ತು ಬೊರೆಲಿಯಾ ಮುಂತಾದ ಕೀಟಾಣುಗಳು ವೃದ್ಧಿಯಾಗಲು ದಾರಿ ಮಾಡಿ ಕೊಡುತ್ತವೆ. ಒಂದು ಸಾರಿ ಉಣ್ಣೆ ನಾಯಿಯ ಮೈ ಸೇರಿದರೆ ಜ್ವರ (ಟಿಕ್‌ಜ್ವರ) ಬರುವ ಸಾಧ್ಯತೆ ಹೆಚ್ಚು. ಕೆಲವೊಮ್ಮೆ ಈ ಜ್ವರ ಮಾರಣಾಂತಿಕವಾಗಿ ಪರಿಣಮಿಸಬಹುದು. ರಕ್ತಹೀನತೆ, ಕಾಮಾಲೆಯಂತಹ ರೋಗ ಬಾಧೆ ಕಾಣಿಸಿಕೊಳ್ಳಬಹುದು. ಆಗ ರಕ್ತದಲ್ಲಿರುವ ಪ್ಲೇಟ್‌ಲೆಟ್ಸ್ ಕೊರತೆ ಉಂಟಾಗಬಹುದು. ರಕ್ತ ಹೀನತೆಯೂ ಬಾಧಿಸಬಹುದು. ಹೀಗಾಗಿ ಯಾವುದೇ ಕಾರಣಕ್ಕೂ ಈ ಜ್ವರವನ್ನು ನಿರ್ಲಕ್ಷಿಸಬಾರದು. ಪಶುವೈದ್ಯರ ಸಲಹೆ ಮೇರೆಗೆ ಚಿಕಿತ್ಸೆ, ಔಷಧ ಕೊಡಿಸುವುದು ಉತ್ತಮ.

- **ಆಹಾರ-ನೀರಿನಿಂದ ಹರಡುವ ರೋಗಗಳು**

ಮಳೆಗಾಲದಲ್ಲಿ ನಾಯಿಗಳಿಗೆ ಲೆಪ್ಟೊಸ್ಪೈರೋಸಿಸ್, ಗಿಯಾರ್ಡಿಯಾಸಿಸ್, ರೋಟವೈರಲ್ ಅತಿಸಾರ ಮತ್ತು ಇತರ ಅಪರೂಪದ ಶಿಲೀಂಧ್ರಗಳ ಸೋಂಕುಗಳು ಬಾಧಿಸಬಹುದು. ಈ ರೋಗಗಳಲ್ಲಿ ಇಲಿಗಳ ಮೂಲಕ ಹರಡುವ ಲೆಪ್ಟೊಸ್ಪೈರೋಸಿಸ್ ಅತ್ಯಂತ ಅಪಾಯಕಾರಿ. ಈ ಕಾಯಿಲೆಗೆ ಒಳಗಾದ ಸಾಕುಪ್ರಾಣಿಗಳು ಜ್ವರ, ಅಸ್ವಸ್ಥತೆ ಕಾಮಾಲೆ, ಯಕೃತ್ತು ಮತ್ತು ಮೂತ್ರಪಿಂಡ ವೈಫಲ್ಯಕ್ಕೆ ಒಳಗಾಗಿ ಸಾವನ್ನಪ್ಪುತ್ತವೆ. ಈ ರೋಗ ಬರದಂತೆ ತಡೆಗಟ್ಟಲು ನಾಯಿಗಳಿಗೆ ಲೆಪ್ಟೊಸ್ಪೈರಾ ನಿರೋಧಕ ಲಸಿಕೆ ಹಾಕಿಸಬೇಕು. ಜೊತೆಗೆ ಶುದ್ಧ ಕುಡಿಯುವ ನೀರನ್ನು ಒದಗಿಸಬೇಕು.

- **ಉಸಿರಾಟದ ಸೋಂಕುಗಳು**

ಶ್ವಾನಗಳು ಮಳೆಯಲ್ಲಿ ನೆನೆದರೆ ಶ್ವಾಸಕೋಶವಿರುವ ಭಾಗ ಸೋಂಕಿಗೆ ಒಳಗಾಗಿ, ಉಸಿರಾಟಕ್ಕೆ ತೊಂದರೆಯಾಗಬಹುದು. ಅದನ್ನು ಗುರುತಿಸದೇ ಹೋದರೆ, ಅವು ನ್ಯುಮೋನಿಯಾದಂಥ ಅನಾರೋಗ್ಯಕ್ಕೆ ಒಳಗಾಗಬಹುದು. ಈ ಮಳೆಗಾಲದಲ್ಲಿ ಶ್ವಾನಗಳು ಸೇರಿದಂತೆ ವಿವಿಧ ಸಾಕು ಪ್ರಾಣಿಗಳು, ಬೋರ್ಡೆಟೆಲ್ಲಾ, ಅಡೆನೊ ವೈರಸ್, ಪ್ಯಾರೆನ್ಫ್ಲುಯೆಂಜಾ ವೈರಸ್, ಬೆಕ್ಕಿನ ರೈನೋಟ್ರಾಕಿಟಿಸ್, ಕ್ಯಾಲ್ಸಿ ವೈರಸ್ ಮುಂತಾದ ಸೋಂಕುಗಳಿಗೆ ಹೆಚ್ಚು ಒಳಗಾಗುತ್ತಿವೆ. ನಿಮ್ಮ ಸಾಕುಪ್ರಾಣಿಗಳಿಗೆ ಸಂಪೂರ್ಣ ವ್ಯಾಕ್ಸಿನೇಷನ್ ನೀಡುವುದು ಮುನ್ನೆಚ್ಚರಿಕೆಯ ಕ್ರಮಗಳಲ್ಲಿ ಒಂದು. ಇದರ ಜೊತೆಗೆ, ಯಾವುದೇ ಕಾರಣಕ್ಕೂ ಮಳೆಗಾಲದಲ್ಲಿ ನಾಯಿಗಳನ್ನು ಹೊರಗೆ ಹೋಗದಂತೆ, ಮಳೆಯಲ್ಲಿ ನೆನೆಯದಂತೆ ನೋಡಿಕೊಳ್ಳಬೇಕು.

- **ಚರ್ಮದ ಸೋಂಕುಗಳು**

ನಾಯಿಗಳು ಮಳೆಗಾಲದಲ್ಲಿ ಚರ್ಮದ ಅಲರ್ಜಿ, ಈಸ್ಟ್ ಸೋಂಕು ಮತ್ತು ಡರ್ಮಟೊಫೈಟೋಸಿಸ್ ನಂತಹ ಶಿಲೀಂಧ್ರಗಳ ಸೋಂಕುಗಳಿಗೆ ಹೆಚ್ಚು ಒಳಗಾಗುತ್ತವೆ. ಈ ಸಂದರ್ಭದಲ್ಲಿ ಚರ್ಮದ ಬಗ್ಗೆ ಕಾಳಜಿವಹಿಸದೇ ಹೋದರೆ, ಚರ್ಮದ ಮೇಲೆ ಉರಿಯೂತ ಮತ್ತು ಬ್ಯಾಕ್ಟೀರಿಯಾದ ಬೆಳವಣಿಗೆಗೆ ಕಾರಣವಾಗುತ್ತದೆ. ಈ ಸಮಸ್ಯೆಗೆ ಪರಿಹಾರವೆಂದರೆ, ನಾಯಿಯ ಕೂದಲನ್ನು ನಿಯಮಿತವಾಗಿ ಬ್ರಷ್ ಮಾಡಬೇಕು. ಆಗಾಗ್ಗೆ ಸ್ನಾನ ಮಾಡಿಸು ವುದನ್ನು ತಪ್ಪಿಸಬೇಕು. ಉತ್ತಮ ಗುಣಮಟ್ಟದ ಮೃದುಗೊಳಿಸುವ ಶ್ಯಾಂಪೂಗಳೊಂದಿಗೆ ಎರಡು ವಾರಗಳಿಗೊಮ್ಮೆ ಸ್ನಾನ ಮಾಡಿಸಿದರೆ ಸಾಕು. ಬಹುಮುಖ್ಯವಾಗಿ ನಾಯಿಗಳು ಮಳೆಯಲ್ಲಿ ನೆನಯದಂತೆ ಎಚ್ಚರವಹಿಸಬೇಕು.

(ಲೇಖಕರು: ಚೀಫ್ ವೆಟರ್ನರಿ ಸರ್ಜನ್, ಆರ್‌ಎಂವಿ ಸೂಪರ್ ಸ್ಪೆಷಾಲಿಟಿ ವೆಟರ್ನರಿ ಆಸ್ಪತ್ರೆ)

ಗೋಲ್ಡನ್ ಆಫರ್ಸ್'

ಬೆಂಗಳೂರು ಶ್ರೀಸಾಯಿ ಗೋಲ್ಡ್ ಪ್ಯಾಲೇಸ್ ತನ್ನ ಪ್ರತಿ ಶಾಖೆಯಲ್ಲೂ ಮನಮೋಹಕ ಆಭರಣಗಳ ಪ್ರದರ್ಶನ ಹಾಗೂ ಮಾರಾಟ ಮೇಳವೂ ನಡೆಯುತ್ತಿದೆ.

ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಗ್ರಾಹಕರಿಗಾಗಿ ವಿಶೇಷ ಕೊಡುಗೆ ಹಾಗೂ ಯೋಜನೆಗಳನ್ನು ಪ್ರಕಟಿಸಿದೆ.

'ಈ ಬಾರಿಯ ಹಬ್ಬದ ನಿಮಿತ್ತ ಗ್ರಾಹಕರಿಗಾಗಿ ವಿಶೇಷ ಕೊಡುಗೆಗಳನ್ನು ನೀಡುತ್ತಿದ್ದು, ನೋ ವೇಸ್ಟೇಜ್ , ನೋ ಸ್ಟೋನ್ ಕಾಸ್ಟ್ , ಅತಿ ಕಡಿಮೆ ಮೇಕಿಂಗ್ ಚಾರ್ಜಸ್‌ನಲ್ಲಿ ಚಿನ್ನದ ಆಭರಣಗಳನ್ನು ತಯಾರಿಸಿಕೊಡಲಾಗುತ್ತಿದೆ' ಎಂದು ಸಂಸ್ಥೆಯ ಮಾಲೀಕರಾದ ಟಿ.ಎ.ಶರವಣ ತಿಳಿಸಿದ್ದಾರೆ.

ಈ ಕೊಡುಗೆಗಳ ಜೊತೆಗೆ, ಸಾಯಿಗೋಲ್ಡ್ ಪ್ಯಾಲೇಸ್ ಗ್ರಾಹಕರಿಗಾಗಿ ಶ್ರೀಸಾಯಿ ಸಮೃದ್ಧಿ ಉಳಿತಾಯ ಯೋಜನೆ ಮತ್ತು ಶ್ರೀಸಾಯಿ ನಿತ್ಯ ನಿಧಿ ಉಳಿತಾಯ ಯೋಜನೆ ಎಂಬ ಎರಡು ಚಿನ್ನದ ಉಳಿತಾಯ ಯೋಜನೆಗಳನ್ನು ಪ್ರಾರಂಭಿಸಿದೆ. ಈ ಯೋಜನೆಗಳ ಪ್ರಯೋಜನ ಪಡೆಯುವಂತೆ ಅವರು ಮನವಿ ಮಾಡಿದ್ದಾರೆ.

'ವರಮಹಾಲಕ್ಷ್ಮಿ ಹಬ್ಬದ ಹಿನ್ನೆಲೆಯಲ್ಲಿ ನಮ್ಮ ನೆಚ್ಚಿನ ಗ್ರಾಹಕರಿಗಾಗಿ ಈ ಎಲ್ಲ ಕೊಡುಗೆಗಳನ್ನು ನೀಡಲಾಗಿದೆ.

ಗ್ರಾಹಕರು ಈಗಿನಿಂದಲೇ ತಮ್ಮ ನೆಚ್ಚಿನ ಆಭರಣಗಳನ್ನು ಕಾಯ್ದಿರಿಸಬಹುದು' ಎಂದು ಅವರು ಮನವಿ ಮಾಡಿದ್ದಾರೆ. ❖

ಪ್ಲೀಟೆಡ್ ಉಡುಗೆ

ಫ್ಯಾಷನ್



ಕೆ.ವಿ.ರಾಜಲಕ್ಷ್ಮಿ

ಸಣ್ಣ ನೆರಿಗೆಗಳುಳ್ಳ (ಪ್ಲೀಟೆಡ್) ಬಟ್ಟೆಯಿಂದಲೇ ತಯಾರಾದ ವಿಧವಿಧವಾದ ವಸ್ತ್ರ ವಿನ್ಯಾಸಗಳು ಫ್ಯಾಶನ್ ಲೋಕದಲ್ಲಿ ಸದ್ದು ಮಾಡುತ್ತಿವೆ. ಇದಕ್ಕೆಂದೇ ವಿಶೇಷ ತಂತ್ರಜ್ಞಾನ ಬಳಸಿ ಸಿದ್ಧವಾಗುವ ಪ್ಲೀಟೆಡ್ ಬಟ್ಟೆಗಳನ್ನು ಸ್ಯಾಟಿನ್, ಕ್ರೇಪ್, ಸಾಫ್ಟ್ ಸಿಲ್ಕ್, ಜಾರ್ಜೆಟ್ ಮೆಟೀರಿಯಲ್‌ಗಳಲ್ಲಿ ಕಾಣಬಹುದು. ತೆಳ್ಳಗಿರಲಿ, ತುಸು ಸ್ಥೂಲಕಾಯವಿರಲಿ, ಪ್ಲೀಟೆಡ್ ಉಡುಗೆಗಳು ಆರಾಮಾಗಿ ಒಗ್ಗಿಕೊಳ್ಳುತ್ತವೆ. ಸಭೆ ಸಮಾರಂಭಗಳಲ್ಲಿ ನೋಡುಗರನ್ನು ಸೆಳೆಯುವ ಈ ವಸ್ತ್ರದ ವಿಶೇಷ. ಇದರಿಂದ ತಯಾರಾದ ಸೀರೆ, ಸಿದ್ಧ ಉಡುಪುಗಳು ಈಗ ಫ್ಯಾಷನ್.

ಸೀರೆ

ಪ್ಲೀಟೆಡ್ ಸೀರೆಗೆ ಫಾಲ್ಸ್, ಅಂಚು ಹೊಲಿಸುವ ಅವಶ್ಯಕತೆಯೇ ಇರದ ಸೀರೆಗಳು, ಸುಲಭವಾಗಿ ಉಡಲು ಬರುತ್ತವೆ. ಪಾರ್ಟಿ, ಮದುವೆ, ಕಚೇರಿ... ಹೀಗೆ ಎಲ್ಲ ಸಂದರ್ಭಕ್ಕೆ ಹೊಂದುವಂತೆ ಸೆರಗನ್ನು, ಸಿಂಗಲ್ ಲೇಯರ್, ಮಲ್ಟಿ ಲೇಯರ್, ಕೊರಳ ಸುತ್ತ 'V' ಆಕಾರದಲ್ಲಿ ಇಳಿಯುವಂತೆ, ಇತ್ಯಾದಿ ವಿವಿಧ ವಿನ್ಯಾಸಗಳಲ್ಲಿ ಕೂರಿಸಬಹುದು. ಪ್ಲೈನ್, ಪ್ರಿಂಟೆಡ್ ಮತ್ತು ಡುಯಲ್ ಟೋನ್ ಸೀರೆಗಳು ಲಭ್ಯವಿವೆ. ಹೆಚ್ಚು ಭಾರವಿರದ ಈ ಸೀರೆಗಳು ಉಟ್ಟರೆ ಮೋಹಕವಾಗಿರುತ್ತದೆ.

ಮ್ಯಾಕ್ಸಿ

ಸೌಂದರ್ಯವನ್ನು ಇಮ್ಮಡಿಸುವ ಈ ಪ್ಲೀಟೆಡ್ ಮ್ಯಾಕ್ಸಿಗಳು ತೋಳು ಮತ್ತು ಕುತ್ತಿಗೆಯ ವಿವಿಧ ಡಿಸೈನ್‌ಗಳಲ್ಲಿ ಆಕರ್ಷಕವಾಗಿರುತ್ತದೆ. ಫುಲ್ ಲೆಂಗ್ತ್, ಮಿಡಿ ಲೆಂಗ್ತ್‌ನ ಪ್ಲೀಟೆಡ್ ಮ್ಯಾಕ್ಸಿಗಳು ಪಾರ್ಟಿಗಳಿಗೆ ಹೋಗುವಾಗ, ಮಾಲ್, ಶಾಪಿಂಗ್‌ಗಳಿಗೆ ತೆರಳುವಾಗ ಧರಿಸಬಹುದಾದ ಟ್ರೆಂಡಿ ಉಡುಗೆ.

ಸ್ಕರ್ಟ್

ಫ್ಲೋರಲ್ ಪ್ರಿಂಟ್, ಸಾದಾ, ಬಳುಕು ಸ್ವರೂಪದ ಸ್ಕರ್ಟ್‌ಗಳು ಎಲ್ಲರ ಮನ ಸೆಳೆವಂಥದ್ದು. ಉದ್ದ, ಗಿಡ್ಡ, ಅತಿ ಗಿಡ್ಡ ಅಳತೆಯ ಪ್ಲೀಟೆಡ್ ಸ್ಕರ್ಟ್‌ಗಳೂ ಇವೆ. ಸಮಾರಂಭಕ್ಕೆ ತಕ್ಕಂತೆ ಇವುಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಕ್ಯಾಶುವಲ್,ಅಫಿಷಿಯಲ್ ಉಡುಗೆಯಾಗಿಯೂ ಇವನ್ನು ಧರಿಸಬಹುದು.

ಟಾಪ್

ಸ್ಯಾಟಿನ್, ಪಾಲಿಯೆಸ್ಟರ್, ವಿಸ್ಕೋಸ್ ರಯಾನ್, ಕ್ರೇಪ್ ಬಟ್ಟೆಗಳಲ್ಲಿ ಸಿದ್ಧಪಡಿಸಿದ ಪ್ಲೀಟೆಡ್ ಟಾಪ್‌ಗಳು ಸ್ಕರ್ಟ್, ಪ್ಯಾಂಟ್, ಜೀನ್ಸ್, ಪಲಾಝೊಗಳಿಗೆ ಮೇಲುಡುಗೆಯಾಗಿ ಸೊಬಗು ನೀಡುತ್ತವೆ. ತೋಳಿನಲ್ಲಿ ಹಲವು ವಿನ್ಯಾಸದಲ್ಲಿ ಸಿಗುವ ಪ್ಲೀಟೆಡ್ ಟಾಪ್‌ಗಳು ನೋಡಲು ಅತ್ಯಾಕರ್ಷಕವಾಗಿರುತ್ತವೆ.

ಇಂದಿನ ಅವಸರ ಯುಗಕ್ಕೆ ಹೇಳಿ ಮಾಡಿಸಿದಂತಿರುವ ದಿನನಿತ್ಯದ ಅಗತ್ಯವನ್ನು ಸುಲಭವಾಗಿ ಪೂರೈಸುವ ಐರನ್ ಬೇಡದ, ರೆಡಿ ಟು ವೇರ್ ಪ್ಲೀಟೆಡ್ ಉಡುಗೆಗಳ ನಿರ್ವಹಣೆಯೂ ಸುಲಭ ಎನ್ನುವುದು ಇನ್ನೊಂದು ಪ್ರಮುಖ ಅಂಶ. ❖

ಸಾಂದರ್ಭಿಕ ಚಿತ್ರಗಳು

ಲಿವಿಂಗ್ ರೂಮ್‌ನಲ್ಲಿಡುವ ಗಿಡಗಳನ್ನು, ಮನೆ ತ್ಯಾಜ್ಯದಿಂದ ತಯಾರಿಸಿದ ಕಾಂಪೋಸ್ಟ್ ಹಾಕಿ ಬೆಳೆಸಿ

ಸಾಂದರ್ಭಿಕ ಚಿತ್ರಗಳು

ಹೀಗಿರಲಿ ಚಂದದ ಲಿವಿಂಗ್ ರೂಮ್



ಕೀರ್ತಿಕುಮಾರಿ ಎಂ.

ಲಿವಿಂಗ್ ರೂಮ್ ಅಥವಾ ಹಾಲ್ ಚಿಕ್ಕದಿರಲಿ, ದೊಡ್ಡದಿರಲಿ ಅದು ಮನೆಯ ಹೃದಯಭಾಗ. ಮನೆಮಂದಿಯೆಲ್ಲಾ ಒಟ್ಟಿಗೆ ಕುಳಿತು ಸಂತೋಷದಿಂದ ಹರಟೆ ಹೊಡೆಯಲು, ಒಬ್ಬರೇ ಇದ್ದಾಗ ಏಕಾಂತದ ಅಹ್ಲಾದಕರ ಸುಖ ಅನುಭವಿಸಲು ಚೆಂದದ ಲಿವಿಂಗ್ ರೂಮ್ ಬೇಕು. ಇಂಥದ್ದೊಂದು ಸುಂದರ ಲಿವಿಂಗ್ ರೂಮ್ ನಿರ್ಮಿಸಿಕೊಳ್ಳಲು ಶ್ರೀಮಂತರೇ ಆಗಬೇಕೆಂದೇನಿಲ್ಲ. ಪುಟ್ಟ ಕೋಣೆಯೇ ಆಗಿದ್ದರೂ ವಾವ್ ಎನಿಸುವಂತೆ ವಿನ್ಯಾಸಗೊಳಿಸಬಹುದು. ಅದು ಹೇಗೆ ಅಂತೀರಾ ? ಇಲ್ಲಿದೆ ನೋಡಿ ಟಿಪ್ಸ್..

ಚಿಕ್ಕದಾಗಿರಬೇಕು, ಚೊಕ್ಕವಾಗಿರಬೇಕು, ಅಹ್ಲಾದಕರ ವಾತಾವರಣ ಇರಬೇಕು, ಅಲಂಕಾರವೂ ಬೇಕು.. ಹೀಗಿರಬೇಕು ಲಿವಿಂಗ್ ರೂಮ್!

ದೊಡ್ಡ ಸೋಫಾಗಳು ಬೇಡ

ವಸ್ತುಗಳನ್ನು ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡಿದ್ದರೆ ಲಿವಿಂಗ್ ರೂಮ್ ಎಷ್ಟು ದೊಡ್ಡದಿದ್ದರೂ ಕಿರಿದಾಗಿರುವಂತೆ ಭಾಸವಾಗುತ್ತದೆ, ಕಿರಿಕಿರಿ ಎನಿಸುತ್ತದೆ. ಬದಲಾಗಿ ಅತ್ಯಗತ್ಯ ವಸ್ತುಗಳನ್ನು ಮಾತ್ರ ಶಿಸ್ತುಬದ್ಧವಾಗಿ ಜೋಡಿಸಿಟ್ಟರೆ ಚೊಕ್ಕದಾಗಿ, ದೊಡ್ಡದಾಗಿ ಕಾಣುತ್ತದೆ. ಲಭ್ಯವಿರುವ ಜಾಗದ ಅಳತೆಗೆ ತಕ್ಕಂತೆ ಚಿಕ್ಕ ಸೋಫಾ ಸೆಟ್, ಪೀಠೋಪಕರಣಗಳನ್ನು ಜೋಡಿಸಿ. ಹೆಚ್ಚು ಜಾಗ ಆಕ್ರಮಿಸುವ ಸೋಫಾ ಬದಲಿಗೆ ಸೋಫಾ ಕಮ್ ಬೆಡ್, ಮಡಚಬಹುದಾದ ಟೇಬಲ್ ಹೀಗೆ ಬಹುಬಳಕೆಗೆ ಬರುವಂಥವುಗಳನ್ನು ಆಯ್ಕೆ ಮಾಡಿ. ಈಗೀಗ ವಾಲ್‌ಮೌಂಟ್ ಮಂಚ, ಸೋಫಾ ಕೂಡ ಲಭ್ಯವಿದೆ. ಇವೆಲ್ಲ ಜಾಗ ಉಳಿಸುವ ಪೀಠೋಪಕರಣಗಳು.

ಕುಂಡಗಳಲ್ಲಿ ಗಿಡಗಳನ್ನು ನೆಡಿ

ಮನೆಯ ಹಾಲ್‌ನಲ್ಲಿ ಕುಂಡಗಳನಿಟ್ಟು, ಅದರಲ್ಲಿ ಗಿಡಗಳನ್ನು ಬೆಳೆಸಿ. ಇವು ಲಿವಿಂಗ್ ರೂಮ್ ಅಂದಕ್ಕೆ ಮತ್ತಷ್ಟು ಮೆರಗು ನೀಡುತ್ತವೆ. ಮನೆಯೊಳಗಡೆ ಗಿಡಗಳಿದ್ದರೆ ಕೋಣೆಯ ಒಳಗಡೆಯ ಗಾಳಿಯನ್ನೂ ಶುದ್ಧವಾಗಿಡುತ್ತವೆ. ಚಿಕ್ಕ-ಚಿಕ್ಕ ಹೂವಿನ ಗಿಡ, ಮನಿ ಪ್ಲ್ಯಾಂಟ್, ಅಲಂಕಾರಿಕ ಗಿಡಗಳನ್ನು ಬೆಳೆಸಬಹುದು.

ಗೋಡೆಗೆ ತಿಳಿ ಬಣ್ಣ

ಲಿವಿಂಗ್ ರೂಮ್ ಗೋಡೆಗೆ ಗಾಢ ಬಣ್ಣಗಳು ಅಷ್ಟೊಂದು ಸೂಕ್ತ ಎನಿಸುವುದಿಲ್ಲ. ಬೇಬಿ ಪಿಂಕ್, ತಿಳಿ ಹಸಿರು, ದಂತ ವರ್ಣ, ಬೇಬಿ ಬ್ಲ್ಯೂ ಬಣ್ಣದ ಪೇಂಟ್ ಹೆಚ್ಚು ಆಕರ್ಷಕವಾಗಿ ಕಾಣುತ್ತದೆ. ಈ ಬಣ್ಣಗಳಿಂದ ಕೋಣೆಯು ಹೆಚ್ಚು ದೊಡ್ಡದಾಗಿರುವಂತೆ ಭಾಸವಾಗುತ್ತದೆ. ಜೊತೆಗೆ ತಿಳಿ ಬಣ್ಣದ ಪೇಂಟ್ ನೈಸರ್ಗಿಕ ಬೆಳಕು ಪ್ರತಿಫಲಿಸುವಂತೆ ಮಾಡುತ್ತದೆ.

ನೈಸರ್ಗಿಕ ಬೆಳಕಿಗೆ ಆದ್ಯತೆ ಇರಲಿ

ಮುಂಜಾನೆ ಸೂರ್ಯನ ಕಿರಣಗಳು ಮೈ ಸೋಕಿದರೆ ಆರೋಗ್ಯಕ್ಕೂ ಒಳ್ಳೆಯದು, ಮನಸ್ಸಿಗೂ ಹಿತ. ಹೀಗಾಗಿ ಮನೆ ಕಟ್ಟುವ ಮೊದಲೇ ಲಿವಿಂಗ್ ರೂಮ್‌ನಲ್ಲಿ ದೊಡ್ಡ ದೊಡ್ಡ ಕಿಟಕಿಗಳಿರುವಂತೆ ನೋಡಿಕೊಳ್ಳಿ.

ಬಳಿಕ ವಿನ್ಯಾಸದ ಸಂದರ್ಭದಲ್ಲೂ ಕೋಣೆಗೆ ನೈಸರ್ಗಿಕವಾಗಿ ಬೆಳಕು ಬರುವ ಪ್ರದೇಶಕ್ಕೆ ಅಡ್ಡವಾಗಿ ವಸ್ತುಗಳನ್ನು ಇಡದಂತೆ ಎಚ್ಚರ ವಹಿಸಿ.

ಕನ್ನಡಿಗಳನ್ನು ಬಳಸಿ

ಕೋಣೆಯಲ್ಲಿ ಕನ್ನಡಿ ಅಥವಾ ಪ್ರತಿಫಲಿತ ವಸ್ತುಗಳನ್ನು ಇಡುವುದರಿಂದ ಸ್ಥಳ ದೊಡ್ಡದಾಗಿರುವಂತೆ ಭಾಸವಾಗುತ್ತದೆ. ಅದಕ್ಕಾಗಿ ಫ್ಲೋರ್ ಮಿರರ್, ವಾಲ್ ಮಿರರ್, ವಿಂಟೇಜ್ ಮಿರರ್ ಬಳಸಬಹುದು. ಟೇಬಲ್, ಕಪಾಟು.. ಮುಂತಾದ ಪೀಠೋಪಕರಣಗಳಲ್ಲಿ ಮಿರರ್ ಬಳಕೆ ಮಾಡುವುದು ಉತ್ತಮ.

ಉದ್ದದ ಕರ್ಟನ್

ಕೋಣೆಯ ನೆಲದ ಬಣ್ಣ, ಸೋಫಾ ಕಲರ್ ಆಧರಿಸಿ ಅದಕ್ಕೆ ಹೊಂದುವ ಕರ್ಟನ್ ಬಳಸಿ. ಸಾಮಾನ್ಯವಾಗಿ ಕೋಣೆ ಚಿಕ್ಕದಾಗಿದ್ದರೆ ಗಾಢ ಬಣ್ಣದ ಕರ್ಟನ್ ಸೂಕ್ತವೆನಿಸುವುದಿಲ್ಲ. ಜೊತೆಗೆ ಕೋಣೆಯ ಸ್ಥಳವನ್ನೆಲ್ಲಾ ಆಕ್ರಮಿಸಿದಂತೆ ಭಾಸವಾಗುತ್ತದೆ. ಹೀಗಾಗಿ, ಹೆಚ್ಚು ಡಿಸೈನ್‌ಗಳಿರದ, ತಿಳಿ ಬಣ್ಣದ ಕರ್ಟನ್ ಬಳಸಿ. ಕಿಟಕಿಗಿಂತ ಉದ್ದನೆಯ, ನೆಲಕ್ಕೆ ತಾಕುವಂತಿರುವ ಕರ್ಟನ್ ಹೆಚ್ಚು ಲುಕ್ ನೀಡುತ್ತದೆ.



ಅಲಂಕಾರಿಕ ವಸ್ತುಗಳನ್ನಿಡಿ

ಗಡಿಯಾರದಿಂದ ಹಿಡಿದು, ಟೀಪಾಯಿ ಮೇಲಿಡುವ ಫ್ಲವರ್ ಪಾಟ್, ಸೋಫಾ ಕವರ್, ಗೋಡೆಯಲ್ಲಿ ನೇತು ಹಾಕುವ ಅಲಂಕಾರಿಕ ವಸ್ತುಗಳೆಲ್ಲವೂ ಮನೆಯ ಅಂದವನ್ನು ಹೆಚ್ಚಿಸುತ್ತವೆ. ಹಾಗಂತ ಮಾರುಕಟ್ಟೆಯಲ್ಲಿ ಕಣ್ಣಿಗೆ ಕಾಣುವ ವಸ್ತುಗಳನ್ನೆಲ್ಲಾ ತಂದು ಹಾಕಬೇಡಿ. ಮನೆಯ ಜಾಗ, ಗೋಡೆ ಮತ್ತು ಸೋಫಾದ ಬಣ್ಣ ನೋಡಿಕೊಂಡು ಜೋಡಿಸಿ.ಈ ಬಗ್ಗೆ ಹೆಚ್ಚು ಗೊತ್ತಿಲ್ಲವೆಂದರೆ ಪರಿಣತರನ್ನು ಸಂಪರ್ಕಿಸಿ, ಸಲಹೆ ಪಡೆಯುವುದು ಉತ್ತಮ.

ಟಿವಿ ಬೇಡ

ಲಿವಿಂಗ್ ರೂಮ್ ಕುಟುಂಬದವರೊಂದಿಗೆ ಹರಟೆ ಹೊಡೆಯುವ, ಆಟ ಆಡುವ, ನಗುವ, ನಗಿಸುವ ಜಾಗ. ಅಲ್ಲಿ ಟಿವಿ ಇಟ್ಟರೆ ಮನೆಮಂದಿಯ ನಡುವಿನ ಸಂಭಾಷಣೆಗೆ ಕತ್ತರಿ ಬೀಳುತ್ತದೆ. ಹಾಗಾಗಿ ಟಿವಿಯನ್ನು ಲಿವಿಂಗ್ ರೂಮ್‌ನಿಂದ ದೂರವಿಡಿ.

ಸ್ಮಾರ್ಟ್ ಆಗಿ

ಆಧುನಿಕ ಯುಗದಲ್ಲಿ ಎಲ್ಲವೂ ಸ್ಮಾರ್ಟ್ ಆಗುತ್ತಿದೆ. ಅದರಂತೆ ಅಮೆಜಾನ್ ಅಲೆಕ್ಸಾ ಅಥವಾ ಗೂಗಲ್ ಬಳಕೆಯೊಂದಿಗೆ ನಿಮ್ಮ ಮನೆಯನ್ನೂ ಸ್ಮಾರ್ಟ್ ಹೋಮ್ ಮಾಡಿ.

ಥೀಮ್ ಆಧರಿಸಿ ವಿನ್ಯಾಸಗೊಳಿಸಿ



ಸಾಂಪ್ರದಾಯಿಕ ವಿನ್ಯಾಸಕ್ಕೆ ಬದಲಾಗಿ ಥೀಮ್ ಆಧಾರಿತವಾಗಿ ಲಿವಿಂಗ್ ರೂಮ್ ವಿನ್ಯಾಸಗೊಳಿಸಿ. ಮರದ ಪೀಠೋಪಕರಣ ಹೆಚ್ಚಿರುವಂತೆ ನೋಡಿಕೊಳ್ಳಿ. ಕಮಾನಿನ ಗೋಡೆಗಳು ಮನೆಗೆ ಮತ್ತಷ್ಟು ಮೆರುಗು ನೀಡುತ್ತವೆ. ಪುಸ್ತಕದ ಕಪಾಟುಗಳು ಅಲಂಕಾರವಾಗಿಯೂ ಕಾಣುತ್ತವೆ. ❖

ಕಣ್ಮನ ತಣಿಸಿದ ‘ನೃತ್ಯಾಂತರಂಗ’

31ನೇ ವಾರ್ಷಿಕೋತ್ಸವ ಆಚರಿಸಿಕೊಂಡ ಶ್ರೀಮಾತೃಕಾ ಕಲ್ಚರಲ್ ಟ್ರಸ್ಟ್

- ಕರ್ನಾಟಕ ಕಲಾ ಶ್ರೀ ವಿದ್ಯಾ ರವಿಶಂಕರ್ ಅವರಿಂದ ಗುರುನಮನ

ನೃತ್ಯ ಪ್ರದರ್ಶಿಸಿದ ವಿದ್ಯಾ ರವಿಶಂಕರ್ ಶಿಷ್ಯವೃಂದ

ಬೆಂಗಳೂರು: ಶ್ರೀಮಾತೃಕಾ ಕಲ್ಚರಲ್ ಟ್ರಸ್ಟ್ ನಗರದಲ್ಲಿ ಇತ್ತೀಚೆಗೆ ಹಮ್ಮಿಕೊಂಡ ‘ನೃತ್ಯಾಂತರಂಗ ಏಕತ್ರಿಂಶತ್ ವರ್ಷೋತ್ಸವ-ಗುರುನಮನ’ ಕಾರ್ಯಕ್ರಮದಲ್ಲಿ ನೃತ್ಯಗುರು ‘ಕರ್ನಾಟಕ ಕಲಾಶ್ರೀ’ ವಿದ್ಯಾ ರವಿಶಂಕರ್ ನೇತೃತ್ವದಲ್ಲಿ ಕಲಾವಿದರು ನೃತ್ಯ ಪ್ರದರ್ಶಿಸಿದರು. ಹೆಜ್ಜೆ-ಗೆಜ್ಜೆಯ ಸದ್ದು ನೋಡುಗರ ಮೈಮನಗಳನ್ನು ಪುಳಕಗೊಳಿಸಿತು.

ವಿದ್ಯಾ ರವಿಶಂಕರ್ ಅವರು 31 ವರ್ಷಗಳಿಂದ ಬೆಂಗಳೂರು ಮತ್ತು ಶ್ರೀರಂಗಪಟ್ಟಣದಲ್ಲಿ ನೃತ್ಯೋತ್ಸವ ನಡೆಸುತ್ತಾ ಬಂದಿದ್ದಾರೆ. ಅವರು ನೃತ್ಯ ಗುರುಗಳಾದ, ಮೈಸೂರು ಶೈಲಿ ಭರತನಾಟ್ಯ ಸಂಪ್ರದಾಯ ಗುರು ಪರಂಪರೆಯ ಹೆಸರಾಂತ ಕಲಾವಿದೆ ದಿ. ‘ಪದ್ಮಭೂಷಣ’ ಡಾ.ಕೆ ವೆಂಕಟಲಕ್ಷ್ಮಮ್ಮನವರಿಗೆ ಕಾರ್ಯಕ್ರಮದಲ್ಲಿ ಗುರನಮನ ಸಲ್ಲಿಸಿದರು.

‘ನಾಟ್ಯರಾಣಿ ಶಾಂತಲಾ’ ಪ್ರಶಸ್ತಿ ಪುರಸ್ಕೃತೆ ಪ್ರೊ.ಎಂ ಶಕುಂತಲಾ ಮತ್ತು ಗುರುವಿನ ನೆಚ್ಚಿನ ನೇರ ಪ್ರಧಾನ ಪಟ್ಟಶಿಷ್ಯೆ ವಿದ್ಯಾ ರವಿಶಂಕರ್ ಅವರು ರಚಿಸಿದ ‘ಡಾ. ಕಡೂರು ವೆಂಕಟಲಕ್ಷ್ಮಮ್ಮ’ ಪುಸ್ತಕವನ್ನು ಚಿತ್ರದುರ್ಗದ ಬಂಜಾರ ಪೀಠದ ಸರದಾರ್ ಸೇವಾಲಾಲ್ ಸ್ವಾಮೀಜಿ ಬಿಡುಗಡೆ ಮಾಡಿದರು. ಸಮಾರಂಭ ಉದ್ಘಾಟಿಸಿದ ಅವರು, ಆಶೀರ್ವಚನ ನೀಡಿದರು.

ನೃತ್ಯ ಪ್ರದರ್ಶಿಸಿದ ವಿದ್ಯಾ ರವಿಶಂಕರ್

ನಾಲ್ವರಿಗೆ ‘ವೆಂಕಟಲಕ್ಷಮ್ಮ ಪ್ರಶಸ್ತಿ’

ಸಮಾರಂಭದಲ್ಲಿ ಕಲಾ ನಿರ್ದೇಶಕಿ ಲಲಿತಾ ಶ್ರೀನಿವಾಸನ್, ಕಲಾ ಸಂಶೋಧಕರಾದ ಚೂಡಾಮಣಿ ನಂದಗೋಪಾಲ್, ಕಲಾ ನಿರ್ದೇಶಕ ಪ್ರೊ.ಕೆ. ರಾಮಮೂರ್ತಿ ರಾವ್ ಹಾಗೂ ಕಲಾ ನಿರ್ದೇಶಕಿ ಮಾಲಾ ಶಶಿಕಾಂತ್ ಅವರಿಗೆ ‘ಪ್ರದ್ಮಭೂಷಣ ಡಾ.ಕೆ. ವೆಂಕಟಲಕ್ಷಮ್ಮ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಪುಷ್ಪಾವತಿ ವಿಜಯ್ ಕುಮಾರ್, ಸ್ವಾತಿ ಅಯ್ಯರ್ ಕಟ್ಟಿ, ಶ್ರೀನಿವಾಸ್ ನಾಯಕ್, ಆಂಡಾಳ್ ಭರತ್, ಭಾಗ್ಯಶ್ರೀ ಮಹೇಶ್, ಭಾರತಿಶ್ರೀ ಸಚಿನ್, ಅನಘಾ ಪಾಠಕ್, ವಿದ್ಯಾ ಕೃಷ್ಣ, ಸುಶ್ಮಿತ ಟಿ.ಎಸ್., ನಿಧಿ ಜಿ., ವರ್ಷಾ ವೆಂಕಟೇಶ್, ವೈಷ್ಣವಿ ವಿ. ಭಟ್, ಸಿಂಧು ಕೃಷ್ಣ, ಸಹನಾ ಎಸ್.ಎಲ್. ಹಾಗೂ ಭಾವನಾ ಆರ್. ಅವರಿಗೆ ‘ಮಾತೃಕಾ ಮಾಣಿಕ್ಯ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಮೈಸೂರು ಒಡೆಯರ ಆಸ್ಥಾನ ಪರಂಪರಾಗತ, ಪರಮಗುರು ನಾಟ್ಯ ಸರಸ್ವತಿ ಜಟ್ಟಿತಾಯಮ್ಮನವರಿಂದ ಪ್ರವರ್ತನೆಗೊಂಡಿರುವ ಸಂಪ್ರದಾಯದಂತೆ, ನೃತ್ಯಾಂತರಂಗ ಉತ್ಸವದ ಪೂರ್ವರಂಗವಿಧಿಯು ನೃತ್ಯಗುರು ಪ್ರೊ.ಎಂ.ಶಕುಂತಲಾ ಅವರ ಸಿರಿಕಂಠದಿಂದ ಚೂರ್ಣಿಕೆ ಗಾಯನವು ರಂಜಿಸಿತು.

ವಿದ್ಯಾ ರವಿಶಂಕರ್ ಅವರ ಮೈಸೂರು ಶೈಲಿಯ ಸಾಂಪ್ರದಾಯಿಕ ಅಮೋಘ ನೃತ್ಯಾಭಿನಯವು ಪಂಡಿತ ಪಾಮರರಲ್ಲಿ ರಸಾನುಭವದ ಛಾಪನ್ನು ಮೂಡಿಸಿತು. ಅವರ ನಿರ್ದೇಶನದಲ್ಲಿ ಶಿಷ್ಯವೃಂದದ ಉದಯೋನ್ಮುಖ ಕಲಾವಿದರು ನೃತ್ಯ ಪ್ರದರ್ಶಿಸಿದರು. ಮೈಸೂರು ಶೈಲಿ ಭರತನಾಟ್ಯದ ಸಾಂಪ್ರದಾಯಿಕ ವಿಶೇಷ ನೃತ್ಯವು ಸಭಾಂಗಣದಲ್ಲಿ ಕಿಕ್ಕಿರಿದು ತುಂಬಿದ್ದ ಪ್ರೇಕ್ಷಕರು ಮನಸೂರೆಗೊಳ್ಳುವಂತೆ ಮಾಡಿತು.

ವಕೀಲ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶಾಸಕ ಎಲ್.ಎ ರವಿಸುಬ್ರಹ್ಮಣ್ಯ, ಪ್ರೊ.ಮೈ.ವಿ ಸುಬ್ರಹ್ಮಣ್ಯ, ಕಲಾ ವಿಮರ್ಶಕ ಡಾ.ಎಂ.ಸೂರ್ಯಪ್ರಸಾದ್ ಹಾಗೂ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಬಿ.ಎಸ್. ರವಿಶಂಕರ್ ಉಪಸ್ಥಿತರಿದ್ದರು. ■

‘ಡಾ. ಕಡೂರು ವೆಂಕಟಲಕ್ಷಮ್ಮ’ ಪುಸ್ತಕವನ್ನು ಸರದಾರ್ ಸೇವಾರಾರ್ ಸ್ವಾಮೀಜಿ ಬಿಡುಗಡೆ ಮಾಡಿದರು. ವಿದ್ಯಾ ರವಿಶಂಕರ್, ಪ್ರೊ.ಎಂ.ಶಕುಂತರಾ, ಅಶೋಕ್ ಹಾರನಳ್ಳಿ, ಡಾ.ಎಂ. ಸೂರ್ಯಪ್ರಸಾದ್, ಬಿ.ಎಸ್. ರವಿಶಂಕರ್ ಮತ್ತು ಪ್ರಶಸ್ತಿ ಪುರಸ್ಕೃತರು ಇದ್ದಾರೆ.

ಪ್ರಜಾವಾಣಿ ಪ್ರಜಾ ಪ್ಲಸ್
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ
ಶನಿವಾರ, 30 ಜುಲೈ 2022

ಕೊಹಿನೂರ್ ರಹಸ್ಯ ಭೇದಿಸುತ್ತಾ!

‘ಭಾರತೀಯ ಚಿತ್ರರಂಗದ ಗೆಲುವು’

ದಕ್ಷಿಣ ಭಾರತದ ಸಿನಿಮಾಗಳು ಹೆಚ್ಚಿನ ರಾಷ್ಟ್ರೀಯ ಪ್ರಶಸ್ತಿಗಳನ್ನು ಬಾಚಿಕೊಂಡಿರುವುದರ ಕುರಿತು ಮಾತಿಗಿಳಿದ ಮನೋಜ್ ಬಾಜಪೇಯಿ, ‘ನಾನು ಇಡೀ ಭಾರತೀಯ ಚಿತ್ರರಂಗವನ್ನು ಒಂದಾಗಿ ನೋಡುತ್ತೇನೆ. ಯಾರು ಪ್ರಬಲವಾಗಿದ್ದಾರೆ, ಯಾರಿಲ್ಲ ಎಂಬ ವಿಂಗಡಣೆ ಮಾಡುವುದಿಲ್ಲ. ನಾನು ತೆಲುಗು, ತಮಿಳು ಸಿನಿಮಾದಲ್ಲೂ ನಟಿಸಿದ್ದೇನೆ. ನಾನು ಮನಸ್ಸಿನಲ್ಲೆಂದೂ ಇಂಡಸ್ಟ್ರಿಯ ನಡುವೆ ಭೇದ ಮಾಡಿಲ್ಲ, ಮಾಡುವುದೂ ಇಲ್ಲ. ದಕ್ಷಿಣ ಭಾರತದ ಸಿನಿಮಾಗಳು ಇಂದು ವಿಶ್ವದೆಲ್ಲೆಡೆ ರಾರಾಜಿಸುತ್ತಿವೆ ಎಂದರೆ, ಅದು ಭಾರತದ ಸಿನಿಮಾ. ನಾನು ಈ ರೀತಿ ನೋಡಬಯಸುತ್ತೇನೆ. ಎಲ್ಲ ಚಿತ್ರರಂಗದಲ್ಲೂ ನನಗೆ ಗೆಳೆಯರಿದ್ದಾರೆ. ಬೆಂಗಳೂರಿನಲ್ಲೂ ಇದ್ದಾರೆ. ಚೆನ್ನೈನಲ್ಲಿ ವಿಜಯ್ ಸೇತುಪತಿ, ವಿಕ್ರಮ್ ನನ್ನ ಗೆಳೆಯರು. ಯಾವುದೇ ಭಾಗದ ಒಂದು ಸಿನಿಮಾದ ಯಶಸ್ಸನ್ನು ನಾನು ಒಬ್ಬ ಕಲಾವಿದನಾಗಿ, ಭಾರತೀಯ ಚಿತ್ರರಂಗದ ಗೆಲುವಾಗಿ ನೋಡುತ್ತೇನೆ. ಇದನ್ನು ಹೊರತುಪಡಿಸಿಯೂ, ದಕ್ಷಿಣ ಭಾರತದ ಸಿನಿಮಾಗಳು ದೇಶದಾದ್ಯಂತ ಯಶಸ್ವಿ ಪ್ರದರ್ಶನ ಕಾಣುತ್ತಿರುವುದು ಒಳ್ಳೆಯ ಬೆಳವಣಿಗೆ. ನಮ್ಮ ಸಿನಿಮಾ ಕಥೆಗಳು ಭಾರತದ ಮಣ್ಣಿಗೆ ಹತ್ತಿರವಾಗಿರಬೇಕು. ನಮ್ಮ ಸಂಸ್ಕೃತಿಯ ಬೇರಿಗೆ ಅಂಟಿಕೊಂಡಿರಬೇಕು’ ಎಂದರು.

‘ಸ್ಯಾಂಡಲ್‌ವುಡ್‌ನಿಂದಲೂ ನನಗೆ ಆಫರ್‌ಗಳು ಬಂದಿದ್ದವು, ಆದರೆ ಕಥೆ ನನಗೆ ಹಿಡಿಸದ ಕಾರಣ ಒಪ್ಪಿಕೊಂಡಿರಲಿಲ್ಲ. ಅದ್ಭುತವಾದ, ಆಕರ್ಷಕ ಕಥೆ ಸಿಕ್ಕರೆ ಖಂಡಿತವಾಗಿಯೂ ಕನ್ನಡದಲ್ಲೂ ನಟಿಸುವೆ’ ಎನ್ನುತ್ತಾರೆ ಮನೋಜ್.



ಡಿಸ್ಕವರಿ ಪ್ಲಸ್‌ನ ‘ಸೀಕ್ರೆಟ್ಸ್’ ಸಾಕ್ಷ್ಯಸರಣಿಯ ಎರಡನೇ ಚಾಪ್ಟರ್‌ನಲ್ಲಿ ವಿಶ್ವದ ಅತಿ ದೊಡ್ಡ ವಜ್ರ ‘ಕೊಹಿನೂರ್’ ಹಿಂದಿರುವ ರಹಸ್ಯವನ್ನು ಬಿಚ್ಚಿಡಲು ನಟ ಮನೋಜ್ ಬಾಜಪೇಯಿ ಆಗಮಿಸುತ್ತಿದ್ದಾರೆ. ಆ.4ರಂದು ಈ ಸಾಕ್ಷ್ಯಸರಣಿ ಬಿಡುಗಡೆಯಾಗುತ್ತಿದೆ.

ಮನೋಜ್ ಬಾಜಪೇಯಿ

ಅಭಿಲಾಷ್ ಪಿ.ಎಸ್

● ಕೊಹಿನೂರ್ ಕಥೆಯನ್ನು ಹೇಳುವ ಉದ್ದೇಶ?

ಕೊಹಿನೂರ್ ಎನ್ನುವುದು ಭಾರತದ ಸಂಸ್ಕೃತಿಯ ಇತಿಹಾಸದ ಭಾಗ. ಇದರ ಕಥೆ ನಮ್ಮ ಜೀವನದ ಭಾಗವಾಗಿದೆ. ಭಾವನಾತ್ಮಕ ಸಂಬಂಧವೂ ಇದೆ. ಹೀಗಾಗಿ ಸಂಶೋಧನೆಗೆ ಬಹಳ ಆಕರ್ಷಕವಾದ ವಿಷಯವಿದು. ಪ್ರತಿಯೊಬ್ಬರೂ ಈ ವಜ್ರದ ಹಿಂದಿನ ಕಥೆಯನ್ನು ತಿಳಿದುಕೊಳ್ಳಬೇಕು. ಇದರಲ್ಲಿ ಡ್ರಾಮವೂ ಇದೆ. ಈ ಹಿಂದೆ ತೆರೆಕಂಡಿದ್ದ ‘ಸೀಕ್ರೆಟ್ಸ್ ಆಫ್ ಸಿನೌಲಿ’ಗಿಂತ ‘ಸೀಕ್ರೆಟ್ಸ್ ಆಫ್ ಕೊಹಿನೂರ್’ ವಿಷಯದಲ್ಲಿ ಹಾಗೂ ನಿರೂಪಣೆಯಲ್ಲೂ ಭಿನ್ನ. ಇದೊಂದು ಸಾಕ್ಷ್ಯಚಿತ್ರ. ಇಂಥ ವಿಷಯವಿರುವಾಗ ಯಾವುದೇ ಭಾವನೆಗಳನ್ನು ತುಂಬದೆ ನಾನು ನಿರೂಪಣೆ ಮಾಡಿದರೆ, ಪ್ರೇಕ್ಷಕನಿಗೂ ಹಿಡಿಸುವುದಿಲ್ಲ. ಜೊತೆಗೆ ಸ್ವಾರಸ್ಯವೂ ಇರುವುದಿಲ್ಲ. ಹಾಗೆಂದ ಮಾತ್ರಕ್ಕೆ ಡ್ರಾಮ ಎಂಬುವುದೂ ಅಧಿಕವಾಗಬಾರದು, ಸಾಕ್ಷ್ಯಚಿತ್ರದ ಘನತೆಯೂ ಇಳಿಯಬಾರದು. ಇಂಥ ಸಂದರ್ಭದಲ್ಲಿ ನಮ್ಮ ಜವಾಬ್ದಾರಿ ಹೆಚ್ಚುತ್ತದೆ. ಇದೆಲ್ಲವನ್ನೂ ಗಮನದಲ್ಲಿರಿಸಿಕೊಂಡು ಕಥೆ ಹೇಳಿದ್ದೇನೆ.

● ನಟನಾಗಿ ನಿರೂಪಣೆಯ ಸವಾಲು ಏನೇನಿತ್ತು?

ಈ ವಜ್ರಕ್ಕೆ ಕೊಹಿನೂರ್(ಪ್ರಭಾ ಪರ್ವತ) ಎಂಬ ಹೆಸರು ಹೇಗೆ ಬಂತು ಎನ್ನುವುದರಿಂದ ಹಿಡಿದು ಪ್ರತಿಯೊಂದು ವಿಷಯವೂ ನನಗೆ ಹೊಸದಾಗಿಯೇ ಇತ್ತು. ನಿರೂಪಣೆ ಜೊತೆಗೆ ಜ್ಞಾನವೂ ಸಿಕ್ಕಿತು. ನಾನು ಇತಿಹಾಸದ ವಿದ್ಯಾರ್ಥಿ. ಆದರೆ, ಇಷ್ಟವಿದ್ದು ಈ ಪದವಿಗೆ ಸೇರಿದವನಲ್ಲ. ಇತಿಹಾಸದ ಕಥೆಯನ್ನು ನಿರೂಪಣೆ ಮಾಡುವುದು ಸುಲಭ. ಆದರೆ ಕಲಿಕೆ ಬಹಳ ಕಷ್ಟ. ನನಗೆ ಎಲ್ಲ ರೀತಿಯ ದುಃಸ್ವಪ್ನಗಳನ್ನು ಈ ವಿಷಯ ನೀಡಿತ್ತು. ಹಲವು ದಿನಗಳನ್ನು ನೆನಪಿಡಬೇಕಿತ್ತು. ಎಲ್ಲರೂ ಯುಪಿಎಸ್ಸಿಗೆ ಸಿದ್ಧತೆ ನಡೆಸಲು, ಐಎಎಸ್ ಅಧಿಕಾರಿಗಳಾಗಲು ಇತಿಹಾಸದ ವಿಷಯ ಓದುತ್ತಿದ್ದರೆ, ನಾನೊಬ್ಬನೇ ನಟನಾಗಲು ಈ ವಿಷಯ ಓದಿದ್ದೆ.

ಒಂದು ಶೈಕ್ಷಣಿಕ ವಿಷಯವನ್ನು ಮನರಂಜನೆಯ ಕಥೆಯಾಗಿ ನಿರೂಪಿಸುವುದು ಅತಿ ದೊಡ್ಡ ಸವಾಲಾಗಿತ್ತು. ಕೊಹಿನೂರ್ ಎಂಬ ಕಥೆಯಲ್ಲೇ ಭಾವನೆಗಳಿವೆ. ನಿರ್ದೇಶಕ ರಾಘವ್, ಶೈಕ್ಷಣಿಕ ಮಾಹಿತಿ ನೀಡುವ ರೋಮಾಂಚನಕಾರಿ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ನಾನು ನಿರ್ದೇಶಕರ ಕೈಯಲ್ಲಿರುವ ಬೊಂಬೆಯಷ್ಟೇ. ಕೊಹಿನೂರ್ ಎಂಬ ವಜ್ರವನ್ನು ತನ್ನದಾಗಿಸಿಕೊಳ್ಳಲು ಹಲವರು ಪ್ರಯತ್ನಿಸಿದರು, ಯುದ್ಧಗಳೇ ನಡೆದವು ಎನ್ನುವುದೇ ಆಕರ್ಷಣೆಯ ವಿಷಯವಲ್ಲವೇ. ಹಲವು ಆಸಕ್ತಿಕರ ವಿಷಯಗಳು ಈ ವಜ್ರದ ಸುತ್ತ ಇವೆ. ಇವೆಲ್ಲವೂ ಈ ಸರಣಿಯಲ್ಲಿ ಅನಾವರಣಗೊಂಡಿದೆ. ‘I just hope that it comes back’ ಎಂದಷ್ಟೇ ಹೇಳಬಯಸುತ್ತೇನೆ.

> ಸಾಕ್ಷ್ಯಚಿತ್ರ ತಂಡವು ಇತಿಹಾಸ ತಜ್ಞರು, ಪ್ರಾಧ್ಯಾಪಕರು, ಲೇಖಕರ ಜೊತೆ ಚರ್ಚಿಸಿ ಇದನ್ನು ಪ್ರಸ್ತುತಪಡಿಸಿದೆ. ಲಾಹೋರ್ ಒಪ್ಪಂದವನ್ನೂ ಅಧ್ಯಯನ ನಡೆಸುವ ಅವಕಾಶ ನಮಗೆ ಸಿಕ್ಕಿತ್ತು. ಇತಿಹಾಸದಲ್ಲಿ ಹಲವು ಆಯಾಮಗಳು ಖಂಡಿತವಾಗಿಯೂ ಇರುತ್ತವೆ. ಇದು ಸಹಜ. ನಮಗೆ ಯಾವುದು ವಿಶ್ವಾಸಾರ್ಹ ಎಂದೆನಿಸಿತೋ ಅದನ್ನು ನಾವು ಪ್ರೇಕ್ಷಕರ ಎದುರಿಗಿರಿಸಿದ್ದೇವೆ. ಸಾವಿರ ವರ್ಷಗಳ ಇತಿಹಾಸವನ್ನು ಎರಡು ಕಂತುಗಳಲ್ಲಿ ಕೇವಲ 90 ನಿಮಿಷದಲ್ಲಿ ಹೇಳುವಾಗ ಖಂಡಿತವಾಗಿಯೂ ಕೆಲವು ವಿಷಯಗಳು ಬಿಟ್ಟುಹೋಗಿರಬಹುದು. ಒಟ್ಟಿನಲ್ಲಿ ಇದು ಕೊಹಿನೂರ್ ವಜ್ರದ ಪಯಣ.
>
> **ರಾಘವ್ ಜೈರತ್,** ನಿರ್ದೇಶಕ.

● ಕೊಹಿನೂರ್ ಸಾಕ್ಷ್ಯಸರಣಿಯ ವಿಶೇಷತೆಗಳೇನು?

ಈ ವಜ್ರದ ಮೂಲದಿಂದ ಹಿಡಿದು ಒಡೆತನದ ಬಗ್ಗೆ ಹಲವು ದಶಕದಿಂದ ಚರ್ಚೆ ನಡೆಯುತ್ತಲೇ ಇದೆ. ಈ ಅಂಶದ ಕುರಿತು ವಿವರಣೆಯೊಂದಿಗೆ, ಹೇಗೆ ಕೊಹಿನೂರ್‌ನ ಮೂಲ ವಿನ್ಯಾಸ ಬದಲಾಯಿತು, ವಜ್ರದ ಗಾತ್ರ ಹೇಗೆ 6 ಪಟ್ಟು ಕಮ್ಮಿಯಾಯಿತು? ಇತಿಹಾಸದಲ್ಲಿ ಉಲ್ಲೇಖಿಸಿದ್ದ ಮೂಲ ವಜ್ರ ಇದುವೇ? ಎಂಬ ಕುರಿತು ಆಸಕ್ತಿಯುಳ್ಳ ಮಾಹಿತಿ ಇದೆ. ಸಂಸದ, ಲೇಖಕ ಶಶಿ ತರೂರ್, ಖ್ಯಾತ ಪುರಾತತ್ತ್ವಜ್ಞ ಕೆ.ಕೆ. ಮುಹಮ್ಮದ್ ಸೇರಿದಂತೆ ಹಲವರ ಅಭಿಪ್ರಾಯಗಳೂ ಇಲ್ಲಿವೆ.

ಕೊಹಿನೂರ್ ವಜ್ರವನ್ನು ತಮ್ಮದಾಗಿಸಿಕೊಳ್ಳಲು ಬಯಸಿದ ರಾಜರ ಕಥೆಯ ಜೊತೆಗೆ ವಜ್ರದ ಬಗ್ಗೆ ಇದುವರೆಗೆ ಬಹಿರಂಗಗೊಳ್ಳದ ಕೆಲ ರಹಸ್ಯಗಳೂ ಇಲ್ಲಿವೆ. ❖

> ಡಿಸ್ಕವರಿ ಪ್ಲಸ್‌ನಲ್ಲಿ ‘ಸೀಕ್ರೆಟ್ಸ್’ ಸಾಕ್ಷ್ಯಸರಣಿ ಮುಂದುವರಿಯಲಿದೆ. ಮತ್ತಷ್ಟು ಆಕರ್ಷಕ ಕಥೆಗಳನ್ನು ಹೊತ್ತು ತಂಡ ಮರಳಲಿದೆ.
>
> **ಸಾಯಿ ಅಭಿಷೇಕ್,** ಡಿಸ್ಕವರಿ ದಕ್ಷಿಣ ಏಷ್ಯಾದ ಫ್ಯಾಕ್ಚುವಲ್ ಮತ್ತು ಲೈಫ್‌ಸ್ಟೈಲ್ ಕ್ಲಸ್ಟರ್ ಮುಖ್ಯಸ್ಥ.



ಇಂದು ಚೊಕ್ಕಾಡಿ ಹಾಡುಗಳು

ಉಪಾಸನಾ ಟ್ರಸ್ಟ್ ಹಾಗೂ ನಿರ್ಮಾಣ್ ಸಮೂಹ ಸಂಸ್ಥೆಗಳ ಸಹಯೋಗದಲ್ಲಿ ಶನಿವಾರ ಸಂಜೆ 6ಕ್ಕೆ ಬೆಂಗಳೂರಿನ ಗಿರಿನಗರದ ಶ್ರೀ ಶಂಕರ ಸಭಾಭವನದಲ್ಲಿ ಕವಿ ಸುಬ್ರಾಯ ಚೊಕ್ಕಾಡಿ ಹಾಗೂ ಡಾ. ಸಂತೋಷ್ ಚೊಕ್ಕಾಡಿ ಅವರ ಕವಿತೆಗಳ ಗೀತಗಾಯನ– ‘ಚೊಕ್ಕಾಡಿ ಹಾಡುಗಳು’ ಹಾಗೂ ಸ್ನೇಹಾಭಿನಂದನೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಉಪಾಸನಾ ಮೋಹನ್ ಅವರ ಸಂಗೀತ ಸಂಯೋಜನೆ ಮಾಡಿರುವ ಇಬ್ಬರು ಕವಿವರ್ಯರ ಗೀತೆಗಳಿಗೆ ನಾಡಿನ ಖ್ಯಾತ ಗಾಯಕರಾದ ಪಂಚಮ್ ಹಳಿಬಂಡಿ, ಎನ್.ಅಪರ್ಣ, ನಾಗಚಂದ್ರಿಕಾ ಭಟ್ ಹಾಗೂ ಉಪಾಸನಾ ಶಾಲೆಯ ಕಲಾವಿದರು ದನಿಯಾಗಲಿದ್ದಾರೆ. ಗೀತಗಾಯನದ ಮೂಲಕ ಕವಿವರ್ಯರಿಗೆ ಗೌರವ ಸಲ್ಲಿಸಲಾಗುತ್ತಿದೆ.

ಖ್ಯಾತ ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಲಿದ್ದಾರೆ ಎಂದು ಉಪಾಸನಾ ಸಂಸ್ಥೆಯ ಮುಖ್ಯಸ್ಥರಾದ ಉಪಾಸನಾ ಮೋಹನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಬ್ರಾಯ ಚೊಕ್ಕಾಡಿ

ಸಂತೋಷ್ ಚೊಕ್ಕಾಡಿ

ಆ.3ರಂದು ಭರತನಾಟ್ಯ ಮಾರ್ಗಂ ‘ಸಮರ್ಪಣಂ’ ನೃತ್ಯ ಗುರುಗಳಾದ ಕಿರಣ್ ಸುಬ್ರಹ್ಮಣ್ಯಂ ಮತ್ತು ಸಂಧ್ಯಾ ಕಿರಣ್ ಅವರ ಶಿಷ್ಯೆ ಮಾನಸಿ ಕೆ. ಅವರು ಆಗಸ್ಟ್ 3 ರಂದು ಸಂಜೆ 6.30ಕ್ಕೆ ಮಲ್ಲೇಶ್ವರಂನ ಸೇವಾ ಸದನ ಆಡಿಟೋರಿಯಂನಲ್ಲಿ ಭರತನಾಟ್ಯ ಮಾರ್ಗಂ ‘ಸಮರ್ಪಣಂ’ ನೃತ್ಯ ಪ್ರದರ್ಶಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್. ಎನ್ ಸುರೇಶ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮಾನಸಿ ಕೆ.



ಮಸಾಲ ಚಿಕನ್ ಲೆಗ್‌ಪೀಸ್

ದೀಪಕ್ ಎನ್.

ಮಸಾಲ ಚಿಕನ್ ಲೆಗ್ ಪೀಸ್ – ಸುಲಭ, ಸರಳ ಹಾಗೂ ಕಡಿಮೆ ಸಮಯದಲ್ಲಿ ತಯಾರಿಸಬಹುದಾದ ವಿಶಿಷ್ಟ ಚಿಕನ್ ಖಾದ್ಯ. ಮಳೆಗಾಲ, ಚಳಿಗಾಲಕ್ಕೆ ಹೇಳಿ ಮಾಡಿಸಿದ ಖಾದ್ಯವೂ ಹೌದು.

ಬೇಕಾಗುವ ಸಾಮಗ್ರಿಗಳು: ಚಿಕನ್ ಲೆಗ್ ಪೀಸ್ – 4, ಕಾಳುಮೆಣಸು – 2 ಚಮಚ, ಶುಂಠಿ–ಬೆಳ್ಳುಳ್ಳಿ ಪೇಸ್ಟ್, ಮೆಣಸಿನ ಪುಡಿ- 2 ಚಮಚ, ಚಿಕನ್ ಮಸಾಲ – 2 ಚಮಚ, ಗೋಧಿ ಹಿಟ್ಟು – ಅರ್ಧ ಕಪ್, ಅಡುಗೆ ಎಣ್ಣೆ – 2 ಕಪ್, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಚಿಕನ್ ಲೆಗ್ ಪೀಸ್‌ಗಳನ್ನು ಚೆನ್ನಾಗಿ ತೊಳೆದು ಸ್ವಚ್ಛಗೊಳಿಸಿ. ಕಾಳುಮೆಣಸು, ಶುಂಠಿ, ಮೆಣಸಿನ ಹುಡಿ, ಹಾಗೂ ಬೆಳ್ಳುಳ್ಳಿ, ಚಿಕನ್ ಮಸಾಲವನ್ನು ಚೆನ್ನಾಗಿ ಮಿಶ್ರಣವನ್ನು ಮಾಡಿ. ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ, ಚಿಕನ್ ಕಾಲುಗಳಿಗೆ ಈ ಮಸಾಲ ಮಿಶ್ರಣವನ್ನು ಸವರಿ. 30 ನಿಮಿಷಗಳ ಕಾಲ ಇದನ್ನು ಹಾಗೆಯೆ ಬಿಡಿ.

ಪ್ಯಾನ್‌ನಲ್ಲಿ ಎಣ್ಣೆ ಬಿಸಿ ಮಾಡಲು ಇಡಿ. ಅದು ಕಾಯುತ್ತಿದ್ದಂತೆ, ಗೋಧಿ ಹುಡಿಯಲ್ಲಿ ಚಿಕನ್ ಕಾಲುಗಳನ್ನು ಉರುಳಿಸಿ ಕಾದಿರುವ ಎಣ್ಣೆಗೆ ಹಾಕಿ ಮತ್ತು ಚೆನ್ನಾಗಿ ಬೇಯಿಸಿದರೆ ಮಸಾಲ ಚಿಕನ್ ಲೆಗ್ ಪೀಸ್ ಸವಿಯಲು ಸಿದ್ಧ. ❖

ಸಂಧಿವಾತ ನೋವಿನಿಂದ ಮುಕ್ತರಾಗಿ, ಹೊಸ ಬದುಕಿಗೆ ಹಾಯ್ ಹೇಳಿರಿ...

ಒಂದು ವೇಳೆ ನೀವು, 50 ವರ್ಷ ಮೇಲ್ಪಟ್ಟವರು ಮಾತ್ರ ಸಂಧಿವಾತ ಸಮಸ್ಯೆಗೆ ಈಡಾಗುತ್ತಾರೆ ಎಂದುಕೊಂಡಿದ್ದರೆ, ಇನ್ನೊಂದು ಬಾರಿ ಯೋಚಿಸಿ ನೋಡಿ. ಜಡಭರಿತ ಜೀವನಶೈಲಿ ಮತ್ತು ಆರೋಗ್ಯದ ಕಡೆಗಿನ ಸಂಪೂರ್ಣ ನಿರ್ಲಕ್ಷತೆಯಿಂದಾಗಿ ಸಾಕಷ್ಟು ಯುವಜನತೆ ಹಾಗೂ ಚಿಕ್ಕ ಮಕ್ಕಳಲ್ಲಿ ಕೂಡ ಸಂಧಿವಾತ ರೀತಿಯ ಆರೋಗ್ಯ ಸಮಸ್ಯೆಗಳು ಗೋಚರಿಸುತ್ತಿವೆ. ಇದರಿಂದ ಉಂಟಾಗುವ ನೋವು ವ್ಯಕ್ತಿಯ ಜೀವನದ ಗುಣಮಟ್ಟದಲ್ಲಿ ಸಾಕಷ್ಟು ಅನಾನುಕೂಲತೆಗಳನ್ನು ಹಾಗೂ ಅಸಹಾಯಕತೆಗಳನ್ನೂ ಸೃಷ್ಟಿಸುತ್ತದೆ.

ಸಂಧಿವಾತದಲ್ಲಿ ಮತ್ತು ಸಂಧಿವಾತಕ್ಕೆ ಸಂಬಂಧಿತ ಅಸ್ವಸ್ಥತೆಗಳಲ್ಲಿ ನೂರಾರು ವಿಭಿನ್ನ ರೀತಿಗಳಿವೆ. ಈ ಕಾಯಿಲೆಗಳು ಸ್ನಾಯುಭರಿತ ಅಸ್ಥಿಪಂಜರ ವ್ಯವಸ್ಥೆಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟು ಮಾಡುತ್ತವೆ, ನಿರ್ದಿಷ್ಟವಾಗಿ ಹೇಳಬೇಕೆಂದರೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ಮೂಳೆಗಳು ಸಂಧಿಸುವ ಜಾಗದಲ್ಲಿ ಪರಿಣಾಮ ಉಂಟಾಗುತ್ತದೆ. ಸಂಧಿವಾತದಲ್ಲಿ, ಬಹುತೇಕ ವಯಸ್ಸಿಗೆ ಅನುಗುಣವಾಗಿ ಒಸ್ಟಿಯೋ ಆರ್ಥ್ರಿಟಿಸ್ ಉಂಟಾಗುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಈ ಕಾಯಿಲೆಯು ನೋವು, ಸೆಡೆತ, ಕೀಲುಗಳ ಊತದೊಂದಿಗೆ ಪ್ರಾರಂಭವಾಗಿ ವ್ಯಕ್ತಿಯ ಚಲನಸೀಲತೆಯನ್ನೇ ಕುಂಠಿತಗೊಳಿಸುತ್ತದೆ.

ಎಸ್‌ಪಿಎಂಎಫ್ ಥೆರಪಿಯ ಪ್ರಯೋಜನಗಳು

- ರಕ್ತಸ್ರಾವರಹಿತ ಮತ್ತು ಅಡ್ಡಪರಿಣಾಮಗಳಿಲ್ಲದ ಚಿಕಿತ್ಸೆ
- ಕಾಯಿಲೆಯ ಬೆಳವಣಿಗೆಯನ್ನು ಸ್ಥಗಿತಗೊಳಿಸುತ್ತದೆ
- ಎರಡೂ ಮಂಡಿಗಳಿಗೆ ಏಕಕಾಲದಲ್ಲಿಯೇ ಚಿಕಿತ್ಸೆ ನೀಡಬಹುದು
- ರೋಗಿಗಳ ಚಲನಶೀಲತೆಯಲ್ಲಿ ಅಭಿವೃದ್ಧಿ ಕಾಣಬಹುದು
- ಇತರೆ ಶಸ್ತ್ರಚಿಕಿತ್ಸಾ ಪ್ರಕ್ರಿಯೆಗಳಿಗೆ ಪೂರಕ ಮತ್ತು ಮಿತವ್ಯಯಕಾರಿ

ಅತ್ಯಾಧುನಿಕ ಕ್ರಾಂತಿಕಾರಿ ಪ್ರಕ್ರಿಯೆಗಳು

ಎಸ್‌ಬಿಎಫ್ ಹೆಲ್ತ್‌ಕೇರ್ ಸಂಸ್ಥೆಯು, ಸಿಕ್ವೆನ್ಸಿಯಲ್ಲಿ ಪ್ರೊಗ್ರಾಮ್ಡ್ ಇಲೆಕ್ಟ್ರೋಮ್ಯಾಗ್ನೆಟಿಕ್ ಫೀಲ್ಡ್ (ಎಸ್‌ಪಿಎಂಎಫ್) ಮುಖಾಂತರ ತನ್ನ ರೋಗಿಗಳಿಗೆ ಚಿಕಿತ್ಸೆ ನೀಡುತ್ತದೆ. ಇದೊಂದು ಸರ್ಜರಿಮುಕ್ತ ಚಿಕಿತ್ಸೆಯಾಗಿದ್ದು ಕಾರ್ಟಿಲೇಜ್‌ಗಳಲ್ಲಿ ಜೀವಕೋಶಗಳ ಪುನರುತ್ಪಾದನೆಗೆ ಸಹಕಾರಿಯಾಗಿದೆ. ಇದು ಮಂಡಿ ಮತ್ತು ಬೆನ್ನುಹುರಿ ಭಾಗದಲ್ಲಿ ಸಂಧಿವಾತ ಚಿಕಿತ್ಸೆ ನೀಡುವಲ್ಲಿ ಅತ್ಯಂತ ಪರಿಣಾಮಕಾರಿ ಎಂದು ಸಾಬೀತಾಗಿದೆ.

ರೋಗಿ ಹೇಳಿದ ಅಚ್ಚರಿ

ಶ್ರೀಮತಿ ರೆಮಿ ಎ.ಆರ್., 47 ವರ್ಷದ ಐಟಿ ಕನ್ಸಲ್ಟಂಟ್, ಬೆಂಗಳೂರು ನಿವಾಸಿ.

ಭುಜ, ಬೆನ್ನು, ಕೆಳಬೆನ್ನು ಮತ್ತು ಕತ್ತು ನೋವಿನಿಂದ ಅತಿಯಾಗಿ ಬಳಲುತ್ತಿದ್ದ ಹಳೆಯ ಮಹಿಳಾ ರೋಗಿಯೊಬ್ಬರನ್ನು ಎಸ್‌ಬಿಎಫ್ ಹೆಲ್ತ್‌ಕೇರ್‌ನಲ್ಲಿ ತಪಾಸಣೆ ಮಾಡಲಾಯಿತು. ಅವರೇ ಹೇಳಿರುವ ಪ್ರಕಾರ, ಈ ಮೊದಲು ಕುಳಿತುಕೊಳ್ಳಲಾಗಲಿ ಅಥವಾ ನಿತ್ಯದ ಕಾರ್ಯಗಳನ್ನು ನಿರ್ವಹಿಸಲಿಕ್ಕೂ ಸಾಧ್ಯವಾಗುತ್ತಿರಲಿಲ್ಲವಂತೆ? ಆದರೆ ಚಿಕಿತ್ಸೆ ಪ್ರಾರಂಭವಾದ ನಂತರ ಅವರ ನೋವು ಗಣನೀಯವಾಗಿ ಕಡಿಮೆಯಾಗಿತ್ತು ಮತ್ತು 21 ದಿನಗಳ ಚಿಕಿತ್ಸಾ ಪ್ರಕ್ರಿಯೆ ಪೂರ್ಣಗೊಂಡ ಬಳಿಕ, ಅಚ್ಚರಿ ಎಂಬಂತೆ ಅವರ ನೋವು ಸಂಪೂರ್ಣ ಮಾಯವಾಗಿತ್ತು.

ಚಿಕಿತ್ಸೆಯಾದ್ಯಂತ ಎಸ್‌ಬಿಎಫ್ ತಂಡವು ನೀಡಿದ ಸ್ಫೂರ್ತಿ, ಬೆಂಬಲ, ಮಾರ್ಗದರ್ಶನ ಮತ್ತು ಸಹಕಾರಕ್ಕೆ ನಾನು ಆಭಾರಿಯಾಗಿದ್ದೇನೆ ಎನ್ನುತ್ತಾ, ಚಿಕಿತ್ಸೆ ಪಡೆದ 3 ವರ್ಷಗಳ ಬಳಿಕ ಇಂದಿಗೂ ಅವರು ತಮಗೆ ಲಭಿಸಿದ ಚಿಕಿತ್ಸಾ ಸೇವೆಗಳನ್ನು ಬೇರೆಯವರಿಗೂ ಪಡೆದುಕೊಳ್ಳುವಂತೆ ಸೂಚಿಸುತ್ತಿದ್ದಾರೆ. 5 ನಿಮಿಷಗಳಿಂದ 45 ನಿಮಿಷಕ್ಕೆ ಹೆಚ್ಚಳಗೊಂಡ ನಡೆದಾಡುವ ಸಾಮರ್ಥ್ಯ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಶ್ರೀ ಮಧು.ಬಿ, ವಯಸ್ಸು 55, ಉದ್ಯಮಿ, ಕೇರಳ ನಿವಾಸಿ.

ಇವರು ಸಂಧಿವಾತ ಹಾಗೂ ಎರಡೂ ಮಂಡಿಗಳಲ್ಲಿ ಗಂಭೀರ ನೋವಿನ ಸಮಸ್ಯೆಗೆ ಈಡಾಗಿದ್ದರು, ನೋವಿನಿಂದಾಗಿ ಕುಂಟುತ್ತಿದ್ದರು ಮತ್ತು ನಿಧಾನವಾದರೂ ಸರಿ ಕೇವಲ 5 ನಿಮಿಷ ಕೂಡ ಇವರಿಗೆ ನಡೆದಾಡಲು ಸಾಧ್ಯವಾಗುತ್ತಿರಲಿಲ್ಲವಂತೆ. ಮುಂದೇನಾಯಿತು ಗೊತ್ತಾ? ಇದೀಗ ಇವರು ಒಂದು ಉತ್ತಮ ವೇಗದಲ್ಲಿ 45 ನಿಮಿಷಗಳ ಕಾಲ ನೇರವಾಗಿ ನಡೆದಾಡುತ್ತಲಿದ್ದಾರೆ. ಮಂಡಿಗಳ ನೋವಿನಿಂದ ಗುಣಮುಖರಾದ ಬಳಿಕ, ಬಲಭಾಗದಲ್ಲಿ ಅತೀವ ನೋವು ನೀಡುತ್ತಿದ್ದ ಹಿಪ್ ಜಾಗದ ಚಿಕಿತ್ಸೆಗೆ ಪಡೆದುಕೊಂಡು ಒಳ್ಳೆಯ ನಿವಾರಣೆಯೊಂದಿಗೆ ಹೊರಬಂದರು. ಇದರಿಂದಾಗಿ ಎಸ್‌ಬಿಎಫ್ ತಂಡದ ಸಂಪೂರ್ಣ ಸಹಕಾರಕ್ಕೆ ಮುಕ್ತಕಂಠದಿಂದ ಧನ್ಯವಾದ ತಿಳಿಸಿದ್ದಾರೆ.

SBF HEALTH SCIENCE BEYOND FRONTIERS ಎಸ್‌ಬಿಎಫ್ ಹೆಲ್ತ್‌ಕೇರ್
@ ಮಾರತಹಳ್ಳಿ ಮತ್ತು ಜೆ.ಪಿ.ನಗರ
ಸಂದರ್ಶಿಸಿ: www.sbfhealthcare.com
ಸಹಾಯವಾಣಿ 9900548375